
# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

## ರಾಯಭಾರಿ ಕುಂಬ್ಳೆ



ಕ್ರಿಕೆಟಿಗ ಅನಿಲ್ ಕುಂಬ್ಳೆ ಅವರು ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ಮತ್ತು ವನ್ಯಜೀವಿ ಸಂರಕ್ಷಣಾ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ವನ್ಯಜೀವಿಗಳ ಬಗ್ಗೆ ಅಪಾರ ಕಾಳಜಿ ಹೊಂದಿರುವ ಅನಿಲ್ ಕುಂಬ್ಳೆ ಅವರಿಗೆ ಅರಣ್ಯದ ಬಗ್ಗೆ ಪ್ರೀತಿ ಇದೆ. ಹಾಗಾಗಿ, ಅವರು ಸಂಭಾವನೆ ಪಡೆಯದೆ ರಾಯಭಾರಿಯಾಗಲು ಸಮ್ಮತಿಸಿದ್ದಾರೆ.

ಆಳ-ಅಗಲ
ಹೀಗಿವೆ ರಾಜ್ಯದ ಘಾಟಿ ರಸ್ತೆಗಳು
ಬಿಜೆಪಿಯವರು ಅತ್ಯಂತ ಭ್ರಷ್ಟರು- ಸಿ.ಎಂ 8
ನಾಳೆ ಶಾಲಾ ಪ್ರಾರಂಭೋತ್ಸವ 4

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 81,551 ▼ | 24,826 | ₹1.01 ಲಕ್ಷ (ಬೆಂಗಳೂರು) | ₹1.03 ಲಕ್ಷ (ಬೆಂಗಳೂರು) | 85.40 ▼ |



ಒಂದು ನೋಂದಣಿ ಪ್ರಕ್ರಿಯೆ ಗರಿಷ್ಠ ಅವಧಿ 10 ನಿಮಿಷ • ಕಾವೇರಿ–2 ತಂತ್ರಾಂಶ ಸಮಸ್ಯೆ ನಿವಾರಣೆ

# ಡಿಜಿ ಲಾಕರ್‌ಗೆ ಆಸ್ತಿ ನೋಂದಣಿ ಪತ್ರ

• ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ಆಸ್ತಿ ನೋಂದಣಿಯ ನಂತರ ಜನರು ಪತ್ರದ ಭೌತಿಕ ಪ್ರತಿ ಪಡೆಯಲು ಉಪ ನೋಂದಣಾಧಿಕಾರಿ ಕಚೇರಿಗೆ ಅಲೆದು ಸಮಯ ವ್ಯರ್ಥ ಮಾಡುವ ಅಗತ್ಯವಿಲ್ಲ. ಇನ್ನುಮುಂದೆ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆ ಅವರ ಇ-ಮೇಲ್, ಡಿಜಿ ಲಾಕರ್‌ಗೆ ನೇರವಾಗಿ ನೋಂದಣಿ ಪತ್ರ ರವಾನೆಯಾಗಲಿದೆ.

ಸ್ವತ್ತುಗಳ ನೋಂದಣಿ ಸೇರಿದಂತೆ ಎಲ್ಲ ಬಗೆಯ ನೋಂದಣಿ ಪ್ರಕ್ರಿಯೆಗಳನ್ನು ಆನ್‌ಲೈನ್ ಮೂಲಕವೇ ನಡೆಸಲು ಕಂದಾಯ ಇಲಾಖೆ ಈಗಾಗಲೇ ಕ್ರಮ ಕೈಗೊಂಡಿದೆ. ನೋಂದಣಾಧಿಕಾರಿಗಳ ಸಹಿಯನ್ನೂ ಡಿಜಿಟಲೀಕರಣಗೊಳಿಸಲಾಗಿದ್ದು, ಡಿಜಿಟಲ್ ಸಹಿ ಒಳಗೊಂಡ ನೋಂದಣಿ ಪತ್ರಗಳನ್ನು ಕ್ಷಣ ಮಾತ್ರದಲ್ಲಿ ಮಾರಾಟಗಾರರು ಮತ್ತು ಖರೀದಿದಾರರ ಇ-ಮೇಲ್ ಹಾಗೂ ಡಿಜಿ ಲಾಕರ್‌ಗೆ ನೇರವಾಗಿ ಕಳುಹಿಸುವ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ.

ಡಿಜಿ ಲಾಕರ್‌ನಲ್ಲಿ ಲಭ್ಯವಿರುವ ಭೌತಿಕ ಪ್ರತಿಗಳನ್ನು ಜನರು ಅಗತ್ಯವಿದ್ದಾಗ ಮುದ್ರಣ ಮಾಡಿಕೊಳ್ಳಬಹುದು. ಕಳೆದುಹೋಗುವ, ದ್ವಿಪ್ರತಿ ತೆಗೆದುಕೊಳ್ಳಲು ಮತ್ತೆ ಶುಲ್ಕ ಭರಿಸುವ, ಉಪ ನೋಂದಣಾಧಿಕಾರಿಗಳ ಕಚೇರಿಗೆ ಅಲೆದಾಡುವ ಪ್ರಮೇಯವೇ ಇರುವುದಿಲ್ಲ. ಋಣಭಾರ ಪ್ರಮಾಣ ಪತ್ರ ಹಾಗೂ ದೃಢೀಕೃತ ನಕಲುಗಳನ್ನೂ ವೆಬ್ ಆಧಾರಿತ ಅಪ್ಲಿಕೇಷನ್ ಮೂಲಕ ತಾವಿರುವ ಸ್ಥಳದಲ್ಲೇ ಪಡೆಯಬಹುದು.

ಕಾವೇರಿ-2 ತಂತ್ರಾಂಶದಲ್ಲಿನ ಸಮಸ್ಯೆಗಳನ್ನು ನಿವಾರಿಸಲಾಗಿದ್ದು, ನೋಂದಣಿ ಕಚೇರಿಗೆ ಹೋಗುವ ಮೊದಲೇ ಎಲ್ಲಾ ಮಾಹಿತಿ ಮತ್ತು ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಜನರು ಅಪ್‌ಲೋಡ್ ಮಾಡುತ್ತಿದ್ದಾರೆ. ಉಪನೋಂದಣಾಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ ನಂತರ ನಾಗರಿಕರು ನಿಗದಿತ ಶುಲ್ಕಗಳನ್ನು ಆನ್‌ಲೈನ್ ಮೂಲಕವೇ ಪಾವತಿಸಬಹುದು. ನೋಂದಣಿಗಾಗಿ ತಮಗೆ ಅನುಕೂಲಕರವಾದ ದಿನ ಹಾಗೂ ಸಮಯವನ್ನು ಕಾವೇರಿ ತಂತ್ರಾಂಶದಲ್ಲೇ ಆಯ್ಕೆ ಮಾಡಿಕೊಳ್ಳಬಹುದು. ಪ್ರತಿ ಅರ್ಜಿಯ ಸ್ಥಿತಿಯ ಬಗ್ಗೆ ಮೊಬೈಲ್ ಮುಖಾಂತರವೂ ಮಾಹಿತಿ ನೀಡಲಾಗುತ್ತಿದೆ.

**ನೋಂದಣಿಯ ಗರಿಷ್ಠ ಸಮಯ 10 ನಿಮಿಷ:** ಎ-ಖಾತಾ, ಬಿ-ಖಾತಾ, ಇ-ಸ್ವತ್ತು, ಪಹಣಿ, ಆಧಾರ್ ಕಾರ್ಡ್ ಮಾಹಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳ ವಿವಿಧ ತಂತ್ರಾಂಶ, ಭೂಮಿ ತಂತ್ರಾಂಶಗಳ ಮೂಲಕ ನೇರವಾಗಿ ಪಡೆಯಲಾಗುತ್ತಿದೆ. ಜನರು ಆಸ್ತಿ ನೋಂದಣಿಯ ಮಾಹಿತಿಯನ್ನು ಅಪ್‌ಲೋಡ್ ಮಾಡುತ್ತಿದ್ದಂತೆ ಆಸ್ತಿ ಮಾಲೀಕರ ಸಂಪೂರ್ಣ ಚಿತ್ರಣ ಖಚಿತವಾಗುತ್ತದೆ. ಉಪ ನೋಂದಣಾಧಿಕಾರಿಗಳು ಪರಿಶೀಲನೆ ನಡೆಸಿದ ನಂತರ ಜನರೇ ನೇರವಾಗಿ ದಿನ ಹಾಗೂ ಸಮಯ ನಿಗದಿ ಮಾಡಿಕೊಳ್ಳಬಹುದು. ಯಾರು ಯಾವ ದಿನವನ್ನು ನೋಂದಣಿಗಾಗಿ ಆಯ್ಕೆ ಮಾಡಿಕೊಳ್ಳುತ್ತಾರೋ ಆ ದಿನಕ್ಕೆ ಒಂದು ದಿನ ಮುಂಚಿತವಾಗಿ (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಪಡೆಯುವ ವ್ಯವಸ್ಥೆ ಮಾಡಲಾಗಿದೆ. ಜನರು ಕಚೇರಿಗೆ ಭೇಟಿ ನೀಡಿದ 10 ನಿಮಿಷಗಳಲ್ಲಿ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

8ನೇ ಪುಟ ನೋಡಿ

| 34 | 256 | 34 |
|---|---|---|
| ಜಿಲ್ಲಾ ನೋಂದಣಾಧಿಕಾರಿ ಕಚೇರಿಗಳು | ಉಪ ನೋಂದಣಾಧಿಕಾರಿ ಕಚೇರಿಗಳು | ರಜಾ ದಿನಗಳಲ್ಲೂ ಸರದಿಯಂತೆ ಕೆಲಸ ಮಾಡುವ ಕಚೇರಿಗಳು |



### ‘ಹಳೇ ದಾಖಲೆಗಳು ಶೀಘ್ರ ಲಭ್ಯ’

ಹಲವು ದಾಖಲೆಗಳು ಕಾವೇರಿ-1 ತಂತ್ರಾಂಶದಲ್ಲೇ ಉಳಿದ ಕಾರಣ ಜನರಿಗೆ ಸಮಸ್ಯೆಯಾಗಿದೆ. ಹಳೆಯ ದಾಖಲೆಗಳು ತಕ್ಷಣಕ್ಕೆ ಲಭ್ಯವಾಗದೆ ಪರದಾಟ ನಡೆಸಿದ್ದಾರೆ.

‘ಕಾವೇರಿ-1ರಿಂದ ಉಳಿಕೆಯಾದ ಎಲ್ಲ ದಾಖಲೆಗಳನ್ನು ಕಾವೇರಿ-2 ತಂತ್ರಾಂಶಕ್ಕೆ ಅಪ್‌ಲೋಡ್ ಮಾಡುವ ಪ್ರಕ್ರಿಯೆ ಪೂರ್ಣಗೊಳ್ಳುತ್ತಾ ಬಂದಿದೆ. ಉಳಿಕೆ ದಾಖಲೆಗಳ ನಿರ್ವಹಣೆಗಾಗಿ ಪ್ರತ್ಯೇಕ ಮಾದರಿ ರೂಪಿಸಲಾಗಿದೆ. ಎಲ್ಲ ಸಮಸ್ಯೆಗಳಿಗೂ ಶೀಘ್ರ ಪರಿಹಾರ ದೊರಕಲಿದೆ’ ಎನ್ನುತ್ತಾರೆ ನೋಂದಣಿ ಮಹಾ ಪರಿವೀಕ್ಷಕ ಕೆ.ಎ. ದಯಾನಂದ್.

ದುರುದ್ದೇಶಪೂರ್ವಕವಾಗಿ ವ್ಯವಸ್ಥೆಯನ್ನು ಹಾಳು ಮಾಡುವ ಜಾಲ (ಡಿ ಡಾಸ್ ಅಟ್ಯಾಕ್) ಸಕ್ರಿಯವಾಗಿದ್ದ ಕಾರಣ ಕೆಲ ದಿನಗಳು ನೋಂದಣಿ ಪ್ರಕ್ರಿಯೆ ಮೇಲೆ ಪರಿಣಾಮ ಬೀರಿತ್ತು. ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಒಂದು ನೋಂದಣಾಧಿಕಾರಿ ಕಚೇರಿಯ ಯಾವ ಉಪ ನೋಂದಣಾಧಿಕಾರಿ ಕಚೇರಿಯಲ್ಲಾದರೂ ಆಸ್ತಿ ನೋಂದಣಿ ಮಾಡಬಹುದು. ಸರದಿಯಂತೆ ರಜಾ ದಿನಗಳಲ್ಲೂ ಕಚೇರಿಗಳು ಕೆಲಸ ಮಾಡುತ್ತಿವೆ. ಇದರಿಂದ ವರ್ಷದ 365 ದಿನವೂ ನೋಂದಣಿಗೆ ಅವಕಾಶವಾಗಿದೆ ಎಂದು ವಿವರ ನೀಡಿದರು.



**ನೋಂದಣಿ ಕಚೇರಿಗೆ ಜನರು ಭೇಟಿ ನೀಡುವ ಗರಿಷ್ಠ ಸಮಯವನ್ನು 10 ನಿಮಿಷಕ್ಕೆ ನಿಗದಿ ಮಾಡಲಾಗಿದೆ. ಜನರು ಕಾಯುವುದನ್ನು ತಪ್ಪಿಸಲು ಲಾಗಿನ್, ಡಿಜಿ ಲಾಕರ್‌ಗೆ ನೇರ ಸಂಪರ್ಕ ಕಲ್ಪಿಸುವ ಕೆಲಸ ನಡೆಯುತ್ತಿದೆ**

**ಶಾಲಿನಿ ರಜನೀಶ್**
ಸರ್ಕಾರದ ಮುಖ್ಯ ಕಾರ್ಯದರ್ಶಿ

# ಯುವಕನ ಹತ್ಯೆ: ದ.ಕ ಉದ್ವಿಗ್ನ

ಪ್ರಜಾವಾಣಿ ವಾರ್ತೆ



ಅಬ್ದುಲ್ ರಹೀಂ

**ಬಂಟ್ವಾಳ/ಉಳ್ಳಾಲ (ದಕ್ಷಿಣ ಕನ್ನಡ):** ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕುರಿಯಾಳ ಗ್ರಾಮದ ಕಾಂಬೋಡಿ ಇರಾ ಕೋಡಿ ಎಂಬಲ್ಲಿ ದುಷ್ಕರ್ಮಿಗಳು ಮಂಗಳವಾರ ಸಂಜೆ ಮಾರಕಾಸ್ತ್ರಗಳಿಂದ ಯುವಕನನ್ನು ಕಡಿದು ಹತ್ಯೆ ಮಾಡಿದ್ದಾರೆ. ಆತನ ಜೊತೆಗಿದ್ದ ಇನ್ನೊಬ್ಬನ ಮೇಲೂ ದುಷ್ಕರ್ಮಿಗಳು ದಾಳಿ ನಡೆಸಿದ್ದು, ಗಾಯಗೊಂಡ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಂಟ್ವಾಳ ತಾಲ್ಲೂಕಿನ ಬಡಗಬೆಳ್ಳೂರು ಗ್ರಾಮದ ಕೊಳತ್ತಮಜಲು ನಿವಾಸಿ ಅಬ್ದುಲ್ ರಹೀಂ (34) ಮೃತರು. ಅವರ ಜೊತೆಗಿದ್ದ ಮಹಮ್ಮದ್ ಶಾಫಿ ಅವರ ಮೇಲೂ ಹಲ್ಲೆ ನಡೆದಿದ್ದು, ಅವರ ಕಿಬ್ಬೊಟ್ಟೆ, ಕೈ ಮತ್ತು ಎದೆಗೆ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

8ನೇ ಪುಟ ನೋಡಿ

### ಜಿಲ್ಲೆಯಾದ್ಯಂತ 30ರವರೆಗೆ ನಿಷೇಧಾಜ್ಞೆ

**ಮಂಗಳೂರು:** ಅಬ್ದುಲ್ ರಹೀಂ ಹತ್ಯೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ವದಂತಿಗಳು ಹರಿದಾಡುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗಿದ್ದು, ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಜಿಲ್ಲೆಯಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವ ಸಾಧ್ಯತೆ ಇರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಇದೇ 30ರ ಸಂಜೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

8ನೇ ಪುಟ ನೋಡಿ

# ಪರಿಶಿಷ್ಟರಿಗೆ ಜಾತಿ ಹೇಳಲಾಗದ ಇಕ್ಕಟ್ಟು

## ಒಳ ಮೀಸಲಾತಿ ಸಮೀಕ್ಷೆ: ಮನೆ ಖಾಲಿ ಮಾಡಿಸುವ ಭಯ

• ಜಯಸಿಂಹ ಆರ್.

**ಬೆಂಗಳೂರು:** ‘ಮೇಡಂ, ನಾವು ಮಾದಿಗ ಜಾತಿಯವರು. ನೀವು ನಮ್ಮ ಮನೆಗೆ ಬಂದಿದ್ದಿರಿ. ನಾವು ಮಾದಿಗರು ಎಂಬುದು ಮನೆ ಮಾಲೀಕರಿಗೆ ಗೊತ್ತಿಲ್ಲ. ಹೀಗಾಗಿ ನಾವು ಪರಿಶಿಷ್ಟ ಜಾತಿಯವರಲ್ಲ ಎಂದು ಹೇಳಿದೆವು. ಈಗ ನಮ್ಮ ನೈಜ ವಿವರ ತೆಗೆದುಕೊಳ್ಳಿ...’

ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ನಡೆಸುತ್ತಿರುವ ಸಮೀಕ್ಷೆಗಾಗಿ ನಗರದ ಬಸವನಗುಡಿಯ ವಸತಿ ಪ್ರದೇಶದಲ್ಲಿ ಮಾಹಿತಿ ಕಲೆ ಹಾಕುತ್ತಿದ್ದ ಶಿಕ್ಷಕರ ಜತೆ ಸಮೀಕ್ಷೆ ಪ್ರಕ್ರಿಯೆ ವೀಕ್ಷಿಸಲು ‘ಪ್ರಜಾವಾಣಿ’ ತೆರಳಿದ ಸಂದರ್ಭದಲ್ಲೇ ಬಂದ ಸಾರ್ವಜನಿಕರೊಬ್ಬರು ಹೇಳಿದ ಮಾತಿದು.

7ನೇ ಪುಟ ನೋಡಿ

### ‘ಆನ್‌ಲೈನ್‌ನಲ್ಲಿ ವಿವರ ನಮೂದಿಸಿ’

‘ವಿವಿಧ ಸಾಮಾಜಿಕ ಕಾರಣಕ್ಕೆ ಸಮೀಕ್ಷೆ ವೇಳೆ ಪರಿಶಿಷ್ಟ ಜಾತಿ ಸಮುದಾಯಗಳ ಜನರು ತಮ್ಮ ಜಾತಿಯ ಹೆಸರು ಹೇಳಲು ಆಗದ ಸಂದರ್ಭ ಎದುರಾಗಬಹುದು ಎಂಬ ನಿರೀಕ್ಷೆ ಇತ್ತು. ಹೀಗಾಗಿಯೇ ಮೂರು ಹಂತದಲ್ಲಿ ಮಾಹಿತಿ ಕಲೆ ಹಾಕಲು ಯೋಜನೆ ರೂಪಿಸಿದ್ದೇವೆ. ಮನೆ ಮಾಲೀಕರಿಗೆ ಗೊತ್ತಾಗಬಾರದು ಎಂದು ಜಾತಿ ಹೆಸರು ಮುಚ್ಚಿಟ್ಟಿರುವ ಮಂದಿ ಸಮೀಕ್ಷಾ ಶಿಬಿರಗಳಿಗೆ ಬಂದು ವಿವರ ನೀಡಬಹುದು. ಇಲ್ಲವೇ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡು ವಿವರ ನಮೂದಿಸಬಹುದು’ ಎಂದು ಒಳಮೀಸಲಾತಿ ಸಂಬಂಧಿತ ಏಕ ಸದಸ್ಯ ವಿಚಾರಣಾ ಆಯೋಗದ ಅಧ್ಯಕ್ಷ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು ತಿಳಿಸಿದರು.

7ನೇ ಪುಟ ನೋಡಿ

# ಹೆಬ್ಬಾರ, ಸೋಮಶೇಖರ್ ಉಚ್ಚಾಟನೆ



ಪ್ರಜಾವಾಣಿ ವಾರ್ತೆ



ಶಿವರಾಮ ಹೆಬ್ಬಾರ



ಸೋಮಶೇಖರ್

**ನವದೆಹಲಿ:** ಎರಡು ವರ್ಷಗಳಿಂದ ಪಕ್ಷದಿಂದ ಅಂತರ ಕಾಯ್ದುಕೊಂಡು ಕಾಂಗ್ರೆಸ್ ಜತೆಗೆ ಗುರುತಿಸಿಕೊಂಡಿದ್ದ ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ ಹಾಗೂ ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್ ಅವರನ್ನು ಬಿಜೆಪಿ ಮಂಗಳವಾರ ಉಚ್ಚಾಟಿಸಿದೆ.

‘ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ನಿಮ್ಮನ್ನು ಆರು ವರ್ಷಗಳ ಅವಧಿಗೆ ಉಚ್ಚಾಟನೆ ಮಾಡಲಾಗಿದೆ’ ಎಂದು ಪಕ್ಷದ ಕೇಂದ್ರ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಆದೇಶದಲ್ಲಿ ತಿಳಿಸಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಕಾರಣಕ್ಕೆ ಹೆಬ್ಬಾರ, ಸೋಮಶೇಖರ್, ಶಾಸಕ ಬಿ.ಪಿ.ಹರೀಶ್, ಮಾಜಿ ಸಚಿವರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗೂ ಎಂ.ಪಿ.ರೇಣುಕಾಚಾರ್ಯ ಅವರಿಗೆ ಮಾರ್ಚ್ 25ರಂದು ಷೋಕಾಸ್ ನೋಟಿಸ್ ನೀಡಲಾಗಿತ್ತು. ಪಕ್ಷದ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಮಾರ್ಚ್ 26ರಂದು ಪಕ್ಷದಿಂದ ಹೊರ ಹಾಕಲಾಗಿತ್ತು.

8ನೇ ಪುಟ ನೋಡಿ



# ಮೂವರು ಸಾವು, ಕೊಚ್ಚಿಹೋದ ವೈದ್ಯ ವಿದ್ಯಾರ್ಥಿ

ಪ್ರಜಾವಾಣಿ ವಾರ್ತೆ

**ಚಿಕ್ಕೋಡಿ (ಬೆಳಗಾವಿ ಜಿಲ್ಲೆ):** ಅಥಣಿ ತಾಲ್ಲೂಕಿನ ಸಂಬರಗಿ ಗ್ರಾಮದಲ್ಲಿ ಮಂಗಳವಾರ ಮಳೆ ನೀರಿನಿಂದ ತುಂಬಿ ಹರಿಯುತ್ತಿದ್ದ ಅಗ್ರಾಣಿ ಹಳ್ಳವನ್ನು ಎತ್ತಿನ ಬಂಡಿಯಲ್ಲಿ ದಾಟುವಾಗ, ನಾಗನೂರ ಪಿಎ ಗ್ರಾಮದ ಸಹೋದರರಾದ ದೀಪಕ ಕಾಂಬಳೆ (9), ಗಣೇಶ ಕಾಂಬಳೆ (7) ಮತ್ತು ಒಂದು ಎತ್ತು ಸಾವನ್ನಪ್ಪಿದೆ.

ತಂದೆ ಸಂಜಯ ಕಾಂಬಳೆ ಚಕ್ಕಡಿ ಓಡಿಸುತ್ತಿದ್ದರು. ಮರಳು ತೆಗೆದ ಗುಂಡಿಯಲ್ಲಿ ಎತ್ತು ಆಯ ತಪ್ಪಿ ಬಿದ್ದ ಕೂಡಲೇ, ಚಕ್ಕಡಿ ಸಹಿತ ನಾಲ್ವರು ನೀರಿನಲ್ಲಿ ಬಿದ್ದರು. ಒಬ್ಬನನ್ನು ಮಾತ್ರ ಉಳಿಸಲು ತಂದೆಗೆ ಸಾಧ್ಯವಾಗಿದೆ.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಬಾಡಗ ಬಾಣಂಗಾಲದ ಜನತಾ ಕಾಲೊನಿಯಲ್ಲಿ ಮರ ಬಿದ್ದು ಪಿ.ಸಿ.ವಿಷ್ಣು ಬೆಳ್ಳಿಯಪ್ಪ(65) ಎಂಬುವರು ಮೃತಪಟ್ಟರು.

**ಕೊಳ್ಳೇಗಾಲ ವರದಿ:** ಶಿವನಸಮುದ್ರದ ದರ್ಗಾ ಹಿಂಭಾಗದ ನದಿಯಲ್ಲಿ ಈಜಲು ಹೋಗಿದ್ದ ಬೆಂಗಳೂರಿನ ದಯಾನಂದ ಸಾಗರ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ನಂದನ್(19) ಕೊಚ್ಚಿ ಹೋದರು. ಶೋಧ ಕಾರ್ಯ ನಡೆದಿದೆ.

## ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬುಧವಾರದ ಉಷ್ಣಾಂಶ 25° ಗರಿಷ್ಠ 19° ಕನಿಷ್ಠ

**ಹವಾಮಾನ ಮುನ್ಸೂಚನೆ**
ನಗರದಲ್ಲಿ ಇಂದು ಭಾರಿ ಮಳೆಯಾಗುವ ಸಾಧ್ಯತೆ ಇದೆ.

ತಾಪಮಾನ

| ಗುರುವಾರ | ಶುಕ್ರವಾರ | ಶನಿವಾರ |
|---|---|---|
| 25° 19° | 26° 20° | 26° 20° |

### ಜಲಮಂಡಳಿಯಿಂದ ‘ಸಂಚಾರಿ ಕಾವೇರಿ’ ಯೋಜನೆ

# ಅಪಾರ್ಟ್‌ಮೆಂಟ್‌ಗಳಿಗೆ ‘ಬಲ್ಕ್ ಬುಕ್ಕಿಂಗ್’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಂಚಾರಿ ಕಾವೇರಿ’ ಯೋಜನೆಯಡಿ ನಗರದ ಅಪಾರ್ಟ್‌ಮೆಂಟ್‌ಗಳಿಗೆ ಒಂದು ವರ್ಷಾವಧಿಗೆ ಅಗತ್ಯವಿರುವಷ್ಟು ಟ್ಯಾಂಕರ್ ನೀರು ಬುಕ್ ಮಾಡುವಂತಹ ‘ಬಲ್ಕ್ ಬುಕ್ಕಿಂಗ್ ವ್ಯವಸ್ಥೆ’ಗೆ ಅವಕಾಶ ಕಲ್ಪಿಸುವಂತೆ ಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚಿಸಿದರು.


ರಾಮ್‌ಪ್ರಸಾತ್ ಮನೋಹರ್

ನಗರದ ಜಲಮಂಡಳಿ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಅಧಿಕಾರಿಗಳಿಗೆ ಈ ಸೂಚನೆ ನೀಡಿದ ಅವರು, ‘ನಗರದ ಹೊರವಲಯದಲ್ಲಿರುವ ಬಹುತೇಕ ಅಪಾರ್ಟ್‌ಮೆಂಟ್‌ಗಳ ನಿವಾಸಿಗಳು ಕುಡಿಯುವ ನೀರಿಗಾಗಿ ಟ್ಯಾಂಕರ್ ನೀರು ಅವಲಂಬಿಸಿದ್ದಾರೆ. ಆ ಟ್ಯಾಂಕರ್‌ಗಳು ಸಹ ಕೊಳವೆ ಬಾವಿ ನೀರು ಸಂಗ್ರಹಿಸಿ ಪೂರೈಸುತ್ತಿವೆ. ಇದರಿಂದ ಅಂತರ್ಜಲದ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಇದನ್ನು ತಪ್ಪಿಸಿ, ಜನರಿಗೆ ಬಿಐಎಸ್ ಪ್ರಮಾಣೀಕೃತ ಶುದ್ಧ ಕುಡಿಯುವ ನೀರು ಪಡೆಯುವುದಕ್ಕಾಗಿ ‘ಸಂಚಾರಿ ಕಾವೇರಿ’ ಯೋಜನೆಯಡಿ ಅಪಾರ್ಟ್‌ಮೆಂಟ್‌ಗಳಿಗೆ ಬಲ್ಕ್ ಬುಕ್ಕಿಂಗ್ ಮಾಡಿಕೊಳ್ಳುವ ಅವಕಾಶವನ್ನು ಪ್ರಾರಂಭಿಸುವಂತೆ ತಿಳಿಸಿದರು.



ನಗರದಲ್ಲಿ ಅಂತರ್ಜಲದ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸಿ ಜಲ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಜಲಮಂಡಳಿ ಹದಿನೈದು ದಿನಗಳ ಹಿಂದೆ ‘ಸಂಚಾರಿ ಕಾವೇರಿ’ ಯೋಜನೆ ಆರಂಭಿಸಿದೆ.

### ಬುಕ್ಕಿಂಗ್ ಪ್ರಕ್ರಿಯೆ

- ಗ್ರಾಹಕರು ಕನಿಷ್ಠ ತಿಂಗಳ ಮುಂಗಡವಾಗಿ ಪಾವತಿ ಮಾಡಬೇಕು.
- ‘ಮೊದಲು ಬಂದವರಿಗೆ ಮೊದಲು ಅವಕಾಶ’ ಆಧಾರಿತವಾಗಿ ಬುಕ್ಕಿಂಗ್ ಮಾಡಲಾಗುತ್ತದೆ.
- ಒಂದು ವರ್ಷದ ಅವಧಿಗೆ ಬುಕ್ಕಿಂಗ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ.
- ಗ್ರಾಹಕರು ಬಲ್ಕ್ ಬುಕ್ಕಿಂಗ್ ಮೂಲಕ ನಿರಂತರ ಸರಬರಾಜು ಖಚಿತ ಪಡಿಸಿಕೊಳ್ಳಬಹುದು.



# ‘ನಮ್ಮ ಚಾಲಕರನ್ನೇ ನೇಮಿಸಿ’

### ಎಚ್‌.ಡಿ ಕುಮಾರಸ್ವಾಮಿಗೆ ಮನವಿ ಸಲ್ಲಿಸಲಾಗಿದೆ: ಸಚಿವ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೇಂದ್ರ ಸರ್ಕಾರದ ಪ್ರಾಯೋಜಿತ ಪಿಎಂ ಇ-ಡ್ರೈವ್ ಯೋಜನೆ ಅಡಿಯಲ್ಲಿ ಬೆಂಗಳೂರು ನಗರಕ್ಕೆ ಹಂಚಿಕೆ ಮಾಡುವ ಎಲೆಕ್ಟ್ರಿಕ್ ಬಸ್‌ಗಳಿಗೆ ನಮ್ಮ ಸಾರಿಗೆ ಸಂಸ್ಥೆಯ ಚಾಲಕರನ್ನೇ ನೇಮಿಸಲು ಅವಕಾಶ ನೀಡುವಂತೆ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಲಾಗಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ನೌಕರರ ಸಂಘ ಮಂಗಳವಾರ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಎಲೆಕ್ಟ್ರಿಕ್ ಬಸ್**

‘ಪಿಎಂ ಇ-ಡ್ರೈವ್ ಯೋಜನೆಯಡಿ ಬಸ್ ಹಂಚಿಕೆ ಮಾಡಲು ಜಿಸಿಸಿ (ಗ್ರಾಸ್ ಕಾಸ್ಟ್ ಕಾಂಟ್ರ್ಯಾಕ್ಟ್) ಮಾದರಿಯಲ್ಲಿ ಟೆಂಡರ್ ಕರೆಯಲಾಗುತ್ತದೆ. ಈ ಟೆಂಡರ್ ಪಡೆದ ಕಂಪನಿಯು ಎಲೆಕ್ಟ್ರಿಕ್ ಬಸ್‌ನ ಜೊತೆಗೆ ಚಾಲಕರನ್ನು ನೇಮಿಸುತ್ತದೆ. ಕಂಪನಿಯು ಈ ಬಸ್‌ಗಳ ಸಂಪೂರ್ಣ ನಿರ್ವಹಣೆ ಮಾಡಲಿದೆ. ಹೊರಗಡೆಯಿಂದ ಬರುವ ಚಾಲಕರು ವಾಹನಗಳನ್ನು ಅಜಾಗರೂಕವಾಗಿ ಚಾಲನೆ ಮಾಡುವ ಸಾಧ್ಯತೆ ಇರುತ್ತದೆ. ನಮ್ಮ ಸಂಸ್ಥೆಯ ಚಾಲಕರು ಹೆಚ್ಚು ಜವಾಬ್ದಾರಿಯಿಂದ ಬಸ್ ಚಾಲನೆ ಮಾಡುವುದರಿಂದ, ಅವರನ್ನೇ ನೇಮಿಸುವಂತೆ ಷರತ್ತು ವಿಧಿಸಿದ್ದೇನೆ’ ಎಂದು ಮಾಹಿತಿ ನೀಡಿದರು.


ನಗರದ ಪುರಭವನದಲ್ಲಿ ಮಂಗಳವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯಲ್ಲಿ ಸಮಾಜ ಸೇವಕ ಶಶಿಧರ ಮ. ಮೀಸಿ ಹಾಗೂ ಬಿಬಿಎಂಪಿ ಆರೋಗ್ಯ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷ ಎಂ. ಮುನಿರಾಜು ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಉಪಾಧ್ಯಕ್ಷ ಮೊಹಮ್ಮದ್ ರಿಜ್ವಾನ್ ನವಾಬ್, ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟರವಣಪ್ಪ, ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಫ್‌.ಎಚ್‌. ಜಕ್ಕಪ್ಪನವರ, ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದ ಬಂತೆ ಕಲ್ಯಾಣ ಸಿರಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಬೆಂಗಳೂರು ನಗರದಲ್ಲಿ ಈಗಾಗಲೇ 1.40 ಕೋಟಿ ಜನಸಂಖ್ಯೆ ಇದೆ. ಆದ್ದರಿಂದ ನಗರದಲ್ಲಿ ಸಾರ್ವಜನಿಕ ಸಾರಿಗೆಯನ್ನು ಬಲಪಡಿಸುವ ಉದ್ದೇಶದಿಂದ 10 ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಬೆಂಗಳೂರು ನಗರಕ್ಕೆ ಹಂತ-ಹಂತವಾಗಿ 4,500 ಬಸ್‌ಗಳನ್ನು ಹಂಚಿಕೆ ಮಾಡುವುದಾಗಿ ಎಚ್‌.ಡಿ. ಕುಮಾರಸ್ವಾಮಿ ಅವರು ಭರವಸೆ ನೀಡಿದ್ದಾರೆ’ ಎಂದು ತಿಳಿಸಿದರು.

‘ಸಾರಿಗೆ ಸಂಸ್ಥೆಗಳ ನೌಕರರ 38 ತಿಂಗಳ ಹಿಂಬಾಕಿ ವೇತನ ನೀಡುವುದು, ಸಾರಿಗೆ ನೌಕರರನ್ನು ಸರ್ಕಾರಿ ನೌಕರರ ಸ್ಥಾನಮಾನ ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸುತ್ತೇನೆ’ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಬಿಬಿಎಂಪಿ ಆರೋಗ್ಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ. ಮುನಿರಾಜು ಹಾಗೂ ಸಮಾಜ ಸೇವಕ ಶಶಿಧರ ಮ. ಮೀಸಿ ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.



# ‘ಅಧಿಕ ದಂಡ ಸಂಗ್ರಹಕ್ಕೆ ಪೊಲೀಸರಿಗೂ ಗುರಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಧಿಕ ದಂಡದ ಹಣ ಸಂಗ್ರಹಕ್ಕೆ ಪೊಲೀಸರಿಗೂ ಸರ್ಕಾರ ಗುರಿ ನಿಗದಿ ಮಾಡಿದೆ. ಹಾಗಾಗಿಯೇ, ಮಂಡ್ಯದಲ್ಲಿ ವಾಹನ ಅಡ್ಡಗಟ್ಟಿ ದಂಡ ವಸೂಲಿ ಮಾಡಲು ಹೋದಾಗ ಬೈಕ್‌ನಿಂದ ಬಿದ್ದು ಮಗು ಮೃತಪಟ್ಟಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ನಾಯಿ ಕಡಿತಕ್ಕೆ ಚಿಕಿತ್ಸೆಗಾಗಿ ಹೋಗುವಾಗ ಪೊಲೀಸರು ದ್ವಿಚಕ್ರ ವಾಹನ ತಡೆದು, ಕೀ ಕಿತ್ತುಕೊಳ್ಳಲು ಪ್ರಯತ್ನಿಸಿದ್ದಾರೆ. ಮಗು ಜಾರಿಬಿದ್ದು ಸತ್ತಿದೆ. ಈ ಘಟನೆಗೆ ಯಾರು ಹೊಣೆಗಾರರು ಎಂದು ಪ್ರಶ್ನಿಸಿದರು.

ಖಜಾನೆ ಬರಿದಾಗಿರುವುದರಿಂದ ರಾಜ್ಯ ಸರ್ಕಾರ ಹಣ ಸಂಗ್ರಹಕ್ಕೆ ಪರದಾಡುತ್ತಿದೆ. ಹೀಗಾಗಿ ಸಂಚಾರ ಪೊಲೀಸರಿಗೂ ದಂಡ ಸಂಗ್ರಹಕ್ಕೆ ಗುರಿ ನಿಗದಿ ಮಾಡಿದೆ ಎಂದು ದೂರಿದರು.

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರು ನಾಮಕರಣ ಮಾಡಲು ನಿರ್ಧರಿಸಿದ್ದಾರೆ. ಸಚಿವರಿಗೆ ಅನಿಸಿದಕ್ಕೆ ಸಂಪುಟದಲ್ಲಿ ಸಮ್ಮತಿ ಸಿಗುತ್ತದೆ. ನಾಳೆ ವಿಜಯಪುರ ಜಿಲ್ಲೆ, ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ಸಚಿವರು ಇನ್ನೇನೋ ಸಲಹೆ ಕೊಡುತ್ತಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಈ ಸರ್ಕಾರ ಸಚಿವರು, ಶಾಸಕರನ್ನು ಖುಷಿ ಪಡಿಸಲು ಜಿಲ್ಲೆಗಳ ಹೆಸರು ಬದಲಿಸಲು ಹೊರಟಿದೆ ಎಂದು ಟೀಕಿಸಿದರು.


ವಿಜಯೇಂದ್ರ

‘ಕಲಬುರ್ಗಿಯಲ್ಲಿ ಪ್ರಿಯಾಂಕ್ ಖರ್ಗೆ ವಿರುದ್ಧ ಪ್ರತಿಭಟನೆ ಮಾಡಿದ್ದೇವೆ. ಜಿಲ್ಲಾಡಳಿತದ ವಿಫಲತೆ, ಪೊಲೀಸ್ ಇಲಾಖೆ ಕೈಗೊಂಬೆ ಆಗಿರುವ ವಿಷಯಗಳನ್ನು ಮುಂದಿಟ್ಟು ಪ್ರತಿಭಟನೆ ಮಾಡಿದ್ದೇವೆ. ಕೆಲ ವಿಷಯ ಮಾತನಾಡಿದ ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಕ್ಷಮೆ ಕೇಳಿದ್ದಾರೆ. ಅವರ ವಿರುದ್ಧ ಮೂರನೇ ವ್ಯಕ್ತಿ ಮೂಲಕ ದೂರು ಕೊಡಿಸಿ, ಎಫ್‌ಐಆರ್ ಹಾಕಿದ್ದಾರೆ. ಮಂಗಳೂರಿನಲ್ಲಿ ಶಾಸಕ ಭರತ್ ಶೆಟ್ಟಿ ವಿರುದ್ಧ ಎಫ್‌ಐಆರ್ ಮಾಡಿದ್ದಾರೆ. ಹಿಂದೆ ಹರೀಶ್ ಪೂಂಜಾರ ವಿರುದ್ಧ ಎಫ್‌ಐಆರ್ ಮಾಡಿದ್ದರು. ಹೀಗೆ ವಿರೋಧ ಪಕ್ಷವನ್ನು ಹತ್ತಿಕ್ಕುವ ಕೆಲಸ ನಡೆದಿದೆ. ಇದು ಪ್ರಜಾಪ್ರಭುತ್ವದ ಕಗ್ಗೊಲೆ’ ಎಂದರು.

# ಎನ್‌ಎಚ್‌ಎಂ ಸಿಬ್ಬಂದಿಗೆ ವೇತನ

**ಬೆಂಗಳೂರು:** ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಮಾರ್ಚ್ ಮತ್ತು ಏಪ್ರಿಲ್ ತಿಂಗಳ ವೇತನ ಪಾವತಿಸಲಾಗಿದೆ. ಈ ವೇತನ ಪಾವತಿಗೆ ಸಂಬಂಧಿಸಿದಂತೆ ₹173.28 ಕೋಟಿ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಕಾರಣ, 15ನೇ ಹಣಕಾಸು ಆಯೋಗವು ಆರೋಗ್ಯ ಕ್ಷೇತ್ರಕ್ಕೆ ಮೀಸಲಿಟ್ಟ ಅನುದಾನವನ್ನು ತಾತ್ಕಾಲಿಕವಾಗಿ ಬಳಸಲಾಗಿದೆ. ಇದೇ 27ರೊಳಗೆ ವೇತನ ಪಾವತಿ ಪ್ರಕ್ರಿಯೆ ಪೂರ್ಣಗೊಳ್ಳಬೇಕು ಎಂದು ಎನ್‌ಎಚ್‌ಎಂ ಯೋಜನಾ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು

**ಕನ್ನಡ ಸಂಭ್ರಮಾಚರಣೆ, ಸಾಂಸ್ಕೃತಿಕ ಕಾರ್ಯಕ್ರಮ:** ಉದ್ಘಾಟನೆ: ಪಂಕಜ್ ಕುಮಾರ್ ಪಾಂಡೆ, ಅಧ್ಯಕ್ಷತೆ: ಎಸ್‌.ವಿ. ಮಂಜುನಾಥ, ಅತಿಥಿಗಳು: ಲೋಖಂಡೆ ಸ್ನೇಹಲ್ ಸುಧಾಕರ್, ವಿಜಯ್, ಗಿರಿಧರ್ ಕುಲಕರ್ಣಿ, ಕೆ.ಎನ್. ಗಂಗಾಧರ್, ಸನ್ಮಾನಿತರು: ಎ.ಆರ್. ಗೋವಿಂದಸ್ವಾಮಿ, ಆಯೋಜನೆ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕನ್ನಡ ಸಂಘ, ಸ್ಥಳ: ಇಂಧನ ಭವನದ ಸಭಾಂಗಣ, ಒಂದನೇ ಮಹಡಿ, ಆನಂದರಾವ್ ವೃತ್ತ, ಮಧ್ಯಾಹ್ನ 2

**ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್, ದೀಪಾ ಭಾಸ್ತಿ ಅವರಿಗೆ ಅಭಿನಂದನೆ ಸಮಾರಂಭ:** ಅಧ್ಯಕ್ಷತೆ: ಶಿವಾನಂದ ತಗಡೂರು, ಪ್ರಾಸ್ತಾವಿಕ ನುಡಿ: ಜಿ.ಎನ್. ಮೋಹನ್, ಅತಿಥಿಗಳು: ಕೆ.ವಿ. ಪ್ರಭಾಕರ್, ಕೆ.ಎನ್. ಚನ್ನೇಗೌಡ, ವೂಡೇ ಪಿ. ಕೃಷ್ಣ, ಆಯೇಷಾ ಖಾನುಂ, ಪದ್ಮಾ ಶಿವಮೊಗ್ಗ, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4


ಬಾನು ಮುಷ್ತಾಕ್

**‘ವಿದುರಾತಿಥ್ಯ’ ಯಕ್ಷಗಾನ ಪ್ರದರ್ಶನ:** ಕಲಾವಿದರು: ಸತೀಶ ಉಪಾಧ್ಯಾಯ, ಪ್ರಸನ್ನ ಹೆಗಡೆ ಮಾಗೋಡು, ಸಂಪತ್ ಆಚಾರ್ಯ, ರಘು ಶರ್ಮಾ, ದಿವಾಕರ ಹೆಗಡೆ, ಶಶಾಂಕ ಅರ್ನಾಡಿ, ಪ್ರಸನ್ನ ಭಟ್ಟ ಮಾಗೋಡು, ಗಣೇಶ ಸುಂಕನಾಳ, ಆಯೋಜನೆ: ಹೋರಾ ಫೌಂಡೇಶನ್ ತಾಳಮದ್ದಳೆ ಒಕ್ಕೂಟ, ಸ್ಥಳ: ಸ್ವಸ್ತಿಶ್ರೀಕೃಪಾ, ಉಲ್ಲಾಳ (ಕೆಂಗೇರಿ), ಸಂಜೆ 4

**‘ನಮ್ಮ ಆರ್ಟ್ ಬೆಂಗಳೂರು’ ರಾಷ್ಟ್ರೀಯ ಕಲಾ ಉತ್ಸವ:** ಉದ್ಘಾಟನೆ: ಎಚ್‌. ಕೆ. ಪಾಟೀಲ, ಅತಿಥಿ: ಎಸ್‌.ಎನ್. ಅಗರವಾಲ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30ರಿಂದ

**‘ಯಶೋಧರಮ್ಮ ದಾಸಪ್ಪ ಸಮಾಜ ರತ್ನ’ ಪ್ರಶಸ್ತಿ ಪ್ರದಾನ:** ವೂಡೇ ಪಿ. ಕೃಷ್ಣ, ಪ್ರಶಸ್ತಿ ಸ್ವೀಕರಿಸುವವರು: ಡಾ. ವಿಜಯಲಕ್ಷ್ಮಿ ದೇಶಮಾನೆ, ಅಧ್ಯಕ್ಷತೆ: ಸುನಂದ ಜಯರಾಂ, ಅತಿಥಿ: ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

**ಮಂಟಪ ವಚನಗಳ ಸಂಯೋಜನೆ:** ಗಾಯನ: ಎಂ.ಡಿ. ಪಲ್ಲವಿ, ಹಾರ್ಮೋನಿಯಂ: ಎಸ್‌.ಆರ್. ರಾಮಕೃಷ್ಣ, ಗಿಟಾರ್: ಕ್ಯಾಲೆಬ್ ಅಲೆಕ್ಸಾಂಡರ್, ಪಿಯಾನೊ: ಅಕ್ಷತಾ ಕೃಷ್ಣನ್, ಅತಿಥಿ: ಸೌಮ್ಯ ರೆಡ್ಡಿ, ಸ್ಥಳ: ಆರ್‌.ವಿ. ದಂತ ವೈದ್ಯಕೀಯ ಕಾಲೇಜಿನ ಸಭಾಂಗಣ, ಸಂಜೆ 6

**‘ಪಂಚಗವ್ಯ’ ಏಕವ್ಯಕ್ತಿ ರಂಗ ಪ್ರಯೋಗ:** ಪ್ರಸ್ತುತಿ: ಗೋಕುಲ ಸಹೃದಯ, ನಾಟಕಕ್ಕೆ ಚಾಲನೆ: ಜೆ.ಕೆ. ಶ್ರೀನಿವಾಸಮೂರ್ತಿ, ಕರಪತ್ರ ಬಿಡುಗಡೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಕೆ.ಪಿ. ಪುತ್ತೂರಾಯ, ಹೆಲೆನ್ ಮೈಸೂರು, ಅಮರೇಂದ್ರ ಹೊಲ್ಲಂಬಳ್ಳಿ, ರಾಜಶೇಖರಯ್ಯ ಮಠಪತಿ, ಶೋಭಾರಾಣಿ, ಉಪಸ್ಥಿತಿ: ಎಸ್‌.ಎಲ್‌. ಎನ್. ಸ್ವಾಮಿ, ಬೇಲೂರು ರಘುನಂದನ್, ಆಯೋಜನೆ: ಕಾಜಾಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಪರಮೇಶ್ವರ ಅಧ್ಯಕ್ಷತೆಯಲ್ಲಿ ನಡೆದ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನ

# ಸವಾರರಿಗೆ ಮತ್ತೆ ಟೋಯಿಂಗ್ ಬಿಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಈ ಹಿಂದೆ ಜನರ ಆಕ್ರೋಶಕ್ಕೆ ತುತ್ತಾಗಿದ್ದ ವಾಹನಗಳ ಟೋಯಿಂಗ್ ವ್ಯವಸ್ಥೆಯನ್ನು ಮತ್ತೆ ಜಾರಿ ಮಾಡಲು ನಗರ ಪೊಲೀಸರು ಮುಂದಾಗಿದ್ದಾರೆ. ಈ ಕ್ರಮಕ್ಕೆ ವಾಹನ ಸವಾರರು ಆಕ್ರೋಶ ಹೊರಹಾಕಿದ್ದಾರೆ.

ನಗರದಲ್ಲಿ ವಾಹನ ದಟ್ಟಣೆ ನಿಯಂತ್ರಣ ಹಾಗೂ ಸುಗಮ ಪಾರ್ಕಿಂಗ್ ವ್ಯವಸ್ಥೆ ಮಾಡುವ ಉದ್ದೇಶದಿಂದ ಶನಿವಾರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು. ಆ ಸಭೆಯಲ್ಲಿ ಟೋಯಿಂಗ್ ವ್ಯವಸ್ಥೆಯನ್ನು ಜಾರಿ ಮಾಡುವ ಕುರಿತು ಚರ್ಚೆ ನಡೆದಿತ್ತು. ಮಂಗಳವಾರ ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಟೋಯಿಂಗ್ ವ್ಯವಸ್ಥೆ ಜಾರಿ ಮಾಡಲು ತೀರ್ಮಾನಿಸಲಾಗಿದೆ.

ವಾಹನ ನಿಲುಗಡೆ ನಿಷೇಧಿತ ಸ್ಥಳಗಳಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಸಿಬ್ಬಂದಿ ಟೋಯಿಂಗ್ ಮಾಡಿ, ನಿಗದಿತ ನಿಲುಗಡೆ ಸ್ಥಳಕ್ಕೆ ತಂದು ಇಳಿಸುವ ವ್ಯವಸ್ಥೆ ಸದ್ಯದಲ್ಲೇ ಜಾರಿ ಆಗಲಿದೆ.

ಪರಮೇಶ್ವರ ಮಾತನಾಡಿ, 'ನಗರದಲ್ಲಿ ವಾಹನಗಳನ್ನು ಎಲ್ಲೆಂದರಲ್ಲಿ ನಿಲುಗಡೆ ಮಾಡಲಾಗುತ್ತಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ. ಟೋಯಿಂಗ್ ವ್ಯವಸ್ಥೆಯನ್ನು ಮತ್ತೆ ಆರಂಭಿಸಲಾಗುವುದು. ಟೋಯಿಂಗ್ ಮಾಡಲು ಇಲಾಖೆಯ ಸಿಬ್ಬಂದಿ ಮತ್ತು ವಾಹನಗಳನ್ನೇ ಬಳಸಿಕೊಳ್ಳಲಾಗುವುದು. ಸಂಚಾರ ದಟ್ಟಣೆ ಸಮಸ್ಯೆಯ ಪರಿಹಾರಕ್ಕೆ ಬಿಬಿಎಂಪಿ ಜೊತೆಗೂಡಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಅವರು ಹೇಳಿದರು.

'ನಗರದಲ್ಲಿ ಮಳೆ ಬಂದಾಗ ತೀವ್ರ ಸಮಸ್ಯೆಯಾಗುತ್ತಿದೆ. ಪ್ರಮುಖವಾಗಿ 19 ಕಡೆ ಹೆಚ್ಚು ಒತ್ತಡ ಇದೆ. ಎಂಟು ಕಡೆ ಹೆಚ್ಚಿನ ದಟ್ಟಣೆ ಸಮಸ್ಯೆಯಾಗುತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ. ಪೊಲೀಸ್ ಇಲಾಖೆ ಮತ್ತು ಬಿಬಿಎಂಪಿ ಒಟ್ಟಾಗಿ ಕೆಲಸ ಮಾಡಿದರೆ ಸಮಸ್ಯೆ ಬಗೆಹರಿಯುತ್ತದೆ. ಟ್ರಾಫಿಕ್ ಸಮಸ್ಯೆಯ ಕುರಿತಂತೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ನಗರ ಪೊಲೀಸರಿಗೆ ಸೂಚಿಸಿದ್ದೇನೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರೊಂದಿಗೆ ಸಭೆ ಕರೆದು ಚರ್ಚಿಸಲಾಗುವುದು' ಎಂದು ಹೇಳಿದರು.

ರಾಜ್ಯದಲ್ಲಿ ಮಾದಕ ವಸ್ತುಗಳ ದಂಧೆಯನ್ನು ನಿಯಂತ್ರಣಕ್ಕೆ ತಂದಿದ್ದೇವೆ. ಡ್ರಗ್ಸ್ ಚಟುವಟಿಕೆಯನ್ನು ಪೂರ್ಣ ಮಟ್ಟ ಹಾಕಲು ಮತ್ತಷ್ಟು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ. ನಿರ್ಲಕ್ಷ್ಯ ಮಾಡಿದರೆ ಪೊಲೀಸ್ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ತಿಳಿಸಿದರು.

ರಿಯಲ್ ಎಸ್ಟೇಟ್ ದಂಧೆಯ ಏಜೆಂಟ್‌ಗಳೊಂದಿಗೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಶಾಮೀಲಾಗುವುದನ್ನು ಸಹಿಸುವುದಿಲ್ಲ. ಶಾಮೀಲಾಗಿದ್ದು ಕಂಡುಬಂದರೆ ಮುಲಾಜಿಲ್ಲದೆ ಕ್ರಮ ಜರುಗಿಸುವಂತೆ ನಗರ ಪೊಲೀಸ್ ಕಮಿಷನರ್‌ಗೆ ಸೂಚಿಸಿದ್ದೇನೆ ಎಂದು ಗೃಹ ಸಚಿವರು ಹೇಳಿದರು.

'ನಿರ್ಭಯಾ ಯೋಜನೆ'ಯಡಿ ನಗರದಾದ್ಯಂತ 9 ಸಾವಿರ ಕ್ಯಾಮೆರಾಗಳನ್ನು ಅಳವಡಿಸಿದ್ದೇವೆ. ಸೇಫ್ಟಿ ಐಲ್ಯಾಂಡ್ಸ್ ಸ್ಥಾಪಿಸಲಾಗಿದೆ. ನಗರದಲ್ಲಿ ನೆಲಸಿರುವ ವಿದೇಶಿಯರ ಕುರಿತು ಮಾಹಿತಿ ಸಂಗ್ರಹಿಸುವಂತೆ ಸೂಚಿಸಿದ್ದೇನೆ. ಅಕ್ರಮ ವಲಸಿಗರ ಮಾಹಿತಿಯೂ ಗೊತ್ತಾಗುತ್ತದೆ' ಎಂದು ಅವರು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳಾದ ರಮೇಶ್ ಬಾನೋತ್, ವಿಕಾಶ್‌ಕುಮಾರ್ ವಿಕಾಶ್ ಹಾಗೂ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್, ಸಿಸಿಬಿ ವಿಭಾಗದ ಜಂಟಿ ಕಮಿಷನರ್ ಚಂದ್ರಗುಪ್ತ ಹಾಗೂ ವಿವಿಧ ವಿಭಾಗಗಳ ಡಿಸಿಪಿಗಳು ಪಾಲ್ಗೊಂಡಿದ್ದರು.



ಬೆಂಗಳೂರಿನಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಗೃಹ ಸಚಿವ ಪರಮೇಶ್ವರ ಅವರು ಮಾತನಾಡಿದರು. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರು ಪಾಲ್ಗೊಂಡಿದ್ದರು

> **ಬೆಂಗಳೂರಿನ ಸಂಚಾರ ಸಮಸ್ಯೆಗೆ ಶಾಶ್ವತವಾಗಿ ಪರಿಹಾರ ಕಂಡುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು**
> **ಜಿ.ಪರಮೇಶ್ವರ,** ಗೃಹ ಸಚಿವ

## 2024ರಲ್ಲಿ ₹1,800 ಕೋಟಿ ವಂಚನೆ

ಸೈಬರ್ ಅಪರಾಧ ಪ್ರಕರಣಗಳ ಮೇಲ್ವಿಚಾರಣೆಗೆ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಶ್ರೇಣಿಯ ಹಿರಿಯ ಐಪಿಎಸ್ ಅಧಿಕಾರಿಯನ್ನು ನೇಮಿಸಲಾಗಿದೆ. ರಾಜ್ಯದ ವಿವಿಧ ಠಾಣೆಗಳಲ್ಲಿ ದಾಖಲಾಗುವ ಸೈಬರ್ ಅಪರಾಧ ಪ್ರಕರಣಗಳ ಮೇಲ್ವಿಚಾರಣೆಯನ್ನು ಡಿಜಿಪಿ ಅವರೇ ನೋಡಿಕೊಳ್ಳಲಿದ್ದಾರೆ. 2024ರಲ್ಲಿ 16,000 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದವು. ಸಾರ್ವಜನಿಕರು ₹1,800 ಕೋಟಿ ಕಳೆದುಕೊಂಡಿದ್ದರು ಎಂದು ಪರಮೇಶ್ವರ ಹೇಳಿದರು.

## ಖಾಲಿ ಹುದ್ದೆಗಳ ಭರ್ತಿ: ಪರಮೇಶ್ವರ

ಪೊಲೀಸ್ ಇಲಾಖೆಯಲ್ಲಿ ಸುಮಾರು 15 ಸಾವಿರ ಹುದ್ದೆಗಳು ಖಾಲಿಯಿವೆ. ಅದನ್ನು ಭರ್ತಿ ಮಾಡಲಾಗುವುದು. ಈಗಾಗಲೇ 545 ಪಿಎಸ್‌ಐಗಳು ತರಬೇತಿ ಪಡೆಯುತ್ತಿದ್ದಾರೆ. 402 ಪಿಎಸ್‌ಐ ಹುದ್ದೆಗಳ ಪರೀಕ್ಷೆಯ ಫಲಿತಾಂಶ ಬಾಕಿ ಇದೆ. ಶೀಘ್ರವಾಗಿ ಬಿಡುಗಡೆ ಮಾಡಲಾಗುವುದು. ಇದರಲ್ಲಿ 219 ಪಿಎಸ್‌ಐಗಳನ್ನು ಬೆಂಗಳೂರಿಗೆ ನೀಡಲಾಗುವುದು ಎಂದು ಗೃಹ ಸಚಿವರು ಹೇಳಿದರು.




## ಪೂರ್ವ ಪ್ರಾಥಮಿಕ ಶಾಲೆಗೆ ನೋಂದಣಿ ಕಡ್ಡಾಯ

**ಬೆಂಗಳೂರು:** ಪೂರ್ವ ಪ್ರಾಥಮಿಕ ಶಾಲೆಗಳಿಗೆ ನೋಂದಣಿ ಕಡ್ಡಾಯಗೊಳಿಸಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಎಸ್‌ಎಟಿಎಸ್ ಪೋರ್ಟಲ್‌ನಲ್ಲಿ ಹೊಸ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಲಾಗಿದ್ದು, ಪ್ಲೇ ಹೋಂ, ಎಲ್‌ಕೆಜಿ, ಯುಕೆಜಿ ಸೇರಿ ಎಲ್ಲ ಪೂರ್ವ ಪ್ರಾಥಮಿಕ ಶಾಲೆ ನಡೆಸುವವರು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಶಾಲೆ ನಡೆಸಲು ಅವಕಾಶ ಇರುವುದಿಲ್ಲ ಎಂದು ಆದೇಶದಲ್ಲಿ ವಿವರಿಸಲಾಗಿದೆ. ಮೂರು ತಿಂಗಳು ಮುಂಚಿತವಾಗಿ ಅಗತ್ಯ ದಾಖಲೆ ಜತೆ ಆನ್‌ಲೈನ್ ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಬೇಕು. ಪ್ರತಿ ಮಗುವಿಗೆ ಒಂದು ಚದರ ಮೀಟರ್ ಸ್ಥಳಾವಕಾಶ ಕಡ್ಡಾಯ. 30 ವರ್ಷದ ಅವಧಿಗೆ ಸ್ವಂತ ಕಟ್ಟಡ ಅಥವಾ ಗುತ್ತಿಗೆ ಹೊಂದಿರಬೇಕು. ಬಿಬಿಎಂಪಿ ವ್ಯಾಪ್ತಿಯ ಶಾಲೆಗೆ ₹15,000, ಇತರೆ ನಗರ ಪ್ರದೇಶಕ್ಕೆ ₹7,500, ಗ್ರಾಮೀಣ ಪ್ರದೇಶಗಳಿಗೆ ₹2,500 ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ.

ಹೆಚ್ಚಿನ ಸುದ್ದಿಗೆ prajavani.net ನೋಡಿರಿ

# ರವಿಕುಮಾರ್ ವಿರುದ್ಧ ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಲಬುರಗಿ ಜಿಲ್ಲಾಧಿಕಾರಿ ವಿರುದ್ಧ ಬಿಜೆಪಿ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಅವರು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಈ ಸಂಬಂಧ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದೆ.

'ಪಕ್ಷದ ಬಹಿರಂಗ ಸಭೆಯಲ್ಲಿ ಜಿಲ್ಲಾಧಿಕಾರಿ ಕುರಿತು ರವಿಕುಮಾರ್ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಡಿ.ಸಿ ಕಚೇರಿಯೂ ತನ್ನ ಸ್ವಾತಂತ್ರ್ಯ ಕಳೆದುಕೊಂಡಿದೆ. ಡಿ.ಸಿ ಪಾಕಿಸ್ತಾನದಿಂದ ಬಂದಿದ್ದಾರೋ ಅಥವಾ ಇಲ್ಲಿ ಐಎಎಸ್ ಅಧಿಕಾರಿಯೋ ನನಗೆ ತಿಳಿದಿಲ್ಲ' ಎಂದು ರವಿಕುಮಾರ್ ಹೇಳಿದ್ದಾರೆ. ಈ ವೇಳೆ ಜನರ ಚಪ್ಪಾಳೆಗೆ ಪ್ರತಿಕ್ರಿಯಿಸಿ, ನಿಮ್ಮ ಚಪ್ಪಾಳೆ ನೋಡಿದರೆ, 'ಡಿಸಿ ಬಹುಶಃ ಪಾಕಿಸ್ತಾನದಿಂದ ಬಂದಿದ್ದಾರೆ' ಎಂದಿದ್ದಾರೆ. ಈ ಮಾತು ಒಪ್ಪುವಂತದ್ದಲ್ಲ' ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ ಹಾಗೂ ಪ್ರಧಾನ ಕಾರ್ಯದರ್ಶಿ ದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಅವರ ಜಾತಿ, ಧರ್ಮಗಳನ್ನು ಪರಿಗಣಿಸಿ ಆಡಿರುವ ಈ ಮಾತುಗಳು ಬಿಜೆಪಿಯ ಸಂವಿಧಾನ ವಿರೋಧಿ ನಡವಳಿಕೆಗಳಿಗೆ ಮತ್ತೊಂದು ಸಾಕ್ಷಿಯಾಗಿದೆ. ರವಿಕುಮಾರ್ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಮೂಲಕ ನಾಡಿನ ಮಹಿಳೆಯರನ್ನು ಗೌರವಿಸಬೇಕು ಎಂದು ಹೇಳಿದ್ದಾರೆ.

## ಕ್ಷಮೆ ಕೇಳಲು ಬಿ.ಕೆ.ಸಿ ಆಗ್ರಹ

**ಬೆಂಗಳೂರು:** 'ಬಿಜೆಪಿಯ ಎನ್.ರವಿಕುಮಾರ್ ಅವರು ಕಲಬುರ್ಗಿ ಜಿಲ್ಲಾಧಿಕಾರಿ ಕುರಿತು ಆಡಿರುವ ಮಾತು ಆಕ್ಷೇಪಾರ್ಹ ಮತ್ತು ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಅವರು ಕ್ಷಮೆ ಕೇಳಬೇಕು' ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ.ಚಂದ್ರಶೇಖರ್ ಅವರು ಆಗ್ರಹಿಸಿದ್ದಾರೆ.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು, 'ಕಲಬುರ್ಗಿ ಜಿಲ್ಲಾಧಿಕಾರಿ ಅವರು ಪಾಕಿಸ್ತಾನದಿಂದ ಬಂದವರಂತೆ ಕಾಣಿಸುತ್ತಾ ಇದೆ' ಎಂದಿದ್ದನ್ನು ಖಂಡಿಸಿ ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ.


'ಬಿಜೆಪಿ ನಾಯಕರ ಮಾತುಗಳ ಬಗ್ಗೆ ನಾನು ಸಾಮಾನ್ಯವಾಗಿ ಪ್ರತಿಕ್ರಿಯಿಸುವುದಿಲ್ಲ. ಆದರೆ ಈ ಮಾತು ಅತ್ಯಂತ ಕೀಳು ಅಭಿರುಚಿಯದ್ದು. ಇವರೆಲ್ಲಾ ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ತಮ್ಮ ಪಕ್ಷದ ಅಧಿಕೃತ ನಾಯಕರಾಗಿದ್ದಾರೆ. ಈ ಪಕ್ಷದ ಕೆಲ ನಾಯಕರು ಈ ಹಿಂದೆ ನ್ಯಾಯಾಲಯಗಳು ಮತ್ತು ಅವುಗಳ ತೀರ್ಪಿನ ವಿರುದ್ಧವೂ ಮಾತನಾಡಿದ್ದಾರೆ' ಎಂದಿದ್ದಾರೆ. 'ಇಂತಹ ಮಾತುಗಳನ್ನು ಆಡುವ ಇವರು ನಂತರ, 'ನಮ್ಮಿಂದ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೇವೆ' ಎನ್ನುವ ಸುಲಭದ ದಾರಿ ಕಂಡುಕೊಂಡಿದ್ದಾರೆ. ಎನ್.ರವಿಕುಮಾರ್ ಅವರು ಬೇಷರತ್ ಕ್ಷಮೆ ಯಾಚಿಸಬೇಕು ಎಂದು ಐಎಎಸ್ ಅಧಿಕಾರಿಗಳ ಸಂಘದ ಬೇಡಿಕೆಯನ್ನು ನಾನು ಬೆಂಬಲಿಸುತ್ತೇನೆ' ಎಂದು ಹೇಳಿದ್ದಾರೆ.

## 'ಜಿಲ್ಲಾಧಿಕಾರಿಗೆ ನಿಂದನೆ: ಕಾನೂನು ಕ್ರಮ'

**ಬೆಂಗಳೂರು:** 'ಕಲಬುರಗಿ ಜಿಲ್ಲಾಧಿಕಾರಿಯನ್ನು ಪಾಕಿಸ್ತಾನಿ ಎಂದು ನಿಂದಿಸಿರುವ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳದೆ ಬೇರೆ ದಾರಿ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅನೇಕ ಐಎಎಸ್ ಅಧಿಕಾರಿಗಳು ನನ್ನನ್ನು ಭೇಟಿ ಮಾಡಿದ್ದಾರೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದು, ಕಾನೂನು ದೃಷ್ಟಿಕೋನದಲ್ಲಿ ಪರಿಶೀಲಿಸುತ್ತೇವೆ. ಜಿಲ್ಲಾಧಿಕಾರಿ ರಾಷ್ಟ್ರಮಟ್ಟದ ಅಧಿಕಾರಿ. ಅವರು ತಮ್ಮದೇ ಆದ ಘನತೆ ಹೊಂದಿದ್ದಾರೆ. ರಾಜ್ಯ ಸರ್ಕಾರ ಅವರ ಬೆನ್ನಿಗೆ ನಿಲ್ಲಲಿದೆ' ಎಂದರು.








# ವಿದ್ಯಾರ್ಥಿ ವೀಸಾ ಸಂದರ್ಶನ ಪ್ರಕ್ರಿಯೆ ಸ್ಥಗಿತಗೊಳಿಸಿದ ಅಮೆರಿಕ




**ವಾಷಿಂಗ್ಟನ್ (ರಾಯಿಟರ್ಸ್):** ಅಮೆರಿಕದಲ್ಲಿ ವ್ಯಾಸಂಗ ಮಾಡಲು ಬಯಸಿರುವ ವಿದ್ಯಾರ್ಥಿ ವೀಸಾ ಅರ್ಜಿದಾರರ ಸಂದರ್ಶನ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಡೊನಾಲ್ಡ್ ಟ್ರಂಪ್ ಆಡಳಿತ ಮಂಗಳವಾರ ಸೂಚಿಸಿದೆ.

ವಿದೇಶಿ ವಿದ್ಯಾರ್ಥಿಗಳು ಅಮೆರಿಕದಲ್ಲಿ ವ್ಯಾಸಂಗ ಮಾಡಲು ವೀಸಾಕ್ಕೆ ಅರ್ಜಿ ಸಲ್ಲಿಸುವಾಗ ಅವರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಪರಿಶೀಲನೆಗೆ ಒಳಪಡಿಸುವುದನ್ನು ಟ್ರಂಪ್ ಆಡಳಿತ ಪರಿಗಣಿಸುತ್ತಿರುವುದರಿಂದ, ಈ ನಿರ್ಧಾರ ತೆಗೆದುಕೊಂಡಿದೆ.

ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ವಿಶ್ವದ ವಿವಿಧ ದೇಶಗಳಲ್ಲಿರುವ ತನ್ನ ರಾಯಭಾರ ಕಚೇರಿಗಳಿಗೆ ಈ ಸಂಬಂಧ ಆದೇಶ ಹೊರಡಿಸಿದ್ದಾರೆ.

‘ಸಾಮಾಜಿಕ ಮಾಧ್ಯಮ ಖಾತೆಗಳ ಪರಿಶೀಲನೆಯ ಕುರಿತು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲು ವಿದೇಶಾಂಗ ಇಲಾಖೆ ಸಿದ್ಧತೆ ನಡೆಸಿದೆ. ಆದ್ದರಿಂದ ಮುಂದಿನ ಆದೇಶದವರೆಗೆ ಯಾವುದೇ ಕಾನ್ಸುಲರ್ ವಿಭಾಗಗಳು ವಿದ್ಯಾರ್ಥಿ ವೀಸಾ ಸಂದರ್ಶನ ನಡೆಸುವಂತಿಲ್ಲ’ ಎಂದು ಸೂಚಿಸಿದ್ದಾರೆ.

ಈಗಾಗಲೇ ನಿಗದಿಯಾಗಿರುವ ವೀಸಾ ಅರ್ಜಿದಾರರ ಸಂದರ್ಶನ ಪ್ರಕ್ರಿಯೆಯನ್ನು ಪ್ರಸ್ತುತ ಮಾರ್ಗಸೂಚಿಗಳ ಅಡಿಯಲ್ಲಿ ನಡೆಸಬಹುದು ಎಂದು ರುಬಿಯೊ ಹೇಳಿದ್ದಾರೆ.

ಈ ಹಿಂದೆ, ಪ್ಯಾಲೆಸ್ಟೀನ್ ಪರ ಪ್ರತಿಭಟನೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಮಾತ್ರ ತಪಾಸಣೆ ಮಾಡಲಾಗುತ್ತಿತ್ತು.

## ಮೊಬೈಲ್ ದರೋಡೆ

**ಬೆಂಗಳೂರು:** ನಗರದಲ್ಲಿ ಮೊಬೈಲ್ ಕಳ್ಳರ ಗ್ಯಾಂಗ್ ಮತ್ತೆ ಸಕ್ರಿಯವಾಗಿದ್ದು, ಮಂಗಳವಾರ ಬೆಳಿಗ್ಗೆ ನಾಲ್ಕು ಸ್ಥಳಗಳಲ್ಲಿ ಮೊಬೈಲ್ ದರೋಡೆ ನಡೆಸಲಾಗಿದೆ.

ಜೆ.ಪಿ. ನಗರ ಎರಡು ಕಡೆ, ತಣ್ಣೂರು ಹಾಗೂ ಬ್ಯಾಟರಾಯನಪುರದಲ್ಲಿ ಮೊಬೈಲ್ ಕಳ್ಳತನ ಪ್ರಕರಣಗಳು ನಡೆದಿವೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಘಟನಾ ಸ್ಥಳದ ಸುತ್ತಮುತ್ತಲ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಪರಿಶೀಲನೆ ನಡೆಸಲಾಗಿದೆ. ಆರೋಪಿಗಳ ಸುಳಿವು ಸಿಕ್ಕಿದ್ದು, ಶೀಘ್ರದಲ್ಲಿಯೇ ಬಂಧಿಸಲಾಗುವುದು. ರಸ್ತೆಯಲ್ಲಿ ನಡೆದು ಹೋಗುವಾಗ, ಬಸ್ ಹತ್ತುವಾಗ ಸಾರ್ವಜನಿಕರು ಎಚ್ಚರಿಕೆ ವಹಿಸಿ ಎಂದು ಪೊಲೀಸರು ಮನವಿ ಮಾಡಿದ್ದಾರೆ.



ಉದ್ಯಮಿ, ಕಾಂಗ್ರೆಸ್ ಮುಖಂಡನಿಂದ ದೂರು–ಪ್ರತಿದೂರು

# ಬೆವರಿನ ಹನಿ ಬಿದ್ದ ಪ್ರಕರಣ: ಗಲಾಟೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತಿರುಪತಿ ತಿರುಮಲ ದೇವಸ್ಥಾನ(ಟಿಟಿಡಿ) ಟ್ರಸ್ಟ್‌ನ ಮಾಜಿ ಅಧ್ಯಕ್ಷರಾಗಿದ್ದ ದಿವಂಗತ ಆದಿಕೇಶವುಲು ಅವರ ಮೊಮ್ಮಗ ಗೀತವಿಷ್ಣು ಹಾಗೂ ಕಾಂಗ್ರೆಸ್ ಮುಖಂಡ ಸೈಯದ್ ಸಾದಿಕ್ ಅವರು ಶಾಂಗ್ರಿಲಾ ಹೋಟೆಲ್‌ನಲ್ಲಿ ಜಿಮ್ ಮಾಡುತ್ತಿದ್ದ ವೇಳೆ ಗಲಾಟೆ ಮಾಡಿಕೊಂಡಿದ್ದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು- ಪ್ರತಿದೂರು ನೀಡಿದ್ದಾರೆ.

ಇಬ್ಬರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಗೀತವಿಷ್ಣು ಅವರು ಜಯನಗರದಲ್ಲಿ ನೆಲಸಿದ್ದಾರೆ. ಗಲಾಟೆಗೆ ಸಂಬಂಧಿಸಿದಂತೆ ಸೈಯದ್ ಸಾದಿಕ್ ಅವರು ಮೇ 19ರಂದು ರಾತ್ರಿ 10.45ಕ್ಕೆ ದೂರು ನೀಡಿದ್ದರು. ಅಂದೇ ರಾತ್ರಿ 11.30ಕ್ಕೆ ಗೀತವಿಷ್ಣು ಅವರು ಪ್ರತಿ ದೂರು ನೀಡಿದ್ದರು.

‘ಶಾಂಗ್ರಿಲಾ ಹೋಟೆಲ್‌ನ ಕ್ಲಬ್ ಸದಸ್ಯನಾಗಿದ್ದು, ಹೋಟೆಲ್‌ನಲ್ಲಿದ್ದ ವ್ಯಕ್ತಿಯೊಬ್ಬ ತಡೆದು ಹಲ್ಲೆ ನಡೆಸಿದ್ದಾನೆ. ಹಲ್ಲೆಯಿಂದ ಬೆನ್ನಿಗೆ ಪೆಟ್ಟಾಗಿದೆ’ ಎಂದು ಸೈಯದ್ ಸಾದಿಕ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಜಿಮ್‌ನಲ್ಲಿ ವರ್ಕ್‌ಔಟ್ ಮುಗಿಸಿ ಬಟ್ಟೆ ಬದಲಿಸುವಾಗ ಸ್ಥಳದಲ್ಲಿದ್ದ ಸೈಯ್ಯದ್ ಸಾದಿಕ್ ಮೇಲೆ ಬೆವರಿನ ಹನಿ ಬಿದ್ದಿದೆ. ಅದರಿಂದ ಸಿಟ್ಟಿಗೆದ್ದ ಸಾದಿಕ್ ಅವರು ನನ್ನ ಜೊತೆ ಗಲಾಟೆ ಮಾಡಿದರು. ಹಲ್ಲೆ ನಡೆಸಿದ್ದರಿಂದ ಬಲಗಣ್ಣಿಗೆ ಗಾಯವಾಗಿದೆ’ ಎಂದು ಗೀತವಿಷ್ಣು ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ಮತ್ತೊಮ್ಮೆ ಜಿಮ್‌ನಲ್ಲಿ ಕಾಣಿಸಿಕೊಂಡರೆ ಕೊಲೆ ಮಾಡುವುದಾಗಿಯೂ ಸೈಯದ್ ಸಾದಿಕ್ ಅವರು ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

‘ಎರಡು ವಾರಗಳ ಹಿಂದೆ ಅದೇ ಹೋಟೆಲ್‌ನಲ್ಲಿ ಕಾಂಗ್ರೆಸ್ ಯುವ ಘಟಕದ ಮುಖಂಡರೊಬ್ಬರ ಜತೆಗೆ ಮಾತಿನ ಚಕಮಕಿ ನಡೆದಿತ್ತು. ಆ ಸಂದರ್ಭದಲ್ಲಿ ಈ ಸೈಯ್ಯದ್ ಸಾದಿಕ್ ಸೇರಿದಂತೆ ನಾಲ್ವರು ಅವರ ಜೊತೆಗಿದ್ದರು. ಬಳಿಕ ಹೋಟೆಲ್ ಸಿಬ್ಬಂದಿ ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದರು. ಮತ್ತೊಮ್ಮೆ ಅದೇ ರೀತಿ ಗಲಾಟೆ ನಡೆಸಿ ಹಲ್ಲೆ ನಡೆಸಿದ್ದಾರೆ. ಇದು ಪೂರ್ವನಿಯೋಜಿತ ಕೃತ್ಯ’ ಎಂದು ಗೀತವಿಷ್ಣು ಅವರು ಆರೋಪಿಸಿದ್ದಾರೆ.

## ಅಪರಾಧ ಸುದ್ದಿ

### ಬೇಕರಿಗೆ ನುಗ್ಗಿ ರೌಡಿ ಗಲಾಟೆ




ಪುಕ್ಕಟ್ಟೆಯಾಗಿ ಸಿಗರೇಟ್ ಕೊಡಲಿಲ್ಲ ಎನ್ನುವ ವಿಚಾರಕ್ಕೆ ರೌಡಿಯೊಬ್ಬ ಬೇಕರಿಗೆ ನುಗ್ಗಿ ಗಲಾಟೆ ನಡೆಸಿದ್ದು, ಆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಅದನ್ನು ಆಧರಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸದ್ದುಗುಂಟೆಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ತಾವರೆಕೆರೆ ಮುಖ್ಯರಸ್ತೆಯ ಕೃಷ್ಣಮೂರ್ತಿ ಲೇಔಟ್‌ನಲ್ಲಿ ಈ ಘಟನೆ ನಡೆದಿದೆ.

ರೌಡಿ ಅಪ್ಪಿ ಎಂಬಾತ ನಾಲ್ಕು ದಿನಗಳ ಹಿಂದೆ ಕೃಷ್ಣಮೂರ್ತಿ ಲೇಔಟ್‌ನ ರಮ್ಜಿದ್ ಸೈಫುಲ್ಲಾ ಎಂಬುವರ ಬೇಕರಿಗೆ ಹೋಗಿ ಪುಕ್ಕಟೆಯಾಗಿ ಸಿಗರೇಟ್ ಕೊಡುವಂತೆ ಕೇಳಿದ್ದ. ಆಗ ರಮ್ಜಿದ್ ಸೈಫುಲ್ಲಾ ಅವರು ಸಿಗರೇಟ್ ಕೊಟ್ಟಿಲ್ಲ. ಇದರಿಂದ ಕೆರಳಿದ ಅಪ್ಪಿ, ಬೇಕರಿಯೊಳಗೆ ನುಗ್ಗಿ ಕೈಗೆ ಸಿಕ್ಕ ವಸ್ತುಗಳನ್ನು ಹೊರಕ್ಕೆ ಎಸೆದು ಗಲಾಟೆ ಮಾಡಿದ್ದಾನೆ. ಸೈಫುಲ್ಲಾ ಅವರು ದೂರು ಕೊಟ್ಟಿದ್ದು, ಸದ್ದುಗುಂಟೆಪಾಳ್ಯ ಠಾಣೆ ಪೊಲೀಸರು ಅಪ್ಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರೌಡಿ ಅಪ್ಪಿ ಮದ್ಯದ ಅಮಲಿನಲ್ಲಿ ಗಲಾಟೆ ನಡೆಸಿದ್ದಾನೆ ಎಂದು ಗೊತ್ತಾಗಿದೆ. ಈ ಹಿಂದೆಯೂ ರಮ್ಜಿದ್ ಸೈಫುಲ್ಲಾರ ಬೇಕರಿಯಲ್ಲಿ ಸಿಗರೇಟ್ ತೆಗೆದುಕೊಂಡು ಹಣ ಕೊಡದೆ ಗಲಾಟೆ ಮಾಡಿದ್ದ. ಅದೇ ರೀತಿ ನಾಲ್ಕು ದಿನಗಳ ಹಿಂದೆ ಬೇಕರಿಗೆ ಹೋಗಿ ಗಲಾಟೆ ಮಾಡಿ ಪರಾರಿಯಾಗಿದ್ದಾನೆ. ಆತನ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದರು.

### ಬೈಕ್ ಅಪಘಾತ ವ್ಯಕ್ತಿ ಸಾವು

**ಬೆಂಗಳೂರು:** ಹೆಬ್ಬಾಳ ಸರ್ಕಲ್‌ನ ಸರ್ವಿಸ್ ರಸ್ತೆಯಲ್ಲಿ ಸೋಮವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಔರಂಗ್ (32) ಎಂಬುವವರು ಮೃತಪಟ್ಟಿದ್ದಾರೆ.

ಯಶವಂತಪುರ ನಿವಾಸಿ ಔರಂಗ್ ಅವರು ಬೈಕ್‌ನಲ್ಲಿ ಹೆಬ್ಬಾಳಕ್ಕೆ ಹೋಗುತ್ತಿದ್ದರು. ಆಗ ಅಪಘಾತ ಸಂಭವಿಸಿದೆ.

ಅಜಾಗರೂಕತೆ ಹಾಗೂ ಅತಿ ವೇಗದಿಂದ ಔರಂಗ್ ಅವರು ಬೈಕ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಆಗ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದು ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಔರಂಗ್ ಅವರು ಹೆಲ್ಮೆಟ್ ಧರಿಸದೇ ಬೈಕ್ ಚಾಲನೆ ಮಾಡುತ್ತಿದ್ದರು. ಹೆಬ್ಬಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



**ಪ್ರತಿಭಟನೆ** ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ 386 ಹುದ್ದೆಗಳಿಗೆ ನೇಮಕಗೊಂಡಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ನೀಡುವಂತೆ ಆಗ್ರಹಿಸಿ ರಾಜ್ಯ ವಿದ್ಯಾರ್ಥಿ ಅಸೋಸಿಯೇಷನ್ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು

ವಿಚಾರಣೆ ವೇಳೆ ಆರೋಪಿ, ನಟ ಮಡೆನೂರು ಮನು ಹೇಳಿಕೆ

# ‘ಹಲ್ಲೆ ನಡೆಸಿ ಖಾಸಗಿ ವಿಡಿಯೊ ಚಿತ್ರೀಕರಿಸಿಲ್ಲ’

ಪ್ರಜಾವಾಣಿ ವಾರ್ತೆ


ಮಡೆನೂರು ಮನು

**ಬೆಂಗಳೂರು:** ತನ್ನ ವಿರುದ್ಧ ಅತ್ಯಾಚಾರ ಆರೋಪದ ಅಡಿ ದೂರು ನೀಡಿರುವ ಸಹ ನಟಿ ಐದು ವರ್ಷದ ಹಿಂದೆಯೇ ಪರಿಚಯವಾಗಿದ್ದರು. ಆಕೆಗೆ ಬಾಡಿಗೆ ಮನೆ ಹುಡುಕಿಕೊಡಲು ನೆರವು ನೀಡಿದ್ದು ನಿಜ. ಆದರೆ, ಆಕೆಯ ಮೇಲೆ ಯಾವುದೇ ರೀತಿಯಲ್ಲೂ ದೌರ್ಜನ್ಯ ಎಸಗಿಲ್ಲ ಎಂಬುದಾಗಿ ನಟ ಮಡೆನೂರು ಮನು ಅವರು ಪೊಲೀಸರ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಅತ್ಯಾಚಾರ ಆರೋಪದ ಅಡಿ ಮಡೆನೂರು ಮನು ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು ಬಂಧಿಸಿ ಹೆಚ್ಚಿನ ವಿಚಾರಣೆಗಾಗಿ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದರು. ಈ ವೇಳೆ ಆರೋಪಿಯ ಹೇಳಿಕೆಯನ್ನು ಪೊಲೀಸರು ದಾಖಲು ಮಾಡಿಕೊಂಡಿದ್ದಾರೆ. ಸದ್ಯ ಆರೋಪಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

‘ದೂರು ನೀಡಿರುವ ಮಹಿಳೆಯನ್ನು ಮದುವೆ ಆಗಿಲ್ಲ. ಅವರ ಆಪಾದನೆ ಸುಳ್ಳು. ಕಳೆದ ಮೇ 17ರಂದು ಬೆಂಗಳೂರಿನ ನಾಗರಬಾವಿಯಲ್ಲಿ ಭೇಟಿಯಾಗಿದ್ದು ನಿಜ. ಯಾವುದೇ ರೀತಿಯಾಗಿ ಹಲ್ಲೆ ಮಾಡಿ ಖಾಸಗಿ ವಿಡಿಯೊ ಚಿತ್ರೀಕರಿಸಿಲ್ಲ’ ಎಂದು ಹೇಳಿಕೆ ನೀಡಿದ್ದಾರೆ.


‘ದೂರುದಾರೆ ಪರಿಚಯ ಆಗುವುದಕ್ಕೂ ಮುನ್ನವೇ ನನಗೆ ಮದುವೆ ಆಗಿತ್ತು. ಈ ವಿಚಾರವೂ ಆಕೆಗೂ ತಿಳಿದಿತ್ತು. ನನ್ನ ಕುಟುಂಬಸ್ಥರಿಗೂ ಆಕೆಯ ಪರಿಚಯವಿದೆ’ ಎಂದು ವಿಚಾರಣೆ ವೇಳೆ ಆರೋಪಿ ಹೇಳಿಕೆ ನೀಡಿದ್ದಾರೆ.

**ಎಫ್‌ಎಸ್‌ಎಲ್‌ಗೆ ರವಾನೆ:** ‘ದೂರುದಾರೆ ಹಾಗೂ ಆರೋಪಿಯ ಮೊಬೈಲ್ ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಗಿದೆ. ಇಬ್ಬರ ವಾಟ್ಸ್‌ಆ್ಯಪ್ ಚಾಟ್‌ನಲ್ಲಿ ಯಾವುದೇ ಅಶ್ಲೀಲ ಫೋಟೊ, ವಿಡಿಯೊ ಪತ್ತೆಯಾಗಿಲ್ಲ. ಎರಡೂ ಮೊಬೈಲ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿದೆ. ದತ್ತಾಂಶ ಮರು ಸಂಗ್ರಹಣೆ ವೇಳೆ ಪ್ರಕರಣಕ್ಕೆ ಸಂಬಂಧಿಸಿ ಅಶ್ಲೀಲ ವಿಡಿಯೊ ಹಾಗೂ ಫೋಟೊಗಳು ಪತ್ತೆಯಾದಲ್ಲಿ ಆರೋಪಿಯನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಮನುಗೆ ಸಹಕಾರ ನೀಡದಿರಲು ವಾಣಿಜ್ಯ ಮಂಡಳಿ ನಿರ್ಧಾರ

‘ಚಿತ್ರರಂಗ, ಕಿರುತೆರೆಯಲ್ಲಿ ನಟ ಮಡೆನೂರು ಮನುಗೆ ಯಾರೂ ಸಹಕಾರ ನೀಡಬಾರದು ಎಂದು ಒಕ್ಕೊರಲ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಹೇಳಿದರು.

ನಟ ಮಡೆನೂರು ಮನು ಅವರದ್ದು ಎನ್ನಲಾದ ಆಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಅದರಲ್ಲಿ ನಟರಾದ ಶಿವರಾಜ್‌ಕುಮಾರ್, ದರ್ಶನ್ ಹಾಗೂ ಧ್ರುವ ಸರ್ಜಾ ಅವರ ಬಗ್ಗೆ ಕೀಳು ಮಾತುಗಳಿವೆ. ಈ ಕುರಿತು ಮಂಗಳವಾರ (ಮೇ 27) ಅಂಗಸಂಸ್ಥೆಗಳ ಅಧ್ಯಕ್ಷರ ಜೊತೆಗೆ ನರಸಿಂಹಲು ಸಭೆ ನಡೆಸಿದರು.


ನರಸಿಂಹಲು

‘ಮಂಡಳಿಯು ಬೆಂಗಳೂರು ಪೊಲೀಸ್ ಆಯುಕ್ತರಿಗೆ ಈ ಬಗ್ಗೆ ದೂರು ನೀಡಲಿದೆ. ಮಡೆನೂರು ಮನು ಯಾವುದೇ ರೀತಿಯ ಚಟುವಟಿಕೆಗಳಲ್ಲಿ ಭಾಗವಹಿಸುವಂತಿಲ್ಲ. ನಾಯಕ ನಟರ ಬಗ್ಗೆ ಮಾತನಾಡಿರುವುದು ಸರಿಯಲ್ಲ. ಆಡಿಯೊದಲ್ಲಿರುವ ಧ್ವನಿ ಅವರದ್ದೇ ಎನ್ನುವುದನ್ನು ನಾವು ಪರಿಶೀಲಿಸಿಲ್ಲ. ಈ ಕುರಿತು ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಆಡಿಯೊ ಕೇಳಿಕೊಂಡು ಈ ನಿರ್ಧಾರ ಮಾಡಿದ್ದೇವೆ. ನಾವು ಕಾನೂನು ಪ್ರಕಾರವಾಗಿ ಮುಂದಿನ ಹೆಜ್ಜೆ ಇಡಲಿದ್ದೇವೆ. ಕಲಾವಿದರ ಸಂಘವನ್ನೂ ಈ ಸಭೆಗೆ ಆಹ್ವಾನಿಸಿದ್ದೆವು. ಮಂಡಳಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ ಎಂದು ಅವರು ಹೇಳಿದ್ದಾರೆ’ ಎಂದು ನರಸಿಂಹಲು ತಿಳಿಸಿದರು.

# ಏಳು ದ್ವಿಚಕ್ರ ವಾಹನ ಜಪ್ತಿ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಆರೋಪಿಯನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿ, ₹5 ಲಕ್ಷ ಮೌಲ್ಯದ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಕುಮಾರಸ್ವಾಮಿ ಲೇಔಟ್‌ನ ನಿವಾಸಿ ಇಮ್ರಾನ್ ಖಾನ್ (27) ಎಂಬಾತನನ್ನು ಬಂಧಿಸಿ, ಏಳು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ.

ಸುಂಕದಕಟ್ಟೆಯ ಟೆಲಿಕಾಂ ಲೇಔಟ್ ನಿವಾಸಿಯೊಬ್ಬರು ತಮ್ಮ ದ್ವಿಚಕ್ರ ವಾಹನದಲ್ಲಿ ಪರಿಚಯಸ್ಥರ ಮನೆಗೆ ಕಾರ್ಯಕ್ರಮ ನಿಮಿತ್ತ ಹೋಗಿದ್ದು, ಗಾಣಿಗರ ಪಾಳ್ಯ 4ನೇ ಮುಖ್ಯ ರಸ್ತೆಯಲ್ಲಿ ವಾಹನ ನಿಲ್ಲಿಸಿದ್ದಾರೆ. ಕಾರ್ಯಕ್ರಮ ಮುಗಿಸಿಕೊಂಡು ಮಧ್ಯಾಹ್ನ ಮನೆಗೆ ವಾಪಸ್ ಹೋಗಲು ವಾಹನ ನಿಲ್ಲಿಸಿದ್ದ ಸ್ಥಳಕ್ಕೆ ಹೋದಾಗ ಅಲ್ಲಿ ಇರಲಿಲ್ಲ. ಸ್ಥಳೀಯರಿಂದಲೂ ಈ ಬಗ್ಗೆ ಮಾಹಿತಿ ಸಿಗದಿದ್ದಾಗ ಪೊಲೀಸರಿಗೆ ದೂರು ನೀಡಿದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ಮಾಹಿತಿಗಳನ್ನು ಕಲೆ ಹಾಕಿ ಇಮ್ರಾನ್ ಖಾನ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ವಾಹನ ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ.

ಸುದೀರ್ಘ ವಿಚಾರಣೆಗೆ ಒಳಪಡಿಸಿದಾಗ ನಗರದ ವಿವಿಧ ಕಡೆಗಳಲ್ಲಿ ಏಳು ದ್ವಿಚಕ್ರ ವಾಹನ ಕಳವು ಮಾಡಿರುವುದಾಗಿ ತಿಳಿಸಿದ್ದು, ಆ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿ ಬಂಧನದಿಂದ ತಲಘಟ್ಟಪುರ ಪೊಲೀಸ್ ಠಾಣೆ–3, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ, ಕನಕಪುರ ಪೊಲೀಸ್ ಠಾಣೆ, ಹಾರೋಹಳ್ಳಿ ಪೊಲೀಸ್ ಠಾಣೆ, ಕಗ್ಗಲೀಪುರ ಠಾಣೆಯಲ್ಲಿ ತಲಾ ಒಂದು ದ್ವಿಚಕ್ರ ವಾಹನ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿಯು ಕುಮಾರಸ್ವಾಮಿ ಲೇಔಟ್‌ನಲ್ಲಿ ವೆಲ್ಡಿಂಗ್ ಕೆಲಸ ಮಾಡಿಕೊಂಡಿದ್ದು, ನಿತ್ಯದ ಖರ್ಚಿಗಾಗಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿ, ಕಡಿಮೆ ಹಣಕ್ಕೆ ಮಾರಾಟ ಮಾಡುತ್ತಿದ್ದ. ಆರೋಪಿ ವಿರುದ್ಧ ಹಲವು ಠಾಣೆಗಳಲ್ಲಿ ವಾಹನ ಕಳ್ಳತನ ಪ್ರಕರಣಗಳು ದಾಖಲಾಗಿವೆ’ എಂದು ಪೊಲೀಸರು ಹೇಳಿದರು.

## ವಸತಿ ಶಾಲೆ ನೌಕರರ ಧರಣಿ ಮುಂದುವರಿಕೆ

**ಬೆಂಗಳೂರು:** ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಸತಿ ಶಾಲೆಗಳ ನೌಕರರ ಸಂಘದ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಮಂಗಳವಾರ ಎರಡನೇ ದಿನ ಪೂರೈಸಿತು.

ಪ್ರತಿಭಟನಾ ಸ್ಥಳಕ್ಕೆ ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಕಾರ್ಯ ನಿರ್ವಾಹಕ ನಿರ್ದೇಶಕ ಕಾಂತರಾಜು ಭೇಟಿ ನೀಡಿ, ‘ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ಧರಣಿ ವಾಪಸ್ ಪಡೆಯುವಂತೆ’ ಮನವಿ ಮಾಡಿದರು. ಆದೇಶ ಪತ್ರ ನೀಡುವವರೆಗೂ ಧರಣಿ ವಾಪಸ್ ಪಡೆಯುವುದಿಲ್ಲ ಎಂದು ನೌಕರರ ಸಂಘದ ಅಧ್ಯಕ್ಷ ಪಿ.ಎನ್.ರವಿಚಂದ್ರ ತಿಳಿಸಿದರು.

ಅಡಿಕೆ ಹಾಳೆಯ ತಟ್ಟೆ, ಲೋಟಗಳ ಬಳಕೆಗೆ ಅಮೆರಿಕ ನಿಷೇಧ

# ಪ್ರಧಾನಿ ಮಧ್ಯಪ್ರವೇಶಕ್ಕೆ ಆಗ್ರಹಿಸಿ ಪತ್ರ

ಪ್ರಜಾವಾಣಿ ವಾರ್ತೆ


ಟಿ.ಎನ್.ಪ್ರಕಾಶ್ ಕಮ್ಮರಡಿ

**ಬೆಂಗಳೂರು:** ‘ಅಡಿಕೆ ಹಾಳೆಗಳಿಂದ ತಯಾರಿಸಿದ ತಟ್ಟೆ, ಬಟ್ಟಲು, ಲೋಟಗಳ ಬಳಕೆಯನ್ನು ಅಮೆರಿಕ ನಿಷೇಧಿಸಿರುವ ವಿಷಯದಲ್ಲಿ ಪ್ರಧಾನಿ ನರೇಂದ್ರಮೋದಿಅವರುಮಧ್ಯಪ್ರವೇಶಿಸಿ, ಪರಿಹಾರ ಒದಗಿಸಬೇಕು’ ಎಂದು ಕರ್ನಾಟಕದ ಕೃಷಿ ತಜ್ಞರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಕೃಷಿ ಬೆಲೆ ಆಯೋಗದ ಹಿಂದಿನ ಅಧ್ಯಕ್ಷ ಟಿ.ಎನ್.ಪ್ರಕಾಶ್ ಕಮ್ಮರಡಿ ಅವರು ಬರೆದಿರುವ ಈ ಪತ್ರಕ್ಕೆ ಕರ್ನಾಟಕ ಮತ್ತು ದೇಶದ ಬೇರೆ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ 106 ಕೃಷಿ ವಿಜ್ಞಾನಿಗಳು ಸಹಿ ಮಾಡಿದ್ದಾರೆ.



‘ಅಡಿಕೆ ಹಾಳೆಯಲ್ಲಿ ನೈಸರ್ಗಿಕವಾಗಿಯೇ ಇರುವ ವಿಷಕಾರಿ ಅಂಶದಿಂದ ಕ್ಯಾನ್ಸರ್ ಬರುತ್ತದೆ. ಅವುಗಳನ್ನು ಬಳಸಬೇಡಿ ಎಂದು ಅಮೆರಿಕದ ಆಹಾರ ಮತ್ತು ಔಷಧ ವ್ಯವಹಾರಗಳ ಸಚಿವಾಲಯವು ಸುತ್ತೋಲೆ ಹೊರಡಿಸಿದೆ. ಪರಿಣಾಮವಾಗಿ ಅಮೆರಿಕದಲ್ಲಿ ಅಡಿಕೆ ಹಾಳೆಗಳಿಂದ ತಯಾರಿಸಿದ ವಸ್ತುಗಳಿಗೆ ಬೇಡಿಕೆ ಕುಸಿಯಲಿದೆ’ ಎಂದು ಅವರು ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

‘ಅಮೆರಿಕವು ಪ್ರತಿ ವರ್ಷ ₹3,500 ಕೋಟಿ ಮೊತ್ತದಷ್ಟು ಅಡಿಕೆ ಹಾಳೆಯ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ. ಭಾರತದಿಂದಲೇ ಸುಮಾರು ₹2,500 ಕೋಟಿ ಮೊತ್ತದಷ್ಟು ಸರಕು ರಫ್ತಾಗುತ್ತಿದ್ದು, ಬಹುಪಾಲು ಕರ್ನಾಟಕದಿಂದಲೇ ಆಗುತ್ತದೆ’ ಎಂದು ವಿವರಿಸಿದ್ದಾರೆ.

‘ಕರ್ನಾಟಕದಲ್ಲಿ ಸುಮಾರು 600 ಮಂದಿ ಅಡಿಕೆ ಹಾಳೆಯಿಂದ ತಟ್ಟೆ, ಲೋಟ, ಬಟ್ಟಲುಗಳನ್ನು ತಯಾರಿಸುವ ಘಟಕ ನಡೆಸುತ್ತಿದ್ದಾರೆ. ಸಾವಿರಾರು ಮಂದಿ ಉದ್ಯೋಗ ಕಂಡುಕೊಂಡಿದ್ದಾರೆ. ಅಮೆರಿಕವು ಹೇರಿರುವ ಈ ನಿಷೇಧದಿಂದ ರಾಜ್ಯದ ಉದ್ಯಮಿಗಳಿಗೆ, ಉದ್ಯೋಗಿಗಳಿಗೆ ಭಾರಿ ನಷ್ಟವಾಗಲಿದೆ’ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

‘ಅಡಿಕೆ ಹಾಳೆಯನ್ನು ಬಳಸುವುದರಿಂದ ಕ್ಯಾನ್ಸರ್ ಬರುತ್ತದೆ ಎಂಬುದರಲ್ಲಿ ಹುರುಳಿಲ್ಲ. ಅಮೆರಿಕದ ಈ ಏಕಪಕ್ಷೀಯ ನಿರ್ಧಾರವು ಜಾಗತಿಕ ವಾಣಿಜ್ಯ ಒಪ್ಪಂದದ ತತ್ವಗಳಿಗೆ ವಿರುದ್ಧವಾದುದು. ಈ ವಿಚಾರದಲ್ಲಿ ಪ್ರಧಾನಿ ಕೂಡಲೇ ಮಧ್ಯಪ್ರವೇಶಿಸಿ, ನಿಷೇಧವನ್ನು ತೆರವು ಮಾಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.



ವಚನಜ್ಯೋತಿ ಬಳಗ ಆಯೋಜಿಸಿದ್ದ ಕುರುಬ ವೀರ ಗೊಲ್ಲಾಳ ಜಯಂತಿ ಕಾರ್ಯಕ್ರಮದಲ್ಲಿ ಗೊಲ್ಲಾಳರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು

# ಕುರುಬ ವೀರ ಗೊಲ್ಲಾಳ ಜಯಂತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಾಯಕವೇ ಕೈಲಾಸ ಎಂದು ಮನದಟ್ಟು ಮಾಡಿಕೊಂಡು ಕಾಯಕದಲ್ಲಿಯೇ ದೇವರನ್ನು ಕಂಡುಕೊಂಡವರು ವಚನಕಾರರು' ಎಂದು ಕವಯಿತ್ರಿ ವಿದ್ಯಾಶ್ರೀ ಹರಕೂಡೆ ಹೇಳಿದರು

ವಚನಜ್ಯೋತಿ ಬಳಗ ಮಂಗಳವಾರ ಆಯೋಜಿಸಿದ್ದ 'ಕುರುಬ ವೀರ ಗೊಲ್ಲಾಳ ಜಯಂತಿ'ಯಲ್ಲಿ ಉಪನ್ಯಾಸ ನೀಡಿದ ಅವರು, 'ಮುಗ್ಧತೆಯ ಪ್ರತಿರೂಪವಾಗಿದ್ದ ಗೊಲ್ಲಾಳ ಕಲ್ಯಾಣದಲ್ಲಿ ಬಸವಣ್ಣನವರ ಜೊತೆಗೂಡಿ ಹಂಚಿಕೊಂಡಿರುವ ಅನುಭಾವಗಳಲ್ಲಿ ತಮ್ಮ ಕುರಿ ಕಾಯುವ ಕಾಯಕವನ್ನೇ ವಸ್ತುವಾಗಿರಿಸಿಕೊಂಡಿದ್ದಾರೆ. ಸಿಕ್ಕಿರುವ ಹತ್ತು ವಚನಗಳಲ್ಲಿ ಬೆಡಗಿನ ಬಗೆಯಿದ್ದು ವಿಸ್ಮಯವನ್ನುಂಟು ಮಾಡುತ್ತದೆ ಎಂದು ಬಣ್ಣಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, 'ಬೆಂಗಳೂರಿನಲ್ಲಿ ಕುರುಬ ಗೊಲ್ಲಾಳರ ಪರಿಚಯ ಹೆಚ್ಚಿಲ್ಲ. ಈ ನೆಲದ ವಚನಕಾರರನ್ನು ಪರಿಚಯಿಸುವ ನಿಟ್ಟಿನಲ್ಲಿ ಗೊಲ್ಲಾಳರ ಜೀವನ ಚಿತ್ರದೊಂದಿಗೆ ಅವರ ಅನುಭಾವದ ವಚನಗಳ ಗಾಯನ ಮತ್ತು ಅರ್ಥೈಸುವಿಕೆಯನ್ನು ನಡೆಸಲಾಗಿದೆ. ವಚನಜ್ಯೋತಿ ಬಳಗವು ವಚನ ಚಳವಳಿಯ ಎಲ್ಲರನ್ನೂ ಜನಸಾಮಾನ್ಯರಿಗೆ ನೆನಪಿಸುವ, ಪರಿಚಯಿಸುವ ಕಾರ್ಯದಲ್ಲಿದೆ' ಎಂದು ತಿಳಿಸಿದರು.

ಕನ್ನಡ ಸಂಸ್ಕೃತಿ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಹೊನ್ನಲಿಂಗಯ್ಯ ಮಾತನಾಡಿ, 'ಸಮಕಾಲೀನ ಸಮಸ್ಯೆಗಳಿಗೂ ವಚನಕಾರರಲ್ಲಿ ಉತ್ತರವಿದ್ದು, ಕುರುಬ ಗೊಲ್ಲಾಳೇಶ್ವರ ಜಾತ್ರೆಯನ್ನು ವಿಜಯಪುರದ ಗೋಲಗೇರಿಯಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿದೆ. ರಾಜಧಾನಿಯಲ್ಲಿಯೂ ಗೊಲ್ಲಾಳರನ್ನು ನೆನೆಸುತ್ತಿರುವುದು ಗುಣಾತ್ಮಕ ನಡೆ' ಎಂದು ಬಣ್ಣಿಸಿದರು.

ಜನಪದ ಗಾಯಕ ಬಸವರಾಜ ಅಜ್ಜಪ್ಪರನ್ನು ಸನ್ಮಾನಿಸಲಾಯಿತು. ವಚನ ಕಲಿಕಾ ತರಗತಿಯ ವಿದ್ಯಾರ್ಥಿಗಳು ಮತ್ತು ಮುಕ್ತಾಯಕ್ಕ ಬಳಗದವರು ವಚನ ಗಾಯನ ಮಾಡಿದರು. ಗಾಯಕ ದೇವೇಂದ್ರಕುಮಾರ ಪತ್ತಾರ್, ಪೂರ್ಣಚಂದ್ರ ಫೌಂಡೇಷನ್ನಿನ ಚನ್ನ-ಕೇಶವಮೂರ್ತಿ, ಗಾಯಕಿಯರಾದ ಮೀನಾಕ್ಷಿ ಮೇಟಿ, ಜಾನಕಿ, ವಚನ ಜ್ಯೋತಿ ಬಳಗದ ರಾಜಾ ಗುರುಪ್ರಸಾದ್, ಪ್ರಭು, ಸಂಗಮೇಶ್, ಅನಿಲ್, ವಿಜಯ ನಗರ ಕಾಂಗ್ರೆಸ್ ಮುಖಂಡ ನಂಜಪ್ಪ, ನಾಗರಬಾವಿ ಬಸವ ಬಳಗದ ಶಿವನಗೌಡ ಪಾಟೀಲ್ ಪಾಲ್ಗೊಂಡಿದ್ದರು.

# ಯಲಹಂಕ: ಅನಧಿಕೃತ ಕಟ್ಟಡ ತೆರವು


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಯಲಹಂಕ ವಲಯದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಏಳು ಕಟ್ಟಡಗಳ ವ್ಯತಿರಿಕ್ತ ಭಾಗಗಳನ್ನು ತೆರವು ಮಾಡಲಾಗಿದೆ ಎಂದು ಯಲಹಂಕ ವಲಯ ಆಯುಕ್ತ ಕರೀಗೌಡ ತಿಳಿಸಿದರು.

ಕೋಗಿಲು ವಾರ್ಡ್ ಮಿಟ್ಟಗಾನಹಳ್ಳಿ ವೃತ್ತದ ಬಳಿ ಸತ್ಯನಾರಾಯಣ ಅವರು ನಿರ್ಮಿಸುತ್ತಿರುವ ನಿವೇಶನ ಸಂಖ್ಯೆ 3, ದಾಸರಹಳ್ಳಿ ವಾರ್ಡ್ ಗ್ರಾಮದ ಅರ್ಕಾವತಿ ಲೇಔಟ್ 10ನೇ ಬ್ಲಾಕ್‌ನಲ್ಲಿ ನಿರ್ಮಾಣ ಕಟ್ಟಡ, ದೊಡ್ಡಬೊಮ್ಮ-ಸಂದ್ರದಲ್ಲಿ ಸುನಿಲ್ ಅವರು ನಿವೇಶನ ಖಾತಾ ಸಂಖ್ಯೆ 141/141/142 /142/143/143/1ರಲ್ಲಿ, ಭದ್ರಪ್ಪ ಬಡಾವಣೆಯ ಮಾರುತಿನಗರ 5ನೇ ಅಡ್ಡ ರಸ್ತೆಯಲ್ಲಿ ಕಟ್ಟಡದ ವ್ಯತಿರಿಕ್ತ ಭಾಗವನ್ನು ತೆರವುಗೊಳಿಸಲಾಗಿದೆ ಎಂದರು.

ಎನ್‌ಟಿಐ ಬಡಾವಣೆಯ ಫೇಸ್ 2ರಲ್ಲಿ, ಥಣಿಸಂದ್ರ ಗ್ರಾಮದ ಅರ್ಕಾವತಿ ಬಡಾವಣೆಯ 14ನೇ ಬ್ಲಾಕ್‌ನಲ್ಲಿ ನಿವೇಶನ ಸಂಖ್ಯೆ 2, 81/3ಎನಲ್ಲಿ ಮೊಹಮ್ಮದ್ ಫೈಸಲ್ ಸಬ್ ಸೈಯದ್ ಅಬ್ದುಲ್ ರವುಫ್ ಜೆ.ಪಿ.ಎ ಹೋಲ್ಡರ್ ಮೊಹಮ್ಮದ್ ಗೌಸ್ ಅಬ್ದುಲ್ ಅವರ ಕಟ್ಟಡ, ನ್ಯಾಯಾಂಗ ಬಡಾವಣೆಯಲ್ಲಿ ಪಿಐಡಿ ನಂ. 41/41/103ರಲ್ಲಿ ಕೃಷ್ಣಮೂರ್ತಿ ಅವರು ನಿರ್ಮಿಸುತ್ತಿರುವ ಕಟ್ಟಡದ ವ್ಯತಿರಿಕ್ತ ಭಾಗವನ್ನು ತೆರವು-ಗೊಳಿಸಲಾಯಿತು ಎಂದು ಕರೀಗೌಡ ಮಾಹಿತಿ ನೀಡಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಹಾಗೂ ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳಿಗೆ ನೋಟಿಸ್ ನೀಡಲಾಗಿದೆ. ಈ ವಾರದಲ್ಲಿ 50 ಕಟ್ಟಡಗಳಲ್ಲಿ ತೆರವು ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಕರೀಗೌಡ ತಿಳಿಸಿದರು.



ಯಲಹಂಕದಲ್ಲಿ ಅನಧಿಕೃತ ಕಟ್ಟಡಗಳನ್ನು ಬಿಬಿಎಂಪಿ ಸಿಬ್ಬಂದಿ ಮಂಗಳವಾರ ತೆರವುಗೊಳಿಸಿದರು

## 'ಸ್ಮಾರ್ಟ್ ಮೀಟರ್: ಬಿಜೆಪಿಯಿಂದ ಅಪಪ್ರಚಾರ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಲು ಕೇಂದ್ರ ಸರ್ಕಾರ ಡಿಜಿಟಲ್ ಇಂಡಿಯಾಗೆ ಪೂರಕವಾಗಿ ತೆಗೆದುಕೊಂಡ ತೀರ್ಮಾನವೇ ಹೊರತು, ರಾಜ್ಯ ಸರ್ಕಾರದ ತೀರ್ಮಾನವಲ್ಲ. ಆದರೆ, ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಇಂಧನ ಇಲಾಖೆಯಲ್ಲಿ ಆಗುತ್ತಿರುವ ಅಭಿವೃದ್ಧಿ ತಡೆಯುವ ಉದ್ದೇಶದಿಂದ ಸ್ಮಾರ್ಟ್ ಮೀಟರ್ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ದೂರಿದರು.



ರಮೇಶ್‌ಬಾಬು

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಧಾನಸಭೆ ಚುನಾವಣೆ ವೇಳೆ ಚುನಾವಣಾ ಆಯೋಗಕ್ಕೆ ಸಂಬಂಧಿಸಿ, ಬೇನಾಮಿ ಮತದಾರರ ಪಟ್ಟಿ ಬಗ್ಗೆ ದೊಡ್ಡ ಸದ್ದು ಮಾಡಿದ್ದು ಚಿಲುಮೆ ಸಂಸ್ಥೆ. ಇದರ ತನಿಖೆ ಇನ್ನು ಬಾಕಿ ಇದ್ದು, ಇದರ ಕಾರಣಕರ್ತ ಯಾರೆಂದು ಅಶ್ವತ್ಥ್‌ನಾರಾಯಣ ಅವರೇ ಹೇಳಬೇಕು' ಎಂದು ಕುಟುಕಿದರು.

'ಅಶ್ವತ್ಥನಾರಾಯಣ, ಜೆಡಿಎಸ್‌ನ ನಿಖಿಲ್ ಕುಮಾರಸ್ವಾಮಿ ಅವರು ಎರಡು ತಿಂಗಳಿಂದ ಸ್ಮಾರ್ಟ್ ಮೀಟರ್ ವಿಚಾರವಾಗಿ ಬೊಬ್ಬೆ ಹೊಡೆಯುತ್ತಿ-ದ್ದಾರೆ. ಸ್ಮಾರ್ಟ್ ಮೀಟರ್ ಅಳವಡಿಕೆ ₹ 15,698 ಕೋಟಿ ಹಗರಣವೆಂದು ಅಶ್ವತ್ಥನಾರಾಯಣ ಹೇಳುತ್ತಿದ್ದಾರೆ. ಅವರ ಪ್ರಕಾರ ₹ 900ಕ್ಕೆ ಸ್ಮಾರ್ಟ್ ಮೀಟರ್ ಸಿಗುತ್ತದೆಯಂತೆ. ಆ ದರಕ್ಕೆ ಎಲ್ಲಿ ಸಿಗುತ್ತದೆಂದು ಅವರೇ ಹೇಳಬೇಕು' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸವಾಲು ಹಾಕಿದರು.

'ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಹ್ಯಾದ್ರಿ ಸಂಸ್ಥೆಗೂ ನಿಮಗೂ ಏನು ಸಂಬಂಧ' ಆ ಸಂಸ್ಥೆಯ ಟೆಂಡರ್ ಅರ್ಜಿ ವಜಾಗೊಂಡ ನಂತರ ಇಂಧನ ಸಚಿವ ಕೆ.ಜೆ. ಜಾರ್ಜ್ ವಿರುದ್ಧ ನಿರಂತರ ಆರೋಪ ಮಾಡುತ್ತಿದ್ದೀರಲ್ಲಾ ಇದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

### ಅಧಿಕಾರಿಗಳಿಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸೂಚನೆ

# ಡಬ್ಲ್ಯುಟಿಇ: ಸ್ವಚ್ಛತೆಗೆ ಆದ್ಯತೆ ನೀಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಡದಿಯಲ್ಲಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದಲ್ಲಿ(ಡಬ್ಲ್ಯುಟಿಇ) ಸ್ವಚ್ಛತೆ ಜತೆಗೆ ನಿರ್ವಹಣೆಗೂ ಆದ್ಯತೆ ನೀಡಬೇಕಿದೆ. ಈ ಕುರಿತು ಬಿಬಿಎಂಪಿ ಹಾಗೂ ಇಂಧನ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಲಾಗು-ವುದು' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

ಮಂಗಳವಾರ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಚಿವರು, 'ಘಟಕಕ್ಕೆ ನಗರದ ವಿವಿಧ ಭಾಗಗಳಿಂದ ಲಾರಿಗಳಲ್ಲಿ ತ್ಯಾಜ್ಯ ತರಲಾಗುತ್ತದೆ. ಲಾರಿಗಳು ಇಲ್ಲಿ ತ್ಯಾಜ್ಯ ಸುರಿದು ವಾಪಸಾಗುವಾಗ ದುರ್ವಾಸನೆ ಬರುತ್ತದೆ ಎಂಬ ದೂರುಗಳಿವೆ. ಹೀಗಾಗಿ ತ್ಯಾಜ್ಯ ಖಾಲಿ ಮಾಡಿದ ಲಾರಿಗಳು ವಾಪಸ್ ಹೋಗುವ ಮುನ್ನ ಸ್ವಚ್ಛಗೊಳಿಸಲು ಆವರಣದಲ್ಲಿಯೇ ಸ್ವಚ್ಛತಾ ವ್ಯವಸ್ಥೆ ಕಲ್ಪಿಸಬೇಕು' ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

'ಘಟಕದಿಂದ ದುರ್ವಾಸನೆ ಬಂದು ಸುತ್ತಲಿನ ನಿವಾಸಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಪ್ರತಿ ನಿತ್ಯ ವಾಸನೆ ನಿಯಂತ್ರಣ ರಾಸಾಯನಿಕ ಬಳಸಬೇಕು' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

'ವಿದ್ಯುತ್ ಉತ್ಪಾದನಾ ಘಟಕಕ್ಕೆ ಬರುವ ತ್ಯಾಜ್ಯದಲ್ಲಿ ಕೆಲವೊಂದು ಸಮಸ್ಯೆಗಳಿವೆ. ಅದೇ ರೀತಿ ಖಾಸಗಿಯವರು ಘಟಕ ನಿರ್ವಹಿಸುವ ವಿಚಾರದಲ್ಲೂ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಜತೆಗೆ ಸ್ವಚ್ಛತೆಯ ಬಗ್ಗೆಯೂ ಗಮನ ಹರಿಸಬೇಕಾಗಿದೆ' ಎಂದು ಹೇಳಿದರು.

**ಶೀಘ್ರ ಪರಿಹಾರ ವಿತರಣೆ:** ವಿದ್ಯುತ್ ಉತ್ಪಾದನಾ ಘಟಕದಲ್ಲಿ ಇತ್ತೀಚೆಗೆ ದುರಂತ ಸಂಭವಿಸಿ 5 ಮಂದಿ ಮೃತಪಟ್ಟಿದ್ದು, ಅವರ ಕುಟುಂಬದವರಿಗೆ ಕೆಪಿಸಿಎಲ್ ವತಿಯಿಂದ ತಲಾ ₹5 ಲಕ್ಷ ಪರಿಹಾರವನ್ನು ಶೀಘ್ರವೇ ವಿತರಿಸಲಾಗುವುದು. ಜತೆಗೆ ಘಟಕ ನಿರ್ವಹಿಸುವ ಕಂಪನಿಯಿಂದಲೂ ಸೂಕ್ತ ಪರಿಹಾರ ಒದಗಿಸಲಾಗುವುದು' ಎಂದು ಸಚಿವರು ತಿಳಿಸಿದರು.



ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಬಿಡದಿಯ ಘಟಕಕ್ಕೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದರು

## ಗ್ರಂಥಾಲಯ ನಿರ್ಮಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ದೊಡ್ಡಕನ್ನಲ್ಲಿಯ ರಾಜೀವ್ ಗಾಂಧಿ ಆಶ್ರಯ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಕಾಲೊನಿಯಲ್ಲಿ ಗ್ರಂಥಾಲಯ ಸ್ಥಾಪಿಸುವಂತೆ ಕರ್ನಾಟಕ ಸಾಮರಸ್ಯ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಕನ್ನಲ್ಲಿ ಕೃಷ್ಣಪ್ಪ ಅವರು ಒತ್ತಾಯಿಸಿದರು.

ಮಹದೇವಪುರ ಬಿಬಿಎಂಪಿ ವಲಯ ಆಯುಕ್ತ ರಮೇಶ್ ಅವರಿಗೆ ಮನವಿ ಸಲ್ಲಿಸಿದ ಅವರು, 'ಕಾಲೊನಿಯಲ್ಲಿ 482 ಮನೆಗಳಿದ್ದು ಸುಮಾರು 2000ಕ್ಕೂ ಹೆಚ್ಚು ಜನರು ವಾಸ ಮಾಡುತ್ತಿದ್ದಾರೆ. ಸಿ.ಎ ನಿವೇಶನವಿದ್ದು ವಿದ್ಯಾರ್ಥಿಗಳಿಗೆ ಓದುಗರಿಗೆ ಅನುಕೂಲವಾಗುವ ಉದ್ದೇಶದಿಂದ ಸ್ಫೂರ್ತಿ ಗ್ರಂಥಾಲಯ ನಿರ್ಮಿಸಬೇಕು' ಎಂದರು.

# ಗೋಪಿನಾಥ್, ಜಯರಾಮ್‌ಗೆ ಪುರಸ್ಕಾರ


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರಸ್ವತಿ ಸಂಗೀತ ವಿದ್ಯಾಲಯ ನೀಡುವ 'ಗೋವಿಂದ ಲಕ್ಷ್ಮೀ ಪುರಸ್ಕಾರ'ಕ್ಕೆ ಸಿತಾರ್ ವಾದಕ ಎನ್.ವಿ. ಗೋಪಿನಾಥ್ ಹಾಗೂ 'ಶ್ಯಾಮಲಾ ಸ್ಮೃತಿ ಸಮ್ಮಾನ್ ಪುರಸ್ಕಾರ'ಕ್ಕೆ ಪಿಟೀಲು ವಾದಕ ಕೆ.ಸಿ. ಜಯರಾಮ್ ಅವರು ಆಯ್ಕೆಯಾಗಿದ್ದಾರೆ.

ಈ ಪುರಸ್ಕಾರಗಳು ತಲಾ ₹10 ಸಾವಿರ ನಗದು ಒಳಗೊಂಡಿವೆ.

ವಿದ್ಯಾಲಯವು ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ 'ಭಾರತೀಯ ನಾದ ಸೌರಭ' ಸಂಗೀತೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜೂನ್ 1ರಂದು ಸಂಜೆ 4 ಗಂಟೆಗೆ ಹಮ್ಮಿಕೊಂಡಿದೆ.

ಹೋಮಿಯೋಪಥಿ ವೈದ್ಯ ಶ್ರೀಪಾದ ಹೆಗ್ಡೆ ಅವರು ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ. ವಾಗೀಶ್ ಭಟ್ ಅವರಿಂದ ಹಿಂದೂಸ್ಥಾನಿ ಗಾಯನ ನಡೆಯಲಿದೆ. ಅವರಿಗೆ ಸತೀಶ್ ಹಂಪಿಹೊಳಿ ಅವರು ತಬಲಾ ಹಾಗೂ ಶಿವಕುಮಾರ್ ಮಹಂತ್ ಅವರು ಹಾರ್ಮೋನಿಯಂ ಸಾಥ್ ನೀಡಲಿದ್ದಾರೆ. ಸಿ.ಎಸ್. ಸರ್ವಮಂಗಳ ಅವರ ಸಿತಾರ್ ವಾದನಕ್ಕೆ ಎಂ.ಎಸ್. ಕಿರಣ್ ಅವರು ತಬಲಾ ಸಾಥ್ ನೀಡಲಿದ್ದಾರೆ ಎಂದು ವಿದ್ಯಾಲಯದ ಕಾರ್ಯನಿರ್ವಾಹಕ ವಾಗೀಶ್ ಭಟ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಎನ್.ವಿ. ಗೋಪಿನಾಥ್



ಕೆ.ಸಿ. ಜಯರಾಮ್

## ಹುಣಸಮಾರನಹಳ್ಳಿ ಇಂದಿರಾ ಕ್ಯಾಂಟೀನ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ


**ಯಲಹಂಕ:** ಬ್ಯಾಟರಾಯನಪುರ ಕ್ಷೇತ್ರದ ಹುಣಸಮಾರನಹಳ್ಳಿ ಪುರಸಭೆ ವ್ಯಾಪ್ತಿಯ ಸೊಣ್ಣಪ್ಪನಹಳ್ಳಿಯಲ್ಲಿ ₹90 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಇಂದಿರಾ ಕ್ಯಾಂಟೀನ್ ಕಟ್ಟಡಕ್ಕೆ ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಪೌರಾಡಳಿತ ಸಚಿವ ರಹೀಂಖಾನ್ ಚಾಲನೆ ನೀಡಿದರು.

ಕೃಷ್ಣಬೈರೇಗೌಡ ಮಾತನಾಡಿ, 'ಈ ಭಾಗದಲ್ಲಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ಮುಖ್ಯರಸ್ತೆಯು ಹಾದುಹೋಗಿದ್ದು, ಹೆಚ್ಚಾಗಿ ಟ್ಯಾಕ್ಸಿ, ಲಾರಿ ಹಾಗೂ ಸರಕುಸಾಗಣೆ ವಾಹನಗಳ ಚಾಲಕರು ಇಲ್ಲಿ ಸಂಚರಿಸುತ್ತಾರೆ. ಅಲ್ಲದೆ ಬಡವರು ಮತ್ತು ಕೂಲಿಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ವಾಸಿಸುತ್ತಿದ್ದಾರೆ. ಈ ಭಾಗದ ಜನರ ಬಹಳ ದಿನಗಳ ಬೇಡಿಕೆಯಂತೆ ಇಂದಿರಾ ಕ್ಯಾಂಟೀನ್ ಆರಂಭಿಸಲಾಗಿದೆ' ಎಂದರು.

ಸೊಣ್ಣಪ್ಪನಹಳ್ಳಿ ಮುಖ್ಯರಸ್ತೆಯಲ್ಲಿ ನಿರ್ಮಿಸಿರುವ ಸಾರ್ವಜನಿಕ ಶೌಚಾಲಯ, ಶಕ್ತಿನಗರದಲ್ಲಿ ಸಾರ್ವಜನಿಕ ಗ್ರಂಥಾಲಯ ಹಾಗೂ ಹುಣಸಮಾರನ-ಹಳ್ಳಿ ಪುರಸಭೆ ವ್ಯಾಪ್ತಿಯ ಗ್ರಾಮಗಳಲ್ಲಿ ಕಸ ಸಂಗ್ರಹಣೆಗಾಗಿ ಸ್ವಚ್ಛತಾ ವಾಹನಗಳಿಗೆ ಚಾಲನೆ ನೀಡಲಾಯಿತು.

ತಹಶೀಲ್ದಾರ್ ಶ್ರೇಯಸ್ ಜಿ.ಎಸ್., ಹುಣಸಮಾರನಹಳ್ಳಿ ಪುರಸಭೆಯ ಮುಖ್ಯ ಅಧಿಕಾರಿ ಕಾಂತರಾಜು, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಅಶೋಕನ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಪಿ.ನಾರಾಯಣ ಸ್ವಾಮಿ ಇತರರು ಉಪಸ್ಥಿತರಿದ್ದರು.





1.ನಾಪೋಕ್ಲು ಸಮೀಪದ ಪಾರಾಣೆ ಗ್ರಾಮದಲ್ಲಿ ರಸ್ತೆಗಡ್ಡಲಾಗಿ ಮರ ಉರುಳಿರುವುದು 2. ಹಾಸನ ಜಿಲ್ಲೆಯ ರಾಮನಾಥಪುರದ ಸ್ನಾನಘಟ್ಟ ಮುಳುಗಿರುವುದು 3. ನದಿಯಲ್ಲಿ ಸಿಲುಕಿಕೊಂಡಿದ್ದ ವಿದ್ಯಾರ್ಥಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದರು

ನಾಗರಹೊಳೆ ಸಫಾರಿ ರದ್ದು • ಕೊಡಗಿನಲ್ಲಿ ನಿಲ್ಲದ ಗಾಳಿಯ ಅಬ್ಬರ • ವಿವಿಧೆಡೆ ಮರ ಬಿದ್ದು, ವಿದ್ಯುತ್ ವ್ಯತ್ಯಯ

# ತಗ್ಗಿದ ಮಳೆ; ತುಂಬಿ ಹರಿಯುತ್ತಿರುವ ನದಿಗಳು

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 220 ಎಕರೆಗೂ ಅಧಿಕ ಬಾಳೆ ನಾಶ
- ಕೊಡಗಿನಲ್ಲಿ ಅಂಗನವಾಡಿ ಶಾಲೆಗಳಿಗೆ ಬುಧವಾರ ರಜೆ

**ಮೈಸೂರು/ಕಲಬುರಗಿ:** ರಾಜ್ಯದ ಕರಾವಳಿ ಪ್ರದೇಶ ಸೇರಿದಂತೆ ಬಹುತೇಕ ಕಡೆ ಮಂಗಳವಾರ ಮಳೆಯ ಪ್ರಮಾಣ ಕಡಿಮೆಯಾಗಿದೆ. ಮೈಸೂರು ಭಾಗದ ಕೊಡಗು ಮತ್ತು ಹಾಸನದಲ್ಲಿ ಮಳೆ ಮಂಗಳವಾರವೂ ಮುಂದುವರಿದಿದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಹೊರತುಪಡಿಸಿ ಕೊಡಗಿನ ಉಳಿದೆಲ್ಲ ತಾಲ್ಲೂಕುಗಳಲ್ಲಿ ಮಳೆ ತಗ್ಗಿದ್ದರೂ, ಗಾಳಿಯ ಆರ್ಭಟ ತಗ್ಗಿಲ್ಲ.

ರಾಯಚೂರು, ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಉತ್ತಮ ಮಳೆ ಸುರಿದಿದ್ದು, ರಾಯಚೂರು ಜಿಲ್ಲೆಯ ಕವಿತಾಳ ಸಮೀಪದ ದೋತರಬಂಡಿ ಹಳ್ಳ ತುಂಬಿ ಹರಿದ ಪರಿಣಾಮ ಸೇತುವೆ ಮುಳುಗಡೆಯಾಗಿದೆ.

ರಭಸವಾಗಿ ಹರಿಯುತ್ತಿದ್ದ ನೀರಿನಲ್ಲಿ ಸೇತುವೆಯಲ್ಲಿನ ಗುಂಡಿ ಕಾಣದೆ ಬೈಕ್ ಸ್ಕಿಡ್ ಆಗಿ ನೀರಿನಲ್ಲಿ ಬಿದ್ದಿದ್ದ ಬೈಕ್ ಸವಾರ ಬಸವಲಿಂಗ ಬಡಿಗೇರ ಮತ್ತು ಹಿಂಬದಿ ಕುಳಿತಿದ್ದ ಆತನ ಅಜ್ಜಿ ಶಾಂತಮ್ಮ ಅವರನ್ನು ಗ್ರಾಮಸ್ಥರು ರಕ್ಷಿಸಿದರು. ಉಟನಕೂರು ಗ್ರಾಮದಿಂದ ವಾಪಸಾಗುತ್ತಿದ್ದ ಮತ್ತೊಬ್ಬ ಬೈಕ್ ಸವಾರ ಮೌನೇಶ ಸೇತುವೆ ಕಾಣದೆ ಹಳ್ಳಕ್ಕೆ ಬಿದ್ದಿದ್ದಾರೆ. ಅದೃಷ್ಟವಶಾತ್ ಸ್ಥಳದಲ್ಲಿದ್ದ ಜನರು ಬೈಕ್ ಸವಾರ ಮೌನೇಶ ಅವರನ್ನು ಮೇಲೆತ್ತಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಮಹಾರಾಷ್ಟ್ರದಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ಭೀಮಾ ನದಿ ತುಂಬಿ ಹರಿಯುತ್ತಿದ್ದು, ಕಲಬುರಗಿಯ ಅಫಜಲಪುರ, ಜೇವರ್ಗಿ, ಶಹಾಬಾದ್, ಯಾದಗಿರಿ ಜಿಲ್ಲೆಯ ಶಹಾಪುರ, ಯಾದಗಿರಿ ತಾಲ್ಲೂಕಿನಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಗ್ರಾಮಗಳಲ್ಲಿ ನದಿ ಪಾತ್ರದ ಬಳಿ ಜನರು ಹೋಗದಂತೆ ಡಂಗುರ ಸಾರಲಾಗಿದೆ.

ಭಾಗಮಂಡಲ ಹೋಬಳಿಯ ಬೆಂಗೂರು ಗ್ರಾಮದ ದೋಣಿಕಾಡು ಎಂಬಲ್ಲಿ ಓಡಾಟಕ್ಕೆ ದೋಣಿ ಸಿದ್ಧಪಡಿಸಲಾಗಿದೆ. ಮೂರ್ನಾಡು–ನಾಪೋಕ್ಲು ನಡುವಿನ ಬೊಳಿಬಾಣೆ, ನಾಪೋಕ್ಲು– ಬಲಮುರಿ ಮಧ್ಯೆ ಸಂಪರ್ಕ ಸ್ಥಗಿತಗೊಂಡಿದೆ. ಕೊಡಗಿನಲ್ಲಿ ಅಂಗನವಾಡಿಗಳಿಗೆ ಬುಧವಾರವೂ ರಜೆ ನೀಡಲಾಗಿದೆ.

ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು, ಹಾಸನ ತಾಲ್ಲೂಕಿನಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, ಸಕಲೇಶಪುರ ತಾಲ್ಲೂಕಿನಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ ಸಂಭವಿಸುತ್ತಲೇ ಇದೆ. ರಾಮನಾಥಪುರದ ಬಳಿ ಕಾವೇರಿ ನದಿ ಮೇ ಅಂತ್ಯಕ್ಕೆ ಮೈದುಂಬಿ ಹರಿಯುತ್ತಿದೆ. ಕೃಷ್ಣರಾಜಕಟ್ಟೆಯ ಮೇಲೆ ನೀರು ಭೋರ್ಗರೆಯುತ್ತಿದೆ.

## ಜಲಾಶಯಗಳಿಗೆ ಒಳಹರಿವು ಹೆಚ್ಚಳ

**ಮೈಸೂರು:** ಹಾರಂಗಿ ಜಲಾಶಯದ ಒಳ ಹರಿವು 3,431 ಕ್ಯೂಸೆಕ್‌ಗೆ ಏರಿಕೆಯಾಗಿದೆ. 2,859 ಅಡಿ ಗರಿಷ್ಠ ಮಟ್ಟದ ಜಲಾಶಯದಲ್ಲಿ ಸೋಮವಾರ 2,834.70 ಅಡಿ ಇದ್ದ ನೀರಿನ ಮಟ್ಟ 2837.45 ಅಡಿಗೆ ಹೆಚ್ಚಿದೆ. ಹೇಮಾವತಿ ಜಲಾಶಯಕ್ಕೆ ಒಳಹರಿವು 17,812 ಕ್ಯೂಸೆಕ್ ದಾಖಲಾಗಿದೆ. 24 ಗಂಟೆಯಲ್ಲಿ ಜಿಲ್ಲೆಯ ಹೆತ್ತೂರಿನಲ್ಲಿ 13 ಸೆಂ.ಮೀ. ಮಳೆಯಾಗಿದೆ. ಕಬಿನಿ ಜಲಾಶಯದ ಒಳಹರಿವು 23 ಸಾವಿರ ಕ್ಯೂಸೆಕ್‌ಗೆ ಹೆಚ್ಚಾಗಿದೆ. ಎರಡು ದಿನದಲ್ಲಿ 9 ಅಡಿ ನೀರು ಹರಿದು ಬಂದಿದ್ದು, ಜಲಾಶಯದ ಮಟ್ಟ 2269 ಅಡಿ ಇತ್ತು. (ಗರಿಷ್ಠ ಮಟ್ಟ 2,284).

ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯಕ್ಕೆ ಒಂದೇ ದಿನದಲ್ಲಿ 4 ಅಡಿಗಳಷ್ಟು ನೀರು ಬಂದಿದೆ. ಸೋಮವಾರ 89.32 ಅಡಿ ಇದ್ದ ನೀರಿನ ಮಟ್ಟ ಮಂಗಳವಾರ 93 ಅಡಿಗೆ ತಲುಪಿದೆ. ಸಂಜೆಯಿಂದ 20 ಸಾವಿರ ಕ್ಯೂಸೆಕ್‌ಗೂ ಹೆಚ್ಚು ನೀರು ಹರಿದು ಬಂದಿದೆ. ಅಣೆಕಟ್ಟೆಯಿಂದ 364 ಕ್ಯೂಸೆಕ್ ನೀರನ್ನು ಕುಡಿಯುವ ಉದ್ದೇಶಕ್ಕೆ ಹೊರ ಬಿಡಲಾಗುತ್ತಿದೆ.

**ಸಫಾರಿ ಇಲ್ಲ:** ಮಳೆ ಕಾರಣ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ, ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿ ಗೇಟ್ ಹಾಗೂ ಕೊಡಗಿನ ವಿರಾಜಪೇಟೆ ತಾಲ್ಲೂಕಿನ ನಾಣಚ್ಚಿ ಗೇಟ್‌ನಲ್ಲಿ ಮೇ 28ರಿಂದ ಸಫಾರಿ ನಿಲ್ಲಿಸಲಾಗಿದೆ. ದಮ್ಮನಕಟ್ಟೆ (ಕಬಿನಿ) ಸಫಾರಿಗೆ ಮಾತ್ರ ಅವಕಾಶವಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಮೈಸೂರಿನ ಒಂಟಿಕೊಪ್ಪಲಿನ ಆಕಾಶವಾಣಿ ವೃತ್ತದ ಬಳಿ ಆಟೊದ ಮೇಲೆ ಮರ ಬಿದ್ದಿದ್ದು, ಜಖಂಗೊಂಡಿದೆ. ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹೋಬಳಿಯ ಮರದೂರು ಮೂಡಲಕೊಪ್ಪಲು ಮುಖ್ಯರಸ್ತೆಯಲ್ಲಿ ಮರ ಬಿದ್ದು, ವಿದ್ಯುತ್ ತಂತಿ ಹಾಗೂ ಕಂಬಗಳು ಹಾನಿಯಾಗಿವೆ.

**ಬಾಳೆ ನಾಶ:** ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿ, ಹಂಗಳ ಸೇರಿದಂತೆ 25ಕ್ಕೂ ಹೆಚ್ಚು ಗ್ರಾಮಗಳಲ್ಲಿ 220 ಎಕರೆ ಹಾಗೂ ಹನೂರು ತಾಲ್ಲೂಕಿನ ಅನಾಪುರ, ಕಣ್ಣೂರು ಗ್ರಾಮಗಳಲ್ಲಿ 4 ಎಕರೆ ಬಾಳೆ ನಾಶವಾಗಿದೆ.

**ಕಾಗವಾಡ/ಚಿಕ್ಕೋಡಿ ವರದಿ (ಬೆಳಗಾವಿ ಜಿಲ್ಲೆ):** ಮಹಾರಾಷ್ಟ್ರ ಹಾಗೂ ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯಲ್ಲಿ ಮಳೆಯಿಂದ ಚಿಕ್ಕೋಡಿ ತಾಲ್ಲೂಕಿನ ದೂಧಗಂಗಾ ನದಿಯ ಮಲಿಕವಾಡ– ದತ್ತವಾಡ, ಕೃಷ್ಣಾ ನದಿಯ ಕಲ್ಲೋಳ– ಯಡೂರ ಸೇತುವೆ, ನಿಪ್ಪಾಣಿ ತಾಲ್ಲೂಕಿನ ವೇದಗಂಗಾ ನದಿಯ ಬಾರವಾಡ-ಕುನ್ನೂರ ಸೇತುವೆ ಜಲಾವೃತಗೊಂಡಿವೆ. ವಾಹನಗಳ ಸಂಚಾರಕ್ಕೆ ವ್ಯತ್ಯಯ ಉಂಟಾಗಿದೆ.

ಮಹಾರಾಷ್ಟ್ರದ ರಾಜಾಪೂರೆ ಬ್ಯಾರೇಜ್‌ನಿಂದ 22,250 ಕ್ಯೂಸೆಕ್, ದೂಧಗಂಗಾ ನದಿಯಿಂದ 10,910 ಕ್ಯೂಸೆಕ್ ಸೇರಿ ಕಲ್ಲೋಳ-ಯಡೂರ ಸೇತುವೆ ಬಳಿ ಕೃಷ್ಣಾ ನದಿಗೆ 33,160 ಕ್ಯೂಸೆಕ್ ನೀರು ಹೊರ ಹರಿವು ಆಗಿದೆ.

## ‘ಮಳೆ ಬಂದಿರುವುದೇ ಸರ್ಕಾರಕ್ಕೆ ಗೊತ್ತಿಲ್ಲ’



ಸಕಲೇಶಪುರ ತಾಲ್ಲೂಕಿನ ಆನೆಮಹಲ್ ಬಳಿ ಉಂಟಾಗಿರುವ ಭೂಕುಸಿತದ ಸ್ಥಳಕ್ಕೆ ಪ್ರತಿಪಕ್ಷದ ನಾಯಕ ಆರ್. ಅಶೋಕ ಮಂಗಳವಾರ ಭೇಟಿ ನೀಡಿದರು

ಪ್ರಜಾವಾಣಿ ವಾರ್ತೆ

**ಹಾಸನ:** ‘ಮಳೆ ಬಂದಿದೆ ಎಂಬುದೇ ಸರ್ಕಾರಕ್ಕೆ ಇನ್ನೂ ಗೊತ್ತಾಗಿಲ್ಲ. ಸಕಲೇಶಪುರ, ಚಿಕ್ಕಮಗಳೂರು, ಕೊಡಗಿನಲ್ಲಿ ಮಳೆಯಿಂದ ಭೂಕುಸಿತವಾಗುತ್ತಿದ್ದು, ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದೆ’ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಸಕಲೇಶಪುರ ತಾಲ್ಲೂಕಿನಲ್ಲಿ ಭೂಕುಸಿತದ ಸ್ಥಳಗಳಿಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘ದೆಹಲಿಯಲ್ಲಿ ನಡೆದ ನೀತಿ ಆಯೋಗದ ಸಭೆಗೆ ಕಾಂಗ್ರೆಸ್‌ನವರು ಹೋಗಿಲ್ಲ. ಆದರೆ, ಕೇಂದ್ರದಿಂದ ದುಡ್ಡು ಕೊಟ್ಟಿಲ್ಲವೆಂದು ಆರೋಪಿಸುತ್ತಾರೆ. ಪಕ್ಕದ ರಾಜ್ಯದವರು ಒಂದು ದಿನ ಅಲ್ಲಿಯೇ ಕುಳಿತು ತಮಗೆ ಅಗತ್ಯವಿರುವುದನ್ನು ಕೇಳುತ್ತಿದ್ದಾರೆ. ನಮ್ಮ ಸಚಿವರು ಆರಾಮಾಗಿ ನಿದ್ದೆ ಹೊಡೆಯುತ್ತಿದ್ದಾರೆ. ರಾಜ್ಯದ ಜನರ ಮೇಲೆ ಅದರ ನೇರ ಪರಿಣಾಮವಾಗಲಿದೆ. ಆ ಜ್ಞಾನ ಇದ್ದಿದ್ದರೆ ಸರ್ಕಾರವು ಸಭೆಗೆ ಹೋಗಿ, ಬೇಡಿಕೆ ಮಂಡಿಸಬೇಕಿತ್ತು’ ಎಂದರು.

## ಸುದ್ದಿ 2 ನಿಮಿಷ

### ಶೀಘ್ರ ‘ಮನೆ ಮನೆಗೆ ಪೊಲೀಸ್’

**ಬೆಂಗಳೂರು:** ‘ಮನೆ ಮನೆಗೆ ಪೊಲೀಸ್ ಎಂಬ ನೂತನ ಕಾರ್ಯಕ್ರಮವನ್ನು ರಾಜ್ಯದಲ್ಲಿ ಜಾರಿಗೆ ತರಲಾಗುವುದು’ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

‘ಸಾರ್ವಜನಿಕರಿಗೆ ತೊಂದರೆಯಾದ ವೇಳೆ ಪೊಲೀಸರಿಗೆ ಕರೆ ಮಾಡಿ ತಿಳಿಸಬಹುದು. ಅವರೇ ಸ್ಥಳಕ್ಕೆ ತೆರಳಿ ಸಮಸ್ಯೆ ಆಲಿಸಲಿದ್ದಾರೆ’ ಎಂದು ಹೇಳಿದರು.




‘ಪೊಲೀಸರು ಶಾಲಾ–ಕಾಲೇಜುಗಳಿಗೆ ಭೇಟಿ ನೀಡಬೇಕು. ಪೋಷಕರ ಸಭೆಗಳಲ್ಲೂ ಪೊಲೀಸರು ಭಾಗವಹಿಸಬೇಕು’ ಎಂದು ಸೂಚನೆ ನೀಡಿದರು

‘ಮಂಡ್ಯದ ಮದ್ದೂರಿನಲ್ಲಿ ಮಗು ಸಾವಿಗೀಡಾದ ದುರ್ಘಟನೆಯು ದುರದೃಷ್ಟಕರ. ಈ ಘಟನೆಯಿಂದ ಪೊಲೀಸ್ ಇಲಾಖೆ ತಲೆತಗ್ಗಿಸುವಂತಾಗಿದೆ. ಸಾರ್ವಜನಿಕರ ವಲಯದಲ್ಲಿ ಇಂತಹ ಘಟನೆಗಳು ಆಗಬಾರದು. ಇದಕ್ಕೆ ಕಾರಣರಾದ ಪೊಲೀಸರನ್ನು ಅಮಾನತು ಮಾಡಲಾಗಿದೆ. ಅವರ ವಿರುದ್ಧ ಶಿಸ್ತು ಕ್ರಮಕ್ಕೂ ಸೂಚನೆ ನೀಡಲಾಗಿದೆ’ ಎಂದು ಹೇಳಿದರು.

### ಕೊಲೆ ಆರೋಪಿಗಳಿಗೆ ಆಶ್ರಯ: ಮಾಜಿ ಸಚಿವರ ಪುತ್ರನ ಬಂಧನ

**ಬೆಳಗಾವಿ:** ಮಹಾರಾಷ್ಟ್ರದ ಎನ್‌ಸಿಪಿ ನಾಯಕ ರಾಜೇಂದ್ರ ಹಗವಣೆಯವರ ಸೊಸೆ ವೈಷ್ಣವಿ (23) ಅವರ ಕೊಲೆ ಪ್ರಕರಣದ ಇಬ್ಬರು ಆರೋಪಿಗಳಿಗೆ ಆಶ್ರಯ ನೀಡಿದ ಆರೋಪದ ಮೇಲೆ ರಾಜ್ಯದ ಮಾಜಿ ಸಚಿವ ವೀರಕುಮಾರ ಪಾಟೀಲ ಅವರ ಪುತ್ರ ಪ್ರೀತಂ ಪಾಟೀಲ ಅವರನ್ನು ಮಂಗಳವಾರ ಮಹಾರಾಷ್ಟ್ರದ ಪೊಲೀಸರು ಬಂಧಿಸಿದ್ದಾರೆ.

‘ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ ನಿವಾಸಿ ಪ್ರೀತಂ ಪಾಟೀಲ ಅವರನ್ನು ಬಂಧಿಸಿ, ಪುಣೆ ಜೈಲಿಗೆ ಕರೆದೊಯ್ಯಲಾಗಿದೆ. ವೈಷ್ಣವಿ ಹಗವಣೆ ಕೊಲೆ ಆರೋಪಿಗಳಾದ ಅವರ ಮಾವ ರಾಜೇಂದ್ರ ಹಗವನೆ ಮತ್ತು ಮೈದುನ ಸುಶೀಲ್‌ಗೆ ಆಶ್ರಯ, ಆರ್ಥಿಕ ನೆರವು ನೀಡಿದ ಆರೋಪ ಪ್ರೀತಂ ಮೇಲಿದೆ ’ ಎಂದು ಮೂಲಗಳು ತಿಳಿಸಿವೆ.

## ತರಗತಿ ಕೊಠಡಿಗಳಿಗಾಗಿ ಪ್ರತಿಭಟಿಸಿದ ಮುಖ್ಯಶಿಕ್ಷಕ

ಪ್ರಜಾವಾಣಿ ವಾರ್ತೆ



ವೀರಣ್ಣ ಮಡಿವಾಳರ ಅವರಿಂದ ಮೌನ ಕಾಲ್ನಡಿಗೆ ಜಾಥಾ

**ರಾಯಬಾಗ(ಬೆಳಗಾವಿ ಜಿಲ್ಲೆ):** ನಿಡಗುಂದಿ ಗ್ರಾಮದ ಅಂಬೇಡ್ಕರ್ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಮಕ್ಕಳ ಸಂಖ್ಯೆ ಅನುಸಾರ ಕೊಠಡಿಗಳ ಮಂಜೂರಾತಿಗೆ ಕೋರಿ ಮಂಗಳವಾರ ಶಾಲೆಯ ಮುಖ್ಯಶಿಕ್ಷಕ ವೀರಣ್ಣ ಮಡಿವಾಳರ ಉಪವಾಸ ಮತ್ತು ಮೌನ ಕಾಲ್ನಡಿಗೆ ಜಾಥಾವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯವರೆಗೆ ಕೈಗೊಂಡರು.

‘ಈ ಶಾಲೆಯಲ್ಲಿ 146 ವಿದ್ಯಾರ್ಥಿಗಳಿದ್ದರೂ ಅಗತ್ಯ ಕೊಠಡಿಗಳಿಲ್ಲ. ಈ ಹಿಂದೆ ಶಿಕ್ಷಣ ಇಲಾಖೆ ಆಯುಕ್ತರಾಗಿದ್ದ ಅನ್ಬುಕುಮಾರ ಅವರು ಶಾಲೆಗೆ ಅಗತ್ಯವಾಗಿದ್ದ 3 ಶಾಲಾ ಕೊಠಡಿಗಳನ್ನು ಮಂಜೂರು ಮಾಡಿ ಮೂರು ವರ್ಷಗಳೇ ಕಳೆದಿದೆ. ಆದರೆ, ಈವರೆಗೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ’ ಎಂದು ವೀರಣ್ಣ ಹೇಳಿದರು.

‘ಮೇಲಧಿಕಾರಿಗಳ ಮೂಲಕ ರಾಜ್ಯ ಸರ್ಕಾರದ ಗಮನಕ್ಕೆ ತರಲಾಗುವುದು’ ಎಂದು ರಾಯಬಾಗ ತಹಶೀಲ್ದಾರ್ ಸುರೇಶ ಮುಂಜೆ ಅವರು ಹೇಳಿದ ಬಳಿಕ ವೀರಣ್ಣ ಪ್ರತಿಭಟನೆ ಹಿಂಪಡೆದರು.

‘ಸರ್ಕಾರಿ ಶಾಲೆಗೆ ಕೊಠಡಿಗಳನ್ನು ಮಂಜೂರು ಮಾಡುವಂತೆ ಕೋರಿದ್ದು ಒಳ್ಳೆಯ ವಿಚಾರ. ಆದರೆ, ಸರ್ಕಾರಿ ಶಾಲಾ ಶಿಕ್ಷಕರಾಗಿ ಶಿಕ್ಷಣ ಇಲಾಖೆ ವಿರುದ್ಧ ಪ್ರತಿಭಟಿಸಿದ್ದು ತಪ್ಪು. ಇದರಿಂದ ಶಿಕ್ಷಣ ಇಲಾಖೆಗೆ ಮುಜುಗರವಾಗಿದೆ. ಸರ್ಕಾರದ ವಿರುದ್ಧ ತಪ್ಪು ಸಂದೇಶ ರವಾನೆಯಾಗುತ್ತದೆ’ ಎಂದು ಬಿಇಒ ಬಸವರಾಜಪ್ಪ.ಆರ್ ತಿಳಿಸಿದರು.

## ಮಗು ಸಾವು : ವೈದ್ಯಾಧಿಕಾರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

> ಪೊಲೀಸರು ಸ್ವಲ್ಪ ಮುಂಜಾಗ್ರತೆ ವಹಿಸಿದ್ದರೆ ಮದ್ದೂರಿನ ಘಟನೆಯಲ್ಲಿ ಮಗು ಸಾಯುತ್ತಿರಲಿಲ್ಲ. ಪೊಲೀಸರು ತಪಾಸಣೆ ವೇಳೆ ಮಾರ್ಗಸೂಚಿಗಳನ್ನು ಪಾಲಿಸಬೇಕು
> **ಜಿ.ಪರಮೇಶ್ವರ**, ಗೃಹಸಚಿವ

**ಮಂಡ್ಯ:** ‘ನಾಯಿ ಕಡಿದಿದ್ದ ಮಗುವಿಗೆ ತಲೆ ಭಾಗದಲ್ಲಿ ತೀವ್ರ ರಕ್ತಸ್ರಾವವಾಗಿದ್ದರಿಂದ, ಹೆಚ್ಚಿನ ಚಿಕಿತ್ಸೆ ಸಲುವಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ಆಂಬುಲೆನ್ಸ್ ಮೂಲಕ ಏಕೆ ಕಳುಹಿಸಲಿಲ್ಲ’ ಎಂದು ವಿವರಣೆ ಕೇಳಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಬಾಲಕೃಷ್ಣ ಅವರಿಗೆ ಜಿಲ್ಲಾ ಆರೋಗ್ಯಾಧಿಕಾರಿ ಕೆ.ಮೋಹನ್ ನೋಟಿಸ್ ನೀಡಿದ್ದಾರೆ.

ಸಂಚಾರ ಪೊಲೀಸರ ತಪಾಸಣೆ ವೇಳೆ, ಪೋಷಕರೊಂದಿಗೆ ಬೈಕ್‌ನಲ್ಲಿ ಮಂಡ್ಯಕ್ಕೆ ಬರುತ್ತಿದ್ದ ಮಗು ರಿತೀಕ್ಷಾ ಸಾವಿಗೀಡಾದ ಪ್ರಕರಣದಲ್ಲಿ ವೈದ್ಯಾಧಿಕಾರಿಯ ಲೋಪದ ಕಡೆಗೂ ಇದು ಗಮನ ಸೆಳೆದಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ‘ಇಲ್ಲಿ ವೈದ್ಯರ ತಪ್ಪೂ ಇದೆ. ಮದ್ದೂರಿನಿಂದ ಮಂಡ್ಯಕ್ಕೆ ಕರೆದೊಯ್ಯಲು ಆಂಬುಲೆನ್ಸ್ ವ್ಯವಸ್ಥೆ ಮಾಡಬೇಕಿತ್ತು. ವೈದ್ಯರ ನಿರ್ಲಕ್ಷ್ಯದ ಬಗ್ಗೆ ತನಿಖೆ ನಡೆಸಿ, ಕುಟುಂಬದವರಿಗೆ ಪರಿಹಾರ ನೀಡಲಾಗುವುದು’ ಎಂದಿದ್ದಾರೆ.

**ದೃಶ್ಯ ಮರುಸೃಷ್ಟಿ:** ಪ್ರಕರಣ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮಂಗಳವಾರ ದೃಶ್ಯ ಮರುಸೃಷ್ಟಿಯೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ಘಟನಾ ಸ್ಥಳದಲ್ಲಿ ಯಾವ್ಯಾವ ಅಧಿಕಾರಿಗಳು ಎಲ್ಲೆಲ್ಲಿ ನಿಂತಿದ್ದರೋ ಅವರನ್ನೆಲ್ಲ ಅಲ್ಲಲ್ಲೇ ನಿಲ್ಲಿಸಿ, ವಿಚಾರಣೆ ಮಾಡಿ ಮಗು ಸಾವಿನ ಘಟನೆಯ ದೃಶ್ಯವನ್ನು ಮರು ಸೃಷ್ಟಿಸಿದರು. ಅದರಂತೆ ಎಲ್ಲ ಅಧಿಕಾರಿಗಳಿಂದಲೂ ಮಾಹಿತಿ ಸಂಗ್ರಹಿಸಿದರು.

## 30ರಿಂದ ತರಗತಿ ಕಡ್ಡಾಯ; ಮೊಟ್ಟೆ ವಿತರಣೆ

ಈ ಬಾರಿಯ ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 625 ಅಂಕ ಪಡೆದ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಯ 40 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುತ್ತಿದೆ

### ನಾಳೆ ಶಾಲಾ ಪ್ರಾರಂಭೋತ್ಸವ

**ಬೆಂಗಳೂರು:** ಬೇಸಿಗೆ ರಜೆ ಮುಗಿದು ಮೇ 29 ರಿಂದ ಶಾಲೆಗಳು ಪುನರಾರಂಭವಾಗುತ್ತಿದ್ದು, ಬೆಂಗಳೂರಿನ ಆಡುಗೋಡಿಯ ಪಟೇಲ್ ಮುನಿಚಿನ್ನಪ್ಪ ಪ್ರೌಢಶಾಲೆ– ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಿಗ್ಗೆ 9ಕ್ಕೆ ಪ್ರಾರಂಭೋತ್ಸವ ಉದ್ಘಾಟಿಸಲಿದ್ದಾರೆ.

ಶಿಕ್ಷಕರು, ಮುಖ್ಯಶಿಕ್ಷಕರು ಮತ್ತು ಇತರೆ ಸಿಬ್ಬಂದಿ ಮೇ 29ರಂದು ರಾಜ್ಯದ ಎಲ್ಲ ಪ್ರಾಥಮಿಕ, ಪ್ರೌಢಶಾಲೆಗಳಿಗೆ ಹಾಜರಾಗಬೇಕು. ಶಾಲಾ ಆವರಣ, ಕೊಠಡಿಗಳು, ಶೌಚಾಲಯ, ಮೇಲ್ಚಾವಣಿ ಹಾಗೂ ಬಿಸಿಯೂಟದ ಪರಿಕರಗಳನ್ನು ಸ್ವಚ್ಛಗೊಳಿಸಬೇಕು. ತಳಿರು ತೋರಣ, ರಂಗೋಲಿ ಬಿಡಿಸಿ ಶಾಲೆಗಳನ್ನು ಅಲಂಕರಿಸಬೇಕು. ಮೇ 30ರಂದು ಮಕ್ಕಳನ್ನು ಸ್ವಾಗತಿಸಲು ಎಲ್ಲ ಶಾಲೆಗಳು ಸಜ್ಜುಗೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.



ಬಿಸಿಯೂಟಕ್ಕೆ ಅಗತ್ಯವಾದ ಪಡಿತರ, ಬೇಳೆ, ತರಕಾರಿ, ಮೊಟ್ಟೆ ತಂದಿಟ್ಟುಕೊಳ್ಳಬೇಕು. ಶುದ್ಧ ಕುಡಿಯುವ ನೀರು ಸಂಗ್ರಹಿಸಬೇಕು. ಅಡುಗೆ ಸಿಬ್ಬಂದಿ, ಸಹಾಯಕ ಆರೋಗ್ಯ ತಪಾಸಣೆ ನಡೆಸಬೇಕು. ಸಿಹಿಯೂಟದ ಜತೆಗೆ ಮೊದಲ ದಿನವೇ ಬೇಯಿಸಿದ ಮೊಟ್ಟೆ ವಿತರಣೆ ಮಾಡಬೇಕು ಎಂದು ಸುತ್ತೋಲೆ ಹೊರಡಿಸಲಾಗಿದೆ.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ಇತರೆ ಸಿಬ್ಬಂದಿ ಮೇ 30ರಂದು ಕಡ್ಡಾಯವಾಗಿ ಹಾಜರಿದ್ದು ಮಕ್ಕಳನ್ನು ಸ್ವಾಗತಿಸಬೇಕು. ಶಾಲಾ ಆವರಣದಲ್ಲಿ ಹಬ್ಬದ ವಾತಾವರಣ ಇರುವಂತೆ ನೋಡಿಕೊಳ್ಳಬೇಕು. ನಂತರ ಮಕ್ಕಳ ದಾಖಲಾತಿ ಕಡೆ ಗಮನಹರಿಸಬೇಕು. ಶಿಕ್ಷಕರು ಮನೆಮನೆಗೆ ತೆರಳಿ ಮಕ್ಕಳನ್ನು ಕರೆತರಬೇಕು ಎಂದು ಸೂಚಿಸಲಾಗಿದೆ.

## ಕೇರಳ: ಮುಂದುವರಿದ ಭಾರಿ ಮಳೆ

**ತಿರುವನಂತಪುರ (ಪಿಟಿಐ):** ಕೇರಳದಲ್ಲಿ ಸುರಿಯುತ್ತಿರುವ ಭಾರಿ ಮಳೆಯು ಜನಜೀವನವನ್ನು ಮಂಗಳವಾರ ಅಸ್ತವ್ಯಸ್ತಗೊಳಿಸಿದೆ. ರಾಜ್ಯದ ಹಲವೆಡೆ ರೈಲು ಸಂಚಾರ ವಿಳಂಬ ಆಗಿದೆ, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ, ಪಟ್ಟಣಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿದೆ.

ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲಿ ರೈಲು ಹಳಿಗಳ ಮೇಲೆ ಮರಗಳು ಉರುಳಿಬಿದ್ದಿರುವುದು ಕಳವಳಕ್ಕೆ ಕಾರಣವಾಗಿದೆ. ತಿರುವನಂತಪುರಕ್ಕೆ ಬರುವ ವಂದೇ ಭಾರತ್ ಮತ್ತು ಪರಶುರಾಮ ಎಕ್ಸ್‌ಪ್ರೆಸ್ ರೈಲುಗಳು ವಿಳಂಬ ಆಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಹಲವೆಡೆ ನದಿಗಳಲ್ಲಿ ನೀರಿನ ಮಟ್ಟವು ಹೆಚ್ಚಾಗುತ್ತಿದೆ. ವಯನಾಡ್ ಜಿಲ್ಲೆಯ ಉತ್ತರ ಭಾಗದಲ್ಲಿನ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಇಲ್ಲಿ ಮಳೆಯು ಹಲವು ದಿನಗಳಿಂದ ಸುರಿಯುತ್ತಿದೆ.

ನೀರು ನುಗ್ಗಿರುವ ಕಡೆಗಳಲ್ಲಿ ಜನರು ಸುರಕ್ಷಿತ ಸ್ಥಳಗಳಿಗೆ ತಲುಪಲು ಫೈಬರ್ ದೋಣಿಗಳನ್ನು ಬಳಸುತ್ತಿದ್ದಾರೆ. ನೂರಾರು ಮಂದಿಯನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎರ್ನಾಕುಳಂ ಜಿಲ್ಲೆಯಲ್ಲಿ ಕೆಲವೆಡೆ ಮನೆಗಳಿಗೆ, ಕೃಷಿ ಬೆಳೆಗಳಿಗೆ ಹಾನಿ ಆಗಿರುವುದಾಗಿ ವರದಿಯಾಗಿದೆ. ತಿರುವನಂತಪುರ ಸನಿಹದ ಕಲ್ಲಾರ್ ಪ್ರದೇಶದಲ್ಲಿ ಗುಡ್ಡಗಳಿಂದ ರಸ್ತೆಗೆ ಬಂಡೆಗಳು ಉರುಳಿದ್ದರಿಂದಾಗಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು.

ಭಾರಿ ಮಳೆಯಿಂದಾಗಿ ರಾಜ್ಯದಾದ್ಯಂತ 607 ಮನೆಗಳು ನಾಶಗೊಂಡಿವೆ ಎಂದು ಕಂದಾಯ ಸಚಿವ ಕೆ. ರಾಜನ್ ಅವರು ತಿಳಿಸಿದ್ದಾರೆ.

- ಮಳೆಯ ಕಾರಣದಿಂದಾಗಿ ಮರ ಮುರಿದುಬಿದ್ದು ತೇಜಸ್ ನಾಯಕ್ (24) ಎನ್ನುವವರು ಮುಂಬೈನಲ್ಲಿ ಮೃತಪಟ್ಟಿದ್ದಾರೆ.
- ಉತ್ತರಾಖಂಡದ ಡೆಹ್ರಾಡೂನ್ ಜಿಲ್ಲೆಯ ಚಕರಾತಾ ಪ್ರದೇಶದ ಜಲಪಾತದ ಬಳಿ ಪರ್ವತದಿಂದ ಮರ ಉರುಳಿಬಿದ್ದ ಪರಿಣಾಮವಾಗಿ ಇಬ್ಬರು ಮೃತಪಟ್ಟಿದ್ದಾರೆ. ಇವರಲ್ಲಿ ಒಬ್ಬ ವ್ಯಕ್ತಿ ದೆಹಲಿಯವ.



ಮುಂಬೈನಲ್ಲಿ ಮಳೆಯಿಂದಾಗಿ ವಾಲ್ಕೇಶ್ವರ ರಸ್ತೆಯಲ್ಲಿ ಮಣ್ಣು ಕುಸಿದಿದೆ –ಪಿಟಿಐ ಚಿತ್ರ

### ಜೂನ್‌ನಲ್ಲಿ ಅಧಿಕ ಮಳೆ

**ನವದೆಹಲಿ (ಪಿಟಿಐ):** ದೇಶದಲ್ಲಿ ಜೂನ್ ತಿಂಗಳಿನಲ್ಲಿ ಸಾಮಾನ್ಯಕ್ಕಿಂತ ಅಧಿಕ ಮಳೆಯಾಗುವ ಸಾಧ್ಯತೆಯಿದ್ದು, ಬಹುತೇಕ ಭಾಗಗಳಲ್ಲಿ ಗರಿಷ್ಠ ತಾಪಮಾನವು ತುಂಬಾ ಕಡಿಮೆಯಾಗಿರುತ್ತದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ತಿಳಿಸಿದೆ.

ಜೂನ್ ತಿಂಗಳಿನಲ್ಲಿ ದೀರ್ಘಾವಧಿ ಸರಾಸರಿಗಿಂತ(16.9 ಸೆಂ.ಮೀ) ಶೇಕಡಾ 108 ಅಧಿಕ ಮಳೆಯಾಗುವ ಸಾಧ್ಯತೆಯಿದೆ. ಆದರೆ ದೇಶದ ದಕ್ಷಿಣ, ವಾಯುವ್ಯ ಮತ್ತು ಈಶಾನ್ಯ ಭಾಗದ ಕೆಲವೆಡೆ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು ಎಂದು ಭೂವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ.ರವಿಚಂದ್ರನ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ದೀರ್ಘಾವಧಿ ಸರಾಸರಿಯ(87 ಸೆಂ.ಮೀ) 106 ಶೇಕಡಾದಷ್ಟು ಮಳೆಯಾಗುವ ಸಾಧ್ಯತೆಯಿದೆ.

### ಮುಂಬೈ : ಮಳೆಯಿಂದ ತುಸು ಬಿಡುವು

**ಮುಂಬೈ (ಪಿಟಿಐ):** ವಾರದ ಆರಂಭದಲ್ಲಿ ಭಾರಿ ಮಳೆಯನ್ನು ಕಂಡಿದ್ದ ಮುಂಬೈ ಮಹಾನಗರವು ಮಂಗಳವಾರ ಬೆಳಿಗ್ಗೆ ತುಸು ನಿರಾಳವಾಗಿತ್ತು. ಮಳೆರಾಯ ತುಸು ಬಿಡುವು ನೀಡಿದ್ದ.

ಮುಂಬೈನ ಉಪನಗರ ರೈಲು ಸೇವೆ ಸೇರಿದಂತೆ ವಿವಿಧ ಸಾರ್ವಜನಿಕ ಸಾರಿಗೆ ಸೇವೆಗಳು ಕಾರ್ಯಾಚರಣೆ ನಡೆಸಿದವು, ಕೆಲವೆಡೆ ಅಲ್ಪ ಪ್ರಮಾಣದ ವಿಳಂಬ ಉಂಟಾಗಿತ್ತು.

ಭಾನುವಾರ ರಾತ್ರಿ 10 ಗಂಟೆಯಿಂದ ಸೋಮವಾರ ಬೆಳಿಗ್ಗೆ 11 ಗಂಟೆಯ ನಡುವಿನ ಅವಧಿಯಲ್ಲಿ ನರಿಮನ್ ಪಾಯಿಂಟ್‌ನಲ್ಲಿ 252 ಮಿ.ಮೀ. ಮಳೆ ಆಗಿದೆ ಎಂದು ಬೃಹನ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಹೇಳಿದೆ. ಮಂಗಳವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹಳೆ ಮುಂಬೈ ಪ್ರದೇಶದಲ್ಲಿ ಸರಾಸರಿ 10.6 ಸೆಂ.ಮೀ. ಮಳೆ ಸುರಿದಿದೆ.

ಸೋಮವಾರ ನಗರದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕೆಲವು ಪ್ರದೇಶಗಳಲ್ಲಿ ಜನಜೀವನಕ್ಕೆ ಅಡ್ಡಿ ಆಗಿತ್ತು.

**ಸಂಕ್ಷಿಪ್ತ ಸುದ್ದಿ**

### ಆಫ್ರಿಕನ್ ಹಂದಿ ಜ್ವರ; ಕಟ್ಟುನಿಟ್ಟಿನ ನಿರ್ಬಂಧ

**ಬಾಗಲಕೋಟೆ:** ಜಿಲ್ಲೆಯ ಇಳಕಲ್ ತಾಲ್ಲೂಕಿನ ಗೋರಬಾಳ ಗ್ರಾಮದ ಹಂದಿ ಸಾಕಾಣಿಕೆ ಕೇಂದ್ರದಲ್ಲಿ ಆಫ್ರಿಕನ್ ಹಂದಿ ಜ್ವರ ದೃಢಪಟ್ಟಿದೆ. 50ಕ್ಕೂ ಹೆಚ್ಚು ಹಂದಿಗಳು ಮೃತಪಟ್ಟಿವೆ.

ಹಂದಿ ಜ್ವರ ಪ್ರಕರಣ ಪತ್ತೆಯಾದ ಒಂದು ಕಿ.ಮೀ. ವ್ಯಾಪ್ತಿಯನ್ನು ‘ರೋಗಪೀಡಿತ ವಲಯ’ ಮತ್ತು 1 ರಿಂದ 10 ಕಿ.ಮೀ. ವ್ಯಾಪ್ತಿಯನ್ನು ‘ಜಾಗೃತ ವಲಯ‘ ಎಂದು ಘೋಷಿಸಲಾಗಿದೆ.

ರೋಗಪೀಡಿತ ವಲಯದಲ್ಲಿನ ಎಲ್ಲಾ ಹಂದಿ ಫಾರಂಗಳನ್ನು ಮುಚ್ಚಿ, ನಿಯಮಾನುಸಾರ ಹಂದಿಗಳ ವಧೆ ಮಾಡಿ ವೈಜ್ಞಾನಿಕ ವಿಲೇವಾರಿಗೆ ಆದೇಶಿಸಲಾಗಿದೆ. ಜನರ ಸಂಚಾರ ನಿರ್ಬಂಧಿಸಲಾಗಿದೆ. ಹಂದಿ ಮಾಂಸ ಮಾರಾಟ ನಿಷೇಧಿಸಲಾಗಿದೆ’ಎಂದು ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 331 ಕ್ವಿಂಟಲ್ ಅಕ್ಕಿ ವಶ

**ಹೊಸಪೇಟೆ (ವಿಜಯನಗರ):** ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸಿ ಕಾಳಸಂತೆಯಲ್ಲಿ ಮಾರುವ ದೊಡ್ಡ ಜಾಲವನ್ನು ಮಂಗಳವಾರ ಭೇದಿಸಿರುವ ಗ್ರಾಮೀಣ ಠಾಣೆ ಪೊಲೀಸರು, ₹11.25 ಲಕ್ಷ ಮೌಲ್ಯದ 331 ಕ್ವಿಂಟಲ್ ಅಕ್ಕಿ ವಶಪಡಿಸಿಕೊಂಡಿದ್ದಾರೆ. ಲಾರಿ ಚಾಲಕ ಸಹಿತ ಮೂವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದಾರೆ.

‘ಬಳ್ಳಾರಿ–ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ–67ರಲ್ಲಿ ಜಂಬುನಾಥ ರಸ್ತೆ ಕಿರು ಸೇತುವೆ ಬಳಿ ಲಾರಿ ತಡೆದು ಪರಿಶೀಲಿಸಿದಾಗ, ಪಡಿತರ ಅಕ್ಕಿಯ ಅಕ್ರಮ ಸಾಗಣೆ ಬಯಲಾಯಿತು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ತಿಳಿಸಿದ್ದಾರೆ.

### ಮಣಿಕಂಠ ವಿರುದ್ಧ ಎಫ್‌ಐಆರ್

**ಚಿತ್ತಾಪುರ (ಕಲಬುರಗಿ ಜಿಲ್ಲೆ):** ಬಿಜೆಪಿ ಮುಖಂಡ ಮಣಿಕಂಠ ನರೇಂದ್ರ ರಾಠೋಡ್ ಮೇ 25ರಂದು ತಮ್ಮ ಫೇಸ್ ಬುಕ್ ಖಾತೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ನಿಂದಿಸಿರುವ ಕುರಿತು ಕಾಂಗ್ರೆಸ್ ಕಾರ್ಯಕರ್ತ ಹಣಮಂತ ಸಂಕನೂರು ಅವರು ನೀಡಿರುವ ದೂರಿನಡಿ ಮಣಿಕಂಠ ವಿರುದ್ಧ ಚಿತ್ತಾಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಣಿಕಂಠ ಅವರು ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡ ವಿಡಿಯೋದಲ್ಲಿ ಖರ್ಗೆ ಅವರನ್ನು ಏಕ ವಚನದಲ್ಲಿ ಅವಹೇಳನ ಮಾಡಿದ್ದಾರೆ ಎಂದು ಹಣಮಂತ ದೂರು ನೀಡಿದ್ದಾರೆ.

## ಮೂರು ಸುಗ್ರೀವಾಜ್ಞೆಗಳಿಗೆ ಅಸ್ತು

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಗಿಗ್ ಕಾರ್ಮಿಕರಿಗೆ ಭದ್ರತೆ, ವೈದ್ಯರ ವರ್ಗಾವಣೆ, ಕಡ್ಡಾಯ ಗ್ರಾಮೀಣ ಸೇವಾ ನಿಯಮ ಸಡಿಲು
- ರಾಜ್ಯಪಾಲರಿಂದ ಅಂಕಿತ

**ಬೆಂಗಳೂರು:** ಕರ್ನಾಟಕ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ), ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವೆ (ತಿದ್ದುಪಡಿ), ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಈ ಮೂರು ಸುಗ್ರೀವಾಜ್ಞೆಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಂಗಳವಾರ ಅಂಕಿತ ಹಾಕಿದ್ದಾರೆ. ಆ ಬೆನ್ನಲ್ಲೆ, ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಸದ್ಯ ವಿಧಾನಮಂಡಲ ಅಧಿವೇಶನದಲ್ಲಿ ಇಲ್ಲದೇ ಇರುವುದರಿಂದ ಮತ್ತು ಈ ವಿಷಯವು ತುರ್ತು ಎಂಬ ಕಾರಣಕ್ಕೆ ಈ ಮಸೂದೆಗಳನ್ನು ಸುಗ್ರೀವಾಜ್ಞೆಯಾಗಿ ಹೊರಡಿಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಗಿಗ್ ಕಾರ್ಮಿಕರಿಗೆ ಭವಿಷ್ಯ ನಿಧಿ, ಅಪಘಾತ ಸೌಲಭ್ಯ, ವಸತಿ, ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ, ಕಾರ್ಮಿಕ ಕೌಶಲಾಭಿವೃದ್ಧಿ, ಅಂತ್ಯಸಂಸ್ಕಾರ ಧನ ಸಹಾಯ ನೀಡಲು, ಇದಕ್ಕಾಗಿ ಪ್ರತಿ ವಹಿವಾಟಿನ ಮೇಲೆ ಶೇ 1 ರಿಂದ ಶೇ 2 ಮೀರದಂತೆ ಕ್ಷೇಮಾಭಿವೃದ್ಧಿ ಶುಲ್ಕ ಸಂಗ್ರಹಿಸಲು ‘ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭೀವೃದ್ಧಿ ಸುಗ್ರೀವಾಜ್ಞೆಯು ಅವಕಾಶ ನೀಡಲಿದೆ.

ಕಡ್ಡಾಯ ಗ್ರಾಮೀಣ ಸೇವಾ ನಿಯಮ ಸಡಿಲು: ಗ್ರಾಮೀಣ ಹುದ್ದೆಗಳನ್ನು ಭರ್ತಿ ಮಾಡಿದ ನಂತರ ನಗರ ಪ್ರದೇಶಗಳಲ್ಲಿನ ಹುದ್ದೆಗಳಿಗೆ ಎಂಬಿಬಿಎಸ್ ಪದವೀಧರರನ್ನು ನೇಮಿಸಲು ‘ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಸುಗ್ರೀವಾಜ್ಞೆ’ ಅವಕಾಶ ಕಲ್ಪಿಸಲಿದೆ. ಅಲ್ಲದೆ, ಸರ್ಕಾರಿ ಕೋಟಾದಡಿ ಎಂಬಿಬಿಎಸ್ ವಿದ್ಯಾರ್ಥಿಗಳನ್ನು ಆದ್ಯತೆಯಲ್ಲಿ ತುಂಬಲು ಮತ್ತು ಉಳಿದ ಖಾಲಿ ಹುದ್ದೆಗಳಿಗೆ ಸಾಂಸ್ಥಿಕ ಕೋಟಾದಡಿ ಓದಿದ ವಿದ್ಯಾರ್ಥಿಗಳಿಂದ ತುಂಬಲು ಹಾಗೂ ಉಳಿದ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಕಡ್ಡಾಯ ಸೇವೆಯಿಂದ ವಿನಾಯಿತಿ ನೀಡಲು ಕೂಡಾ ಅವಕಾಶ ನೀಡಲಿದೆ.

ಸ್ನಾತಕೋತ್ತರ ಪದವೀಧರರನ್ನು ಗ್ರಾಮೀಣ ಪ್ರದೇಶಗಳಲ್ಲಿನ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸಲು ಹಾಗೂ ಒಂದು ವರ್ಷದ ಕಡ್ಡಾಯ ಸೇವೆಯನ್ನು ತಪ್ಪದೇ ಮಾಡುವುದಾಗಿ ಹಾಗೂ ತಪ್ಪಿದರೆ ಅದಕ್ಕೆ ಸಂಬಂಧಪಟ್ಟ ದಂಡ ಪಾವತಿಸಲು ಮತ್ತು ಅದರ ಪರಿಣಾಮಗಳನ್ನು ಎದುರಿಸಲು ಒಪ್ಪಂದ ಪತ್ರ ಬರೆದು ಕೊಟ್ಟ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಮತ್ತು ಸೂಪರ್ ಸ್ಪೆಷಾಲಿಟಿ ಕೋರ್ಸ್ ಓದಲು ನಿರಕ್ಷೇಪಣಾ ಪತ್ರ ನೀಡುವ ಪ್ರಸ್ತಾವವೂ ಅದರಲ್ಲಿದೆ.

ವೈದ್ಯಾಧಿಕಾರಿ ಮತ್ತು ಇತರ ಸಿಬ್ಬಂದಿಯ ಶೇ 15ರಷ್ಟು ವರ್ಗಾವಣೆ: ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ನಡೆಸಲು ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಸುಗ್ರೀವಾಜ್ಞೆ ಅವಕಾಶ ಕಲ್ಪಿಸಲಿದೆ.

ಗ್ರಾಮೀಣ ಪ್ರದೇಶದಲ್ಲಿ ನಿಗದಿಪಡಿಸಿದಷ್ಟು ಕರ್ತವ್ಯವನ್ನು ಸಲ್ಲಿಸದ ವೈದ್ಯಾಧಿಕಾರಿ ಅಥವಾ ಸಿಬ್ಬಂದಿಯನ್ನು ಗ್ರಾಮೀಣ ಪ್ರದೇಶಗಳಲ್ಲಿರುವ ಹುದ್ದೆಗೇ ವರ್ಗಾವಣೆ ಮಾಡಬೇಕು. ವಿಶೇಷ ತಜ್ಞ ವೈದ್ಯರು, ಹಿರಿಯ ವಿಶೇಷ ತಜ್ಞ ವೈದ್ಯರನ್ನು ಅವರು ಹೊಂದಿರುವ ವಿಶೇಷ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಗುರುತಿಸಿದ ಹುದ್ದೆಗೆ ವರ್ಗಾವಣೆ ಮಾಡಬೇಕು. ವೈದ್ಯಾಧಿಕಾರಿ ಮತ್ತು ಇತರ ಸಿಬ್ಬಂದಿಯ ಶೇ 15ರಷ್ಟು ವರ್ಗಾವಣೆ ಹಾಗೂ ಮಹತ್ವದ ಖಾಲಿ ಹುದ್ದೆಗಳಿಗೆ ರಾಜ್ಯ ಸರ್ಕಾರವು ಕೌನ್ಸೆಲಿಂಗ್ ಇಲ್ಲದೆಯೂ ನಿಯೋಜಿಸಲು ಈ ಸುಗ್ರೀವಾಜ್ಞೆಯ ಮೂಲಕ ಅವಕಾಶ ನೀಡಲಾಗಿದೆ.

**ರಾಜವಂಶಸ್ಥರಿಗೆ ₹3400 ಕೋಟಿ ಟಿಡಿಆರ್**

## ಸಿಜೆಐಗೆ ಹೊಸ ಅರ್ಜಿ ಸಲ್ಲಿಸಿ: ಸುಪ್ರೀಂ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಂಗಳೂರು ಅರಮನೆ ಮೈದಾನದ 15 ಎಕರೆ ಸ್ವಾಧೀನಕ್ಕೆ ಸಂಬಂಧಿಸಿದಂತೆ ಮೈಸೂರು ರಾಜವಂಶಸ್ಥರಿಗೆ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕುಗಳ (ಟಿಡಿಆರ್) ಪ್ರಮಾಣಪತ್ರಗಳನ್ನು ನೀಡುವುದನ್ನು ಪ್ರಶ್ನಿಸಿ ಹೊಸ ಅರ್ಜಿಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅವರಿಗೆ ಕರ್ನಾಟಕ ಸರ್ಕಾರ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಆದೇಶಿಸಿದೆ.

ರಾಜವಂಶಸ್ಥರಿಗೆ ₹3400 ಕೋಟಿ ಟಿಡಿಆರ್ ಅನ್ನು ಒಂದು ತಿಂಗಳೊಳಗೆ ನೀಡಬೇಕು ಎಂದು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಅರವಿಂದ ಕುಮಾರ್ ಪೀಠವು ಮೇ 22ರಂದು ತೀರ್ಪು ನೀಡಿತ್ತು. ಈ ಆದೇಶದ ವಿರುದ್ಧ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸುವುದಾಗಿ ಸರ್ಕಾರ ತಿಳಿಸಿದೆ.

‘ಆಡಳಿತಾತ್ಮಕವಾಗಿ ಸೂಕ್ತ ಆದೇಶಗಳಿಗಾಗಿ ಸಿಜೆಐ ಮುಂದೆ ಅರ್ಜಿ ಸಲ್ಲಿಸಲಿ’ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ದೀಪಂಕರ್ ದತ್ತ ಅವರಿದ್ದ ಪೀಠ ಹೇಳಿದೆ.

ಈ ವಿಷಯವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲು ನಿರ್ದೇಶನ ನೀಡುವಂತೆ ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಕೋರಿದ ಹಿನ್ನೆಲೆಯಲ್ಲಿ ನ್ಯಾಯಾಲಯ ಈ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರದ ಎಲ್ಲ ವಾದಗಳನ್ನು ತಿರಸ್ಕರಿಸಿದ್ದ ದ್ವಿಸದಸ್ಯ ಪೀಠವು ಒಂದು ತಿಂಗಳಲ್ಲಿ ಟಿಡಿಆರ್ ವರ್ಗಾಯಿಸಬೇಕು ಎಂದು ಮೇ 22ರಂದು ತೀರ್ಪು ನೀಡಿತ್ತು. ಈ ಪೀಠಕ್ಕೆ ಹೊಸ ಅರ್ಜಿ ಸಲ್ಲಿಸಬೇಕು ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಪೀಠ ಸಲಹೆ ನೀಡಿತು. ಆಗ ಸಿಬಲ್ ಅವರು ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸುವಂತೆ ಮನವಿ ಮಾಡಿದರು.

‘ರಾಜವಂಶಸ್ಥರು ಹೂಡಿದ್ದ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ದ್ವಿಸದಸ್ಯ ಪೀಠ ತೀರ್ಪು ನೀಡಿದೆ. ರಾಜ್ಯ ಸರ್ಕಾರದ ಪರವಾಗಿ ಹೈಕೋರ್ಟ್ ನೀಡಿದ ತೀರ್ಪನ್ನು ನ್ಯಾಯಾಂಗ ನಿಂದನೆ ಪ್ರಕ್ರಿಯೆಗಳು ರದ್ದುಗೊಳಿಸಲು ಸಾಧ್ಯವಿಲ್ಲ’ ಎಂದು ಸಿಬಲ್ ವಾದಿಸಿದರು.

ನ್ಯಾಯಾಲಯವು ಈ ವಿಷಯ ಆಲಿಸುವವರೆಗೆ ಟಿಡಿಆರ್ ಬಳಕೆಗೆ ತಡೆಯಾಜ್ಞೆ ನೀಡುವಂತೆ ಸಿಬಲ್ ಅವರು ಪೀಠವನ್ನು ಕೋರಿದರು.

‘ದ್ವಿಸದಸ್ಯ ಪೀಠದ ಆದೇಶದ ಮೇರೆಗೆ ಟಿಡಿಆರ್ ಪ್ರಮಾಣಪತ್ರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಠೇವಣಿ ಇಡಲಾಗಿತ್ತು. ರಾಜವಂಶಸ್ಥರು ಈಗಾಗಲೇ ಟಿಡಿಆರ್ ತೆಗೆದುಕೊಂಡಿದ್ದಾರೆ. ನನಗೆ ಆಘಾತವಾಗಿದೆ. ಟಿಡಿಆರ್ ಅನ್ನು ಯಾವ ರೀತಿಯಲ್ಲಿ ಕೊಡಲಾಯಿತು ಎಂಬುದರ ಬಗ್ಗೆ ಕಳವಳ ಇದೆ’ ಎಂದು ಸಿಬಲ್ ಹೇಳಿದರು. ಗಮನಾರ್ಹ ವಿಷಯವೆಂದರೆ, ರಾಜವಂಶಸ್ಥರಿಗೆ ಈಗಾಗಲೇ ಟಿಡಿಆರ್ ಹಸ್ತಾಂತರಿಸಲಾಗಿದೆ.

ರಾಜವಂಶಸ್ಥರ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ ಮತ್ತು ವಕೀಲ ಟಿ. ಹರೀಶ್ ಕುಮಾರ್, ‘ಸುಪ್ರೀಂ ಕೋರ್ಟ್ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿಯು ಕಾನೂನಿನ ಸಂಪೂರ್ಣ ದುರುಪಯೋಗವಾಗಿದೆ’ ಎಂದರು.

## ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಒತ್ತಾಯ

'ನಮ್ಮ ಸಮುದಾಯದ ಮಕ್ಕಳ ಶ್ರೇಯೋಭಿವೃದ್ಧಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಮೂರು ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ. ಶೈಕ್ಷಣಿಕ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕು'

# 'ಲಿಂಗತ್ವ ಅಲ್ಪಸಂಖ್ಯಾತರ ಮಕ್ಕಳ ಹಕ್ಕು ಉಲ್ಲಂಘನೆ ಆಗದಿರಲಿ'

**ಬೆಂಗಳೂರು:** 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಜಿ ದೇವದಾಸಿಯರ, ಲೈಂಗಿಕ ವೃತ್ತಿನಿರತ ಮಹಿಳೆಯರ ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರ ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗದಂತೆ ನೀತಿಯನ್ನು ರೂಪಿಸಬೇಕು' ಎಂದು ಲಿಂಗತ್ವ ಅಲ್ಪಸಂಖ್ಯಾತರ ಪರ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಾಜಿ ದೇವದಾಸಿಯರ, ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರ ಮಕ್ಕಳ ತಂದೆಯ ಹೆಸರನ್ನು ಕೇಳದಂತೆ ನಿಯಮ ರೂಪಿಸಬೇಕು. ಸಂವಿಧಾನ ಬದ್ಧವಾಗಿ ನಾವು ಪಡೆದುಕೊಳ್ಳಬೇಕಾದ ಶಿಕ್ಷಣ, ಉದ್ಯೋಗ, ಮೀಸಲಾತಿ, ಆರೋಗ್ಯ, ಮತದಾರರ ಚೀಟಿ, ಆಧಾರ್ ಕಾರ್ಡ್ ಹಾಗೂ ಇನ್ನಿತರ ಸರ್ಕಾರಿ ದಾಖಲೆಗಳಲ್ಲಿ ತಂದೆಯ ಹೆಸರನ್ನು ನಮೂದಿಸಬೇಕೆಂಬ ನಿಯಮವನ್ನು ಕೈಬಿಡಬೇಕು' ಎಂದು ಒತ್ತಾಯಿಸಿದರು.



'ಪಾಸ್‌ಪೋರ್ಟ್ ಕಚೇರಿ, ಸರ್ಕಾರಿ ಆಸ್ಪತ್ರೆ ಹಾಗೂ ಶಾಲಾ-ಕಾಲೇಜುಗಳಲ್ಲಿ ಪ್ರತ್ಯೇಕವಾದ ಕೊಠಡಿಗಳನ್ನು ನಿರ್ಮಿಸಬೇಕು. ಸರ್ಕಾರ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಯಾವುದೇ ರೀತಿಯ ತಾರತಮ್ಯ ನೀತಿಗಳು ಆಗದಂತೆ ನೀತಿ ರೂಪಿಸಬೇಕು. ನಮ್ಮ ಸಮುದಾಯದ ಮಕ್ಕಳ ವಿಚಾರದಲ್ಲಿ ಅಸಡ್ಡೆ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಲಿಂಗತ್ವ ಅಲ್ಪಸಂಖ್ಯಾತ ಹಾಗೂ ದೇವದಾಸಿ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸರ್ಕಾರ ಜಾಗೃತಿ ಮೂಡಿಸಬೇಕು' ಎಂದು ಆಗ್ರಹಿಸಿದರು.

'ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡುವ ಸಂದರ್ಭದಲ್ಲಿ ಮಗುವಿನ ತಾಯಿ ನೀಡುವ ದಾಖಲೆಗಳನ್ನು ಪರಗಣಿಸಿ, ದಾಖಲಾತಿ ಪ್ರಕ್ರಿಯೆ ನಡೆಸಬೇಕು. ಇದಕ್ಕಾಗಿ ವಿಶೇಷ ನೀತಿಯೊಂದನ್ನು ರೂಪಿಸಬೇಕು' ಎಂದು ಹೇಳಿದರು.

ಕೆಸರು ಗದ್ದೆಯಂತಾದ ರಸ್ತೆ • ವಿದ್ಯುತ್, ಒಳಚರಂಡಿ ವ್ಯವಸ್ಥೆ ಸರಿಯಿಲ್ಲ • ಸ್ಪಂದಿಸದ ಬಿಡಿಎ ಅಧಿಕಾರಿಗಳು: ಆರೋಪ

# ಅರ್ಕಾವತಿ ಬಡಾವಣೆ: ನೀಗದ ಬವಣೆ

• ಕೆ.ಎಸ್.ಸುನಿಲ್

**ಬೆಂಗಳೂರು:** ಅರ್ಕಾವತಿ ಬಡಾವಣೆ ನಗರದ 'ಹೆಮ್ಮೆ'ಯ ಬಡಾವಣೆ ಎಂದು ಬಿಂಬಿಸಿಕೊಳ್ಳುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು(ಬಿಡಿಎ), ಅಲ್ಲಿ ಮೂಲಸೌಕರ್ಯ ಕಲ್ಪಿಸದೇ ನಿವಾಸಿಗಳನ್ನು ಹೈರಾಣಾಗಿಸಿದೆ. ಅಭಿವೃದ್ಧಿಯ ಗಂಧ-ಗಾಳಿಯೂ ಇಲ್ಲದೇ ಕೊಂಪೆಯಂತಾಗಿದ್ದು, ಅಲ್ಲಿ ನಿವೇಶನ ಪಡೆದು ಮನೆ ಕಟ್ಟಿಕೊಂಡವರ ಪಡಿಪಾಟಲಂತೂ ಹೇಳ ತೀರದು.

ನ್ಯಾಯಾಲಯದಲ್ಲಿ ವ್ಯಾಜ್ಯ ಹಾಗೂ ಭೂ ಸ್ವಾಧೀನ ವಿಳಂಬದಿಂದಾಗಿ ಅರ್ಕಾವತಿ ಬಡಾವಣೆ ದಶಕ ಕಳೆದರೂ ಸಮಗ್ರ ಅಭಿವೃದ್ಧಿ ಕಂಡಿಲ್ಲ. ಕಷ್ಟಪಟ್ಟು ಮನೆ ಕಟ್ಟಿಕೊಂಡವರು ಮೂಲ ಸೌಲಭ್ಯಗಳಿಂದ ವಂಚಿತರಾಗಿ ವನವಾಸ ಅನುಭವಿಸುವಂತಾಗಿದೆ. ನಿವಾಸಿಗಳು ಹಾಗೂ ನಿವೇಶನದಾರರ ಸಂಕಷ್ಟಕ್ಕೆ ಬಿಡಿಎ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂಬ ಆರೋಪ ಇದೆ. ದೂರುಗಳ ಮೇಲೆ ದೂರು ಕೊಟ್ಟರೂ ಪ್ರತಿಕ್ರಿಯೆ ಶೂನ್ಯ.

ಸುಮಾರು 1,766 ಎಕರೆ ಪ್ರದೇಶದಲ್ಲಿ ಅರ್ಕಾವತಿ ಬಡಾವಣೆ ನಿರ್ಮಾಣಗೊಂಡಿದ್ದು, 22 ಬ್ಲಾಕ್‌ಗಳಲ್ಲಿ ಎಂಟು ಸಾವಿರಕ್ಕೂ ಅಧಿಕ ನಿವೇಶನಗಳಿವೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿ, ದಾಸರಹಳ್ಳಿ, ಬೈರತಿಖಾನೆ, ಚಳ್ಳಕೆರೆ, ಗೆದ್ದಲಹಳ್ಳಿ, ಕೆ.ನಾರಾಯಣಪುರ, ರಾಚೇನಹಳ್ಳಿ, ಥಣಿಸಂದ್ರ, ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ, ಅಮೃತಹಳ್ಳಿ, ಜಕ್ಕೂರು, ಕೆಂಪಾಪುರ, ಸಂಪಿಗೇಹಳ್ಳಿ, ಶ್ರೀರಾಮಪುರ, ವೆಂಕಟೇಶಪುರ, ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ, ಹೆಣ್ಣೂರು, ನಾಗವಾರ, ಹೆಬ್ಬಾಳದಲ್ಲಿ ನಿವೇಶನ ನಿರ್ಮಿಸಲಾಗಿದೆ.

**ಸಂಪಿಗೆಹಳ್ಳಿ ಬಳಿ ಅವ್ಯವಸ್ಥೆ:** ಹೆಣ್ಣೂರು ಮತ್ತು ಗೆದ್ದಲಹಳ್ಳಿ ಭಾಗ ಅಭಿವೃದ್ಧಿಯಾಗಿದೆ. ಆದರೆ, ಸಂಪಿಗೆಹಳ್ಳಿಯಲ್ಲಿರುವ ಎರಡು ಮತ್ತು ಮೂರನೇ ಬ್ಲಾಕ್, ಜಕ್ಕೂರು ಸುತ್ತಮುತ್ತ, ಶ್ರೀರಾಮಪುರ, ರಾಚೇನಹಳ್ಳಿ ಭಾಗದಲ್ಲಿ ಮೂಲಸೌಲಭ್ಯ ಇಲ್ಲದೆ ನಿವಾಸಿಗಳು ಪರದಾಡುತ್ತಿದ್ದಾರೆ.

ಒಳಚರಂಡಿ, ಬೀದಿ ದೀಪದ ವ್ಯವಸ್ಥೆ ಸಮರ್ಪಕವಾಗಿಲ್ಲ. ಇಲ್ಲಿ ಮಣ್ಣಿನ ರಸ್ತೆಗಳಿವೆ. ಎಂದೋ ಹಾಕಿರುವ ಜಲ್ಲಿಕಲ್ಲು ಮಳೆಗೆ ಕೊಚ್ಚಿ ಹೋಗಿವೆ. ಮಳೆಗಾಲದಲ್ಲಿ ರಸ್ತೆಗಳು ಕೆಸರುಗದ್ದೆಯಂತಾಗಿ, ಓಡಾಡಲು ಆಗದ ಸ್ಥಿತಿಯಲ್ಲಿದೆ. ಖಾಲಿ ನಿವೇಶನದಲ್ಲಿ ಗಿಡಗಂಟಿಗಳು ಎದೆಮಟ್ಟಕ್ಕೆ ಬೆಳೆದಿವೆ. ವಿಷ ಜಂತುಗಳ ಆವಾಸಸ್ಥಾನವಾಗಿದೆ. ನಿವೇಶನಗಳಿಗೆ ಹಾಕಿದ್ದ ಗುರುತಿನ ಕಲ್ಲುಗಳನ್ನೂ ಕಿತ್ತು ಹಾಕಲಾಗಿದೆ.

ರಸ್ತೆ, ವಿದ್ಯುತ್, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಾಮಗಾರಿ ಸಮರ್ಪಕವಾಗಿ ನಡೆದಿಲ್ಲ. ಇದರಿಂದಾಗಿ ದಶಕಗಳ ಹಿಂದೆ ನಿವೇಶನ ಖರೀದಿಸಿದ್ದ ಬಹುಪಾಲು ಜನರಿಗೆ ಮನೆ ನಿರ್ಮಿಸಲು ಸಾಧ್ಯವಾಗಿಲ್ಲ. ಈಗಾಗಲೇ ನಿರ್ಮಾಣಗೊಂಡಿರುವ ಮನೆಗಳಿಗೆ ತೆರಳಲು ರಸ್ತೆಯೂ ಇಲ್ಲ. ಇದು ಕಂದಾಯ ಸಚಿವ ಕೃಷ್ಣಬೈರೇಗೌಡ ಪ್ರತಿನಿಧಿಸುವ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

'ಹರಾಜಿನಲ್ಲಿ ಮೂಲೆ ನಿವೇಶನ ಖರೀದಿಸಿದ್ದೇನೆ. ದಶಕ ಕಳೆದರೂ ಬಡಾವಣೆಗೆ ಮೂಲಸೌಲಭ್ಯ ಕಲ್ಪಿಸಿಲ್ಲ. ಸೌಲಭ್ಯ ಕಲ್ಪಿಸದೇ ನಿವೇಶನಗಳ ಹರಾಜು ಪ್ರಕ್ರಿಯೆ ನಡೆಸಲಾಗಿದೆ. ಮನೆಗಳ ಮುಂದೆ ಮಾತ್ರ ದೀಪದ ಕಂಬ ಅಳವಡಿಸಲಾಗಿದೆ. ರಸ್ತೆಗಳಲ್ಲಿ ದೀಪದ ವ್ಯವಸ್ಥೆ ಇಲ್ಲ. ಒಳಚರಂಡಿ ವ್ಯವಸ್ಥೆ ಸರಿಯಿಲ್ಲ. ಮಳೆ ಬಂದರೆ ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತದೆ. ಮಳೆಗಾಲದಲ್ಲಿ ರಸ್ತೆ ಕೆಸರುಗದ್ದೆಯಂತಾಗಿ ಓಡಾಡಲು ಆಗುವುದಿಲ್ಲ. ವೃದ್ಧರು ಜಾರಿ ಬಿದ್ದಿರುವ ಹಲವು ಉದಾಹರಣೆ ಇದೆ' ಎಂದು ನಿವಾಸಿ ಲೋಕೇಶ್ ಅಳಲು ತೋಡಿಕೊಂಡರು.

'ಕಸ ಸಂಗ್ರಹ ವಾಹನ ಸರಿಯಾಗಿ ಬರುವುದಿಲ್ಲ. ಪ್ರಾಧಿಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಯಾರಿಗೆ ನಮ್ಮ ಸಮಸ್ಯೆ ಹೇಳುವುದು' ಎಂದು ನಿವಾಸಿಗಳು ಪ್ರಶ್ನಿಸಿದರು.

'ರಸ್ತೆ ಡಾಂಬರೀಕರಣಕ್ಕೆ ಟೆಂಡರ್ ಆಗಿ, ಕಾರ್ಯಾದೇಶವನ್ನೂ ನೀಡಲಾಗಿದೆ. ಹಲವು ಭಾಗಗಳಲ್ಲಿ ರಸ್ತೆ ಡಾಂಬರೀಕರಣ ಕೆಲಸ ನಡೆಯುತ್ತಿದೆ. ಮಳೆಯಿಂದಾಗಿ ಕೆಲವು ಭಾಗದಲ್ಲಿ ಇನ್ನೂ ಆರಂಭವಾಗಿಲ್ಲ. ಒಳಚರಂಡಿ ಕಾಮಗಾರಿ ವೇಳೆ ವಿದ್ಯುತ್ ತಂತಿಗಳಿಗೆ ಹಾನಿಯಾಗಿರುವ ಕಾರಣ ಬೀದಿ ದೀಪದ ವ್ಯವಸ್ಥೆ ಸಮಸ್ಯೆಯಾಗಿದೆ' ಎನ್ನುವುದು ಬಿಡಿಎ ಅಧಿಕಾರಿಗಳ ಸಮಜಾಯಿಷಿ.



1. ರಸ್ತೆಯಲ್ಲಿ ಕಾರು ಹೂತಿದೆ 2. ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

## 'ಹಂತ, ಹಂತವಾಗಿ ಮೂಲಸೌಕರ್ಯ ಒದಗಿಸುತ್ತೇವೆ'




'ಬಡಾವಣೆಯ ಸಮಸ್ಯೆ ನನ್ನ ಗಮನದಲ್ಲಿದೆ. ಮೊದಲಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಬೇಕಾಗಿದೆ. ಆ ಬಳಿಕ ಒಳಚರಂಡಿ ಮತ್ತು ರಸ್ತೆಗೆ ಡಾಂಬರೀಕರಣ ಮಾಡುತ್ತೇವೆ. ಈ ಎಲ್ಲ ವ್ಯವಸ್ಥೆಯನ್ನು ಹಂತ ಹಂತವಾಗಿ ಕಾರ್ಯಗತಗೊಳಿಸುತ್ತೇವೆ' ಎಂದು ಸ್ಥಳೀಯ ಶಾಸಕರೂ ಆದ ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

'ಈ ಸಂಬಂಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸೇರಿ ಸಂಬಂಧಿಸಿದ ಸಂಸ್ಥೆಗಳ ಜತೆ ಸಂಪರ್ಕದಲ್ಲಿದ್ದೇನೆ. ಒಳಚರಂಡಿಗೆ ಅಗೆಯುವ ಕೆಲಸ ಇರುತ್ತದೆ. ಛೇಂಬರ್ ಕಟ್ಟಬೇಕು, ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ನಿರ್ಮಿಸಬೇಕಾಗಿದೆ. ಹಂತ ಹಂತವಾಗಿ ಮಾಡುತ್ತೇವೆ' ಎಂದು ಅವರು ಹೇಳಿದರು.

### 8,212 ನಿವೇಶನ ಅಭಿವೃದ್ಧಿ: ಬಿಡಿಎ ಮಾಹಿತಿ

2004ರಲ್ಲಿ ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ 3339.12 ಎಕರೆ ಭೂ ಸ್ವಾಧೀನಕ್ಕಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಪ್ರಾಥಮಿಕ ಅಧಿಸೂಚನೆಯಂತೆ 2,750 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಅದರಲ್ಲಿ 1,766 ಎಕರೆ ಜಮೀನಿನಲ್ಲಿ ಬಡಾವಣೆ ರಚಿಸಲಾಗುತ್ತಿದೆ. ಆರಂಭದಲ್ಲಿ 13,689 ನಿವೇಶನ ರಚಿಸಲು ಉದ್ದೇಶಿಸಲಾಗಿತ್ತು. ಸದ್ಯ 8,212 ರಲ್ಲಿ ನಿವೇಶನ ರಚನೆ ಮಾಡಿ, ಹಂಚಿಕೆ ಮಾಡಲಾಗಿದೆ. ಭೂಸ್ವಾಧೀನ ತಕರಾರಿನಿಂದ 5,477 ನಿವೇಶನಗಳನ್ನು ರಚಿಸಲಾಗಿಲ್ಲ ಎಂದು ಬಿಡಿಎ ಮಾಹಿತಿ ನೀಡಿದೆ.

# ಕಮಲ್ ಹಾಸನ್ ಹೇಳಿಕೆ: ವಿವಾದ



ಬೆಂಗಳೂರು: ಕನ್ನಡ ತಮಿಳಿನಿಂದ ಹುಟ್ಟಿರುವುದು ಎಂದು ನಟ ಕಮಲ್ ಹಾಸನ್ ಶನಿವಾರ ನೀಡಿರುವ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಚೆನ್ನೈನಲ್ಲಿ ನಡೆದ 'ಥಗ್ ಲೈಫ್' ಚಿತ್ರದ ಧ್ವನಿಸುರುಳಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದರು. ಚಿತ್ರರಂಗಕ್ಕೆ ರಾಜ್‌ಕುಮಾರ್ ಕುಟುಂಬ, ಶಿವರಾಜ್‌ಕುಮಾರ್ ಕೊಡುಗೆಗಳನ್ನು ಶ್ಲಾಘಿಸಿದ ಅವರು, ರಾಜ್‌ಕುಮಾರ್ ಕುಟುಂಬದ ಜತೆಗಿನ ಒಡನಾಟವನ್ನು ನೆನಪಿಸಿಕೊಂಡಿದ್ದರು. ನಟ ಶಿವರಾಜ್ ಕುಮಾರ್ ಕೂಡ ಆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಅವರ ಎದುರೇ ಕನ್ನಡವನ್ನು ತಮಿಳಿನೊಂದಿಗೆ ಹೋಲಿಸಿರುವುದು ವಿವಾದಕ್ಕೆ ಗುರಿಯಾಗಿದೆ. ಮಣಿರತ್ನಂ ನಿರ್ದೇಶನದಲ್ಲಿ ಕಮಲ್ ಹಾಸನ್ ನಟನೆಯ 'ಥಗ್ ಲೈಫ್' ಸಿನಿಮಾ ಜೂ.5ರಂದು ತೆರೆ ಕಾಣುತ್ತಿದೆ. ಅದರ ಪ್ರಚಾರ ಕಾರ್ಯಕ್ಕಾಗಿ ಕಮಲ್ ಹಾಸನ್ ಮತ್ತು ಚಿತ್ರತಂಡ ಮಂಗಳವಾರ ಬೆಂಗಳೂರಿಗೆ ಬಂದಿತ್ತು. ಇದರ ಬೆನ್ನಲ್ಲೇ ಅವರು ಶನಿವಾರ ಮಾತನಾಡಿದ ವಿಡಿಯೊ ಹರಿಬಿಟ್ಟು ವಿವಾದ ಸೃಷ್ಟಿಯಾಗಿದೆ. ಆದರೆ ಹೆಗಡೆ ನಗರದಲ್ಲಿ ನಡೆದ ಚಿತ್ರದ ಪ್ರಚಾರ ಕಾರ್ಯಕ್ಕೆ ಯಾವುದೇ ತೊಂದರೆ ಆಗಲಿಲ್ಲ.

### 'ಭಾಷಾ ದುರಭಿಮಾನ ಸಂಸ್ಕೃತಿ ಹೀನ ನಡವಳಿಕೆ'



'ಮಾತೃಭಾಷೆಯನ್ನು ಪ್ರೀತಿಸಬೇಕು. ಆದರೆ, ಅದರ ಹೆಸರಿನಲ್ಲಿ ದುರಾಭಿಮಾನ ಮೆರೆಯುವುದು ಸಂಸ್ಕೃತಿ ಹೀನ ನಡವಳಿಕೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ತಿಳಿಸಿದ್ದಾರೆ.

ಭಾಷೆ ಬಗೆಗೆ ಕಮಲ್ ಹಾಸನ್ ಅವರ ಹೇಳಿಕೆ ಖಂಡಿಸಿರುವ ಅವರು, 'ಸಾವಿರಾರು ವರ್ಷಗಳ ಭವ್ಯ ಇತಿಹಾಸ, ಸ್ವತಂತ್ರ ಲಿಪಿ, ಶಾಸ್ತ್ರೀಯ ಸ್ಥಾನಮಾನ ಹೊಂದಿರುವ ಶ್ರೀಮಂತ ಭಾಷೆ ಕನ್ನಡವಾಗಿದೆ. ಕೋಟ್ಯಂತರ ಕರುನಾಡಿಗರ ಜೀವನಾಡಿಯಾಗಿರುವ ಹೆಮ್ಮೆಯ ಕನ್ನಡ ಭಾಷೆಗೆ ನಟ ಕಮಲ್ ಹಾಸನ್ ಅವರು ಅವಮಾನಿಸಿದ್ದಾರೆ. ಕಲೆಗೆ ಯಾವುದೇ ಭಾಷೆಯ ಹಂಗಿಲ್ಲ. ಕಲಾವಿದರಿಗೆ ಪ್ರತಿಯೊಂದು ಭಾಷೆಯನ್ನು ಗೌರವಿಸುವ ಸಾಮಾನ್ಯ ಸಂಸ್ಕಾರ ಇರಬೇಕು' ಎಂದು ಹೇಳಿದ್ದಾರೆ.

'ಕನ್ನಡ ಸೇರಿದಂತೆ ಅನೇಕ ಭಾರತೀಯ ಭಾಷೆಗಳಲ್ಲಿ ಅಭಿನಯಿಸಿರುವ ನಟ ಕಮಲ್ ಹಾಸನ್ ಆಡಿರುವುದು ದುರಹಂಕಾರದ ಮಾತುಗಳು. ತಮಿಳು ಭಾಷೆಯನ್ನು ವೈಭವೀಕರಿಸುವ ಮತ್ತಿನಲ್ಲಿ ಕನ್ನಡ ಭಾಷೆಯನ್ನು ಅಪಮಾನಿಸಿರುವ ಮೂಲಕ ಅವರು ಉದ್ಧಟತನ, ದುರಹಂಕಾರ ಮೆರೆದಿದ್ದಾರೆ. ಈ ನಡವಳಿಕೆಯನ್ನು ತೀವ್ರವಾಗಿ ಖಂಡಿಸುತ್ತೇನೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 'ತಮಿಳಿನಿಂದ ಕನ್ನಡ ಹುಟ್ಟಿಲ್ಲ'



'ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿಲ್ಲ ಎಂದು ವಿ.ಐ. ಸುಬ್ರಮಣಿಯನ್ ಮೊದಲಾದ ತಮಿಳಿನ ಭಾಷಾ ವಿಜ್ಞಾನಿಗಳೇ ಹೇಳಿದ್ದನ್ನು ನಟ ಕಮಲ್ ಹಾಸನ್ ಗಮನಿಸಿದಂತಿಲ್ಲ. ದ್ರಾವಿಡ ಭಾಷಾ ಕುಟುಂಬದಲ್ಲಿ 130ಕ್ಕೂ ಹೆಚ್ಚು ಭಾಷೆಗಳಿವೆ. ಈ ಎಲ್ಲ ಭಾಷೆಗಳಿಗೂ ಮೂಲ ಆಗಿರಬಹುದಾದ ಪ್ರಾಗ್ದ್ರಾವಿಡ ಭಾಷೆಯೊಂದನ್ನು (ಇದನ್ನು ಮೂಲ ದ್ರಾವಿಡ ಭಾಷೆ ಎಂದೂ ಕರೆಯಲಾಗಿದೆ) ಭಾಷಾ ವಿಜ್ಞಾನಿಗಳು ಪುನರ್ ರಚಿಸಿದ್ದಾರೆ. ಕಾಲಾಂತರದಲ್ಲಿ ದ್ರಾವಿಡ ಭಾಷಾ ಗುಂಪಿನ ಜನರು ಬೇರೆ ಬೇರೆ ಕಡೆಗಳಲ್ಲಿ ಪಸರಿಸಿಕೊಂಡಾಗ ಭಾಷೆಯೂ ಸ್ವತಂತ್ರವಾಗಿ ಬೆಳೆಯತೊಡಗಿತು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

ಕಮಲ್ ಹಾಸನ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅವರು, 'ಮೂಲ ದ್ರಾವಿಡದಿಂದ ಮೊದಲು ಬೇರೆಯಾದ ಭಾಷೆ ಕುಯಿ ಮತ್ತು ತಮಿಳು. ಅವು ಇವತ್ತಿಗೂ ಮೂಲ ದ್ರಾವಿಡ ಭಾಷೆಯ ಅನೇಕ ಗುಣ ಲಕ್ಷಣಗಳನ್ನು ಹೊಂದಿವೆ. ಆಮೇಲೆ ತುಳು, ತದನಂತರ ಕನ್ನಡ, ತೆಲುಗು, ಮಲೆಯಾಳಂ ಹೀಗೆ ಬೇರೆ ಬೇರೆ ಭಾಷೆಗಳು ಬೆಳೆದವು. ಇವುಗಳದು ಸೋದರ ಸಂಬಂಧವೇ ಹೊರತು ತಾಯಿ ಮಕ್ಕಳ ಸಂಬಂಧವಲ್ಲ' ಎಂದು ಹೇಳಿದ್ದಾರೆ.

### 'ಕಮಲ್ ಹಾಸನ್‌ಗೆ ಮಾಹಿತಿ ಕೊರತೆ ಇದೆ'



'ತಮ್ಮ ಭಾಷೆಯ ಮೇಲಿನ ಅಭಿಮಾನದಿಂದಲೊ, ಮಾಹಿತಿಯ ಕೊರತೆಯಿಂದಲೊ ನಟ ಕಮಲ್ ಹಾಸನ್ ಅವರು ತಮಿಳಿನಿಂದ ಕನ್ನಡ ಭಾಷೆ ಬಂದಿದೆಯೆಂದು ಹೇಳಿಕೆ ನೀಡಿದ್ದಾರೆ. ಈ ಹೇಳಿಕೆ ಕನ್ನಡಿಗರ ಸ್ವಾಭಿಮಾನವನ್ನು ಕೆಣಕುವಂತಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

'ಕನ್ನಡವು ಪರಿಪೂರ್ಣ ಭಾಷೆ ಎಂಬ ಹೆಗ್ಗಳಿಕೆ ಪಡೆದಿದೆ. ತನ್ನದೇ ಆದ ಲಿಪಿ, ಅಂಕಿಗಳು, ವ್ಯಾಕರಣವನ್ನು ಹೊಂದಿದೆ. ಇಲ್ಲಿ ಬರಹಕ್ಕೂ ಉಚ್ಚಾರಣೆಗೂ ನೇರ ಸಂಬಂಧವಿದೆ. ಜಗತ್ತಿನಲ್ಲಿಯೇ ಇಂತಹ ಸ್ವಂತಿಕೆಯನ್ನು ಹೊಂದಿರುವ ಭಾಷೆಗಳು ಬೆರಳಣಿಕೆಯಷ್ಟು. ತಮಿಳಿಗೆ ಇಂತಹ ಹೆಗ್ಗಳಿಕೆಯಿಲ್ಲ. ಹೀಗಾಗಿ, ಕನ್ನಡಿಗರು ಈ ಕುರಿತು ಪ್ರತಿಕ್ರಿಯಿಸಲೇ ಬೇಕಾದ ಅನಿವಾರ್ಯತೆ ಉಂಟಾಗಿದೆ' ಎಂದರು.

'ಮೂಲ ದ್ರಾವಿಡ ಭಾಷೆಯಿಂದ ಮೂಡಿಬಂದ ಪ್ರಮುಖ ನುಡಿಗಳಲ್ಲಿ ತಮಿಳಿನಂತೆ ಕನ್ನಡವೂ ಒಂದು. ಅದನ್ನು ದಕ್ಷಿಣ ದ್ರಾವಿಡ ಭಾಷೆಗಳ ಗುಂಪಿಗೆ ಸೇರಿಸಲಾಗಿದೆ. ಯಾವುದೇ ಭಾಷೆಯು, ತನ್ನದೇ ಆದ ಸ್ವತಂತ್ರ ರೂಪವನ್ನು ಪಡೆದುಕೊಳ್ಳುವ ಕಾರ್ಯವು ನೂರಾರು ವರ್ಷಗಳ ಕಾಲ ನಡೆದಿರುತ್ತದೆ' ಎಂದು ಹೇಳಿದ್ದಾರೆ.

# ಇಸ್ರೊದಲ್ಲಿ ಕೆಲಸದ ಆಮಿಷ ದೂರು ದಾಖಲಿಸಲು ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿಗಳು

**ಬೆಂಗಳೂರು:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿ (ಇಸ್ರೊ) ಗ್ರಾಫಿಕ್ ಡಿಸೈನರ್ ಕೆಲಸ ಪಡೆಯಲು ವಿನುತಾ ಎಂಬುವರಿಗೆ ₹1.03 ಕೋಟಿ ಮೊತ್ತವನ್ನು ನೀಡಿದ್ದ ವ್ಯಕ್ತಿಯೊಬ್ಬರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಹೈಕೋರ್ಟ್ ಆದೇಶಿಸಿದೆ.

ಈ ಪ್ರಕರಣದಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ, ವಂಚಿಸಿರುವ ಆರೋಪ ಎದುರಿಸುತ್ತಿರುವ ವಿಜಯನಗರದ ಎಂ.ಇ.ವಿನುತಾ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ರಜಾ ಕಾಲದ ಏಕಸದಸ್ಯ ನ್ಯಾಯಪೀಠದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು ಮಂಗಳವಾರ ವಿಚಾರಣೆ ನಡೆಸಿದರು.

'ಈ ಆದೇಶದ ಪ್ರತಿಯನ್ನು ಇಸ್ರೊ ಮುಖ್ಯಸ್ಥರಿಗೆ ಕಳುಹಿಸಬೇಕು' ಎಂದು ನ್ಯಾಯಾಂಗ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿದ ನ್ಯಾಯಪೀಠ, ಈ ಕುರಿತ ಸ್ವೀಕೃತಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಸೂಚಿಸಿ ವಿಚಾರಣೆಯನ್ನು ಜೂನ್ 4ಕ್ಕೆ ಮುಂದೂಡಿದೆ.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರಾದ ವಿನುತಾ ಅವರು ಆರೋಪಿಯಾಗಿದ್ದಾರೆ. ಹಣ ಪಡೆದು ಕೆಲಸ ಕೊಡಿಸುವ ಇನ್ನೂ ಎರಡು ಆರೋಪಗಳು ಇವರ ವಿರುದ್ಧ ಇವೆ. ಅಂತೆಯೇ, ದೂರುದಾರ ಸಂಜಯ್ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಲು ನಿರ್ದೇಶಿಸಲಾಗುವುದು. ಈ ಎರಡೂ ಪ್ರಕರಣಗಳ ತನಿಖೆ ನಡೆಯಲಿ' ಎಂದು ಆದೇಶಿಸಿತು.

ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, 'ವನಿತಾ ವಿರುದ್ಧ ಕೊಳ್ಳೇಗಾಲ ಮತ್ತು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳ ಮಾಹಿತಿಯನ್ನು ಮುಂದಿನ ವಿಚಾರಣೆ ವೇಳೆಗೆ ಸಲ್ಲಿಸಬೇಕು' ಎಂದು ಅರ್ಜಿದಾರರ ಪರ ವಕೀಲರಿಗೆ ತಾಕೀತು ಮಾಡಿದೆ.

ಪ್ರಕರಣದಲ್ಲಿ ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು ಎಂ.ಇ.ವಿನುತಾ ಮತ್ತು ಇತರರನ್ನು ಆರೋಪಿಗಳನ್ನಾಗಿಸಿ, ಭಾರತೀಯ ನ್ಯಾಯ ಸಂಹಿತೆ-2023ರ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು.

### ಪರಪ್ಪನ ಅಗ್ರಹಾರ ಜೈಲಿಗೆ ಜನಾರ್ದನ ರೆಡ್ಡಿ ವರ್ಗ

ಓಬಳಾಪುರಂ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಹೈದರಾಬಾದ್ ಸಿಬಿಐ ವಿಶೇಷ ನ್ಯಾಯಾಲಯದಿಂದ ಏಳು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಅಪರಾಧಿ, ಮಾಜಿ ಶಾಸಕ ಜಿ.ಜನಾರ್ದನ ರೆಡ್ಡಿ ಅವರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಸಿಬಿಐ ಪರ ವಕೀಲೆ ಹೇಮಾ ಕಾರಂತ್, ಐದು ಪ್ರತ್ಯೇಕ ಪ್ರಕರಣಗಳಲ್ಲಿ ಜನಾರ್ದನ ರೆಡ್ಡಿ ಅವರನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ನಿಯಮಿತವಾಗಿ ಹಾಜರುಪಡಿಸುವ ಅಗತ್ಯ ಇದೆ. ಹಾಗಾಗಿ, ಆರೋಪಿ ಜನಾರ್ದನ ರೆಡ್ಡಿ ಅವರನ್ನು ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಲು ಆದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ನಗರದ ಪರಪ್ಪನ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಿ ಆದೇಶಿಸಿದರು.

# ಪರಿಶಿಷ್ಟ ಜಾತಿ ಸಮೀಕ್ಷೆಗೆ ಹೆಚ್ಚುವರಿ ಗಣತಿದಾರರು

| 8,215 | 1.31 ಲಕ್ಷ | 5.11 ಲಕ್ಷ | 28.10 ಲಕ್ಷ | 94813 59000 |
|---|---|---|---|---|
| ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಗಣತಿದಾರರು | ಪರಿಶಿಷ್ಟ ಜಾತಿಯವರ ಮನೆಗಳಿಗೆ ಭೇಟಿ | ಪರಿಶಿಷ್ಟ ಜಾತಿ ಸದಸ್ಯರನ್ನು ಗುರುತು | ಪರಿಶಿಷ್ಟ ಜಾತಿಯಲ್ಲದ ಮನೆಗಳಿಂದ ದತ್ತಾಂಶ ಸಂಗ್ರಹ | ಸಮೀಕ್ಷೆಯ ಕುರಿತು ಸಮಸ್ಯೆ ಇದ್ದರೆ ಸಂಪರ್ಕಿಸಬಹುದಾದ ಸಹಾಯವಾಣಿ |

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೂರ್ವ ವಲಯ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಸಮುದಾಯ ಹೆಚ್ಚು ವಾಸವಿರುವ ಪ್ರದೇಶಗಳಿಗೆ ಹೆಚ್ಚುವರಿ ಗಣತಿದಾರರನ್ನು ನಿಯೋಜಿಸಿ ಸಮೀಕ್ಷಾ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆಯ ಕಾರ್ಯಪ್ರಗತಿ ಕುರಿತು ಪೂರ್ವ ವಲಯ ವ್ಯಾಪ್ತಿಯಲ್ಲಿ ಮಂಗಳವಾರ ನಡೆದ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

**ಸಹಕಾರಕ್ಕೆ ಮನವಿ:** ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಸಮೀಕ್ಷಾ ಕಾರ್ಯದ ಯಶಸ್ವಿಗಾಗಿ ಸಹಕರಿಸಲು ರಾಜ್ಯಮಟ್ಟದ ಸಮನ್ವಯ ಸಮಿತಿಯ ಅಧ್ಯಕ್ಷೆ ಹಾಗೂ ಅಭಿವೃದ್ಧಿ ಆಯುಕ್ತರಾದ ಉಮಾ ಮಹದೇವನ್ ಅವರು ಸಮುದಾಯ ಮುಖಂಡರು, ಪದಾಧಿಕಾರಿಗಳಲ್ಲಿ ಮನವಿ ಮಾಡಿದರು.



ಜಾತಿ ತಿಳಿಯುವುದರ ಜೊತೆಗೆ ಸಾಮಾಜಿಕ ಹಾಗೂ ಆರ್ಥಿಕ ಹಿತದೃಷ್ಟಿಯಿಂದ ವೈಜ್ಞಾನಿಕವಾಗಿ ಸಮೀಕ್ಷೆ ಮಾಡಲಾಗುತ್ತಿದೆ. ನಗರದಲ್ಲಿ ನಿರಂತರವಾಗಿ ಮಳೆಯಾದ ಪರಿಣಾಮ ಸಮೀಕ್ಷಾ ಕಾರ್ಯವು ತಡವಾಗಿದ್ದು, ಮನೆ-ಮನೆ, ಕ್ಯಾಂಪ್ ಹಾಗೂ ಸ್ವಯಂ ಘೋಷಿತವಾಗಿ ಆನ್‌ಲೈನ್ ಮೂಲಕ ಮೂರು ಹಂತಗಳಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ. ಸಮೀಕ್ಷಾ ಕಾರ್ಯದಲ್ಲಿ ಸರಿಯಾಗಿ ಕಾರ್ಯನಿರ್ವಹಿಸದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯಮಟ್ಟದ ಸಮಿತಿಯ ಸದಸ್ಯರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಮಾತನಾಡಿ, 'ಪರಿಶಿಷ್ಟ ಜಾತಿ ಸಮೀಕ್ಷಾ ಕಾರ್ಯವನ್ನು ಯಶಸ್ವಿಗೊಳಿಸುವ ಗುರಿಯಿದ್ದು, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾರ್ಡ್‌ಗಳಿಗೂ ಪ್ರತ್ಯೇಕ ಅಧಿಕಾರಿಗಳನ್ನು ನಿಯೋಜಿಸಿ ಸಮೀಕ್ಷಾ ಕಾರ್ಯಕ್ಕೆ ವೇಗ ನೀಡಲಾಗುವುದು' ಎಂದರು.

'ನಗರದಲ್ಲಿ ಸಮೀಕ್ಷಾ ಅವಧಿ ವಿಸ್ತರಿಸಬೇಕು, ಸ್ಥಳೀಯರನ್ನು ಗಣತಿದಾರರನ್ನಾಗಿ ನಿಯೋಜಿಸಿ ಸಮೀಕ್ಷೆ ಕಾರ್ಯ ಮಾಡಬೇಕು, ಬೆಳಿಗ್ಗೆ ಹಾಗೂ ಸಂಜೆಯ ವೇಳೆ ಮನೆ-ಮನೆ ಸಮೀಕ್ಷೆ ಮಾಡಬೇಕು' ಎಂದು ಸಮುದಾಯದ ಮುಖಂಡರು ಸಲಹೆ ನೀಡಿದರು.

ಮಾಜಿ ಸಚಿವ ಎಚ್. ಆಂಜನೇಯ, ರಾಜ್ಯಮಟ್ಟದ ಸಮನ್ವಯ ಸಮಿತಿಯ ಸದಸ್ಯ ಕಾರ್ಯದರ್ಶಿ ರಾಕೇಶ್ ಕುಮಾರ್ ಉಪಸ್ಥಿತರಿದ್ದರು.

## ತೇಜಸ್ವಿನಿ ಗೌಡ ವಿರುದ್ಧದ ಪ್ರಕರಣಕ್ಕೆ ತಡೆ

**ಸಕ್ಷಮ** ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಸಾರ್ವಜನಿಕ ಸ್ಥಳದಲ್ಲಿ ಪ್ರತಿಭಟನೆ ನಡೆಸಿದ ಆರೋಪ ಎದುರಿಸುತ್ತಿರುವ ಮಾಜಿ ವಿಧಾನ ಪರಿಷತ್ ಸದಸ್ಯೆ ಹಾಗೂ ಮಾಜಿ ಸಂಸದೆ ತೇಜಸ್ವಿನಿ ಗೌಡ (ಸದ್ಯ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ) ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನನ್ನ ವಿರುದ್ಧದ ಎಫ್‌ಐಆರ್ ಮತ್ತು ವಿಶೇಷ ನ್ಯಾಯಾಲಯದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ತೇಜಸ್ವಿನಿ ಗೌಡ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ರಜಾಕಾಲದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

### ಪ್ರಕರಣವೇನು?

'ಕಾಂಗ್ರೆಸ್ ಸರ್ಕಾರ ಜನವಿರೋಧಿ ಧೋರಣೆಗಳನ್ನು ಅನುಸರಿಸುತ್ತಿದೆ' ಎಂದು ಆರೋಪಿಸಿ ಬಸವರಾಜ ಬೊಮ್ಮಾಯಿ, ಆರ್.ಅಶೋಕ, ತೇಜಸ್ವಿನಿ ಗೌಡ ಸೇರಿದಂತೆ 30ಕ್ಕೂ ಹೆಚ್ಚು ಬಿಜೆಪಿ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರು ನಗರದ ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಎದುರು 2023ರ ಜೂನ್ 20ರಂದು ಪ್ರತಿಭಟನೆ ನಡೆಸಿದ್ದರು.

'ಪ್ರತಿಭಟನೆ ನಡೆಸಲು ನೀವುಗಳು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿಲ್ಲ. ಹಾಗಾಗಿ, ಪ್ರತಿಭಟನೆ ನಡೆಸಬೇಡಿ ಎಂದರೂ ಪ್ರತಿಭಟನೆ ಮುಂದುವರಿಸಿದರು' ಎಂದು ಆರೋಪಿಸಿ ಹೈಗ್ರೌಂಡ್ಸ್ ಠಾಣೆಯ ಪಿಎಸ್‌ಐ ಅನಿಲ್ ಕುಮಾರ್ ಮುಳ್ಳೂರ ಅವರು ತೇಜಸ್ವಿನಿ ಗೌಡ ಸೇರಿದಂತೆ ಇತರರ ವಿರುದ್ಧ ಖಾಸಗಿ ದೂರು ದಾಖಲಿಸಿದ್ದರು.

ಐಪಿಸಿ-1860ರ ಕಲಂ 283, 188 ಮತ್ತು 34 ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆ-1963ರ ಕಲಂ 103ರ ಅಪರಾಧಗಳ ಅಡಿ ತನಿಖೆ ನಡೆಸಿ ಸಲ್ಲಿಸಲಾಗಿದ್ದ ದೋಷಾರೋಪ ಪಟ್ಟಿಯನ್ನು ಮ್ಯಾಜಿಸ್ಟ್ರೇಟ್ (ಜನಪ್ರತಿನಿಧಿಗಳ) ವಿಶೇಷ ನ್ಯಾಯಾಲಯ ಇದೇ ಫೆಬ್ರುವರಿಯಲ್ಲಿ ವಿಚಾರಣೆಗೆ ಪರಿಗಣಿಸಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

# 'ಸಾಮಾಜಿಕ ನ್ಯಾಯ: ಕೆನೆಪದರ ಅಗತ್ಯ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ದಲಿತರಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗುವವರೆಗೆ ಕೆನೆಪದರ ನೀತಿಯ ಅಗತ್ಯವಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೀ ಕಲ್ಚರ್ ಪ್ರಕಾಶನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನೇತ್ರತಜ್ಞ ಡಾ.ಬಿ.ಎಂ. ತಿಪ್ಪೇಸ್ವಾಮಿ ಅವರ ಬದುಕಿನ ಕುರಿತು ಬಿ.ಟಿ. ಜಾಹ್ನವಿ ಅವರು ಸಂಪಾದಿಸಿರುವ 'ಮುಟ್ಟಿಸಿಕೊಂಡವರು' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'1985ರ ಅವಧಿಯಲ್ಲಿ ಶಾಸಕರೂ ಆಗಿದ್ದ ತಿಪ್ಪೇಸ್ವಾಮಿ ಅವರು, ಮೀಸಲಾತಿ ಸೌಲಭ್ಯ ಪಡೆದವರೇ ಮತ್ತೆ ಪಡೆಯುತ್ತಾರೆ ಎಂಬ ಕಾರಣಕ್ಕೆ ಕೆನೆಪದರ ಅಗತ್ಯವಿಲ್ಲ ಎಂದಿದ್ದರು. ಅವರ ದೃಷ್ಟಿಕೋನದಲ್ಲಿ ಅದು ಸರಿ ಇರಬಹುದು. ಆದರೆ, ದಲಿತರಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರೆತಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಐಎಎಸ್, ಐಪಿಎಸ್ ಅಧಿಕಾರಿಗಳು ಹೊರಹೊಮ್ಮಿಲ್ಲ. ಆದ್ದರಿಂದ ಸಾಮಾಜಿಕ ನ್ಯಾಯ ಸಿಗುವವರೆಗೆ ಕೆನೆಪದರ ನೀತಿ ಅಗತ್ಯ' ಎಂದರು.

'ಸಂವಿಧಾನದ ಸವಲತ್ತುಗಳನ್ನು ಪಡೆದವರು ಆ ಜನಾಂಗದವರ ಅಭಿವೃದ್ಧಿಗೆ ಕೆಲಸ ಮಾಡುವುದು ಕಡಿಮೆ. ಆದರೆ, ತಿಪ್ಪೇಸ್ವಾಮಿ ಅವರು ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ಅವರು ಜನಪರ ವಿಚಾರಗಳಲ್ಲಿ ಮುಲಾಜಿಲ್ಲದೆ ಮಾತನಾಡುತ್ತಿದ್ದರು. ಸತ್ಯವನ್ನು ಅತ್ಯಂತ ನಿಷ್ಠುರವಾಗಿ ಹೇಳುತ್ತಿದ್ದರು. ಈ ಕಾರಣಕ್ಕಾಗಿ ಅವರು ಹಲವು ಬಾರಿ ಸಮಸ್ಯೆಗೆ ಸಿಲುಕಿಕೊಂಡಿದ್ದರು' ಎಂದು ಹಳೆಯ ಘಟನೆಗಳನ್ನು ಸ್ಮರಿಸಿಕೊಂಡರು.

ಮಾಜಿ ಸಚಿವ ಎಚ್. ಆಂಜನೇಯ, 'ದಾವಣಗೆರೆಯ ವಿದ್ಯಾನಗರವನ್ನು ನಿರ್ಮಾಣ ಮಾಡಿದವರು ತಿಪ್ಪೇಸ್ವಾಮಿ. ಈಗ ಅದು ಪ್ರತಿಷ್ಠಿತ ಬಡಾವಣೆಯಾಗಿದೆ. ಶಿಕ್ಷಣಕ್ಕೂ ಅವರು ಪ್ರೋತ್ಸಾಹ ನೀಡಿದ್ದರು' ಎಂದು ಹೇಳಿದರು.

ಭಾರತ್ ಸ್ಕೌಟ್ ಅಂಡ್ ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, 'ತಿಪ್ಪೇಸ್ವಾಮಿ ಅಂತಹವರು ರಾಜಕೀಯ ಕ್ಷೇತ್ರದಲ್ಲಿ ಅಪರೂಪ. ಕೆಲವರು ಅವರನ್ನು ಉಪಯೋಗಿಸಿಕೊಂಡು ಬೆಳೆದರು' ಎಂದರು.

ಕೃತಿಯ ಸಂಪಾದಕಿ ಬಿ.ಟಿ. ಜಾಹ್ನವಿ, 'ತಿಪ್ಪೇಸ್ವಾಮಿ ಕುಟುಂಬದವರು, ಒಡನಾಡಿಗಳು ಹಾಗೂ ಶಿಷ್ಯರು ಬರೆದ ಲೇಖನಗಳ ಸಂಗ್ರಹ ಇದಾಗಿದೆ. ಕರ್ನಾಟಕದ ಹೊಸ ತಲೆಮಾರಿನ ಓದುಗರಿಗೆ ಈ ಪುಸ್ತಕ ಮುಖ್ಯ' ಎಂದು ಹೇಳಿದರು.

ಕೃತಿಯ ಬಗ್ಗೆ ದು.ಸರಸ್ವತಿ ಹಾಗೂ ವಿ.ಎಲ್. ನರಸಿಂಹಮೂರ್ತಿ ಮಾತನಾಡಿದರು. ಕವಿ ಎಲ್. ಹನುಮಂತಯ್ಯ ಅಧ್ಯಕ್ಷತೆ ವಹಿಸಿದ್ದರು.



ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಬಿ.ಟಿ. ಜಾಹ್ನವಿ ಮತ್ತು ದು. ಸರಸ್ವತಿ ಅವರ ಜತೆಗೆ ಸಮಾಲೋಚನೆ ನಡೆಸಿದರು. ಎಲ್. ಹನುಮಂತಯ್ಯ, ಮೋಹನ್ ಕೊಂಡಜ್ಜಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿಗೆ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಪತ್ರ

# ಕನ್ನಡ ಸಂಘದ ಕಚೇರಿ ಉಳಿಸಲು ಮನವಿ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** 'ಕೋರಮಂಗಲದ ಕೇಂದ್ರೀಯ ಸದನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಸಂಘದ ಕಚೇರಿ ತೆರವು ವಿಚಾರವಾಗಿ ಮಧ್ಯ ಪ್ರವೇಶಿಸಿ, ಅಲ್ಲಿಯೇ ಸ್ಥಳವನ್ನು ದೊರಕಿಸಿಕೊಡಬೇಕು' ಎಂದು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗದ ನೇತೃತ್ವದಲ್ಲಿ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಸಾಹಿತಿ ದೊಡ್ಡರಂಗೇಗೌಡ, ರಾಜ್ಯಸಭಾ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಕಲಾವಿದ 'ಮುಖ್ಯಮಂತ್ರಿ' ಚಂದ್ರು, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಜಾನಪದ ಲೋಕದ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ, ಸಂಶೋಧಕ ಆರ್. ಶೇಷಶಾಸ್ತ್ರಿ, ಕನ್ನಡ ಪರ ಹೋರಾಟಗಾರರಾದ ರಾ.ನಂ. ಚಂದ್ರಶೇಖರ ಮತ್ತು ವ.ಚ. ಚನ್ನೇಗೌಡ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

'ಕೇಂದ್ರೀಯ ಸದನದಲ್ಲಿ ಕೇಂದ್ರ ಸರ್ಕಾರದ ಪ್ರಮುಖ ಇಲಾಖೆಗಳ 36 ಕಚೇರಿಗಳಿವೆ. ಅಲ್ಲಿ ಹಲವು ಭಾಷೆಗಳ, ರಾಜ್ಯಗಳ ಜನರು ಕೆಲಸ ಮಾಡುತ್ತಿದ್ದಾರೆ. ಕನ್ನಡಿಗರು ಅಲ್ಲಿ ಅಲ್ಪಸಂಖ್ಯಾತರಾಗಿದ್ದು, ಈ ಸಂಘ ಸ್ಥಾಪನೆಯ ಮೊದಲು ಕನ್ನಡವನ್ನು ಕೇಳುವವರೇ ಇರಲಿಲ್ಲ. ಸಂಘ ಸ್ಥಾಪನೆಯಾದ ಬಳಿಕ ಅಲ್ಲಿ ಕನ್ನಡ ಚಟುವಟಿಕೆಗಳು ಉತ್ತಮವಾಗಿ ನಡೆಯುತ್ತಿವೆ. ಆದರೆ, ಈಗ ದಾಖಲೆಗಳಿಲ್ಲ ಎಂಬ ಕಾರಣ ನೀಡಿ, ಸಂಘದ ಕಚೇರಿಯನ್ನು ತೆರವುಗೊಳಿಸುವಂತೆ ಅಧಿಕಾರಿಗಳು ಪತ್ರ ಬರೆದಿದ್ದಾರೆ. ಇದು ಸ್ಪಷ್ಟವಾಗಿ ಕನ್ನಡ ವಿರೋಧಿ ಧೋರಣೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಚಾರವಾಗಿ ಮಧ್ಯಪ್ರವೇಶಿಸಿ, ಸಂಘಕ್ಕೆ ಮತ್ತೆ ಆ ಸ್ಥಳವನ್ನು ದೊರಕಿಸಿ ಕೊಡಬೇಕು' ಎಂದು ಆಗ್ರಹಿಸಿದ್ದಾರೆ.

'2005ರಲ್ಲಿ ಕೇಂದ್ರೀಯ ಸದನದ ಮುಖ್ಯ ಎಂಜಿನಿಯರ್ ಆಗಿದ್ದ ಕನ್ನಡಿಗ ಎಸ್. ಚಿನ್ನಸ್ವಾಮಿ ಅವರು 8ನೇ ಮಹಡಿಯಲ್ಲಿ ಸಂಘಕ್ಕೆ ಕೊಠಡಿ ನೀಡಿದ್ದರು. ಆಗ ಕೇಂದ್ರದ ಯೋಜನಾ ಖಾತೆ ರಾಜ್ಯ ಸಚಿವರಾಗಿದ್ದ ಎಂ.ವಿ. ರಾಜಶೇಖರನ್ ಅವರು ಉದ್ಘಾಟಿಸಿದ್ದರು. ಈಗಲೂ ಆ ಶಿಲಾಫಲಕ ಅಲ್ಲಿಯೇ ಇದೆ. ಸಂಘಕ್ಕೆ ಸ್ಥಳ ದೊರಕಿದ ಬಳಿಕ ಗ್ರಂಥಾಲಯ ಪ್ರಾರಂಭಿಸಿ, ನಿರಂತರ ಕನ್ನಡ ಚಟುವಟಿಕೆ ನಡೆಸುತ್ತಿದೆ. ಸಂಘಕ್ಕೆ ಸ್ಥಳ ನೀಡಿದಾಗ ಯಾವುದೇ ದಾಖಲೆ ನೀಡಲಿಲ್ಲ. ಈಗ ಅಲ್ಲಿನ ಕನ್ನಡೇತರ ಅಧಿಕಾರಿಗಳು ಪತ್ರ ಬರೆದು, ದಾಖಲೆ ಸಲ್ಲಿಸುವಂತೆ ಪತ್ರ ಬರೆದಿರುವುದು ಕನ್ನಡ ವಿರೋಧಿ ಕೃತ್ಯ' ಎಂದು ದೂರಿದ್ದಾರೆ.

# ತಂತ್ರಜ್ಞಾನ






## ಈಗ ಇ-ಪಾಸ್‌ಪೋರ್ಟ್ ಸಮಯ

ಅಮೃತೇಶ್ವರಿ ಬಿ.

ಪಾಸ್‌ಪೋರ್ಟ್ ಎಂದರೆ ಎಲ್ಲರಿಗೂ ತಿಳಿದಿರುವಂತೆ ಯಾವುದೇ ವ್ಯಕ್ತಿಯು ವಿದೇಶಗಳಿಗೆ ಪ್ರಯಾಣಿಸುವಾಗ ಆತನ ಗುರುತು ಮತ್ತು ನಾಗರಿಕತ್ವದ ಬಗ್ಗೆ ತಿಳಿಸಲು ನಮ್ಮ ಸರ್ಕಾರವು ನೀಡುವ ಒಂದು ಅಧಿಕೃತವಾದ ಗುರುತಿನ ದಾಖಲೆ. ಈವರೆಗೆ ಇದು ಇತರೆ ದಾಖಲೆಪತ್ರಗಳಂತೆ ವ್ಯಕ್ತಿಯ ವೈಯಕ್ತಿಕ ಮಾಹಿತಿಗಳನ್ನೊಗೊಂಡ ಒಂದು ಕಾಗದಪತ್ರದಂತಿತ್ತು. ಆದರೆ ಈಗ ಅದನ್ನು ನವೀಕರಿಸಿ ಎಲೆಕ್ಟ್ರಾನಿಕ್ ರೂಪಕ್ಕೆ ತರಲಾಗಿದೆ.

ಇ-ಮೇಲ್, ಇ-ಬುಕ್, ಇ-ಕಾರ್ಟ್, ಇ-ಗವರ್ನೆನ್ಸ್‌ಗಳಂತೆ ಈಗ ಇ-ಪಾಸ್‌ಪೋರ್ಟ್ ಕೂಡ ಬಂದಾಯ್ತು. ಇ-ಪಾಸ್‌ಪೋರ್ಟ್ ನೋಡಲು ಹೆಚ್ಚೇನು ಭಿನ್ನವಾಗಿಲ್ಲ. ಆದರೆ ಅದರ ಹಿಂಭಾಗದ ಹೊದಿಕೆಯೊಳಗೆ 'ಆರ್‌ಎಫ್‌ಐಡಿ' (ರೇಡಿಯೋ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್) ಚಿಪ್ ಅನ್ನು ಅಳವಡಿಸಲಾಗಿದೆ. ಇದು ವ್ಯಕ್ತಿಯ ಹೆಸರು, ವಿಳಾಸಗಳಂಥ ಮಾಹಿತಿಗಳನ್ನಷ್ಟೆ ಹೊಂದಿರದೆ, ಕೈಬೆರಳುಗಳ ಡಿಜಿಟಲ್ ಗುರುತು ಮತ್ತು ಡಿಜಿಟಲ್ ಭಾವಚಿತ್ರಗಳಂಥ ಬಯೋಮೆಟ್ರಿಕ್ ಮಾಹಿತಿಗಳನ್ನೂ ಒಳಗೊಡಿರುತ್ತದೆ.

ದತ್ತಾಂಶಗಳನ್ನು ಸಂಗ್ರಹಿಸುವ ಸಲುವಾಗಿ ಸ್ಮಾರ್ಟ್‌ಕಾರ್ಡ್ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಆರ್‌ಎಫ್‌ಐಡಿ ತಂತ್ರಜ್ಞಾನ ಎಂದರೆ ರೇಡಿಯೊ ತರಂಗಗಳನ್ನು ಬಳಸಿಕೊಂಡು ಯಾವುದೇ ವಸ್ತುವಿಗೆ ಜೋಡಿಸಿರುವ ಟ್ಯಾಗ್‌ಗಳನ್ನು ಓದಿ, ಅದರಲ್ಲಿರುವ ಮಾಹಿತಿಯನ್ನು ತಿಳಿಸುವ ಒಂದು ವಿಧಾನ. ಇದೇ ತಂತ್ರಜ್ಞಾನವನ್ನೇ ಪಾಸ್‌ಪೋರ್ಟ್ ಅನ್ನು ಡಿಜಿಟಲೀಕರಣಗೊಳಿಸಲು ಬಳಸಿಕೊಳ್ಳಲಾಗಿದೆ. ಇದು ಪಾಸ್‌ಪೋರ್ಟಿನಲ್ಲಿರುವ ಸಂಕೇತಗಳ ರೂಪದಲ್ಲಿರುವ ಮಾಹಿತಿಯನ್ನು ಸ್ಕ್ಯಾನ್ ಮಾಡಿದಾಗ ಬಳಕೆದಾರನ ಮಾಹಿತಿಯನ್ನೆಲ್ಲಾ ಹೊರಹಾಕುತ್ತದೆ. ಪಾಸ್‌ಪೋರ್ಟಿನ ಮುಂಭಾಗದಲ್ಲಿರುವ ಚಿನ್ನದ ಬಣ್ಣದ ಆಯತಾಕೃತಿಯು ಈ ಅಪ್‌ಗ್ರೇಡೇಷನ್ ಅನ್ನು ತಿಳಿಸುತ್ತದೆ. ಸಾಮಾನ್ಯ ಪಾಸ್‌ಪೋರ್ಟಿನಲ್ಲಿ ಇದುವರೆಗೂ ಇರದ ಒಂದು ವಿಶಿಷ್ಟ ವ್ಯವಸ್ಥೆಯನ್ನು ಅಳವಡಿಸಿರುವುದು ಭಾರತೀಯರ ಸುರಕ್ಷತೆಯನ್ನು ಖಾತರಿಪಡಿಸಿ, ಜಾಗತಿಕ ಪ್ರಯಾಣವನ್ನು ಆಧುನೀಕರಣಗೊಳಿಸಲು ಭಾರತ ದೇಶ ತೆಗೆದುಕೊಂಡಿರುವ ಮಹತ್ವದ ಹೆಜ್ಜೆಯಾಗಿದೆ.

### ಇದೇ ಮೊದಲೇನಲ್ಲ

ಈ ತಂತ್ರಜ್ಞಾನವನ್ನು ಬಳಕೆಗೆ ತಂದಿರುವುದು ನಾವೇ ಮೊದಲೇನಲ್ಲ. ಈ ಮೊದಲೇ ಅಮೆರಿಕದಂಥ ದೇಶಗಳು ಈ ತಂತ್ರಜ್ಞಾನವನ್ನು ಅಳವಡಿಸಿದ್ದರೂ ಭಾರತಕ್ಕೆ ಸಾಧ್ಯವಾಗಿರುವುದು 2024ರಿಂದಷ್ಟೆ. 2025ರ ವೇಳೆಗೆ ಇ-ಪಾಸ್‌ಪೋರ್ಟ್ ವಿತರಣೆಯನ್ನು ಪೂರ್ಣಗೊಳಿಸಬೇಕೆನ್ನುವ ಯೋಜನೆ ಭಾರತದ್ದಾಗಿದೆ. ಸುರಕ್ಷತೆ, ವೇಗ ಹಾಗೂ ಜಾಗತಿಕ ಮನ್ನಣೆಗಳೇ ಮುಖ್ಯವಾಗಿರುವ ಇಂದಿನ ದಿನಗಳಲ್ಲಿ ಪಾಸ್‌ಪೋರ್ಟ್, ಗುರುತನ್ನು ದೃಢೀಕರಿಸುವ ಒಂದು ಪತ್ರಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯವನ್ನು ಪಡೆಯುತ್ತಿದೆ; ಇದು ಡಿಜಿಟಲ್ ಗುರುತಿನ ಸಾಧನವಾಗಿದ್ದು, ಸುವ್ಯವಸ್ಥಿತವಾದ ಜಾಗತಿಕ ಮಟ್ಟದ ಪ್ರಯಾಣವನ್ನು ಮಾಡಬಹುದು. ತಮ್ಮ ಗುರುತನ್ನು ವಂಚಿಸಿ, ಸುಳ್ಳು ದಾಖಲೆಪತ್ರಗಳನ್ನು ಸೃಷ್ಟಿಸಿಕೊಂಡು ದೇಶದೊಳಗೆ ನುಗ್ಗುವುದನ್ನು ತಪ್ಪಿಸಲು, ರಾಷ್ಟ್ರೀಯ ಹಾಗೂ ಗಡಿಸುರಕ್ಷತೆಯನ್ನು ಕಾಯ್ದುಕೊಳ್ಳಲು ಭಾರತವು ಪಾಸ್‌ಪೋರ್ಟಿನಲ್ಲಿ ತಂತ್ರಜ್ಞಾನವನ್ನು ಅಳವಡಿಸಿದೆ. ಕೋವಿಡ್ ನಂತರದ ದಿನಗಳಲ್ಲಿ ಪ್ರಯಾಣಿಕರ ಸಂಖ್ಯೆಯನ್ನು ನಿರ್ವಹಿಸಲು ಸುರಕ್ಷತಾ ವಿಧಾನಗಳ ಅನಿವಾರ್ಯತೆಯಿದ್ದು, ಬಯೋಮೆಟ್ರಿಕ್ ಪಾಸ್‌ಪೋರ್ಟುಗಳ ಅಳವಡಿಕೆ ಈ ಅವಶ್ಯಕತೆಯನ್ನು ಪೂರೈಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.


ಪಾಸ್‌ಪೋರ್ಟಿನಲ್ಲಿ ಎಲೆಕ್ಟ್ರಾನಿಕ್ ಚಿಪ್ ಅನ್ನು ಅಳವಡಿಸುವುದರೊಂದಿಗೆ ಭಾರತ ಸರ್ಕಾರ ಇನ್ನೂ ಅನೇಕ ಬದಲಾವಣೆಗಳನ್ನು ತಂದಿವೆ; ಅವುಗಳಲ್ಲಿ ಕೆಲವು ಇಂತಿವೆ. ಅಕ್ಟೋಬರ್ 1, 2023ರಿಂದೀಚೆಗೆ ಹುಟ್ಟಿರುವ ಅರ್ಜಿದಾರರಿಗೆ ಪಾಸ್‌ಪೋರ್ಟನ್ನು ನೀಡಲು ಸರ್ಕಾರದಿಂದ ನೀಡಿದ ಜನನ ಪ್ರಮಾಣಪತ್ರವನ್ನಷ್ಟೆ ಅಂಗೀಕರಿಸಲಾಗುತ್ತದೆ. ದಕ್ಷತೆ, ಗೌಪ್ಯತೆ ಹಾಗೂ ಸ್ಥಿರತೆಯನ್ನು ಸುಧಾರಿಸುವ ಸಲುವಾಗಿ ಪೋಷಕರ ಹೆಸರನ್ನು ಸೇರಿಸುವುದನ್ನೂ ಕೈಬಿಡಲಾಗಿದೆ. ಮನೆಯ ವಿಳಾಸವನ್ನು ಪಾಸ್‌ಪೋರ್ಟಿನ ಹಿಂಭಾಗದಲ್ಲಿ ಮುದ್ರಿಸದೆ ಡಿಜಿಟಲ್ ಸಂಕೇತಗಳ ರೂಪದಲ್ಲಿ ಎನ್‌ಕ್ರಿಪ್ಟ್ ಮಾಡಲಾಗಿದೆ. ಈ ಎಲ್ಲ ಮಾಹಿತಿಗಳನ್ನು ಅಧಿಕೃತ ಸಿಬ್ಬಂದಿಯನ್ನು ಹೊರತುಪಡಿಸಿ ಬೇರಾರೂ ಪಡೆಯಲು ಸಾಧ್ಯವಿಲ್ಲ.

ಈ ತಂತ್ರಜ್ಞಾನದ ಮೂಲಕ ಭಾರತೀಯರಿಗೆ ಡಿಜಿಟಲ್ ಗುರುತು ಎನ್ನುವುದು ಕೇವಲ ಸುರಕ್ಷತೆ ಹಾಗೂ ಸ್ಮಾರ್ಟ್ ಜೀವನಶೈಲಿಯನ್ನು ಪರಿಚಯಿಸದೆ, ತಾಂತ್ರಿಕವಾಗಿಯೂ ಜಾಗತಿಕ ಮನ್ನಣೆಯನ್ನೂ ಗಳಿಸಿದೆ.

ಈ ಬಯೋಮೆಟ್ರಿಕ್ ಪಾಸ್‌ಪೋರ್ಟ್‌ನಿಂದ ಪ್ರಯಾಣಿಕರಿಗೆ ವಿಮಾನನಿಲ್ದಾಣಗಳಲ್ಲಿ ಆಟೋಮೇಟೆಡ್ ಎಲೆಕ್ಟ್ರಾನಿಕ್ ಗೇಟುಗಳ ಮೂಲಕ ಪ್ರವೇಶ ಪಡೆಯುವುದು ಸುಲಭವಾಗುತ್ತದೆ. ಆಗ ಪ್ರವೇಶದ ಪ್ರಕ್ರಿಯೆಗಳೂ ವೇಗವಾಗುತ್ತವೆ. ಸುರಕ್ಷತೆಯೂ ಸುಧಾರಿಸುತ್ತದೆ. ಈ ಪಾಸ್‌ಪೋರ್ಟ್‌ನ ಮತ್ತೊಂದು ಉಪಯೋಗವೆಂದರೆ, ದೇಶದ ಇಮ್ಮಿಗ್ರೇಷನ್ ಠಾಣಗಳಲ್ಲಿ ವ್ಯಕ್ತಿಯ ಪಾಸ್‌ಪೋರ್ಟ್ ಹಾಗೂ ಅದನ್ನು ಪರಿಶೀಲಿಸುವ ಸಿಬ್ಬಂದಿಯ ಭೌತಿಕ ಉಪಸ್ಥಿತಿಯಿಲ್ಲದೇ ಪರಿಶೀಲನಾ ಪ್ರಕ್ರಿಯೆಯನ್ನು ನಡೆಸಬಹುದು. ಇದರಿಂದ ನಿರೀಕ್ಷಣಾ ಅವಧಿಯೂ ತಗ್ಗುತ್ತದೆ. ತಪಾಸಣೆಯೂ ಸ್ವಯಂಚಾಲಿತವಾಗುತ್ತದೆ. ಹೀಗೆ, ಬಯೋಮೆಟ್ರಿಕ್ ಇ-ಪಾಸ್‌ಪೋರ್ಟುಗಳನ್ನು ಬಳಸುವುದರಿಂದ ಭಾರತವೂ ಇಂಟರ್‌ನ್ಯಾಷನಲ್ ಸಿವಿಲ್ ಏವಿಯೇಷನ್ ಆರ್ಗನೈಷನ್‌ನ ನಿಯಮಗಳೊಂದಿಗೆ ಗುರುತಿಸಿಕೊಂಡಾಗುತ್ತದೆ. ಇದು ಭಾರತೀಯ ಪ್ರಯಾಣಿಕರ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ ತಾಂತ್ರಿಕವಾಗಿ ಮುಂದುವರಿದ ದೇಶಗಳ ಸಾಲಿಗೆ ಭಾರತವೂ ಸೇರಿದಂತಾಗುತ್ತದೆ.

ಈ ಬಯೋಮೆಟ್ರಿಕ್ ಪಾಸ್‌ಪೋರ್ಟ್‌ಗಳನ್ನು ಇವನ್ನು ದೀರ್ಘಕಾಲ ಬಾಳಿಕೆ ಬರುವ, ಅಕ್ರಮವನ್ನು ತಡೆಹಿಡಿಯುವ ಪಾಲಿಕಾರ್ಬೋನೇಟ್ ವಸ್ತುಗಳಿಂದ ಮಾಡಲಾಗಿದೆ. ಚಿತ್ರಗಳನ್ನು ನಕಲಿಸಲಾಗದಂತೆ ಡಿಜಿಟಲ್ ಭಾವಚಿತ್ರದೊಳಗೆ ಡಿಜಿಟಲ್ ವಾಟರ್ ಮಾರ್ಕಿಂಗ್ ತಂತ್ರಜ್ಞಾನವನ್ನೂ ಹುದುಗಿಸಿದ್ದಾರೆ. ಇವುಗಳನ್ನು ಅಕ್ರಮವಾಗಿ ಬಳಸಿಕೊಳ್ಳಲಾಗದಂತೆ ಹೆಚ್ಚಿನ ರಕ್ಷಣೆಗಾಗಿ ಲೇಸರ್ ಜನರೇಟೆಡ್ ವಾಟರ್‌ಮಾರ್ಕ್‌ಗಳನ್ನೂ ಅಳವಡಿಸಿದ್ದಾರೆ. ಬರಿಗಣ್ಣಿನಿಂದ ಓದಲಾಗದಂಥ, ದೊಡ್ಡದು ಮಾಡಿ ನೋಡಿದಾಗ ಮಾತ್ರ ಕಾಣುವ (ಮ್ಯಾಗ್ನಿಫಿಕೇಶನ್) ಮೈಕ್ರೋಪ್ರಿಂಟಿಂಗ್ ತಂತ್ರಗಳನ್ನೂ ಸೇರಿಸಿರುವುದರಿಂದ ನಕಲು ಮಾಡುವುದೂ ಸಾಧ್ಯವಿಲ್ಲ; ನಿರ್ದಿಷ್ಟ ಬೆಳಕಿನಲ್ಲಿ ಮಾತ್ರ ಇದನ್ನು ಪರಿಶೀಲಿಸಬಹುದಾಗಿದೆ. ಹೀಗೆ ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟ, ಡಿಜಿಟಲೀಕರಿಸಿದ ಪಾಸ್‌ಪೋರ್ಟನ್ನು ನಮ್ಮ ದೇಶ ಈಗ ಬಿಡುಗಡೆ ಮಾಡಿದೆ.

ಪಾಸ್‌ಪೋರ್ಟ್ ಸೇವಾ ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಿ ನವೀಕರಿಸಿದ ಬಯೋಮೆಟ್ರಿಕ್ ಇ-ಪಾಸ್ ಪೋರ್ಟುಗಳನ್ನು ಪಡೆಯಬಹುದು. ಪಾಸ್‌ಪೋರ್ಟ್ ಸೇವಾ ಪೋರ್ಟಲ್‌ನಲ್ಲಿ ಖಾತೆ ತೆರೆದು, ಅರ್ಜಿ ಸಲ್ಲಿಸಿ, ಹಣ ಪಾವತಿಸಿ, ಅಪಾಯಿಂಟ್ಮೆಂಟ್ ದಿನಾಂಕವನ್ನು ಬುಕ್ ಮಾಡಿದರೆ ಪ್ರಕ್ರಿಯೆ ಮುಗಿಯುತ್ತದೆ. ಭಾರತದಲ್ಲಿ ಬಯೋಮೆಟ್ರಿಕ್ ಪಾಸ್‌ಪೋರ್ಟು ಪ್ರಾರಂಭವಷ್ಟೆ. ಮುಂದೆ, ಮೊಬೈಲ್ ಪಾಸ್‌ಪೋರ್ಟ್ ವ್ಯಾಲೆಟ್, ಬ್ಲಾಕ್ ಚೈನ್ ತಂತ್ರಜ್ಞಾನಾಧಾರಿತ ಗುರುತು ಪರಿಶೀಲನಾ ವಿಧಾನಗಳನ್ನೂ ನಾವು ನಿರೀಕ್ಷಿಸಬಹುದು. ❖





## 'ಎಐ' ಕಾಲದ ಜಾಹೀರಾತು ಜಂಜಡ

ಕೃಷ್ಣ ಭಟ್

**ಗೂಗಲ್‌ಸರ್ಚ್‌ನಲ್ಲಿ** ಜನರು ಹುಡುಕಾಟ ನಡೆಸಿ, ಅಲ್ಲಿಂದ ಜನರು ಬೇರೆ ಬೇರೆ ವೆಬ್‌ಸೈಟ್‌ಗಳಿಗೆ ಹೋಗಿ ಅಲ್ಲಿ ಮಾಡುವ ಖರೀದಿ ಅಥವಾ ಇನ್ನಿತರ ಚಟುವಟಿಕೆಗಳು ಈವರೆಗೆ ಅಪಾರ ಪ್ರಮಾಣದ ಡೇಟಾ ಸೃಷ್ಟಿ ಮಾಡುತ್ತಿತ್ತು. ಅದರಿಂದ ಗೂಗಲ್ ಹಾಗೂ ಇ-ಕಾಮರ್ಸ್ ಕಂಪನಿಗಳು ಅಪಾರ ಲಾಭ ಮಾಡಿಕೊಳ್ಳುತ್ತಿದ್ದವು. ಇಡೀ ಇಂಟರ್‌ನೆಟ್ ಉದ್ಯಮಕ್ಕೆ ಇದರಿಂದ ಲಾಭವಾಗುತ್ತಿತ್ತು. ಗೂಗಲ್ ನಮಗೆ ಉಚಿತವಾಗಿ ಒದಗಿಸಿಕೊಡುವ ಗೂಗಲ್ ಸರ್ಚ್ ನಮ್ಮ ಇಡೀ ನಡೆ–ನುಡಿಯನ್ನು ಗಮನಿಸಿ, ವಿಶ್ಲೇಷಿಸುತ್ತಿತ್ತು. ಆ ಡೇಟಾವನ್ನು ಜಾಹೀರಾತುದಾರರಿಗೆ ವಿವಿಧ ರೂಪದಲ್ಲಿ ಕೊಡುತ್ತಿತ್ತು. ಆದರೆ, ಈಗ ಈ ಇಡೀ ವ್ಯವಸ್ಥೆ ಬದಲಾಗಿದೆ!

ಜನರು ಎಐ ಮೋಡ್‌ಗೆ ಬದಲಾಗುತ್ತಿದ್ದಾರೆ. ಗೂಗಲ್ ಕೂಡ 'ಎಐ ಓವರ್‌ವ್ಯೂ' ಶುರು ಮಾಡಿದೆ. ಅಂದರೆ, ನಾವು ಏನನ್ನಾದರೂ ಹುಡುಕಾಟ ನಡೆಸಿದರೆ, ಮೊದಲು ನಮ್ಮ ಹುಡುಕಾಟದ ಫಲಿತಾಂಶ ಸಾರಾಂಶರೂಪದಲ್ಲಿ ಬಂದು ಕುಳಿತಿರುತ್ತದೆ. ಆಮೇಲೆ, ಅದಕ್ಕೆ ಸಂಬಂಧಿಸಿದ ವೆಬ್‌ಸೈಟ್‌ಗಳ ಲಿಂಕ್‌ಗಳು ಕಾಣಿಸಿಕೊಳ್ಳುತ್ತವೆ. ಮೊದಲು ಈ ವೆಬ್‌ಸೈಟ್‌ಗಳೇ ಮೊದಲು ಬರುತ್ತಿದ್ದವು. ನಾವು ಈ ವೆಬ್‌ಸೈಟ್ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ, ಅದನ್ನು ಆಧರಿಸಿ ಇಡೀ ಇಂಟರ್‌ನೆಟ್ ಜಾಹೀರಾತು ಉದ್ಯಮ ನಡೆಯುತ್ತಿತ್ತು. ಈಗ ಮೊದಲು ಎಐ ವಿವರಣೆ ಕೊಡುವುದರಿಂದ ನಾವು ವೆಬ್‌ಸೈಟ್ ಲಿಂಕ್ ಕ್ಲಿಕ್ ಮಾಡುವ ಗೋಜಿಗೆ ಹೋಗುವುದಿಲ್ಲ. ಬದಲಿಗೆ, ಎಐ ಸಾರಾಂಶ ರೂಪದಲ್ಲಿ ಕೊಟ್ಟ ಮಾಹಿತಿಯನ್ನಷ್ಟೇ ಓದಿಕೊಂಡು ಹೋಗುತ್ತೇವೆ. ಇನ್ನೂ ಮುಂದುವರಿದು, ಹೊಸ ತಲೆಮಾರಿನ ಜನರಿಗಾಗಿ ಎಐ ಮೋಡ್ ಅನ್ನು ಆರಂಭಿಸುತ್ತೇವೆ ಎಂದು ಗೂಗಲ್ ಹೇಳಿಕೊಂಡಿದೆ. ಅಂದರೆ, ಈಗ ವಿವಿಧ ಟ್ಯಾಬ್‌ಗಳಿಗೂ ಮೊದಲೇ 'ಎಐ ಮೋಡ್' ಎಂಬ ಟ್ಯಾಬ್ ಇರುತ್ತದೆ. ಅಲ್ಲೇ ನಮ್ಮ ಹುಡುಕಾಟದ ಫಲಿತಾಂಶ ಸಿಗುತ್ತದೆ. ಅಲ್ಲದೆ, ಅಲ್ಲಿ ವೆಬ್‌ಸೈಟ್‌ಗಳ ಉಲ್ಲೇಖ ಇರುವುದಿಲ್ಲ. ಬರಿ ಮಾಹಿತಿಯಷ್ಟೇ ಇರುತ್ತದೆ. ಅಲ್ಲಿಂದ ನಾವು ಇನ್ನಷ್ಟು ಮಾಹಿತಿಬೇಕೆಂದಾದರೆ, ಲಿಂಕ್ ಕ್ಲಿಕ್ ಮಾಡಿ ಬೇರೆ ವೆಬ್‌ಸೈಟ್‌ಗೆ ಹೋಗುವ ಪ್ರಮೇಯ ಇರುವುದಿಲ್ಲ. ಎಐ ಕೊಟ್ಟ ಮಾಹಿತಿಯನ್ನು ಆಧರಿಸಿ ನಾವು ಮುಂದೆ ಏನು ಮಾಡಿದೆವು ಎಂಬುದು ಗೂಗಲ್ ಆಗಲೀ ಅಥವಾ ಇತರ ಸರ್ಚ್ ಇಂಜಿನ್‌ಗಳಿಗೆ ಲೆಕ್ಕಕ್ಕೆ ಸಿಗುವುದಿಲ್ಲ. ನಾವು ನೇರವಾಗಿ ಇ-ಕಾಮರ್ಸ್ ವೆಬ್‌ಸೈಟ್‌ಗೆ ಹೋಗಿ ಉತ್ಪನ್ನ ಖರೀದಿ ಮಾಡಿರಬಹುದು. ಅಥವಾ ಎಲೆಕ್ಟ್ರಿಕ್ ಶಾಪ್‌ಗೆ ಹೋಗಿ ಏನನ್ನೋ ಖರೀದಿ ಮಾಡಿರಬಹುದು. ಇಲ್ಲಿ ಹುಡುಕಾಟ ಮತ್ತು ನಮ್ಮ ವರ್ತನೆಯ ಮಧ್ಯೆ ಲಿಂಕ್ ಅಷ್ಟು ನಿಖರವಾಗಿ ಸಿಗುವುದಿಲ್ಲ.

ಈ ಎಐ ಸರ್ಚ್ ಎಂಬುದು ಶೇ 10ರಷ್ಟು ದರದಲ್ಲಿ ಏರಿಕೆ ಕಾಣುತ್ತಿದೆಯಂತೆ. ಬಹುಶಃ ಮುಂದಿನ ದಿನಗಳಲ್ಲಿ ಈ ವೇಗ ಇನ್ನಷ್ಟು ಏರಿಕೆಯಾಗಬಹುದು. ಜನ ಸಾಂಪ್ರದಾಯಿಕ ಸರ್ಚ್ ಎಂಜಿನ್‌ಗಳನ್ನೇ ಪೂರ್ತಿ ಕೈಬಿಟ್ಟು, ಸೀದಾ ಎಐ ಬಳಿಯೇ ಮಾಹಿತಿ ಕೇಳಬಹುದು. ಬ್ರೌಸರ್ ತೆರೆಯುವ ಸನ್ನಿವೇಶವೇ ಕಡಿಮೆಯಾಗಬಹುದು!

ಹಾಗಾದರೆ, ಜಾಹೀರಾತು ಕೊಡುವವರಿಗೆ ನಮ್ಮ ಡೇಟಾ, ನಮ್ಮ ಕುಕೀಸ್ ಎಲ್ಲಿಂದ ಸಿಗಬೇಕು? ಅದನ್ನು ಅವರು ವಿಶ್ಲೇಷಣೆ ಮಾಡಿ, ನಮ್ಮ ಆಸಕ್ತಿ-ಅನಾಸಕ್ತಿಗಳನ್ನು ಅಧ್ಯಯನ ಮಾಡಿ ಅದನ್ನು ಅವರು ತಮ್ಮ ಉತ್ಪನ್ನಗಳಲ್ಲಿ ಅಳವಡಿಸಿಕೊಳ್ಳುವುದು ಹೇಗೆ? ಅದರಿಂದ ನೇರವಾಗಿಯೂ ಪರೋಕ್ಷವಾಗಿಯೂ ಹಣ ಮಾಡಿಕೊಳ್ಳುವುದು ಹೇಗೆ?

ನಾವು ಈಗಂತೂ ಏನೋ ಒಂದು ವಿಷಯದ ಬಗ್ಗೆ ಹುಡುಕಿದರೆ, ಮರುಕ್ಷಣದಿಂದಲೇ ಯಾವ ವೆಬ್‌ಸೈಟ್‌ಗೆ ಹೋದರೂ, ಅದೇ ವಿಷಯದ ಕುರಿತ ಜಾಹೀರಾತು ಕಾಣಿಸುತ್ತದೆ. ಇ-ಕಾಮರ್ಸ್‌ನಲ್ಲಿ ಅದೇ ಉತ್ಪನ್ನಗಳು ಕಾಣಲು ಶುರುವಾಗುತ್ತದೆ. ಆದರೆ, ಮುಂದಿನ ದಿನಗಳಲ್ಲಿ ಈ ಡೇಟಾ ಸಿಗದೇ ಇದ್ದರೆ ಕಂಪನಿಗಳು ಜನರ ವಿಶ್ಲೇಷಣೆ ಮಾಡುವುದು ಹೇಗೆ? 'ಎಸ್‌ಇಒ' ಅಂದರೆ, ಸರ್ಚ್ ಇಂಜಿನ್ ಆಪ್ಟಿಮೈಸೇಶನ್ ಕಥೆಯೇನು? ಎಸ್‌ಇಒ ದಿಕ್ಕು ಬದಲಾದರೆ, ಇಡೀ ಇಂಟರ್‌ನೆಟ್ ಆಧರಿತ ಜಾಹೀರಾತು, ಉತ್ಪನ್ನ ಮತ್ತು ಸೇವಾ ವಲಯವೇ ಬುಡಮೇಲಾಗುತ್ತದೆಯಲ್ಲ!

ಈ ವಿಷಯದಲ್ಲಿ ಏನು ಮಾಡಬೇಕು ಎಂದು ಬಹುಶಃ ಸರ್ಚ್ ಇಂಜಿನ್ ಸಂಸ್ಥೆಗಳಿಗೂ ಗೊತ್ತಿರುವ ಹಾಗಿಲ್ಲ. ಆದರೆ, ಸರ್ಚ್ ಇಂಜಿನ್ ಸಂಸ್ಥೆಗಳಿಗೆ ನಮ್ಮಂತಹ ಹುಡುಕಾಟ ಮಾಡುವವರೇ ಆದ್ಯತೆ. ಹೀಗಾಗಿ, ಅವರನ್ನು ಸಂತೃಪ್ತಿಪಡಿಸಿ, ಅವರು ಉಳಿದುಕೊಂಡರೆ, ಮುಂದೆ ಆದಾಯದ ದಾರಿಯನ್ನು ಹುಡುಕಬಹುದು ಎಂದು ಅವು ಯೋಚಿಸುತ್ತಿವೆ. ನಾವು ಯಾವುದಾದರೂ ವಿಷಯದ ಬಗ್ಗೆ ಹುಡುಕಾಟ ನಡೆಸಿದಾಗ, ಬ್ರ್ಯಾಂಡ್‌ಗಳ ಮಾಹಿತಿಯನ್ನೂ ಅದು ಕೊಡಬಹುದು. ಉದಾಹರಣೆಗೆ, ನಾವು ಕೂದಲಿಗೆ ಸಂಬಂಧಿಸಿದ ಏನನ್ನೋ ಹುಡುಕಿದರೆ, ಕೂದಲು ಉದುರುವ ಎಣ್ಣೆಯ ಜಾಹೀರಾತಿನ ರೂಪದಲ್ಲಿ ಕೆಲವು ಬ್ರ್ಯಾಂಡ್‌ಗಳ ಹೆಸರು ಹಾಗೂ ಅದರ ಮಾಹಿತಿಯನ್ನೂ ಈ ಎಐ ಕೊಡಬಹುದು. ಅದಕ್ಕಾಗಿ ಎಐ ಏಜೆಂಟ್‌ಗಳನ್ನು ತನ್ನ ಎಐ ಮೋಡ್‌ನ ಒಳಗೇ ಕುಳ್ಳಿರಿಸಬಹುದು ಅಥವಾ ಬ್ರ್ಯಾಂಡ್‌ಗಳ ಹೆಸರನ್ನು ಎಐ ತನ್ನ ಉತ್ತರದಲ್ಲಿ ಸೇರಿಸುವುದಕ್ಕೆಂದು ಬ್ರ್ಯಾಂಡ್‌ಗಳಿಗೆ ಇಂತಿಷ್ಟು ದರದಲ್ಲಿ ಪ್ಯಾಕೇಜ್ ನೀಡಬಹುದು.

ದಶಕಗಳ ಹಿಂದೆ ಸರ್ಚ್ ಇಂಜಿನ್ ಎಂಬ ಪರಿಕಲ್ಪನೆಯೇ ಗೊತ್ತಿಲ್ಲದಿದ್ದಾಗ ಅದನ್ನೊಂದು ಬ್ರ್ಯಾಂಡ್ ಮಾಡಿ ಗೂಗಲ್ ಗೆದ್ದಿತ್ತು. ಈಗ, ಈ ಸರ್ಚ್ ಎಂಜಿನ್ ಎಂಬ ಪರಿಕಲ್ಪನೆಯೇ ಕಳೆಗುಂದುತ್ತಿದೆ. ಆದರೆ, ಅದರ ಮೇಲೆ ನಿಂತಿದ್ದ ಜಾಹೀರಾತು ವಲಯಕ್ಕೆ ಹೊಸ ಆಧಾರ ಎಲ್ಲಿ ಸಿಗುತ್ತದೆ ಎಂಬುದು ಕುತೂಹಲದ ಸಂಗತಿ. ❖

## ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ -ವಿಜ್ಞಾನ

### ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

33. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ (ಹಿಂದಿನ ಸಂಚಿಕೆಯಿಂದ)

**12) ಸತು, ಕಬ್ಬಿಣ, ಮೆಗ್ನೇಷಿಯಂ ಹಾಗೂ ತಾಮ್ರದ ಚೂರುಗಳನ್ನು A , B, C ಮತ್ತು D ಎಂಬ ಪ್ರನಾಳಗಳಲ್ಲಿ ಕ್ರಮವಾಗಿ ತೆಗೆದುಕೊಳ್ಳಲಾಗಿದೆ, ಈ ಪ್ರನಾಳಗಳಿಗೆ ಒಂದೇ ಪ್ರಮಾಣದ ಫೆರಸ್ ಸಲ್ಫೇಟ್ ದ್ರಾವಣವನ್ನು ಸೇರಿಸಲಾಗಿದೆ ಯಾವ ಪ್ರನಾಳದಲ್ಲಿ ರಸಾಯನಿಕ ಕ್ರಿಯೆ ನಡೆಯುತ್ತದೆ? ಏಕೆ? ಇಲ್ಲಿ ನಡೆಯುವ ಕ್ರಿಯೆಗಳಿಗೆ ರಾಸಾಯನಿಕ ಸಮೀಕರಣ ಬರೆಯಿರಿ (ಸೆಪ್ಟೆಂಬರ್– 2022)**

ಉತ್ತರ:– A ಮತ್ತು C ಪ್ರನಾಳಗಳಲ್ಲಿ ರಾಸಾಯನಿಕ ಕ್ರಿಯೆ ನಡೆಯುತ್ತದೆ. ಏಕೆಂದರೆ ಸತು ಮತ್ತು ಮೆಗ್ನೇಷಿಯಂ ಕಬ್ಬಿಣಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ, ಅಥವಾ ಲೋಹಗಳ ಕ್ರಿಯಾಶೀಲತೆಯ ಸರಣಿಯಲ್ಲು ಸತು ಮತ್ತು ಮೆಗ್ನೇಷಿಯಂ ಕಬ್ಬಿಣಕ್ಕಿಂತ ಮೇಲ್ಭಾಗದಲ್ಲಿ ಕಂಡು ಬರುತ್ತದೆ.

ಸತು+ ಕಬ್ಬಿಣದ ಸಲ್ಫೇಟ್ →ಸತುವಿನ ಸಲ್ಫೇಟ್ + ಕಬ್ಬಿಣ

**13) ಒಂದು ಪ್ರನಾಳದಲ್ಲಿರುವ 5 *ml* ಸೋಡಿಯಂ ಸಲ್ಫೇಟ್ ದ್ರಾವಣಕ್ಕೆ ಅಷ್ಟೇ ಪ್ರಮಾಣದ ಬೇರಿಯಂ ಕ್ಲೋರೈಡ್ ದ್ರಾವಣ ಸೇರಿಸಿದಾಗ**

**(1) ಉತ್ಪತ್ತಿಯಾದ ಜಲವಿಲೀನಗೊಳ್ಳದ ಬಿಳಿಯ ಪ್ರಕ್ಷೇಪ ಯಾವುದು?**

**(2) ಬಿಳಿಯ ಪ್ರಕ್ಷೇಪ ಉಂಟಾಗಲು ಕಾರಣವಾದ ಅಯಾನುಗಳನ್ನು ಹೆಸರಿಸಿ**

**(3) ಇಲ್ಲಿ ಜರುಗಿದ ರಾಸಾಯನಿಕ ಕ್ರಿಯೆಯು ವಿಧವನ್ನು ತಿಳಿಸಿ**

ಉತ್ತರ;– (1) $BaSO_4$ ಬೇರಿಯಂ ಸಲ್ಫೇಟ್

(2) $SO^{2-}_4$ ಸಲ್ಫೇಟ್ ರ್‍ಯಾಡಿಕಲ್,

$Ba^{2+}$ ಬೇರಿಯಂ ಅಯಾನು

(3) ದ್ವಿಸ್ಥಾನಪಲ್ಲಟ ಕ್ರಿಯೆ/ ಪ್ರಕ್ಷೇಪನ ಕ್ರಿಯೆ

**14) ಬೆಳ್ಳಿಯ ವಸ್ತುಗಳನ್ನು ಕೆಲವು ದಿನ ಗಾಳಿಗೆ ತೆರೆದಿಟ್ಟಾಗ ಕಪ್ಪು ಬಣ್ಣಕ್ಕೆ ತಿರುಗುತ್ತದೆ, ಮತ್ತೆ ಟೂತ್ ಪೇಸ್ಟಿನಿಂದ ಉಜ್ಜಿದಾಗ ಮೊದಲಿನಂತೆ ಹೊಳೆಯ ತೊಡಗುತ್ತದೆ.**

**(1) ಬೆಳ್ಳಿಯ ವಸ್ತುಗಳು ಏಕೆ ? ಈ ವಿದ್ಯಮಾನವನ್ನು ಹೆಸರಿಸಿ.**

**(2) ಉಂಟಾದ ಆ ಕಪ್ಪು ವಸ್ತುವನ್ನು ಹೆಸರಿಸಿ ಮತ್ತು ಅದರ ಅಣುಸೂತ್ರವನ್ನು ಬರೆಯಿರಿ.**

ಉತ್ತರ:– (1) ಬೆಳ್ಳಿಯ ವಸ್ತುಗಳು ಗಾಳಿಯಲ್ಲಿ $H_2S$ ನಂತಹ ಸಲ್ಫರ್ ಸಂಯುಕ್ತಗಳೊಂದಿಗೆ ವರ್ತಿಸುತ್ತದೆ, ಈ ವಿದ್ಯಮಾನವನ್ನು ನಶಿಸುವಿಕೆ ಎನ್ನುವರು, (ಅಥವಾ ಈ ಸಂದರ್ಭದಲ್ಲಿ ಬೆಳ್ಳಿಯ ನಶಿಸುವಿಕೆ ಎನ್ನಬಹುದು)

(2) ಆ ಕಪ್ಪು ವಸ್ತುವು ಬೆಳ್ಳೆಯ ಕ್ಷಿಣಿಸುವಿಕೆ ಸಲ್ಫೇಟ್ ($Ag_2S$)

**15) ಕಬ್ಬಿಣದ ಮೊಳೆಯನ್ನು ತಾಮ್ರ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದಾಗ ಜರಗುವ ರಾಸಾಯನಿಕ ಕ್ರಿಯೆಯ ವಿಧ ಯಾವುದು? ಏಕೆ? ರಾಸಾಯನಿಕ ಕ್ರಿಯೆಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ. (ಏಪ್ರಿಲ್2022)**

ಉತ್ತರ:– ಕಬ್ಬಿಣದ ಮೊಳೆಯನ್ನು ತಾಮ್ರ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದಾಗ ಜರಗುವ ರಾಸಾಯನಿಕ ಕ್ರಿಯೆಯ ಹೆಸರು **ರಾಸಾಯನಿಕ ಸ್ಥಾನಪಲ್ಲಟ,** ಏಕೆಂದರೆ ಹೆಚ್ಚು ಕ್ರಿಯಾಪಟುವಾಗಿರುವ ಕಬ್ಬಿಣವು ತಾಮ್ರದ ಸಲ್ಫೇಟ್ ದ್ರಾವಣದಿಂದ ತಾಮ್ರವನ್ನು ಸ್ಥಾನಪಲ್ಲಟಗೊಳಿಸಿದೆ.

$Fe + CuSO_4 \rightarrow FeSO_4 + Cu$,

**16) ಅಲ್ಯುಮಿನಿಯಂ ಸಲ್ಫೇಟ್‌ನೊಂದಿಗೆ ಬೇರಿಯಂ ಕ್ಲೋರೈಡ್ ವರ್ತನೆಯು ಯಾವ ವಿಧದ ರಾಸಾಯನಿಕ ಕ್ರಿಯೆಗೆ ಉದಾಹರಣೆಯಾಗಿದೆ? ಏಕೆ? ಈ ಕ್ರಿಯೆಗೆ ಸರಿದೂಗಿಸುವ ರಾಸಾಯನಿಕ ಸಮೀಕರಣವನ್ನು ಬರೆಯಿರಿ. (ಮಾರ್ಚ್–2020)**

ಉತ್ತರ:– ಇದು ದ್ವಿಸ್ಥಾನಪಲ್ಲಟ ಕ್ರಿಯೆಗೆ ಉದಾಹರಣೆಯಾಗಿದೆ/ಪ್ರಕ್ಷೇಪನ ಕ್ರಿಯೆಗೆ ಉದಾಹಣೆಯಾಗಿದೆ.

ಪ್ರತಿವರ್ತಕಗಳ ನಡುವೆ ಆಯಾನುಗಳ ವಿನಿಮಯ ನಡೆಯುವುದರಿಂದ / ಬೇರಿಯಂ ಸಲ್ಫೇಟ್‌ನ ಬಿಳಿಯ ಬಣ್ಣದ ಪ್ರಕ್ಷೇಪ ಉಂಟಾಗುತ್ತದೆ.

$3\ BaCl_2 + Al_2\ (SO_4)_3 \rightarrow 3BaSO_4 + 22AlCL_3$

**17) ಘನಸ್ಥಿತಿಯಲ್ಲಿರುವ ಕ್ಯಾಲ್ಸಿಯಂ ಆಕ್ಸೈಡ್ ಅನ್ನು ಒಂದು ಪಾತ್ರೆಯಲ್ಲಿ ತೆಗೆದುಕೊಂಡು ಅದಕ್ಕೆ ನಿಧಾನವಾಗಿ ನೀರನ್ನು ಸೇರಿಸಲಾಗಿದೆ.**

**ಎ) ಗಮನಿಸಿದ ಅಂಶಗಳನ್ನು ಬರೆಯಿರಿ**

**ಬಿ) ಉಂಟಾದ ಉತ್ಪನ್ನದ ರಾಸಾಯನಿಕ ಸೂತ್ರ ಬರೆಯಿರಿ**

**ಸಿ) ಸುಣ್ಣದ ತಿಳಿ ನೀರಿನ ಮೂಲಕ ಕಾರ್ಬನ್ ಡೈ ಆಕ್ಸೈಡ್ ಅನಿಲವನ್ನು ಊದಿದಾಗ ಏನಾಗುತ್ತದೆ?**

**(1) ಕಡಿಮೆ ಪ್ರಮಾಣದಲ್ಲಿ**

**(2) ಅಧಿಕ ಪ್ರಮಾಣದಲ್ಲಿ**

**ಡಿ) ಕಬ್ಬಿಣದ ವಸ್ತುಗಳ ಮೇಲೆ ಬಣ್ಣವನ್ನು ಲೇಪಿಸುವುದು ಏಕೆ?**

ಉತ್ತರ:–(ಎ)(1) ಕ್ಯಾಲ್ಸಿಯಂ ಆಕ್ಸೈಡ್ ನೀರಿನೊಂದಿಗೆ ತೀವ್ರವಾಗಿ ವರ್ತಿಸಿ ಅಧಿಕ ಪ್ರಮಾಣದ ಉಷ್ಣ ಬಿಡುಗಡೆ ಮಾಡುತ್ತದೆ

(ಬಿ) ಕ್ಯಾಲ್ಸಿಯಂ ಹೈಡ್ರಾಕ್ಸೈಡ್ (ಅರಳಿದ ಸುಣ್ಣ) ಅಣುಸೂತ್ರ $Ca(OH_{2+})$

(ಸಿ) ಕಡಿಮೆ ಪ್ರಮಾಣದಲ್ಲಿ ದ್ರಾವಣವು ಹಾಲಿನ ಬಣ್ಣಕ್ಕೆ ತಿರುಗುತ್ತದೆ, ಕಾರಣ ಕ್ಯಾಲ್ಸಿಯಂ ಕಾರ್ಬೋನೇಟ್ ಉಂಟಾಗುತ್ತದೆ.

$Ca(OH)_2 + CO_2 \rightarrow CaCO_2 + H_2O$

ಡಿ) ಅಧಿಕ ಪ್ರಮಾಣದಲ್ಲಿ ಹಾಲಿನ ಬಿಳಿ ಬಣ್ಣವು ಇಲ್ಲವಾಗಿ ದ್ರಾವಣವು ಪಾರದರ್ಶಕವಾಗುತ್ತದೆ, ಕಾರಣ ಕ್ಯಾಲ್ಸಿಯಂ ಕಾರ್ಬೋನೇಟ್, ಕ್ಯಾಲ್ಸಿಯಂ ಹೈಡ್ರೋಜನ್ ಕಾರ್ಬೋನೇಟ್ ಆಗಿ ಬದಲಾಗುತ್ತದೆ.

$CaCO_2 + H_2O + CO_2 \rightarrow Ca(OH_3)_2$

PUC - CHEMISTRY

### *Types of Solutions*

**24. What are azcotropes or azeotropic mixtures? Give an example.**

**Ans:** Binary liquid mixtures having the same composition in liquid and vapour phase and boil at constant temperature are called azeotropic mixtures. A classic example is a mixture of ethanol and water at a specific ratio (95.63% ethanol and 4.37% water), which boils at a constant temperature of 78.2°C

**Note**: In azeotropic mixtures the components cannot be separated by fractional distillation

**25. Name the types of azeotropes or azeotropic mixtures.**

**Ans:** Azeotropic mixtures are of two types: (i) Minimum boiling azeotropes (ii) Maximum boiling azte

**26. What are mininsum boiling azeotropes? Give an example.**

**Ans:** The solutions which show large positive deviation from Raoult's law are called minimum boiling azeotropea. They boil at lower temperature than the boiling point of the components.

Example: 95% Ethylalcohol and 5% water by volume (rectified spirit). This mixture boils at 78.15°C Which is lower than that of pure ethyl alcohol (78.5°C pure water (100°C)

**27. What are maximum boiling azeotropes? Give an examples.**

**Ans:** Solutions which shows the large negative deviations from Raoult's law are called maximen boiling azeotropes. Example: 68% nitric acid and 32% water by mass with a boiling point of 393.5K

*******************

### *ELECTROCHEMISTRY*

**1. What is electrochemistry?**

**Ans:-** Electrochemistry is the branch of chemistry which deals with the interconversions of chemical and electrical energies and study of the behaviour of electrolytes.

**2. What are electrolytes?**

**Ans:-** A compound which conducts electricity in the molten state and in the aqueous solution is called an electrolyte. Eg:- NaCl, $CuSO_4$, HCl, $H_2SO_4$, NaOH, $CH_3COOH$ etc.,

**3. What are non- electrolytes?**

**Ans:-** A compound which does not conduct electricity in the molten state and in the aqueous solution is called an electrolyte. Eg:- Urea, glucose, benzene, ethyl alcohol etc.,

**4. What are electrolytic cells?**

**Ans:-** The electrolytic cells are the cells that convert electrical energy into the chemical energy.

**5. State Faraday's I law of electrolysis.**

**Ans:- Faraday's I law of electrolysis states that -** The amount of chemical reaction which occurs at any electrode during electrolysis by a current is proportional to the quantity of electricity passed through the electrolyte (solution or melt).

**6. State Faraday's II law of electrolysis.**

**Ans:-Faraday's II law of electrolysis states that -**

**The amounts of different substances liberated by the same quantity of electricity passing through the electrolytic solution are proportional to their chemical equivalent weights.**

**7. What is a Galvanic cell?**

**Ans:-** A device in which electricity is produced using a spontaneous chemical reaction involving oxidation and reduction is called an electrochemical or Galvanic cell *Eg*:- Daniel cell, Leclanche cell etc.,

**8. What are conductors?**

**Ans:-** The substances which conducts electrical charges is called a conductor.

*Eg*:- Metals like copper, silver and the solutions of common salt, hydrochloric acid etc.,

**9. What are insulators?**

**Ans:-** The substances that do not allow electricity to pass through them are called the insulators.

*Eg*:- Glass, rubber, alcohol etc.,

**10. Mention the types of conductors.**

**Ans:-** The two types of conductors are –

(a) metallic conductors

(b) electrolytic conductors

**11. What are metallic conductors?**

**Ans:-** Metallic conductors are the metals that conduct electricity by allowing the flow of electrons through them. They are also called as the electronic conductors. *Eg*:- Copper, Aluminium.

**12. Name a non-metallic conductor.**

**Ans:-** Graphite.

**13. What is corrosion?**

**Ans:-** The loss of the metal in the form of its compounds due to chemical attack by the constituents of the environment on a metal is called corrosion.

**14. Give some examples for corrosion.**

**Ans**:- Rusting of iron, tarnishing of silver, tailing of mercury are some examples for corrosion.

**15. What is rusting?**

**Ans:-** The phenomenon wherein the iron exposed to moist air for a long time develops a brown coating of hydrated ferric oxide ($Fe_2O_3.\ 3H_2O$) on its surface is called as rusting.

**16. Mention some of the methods of preventing corrosion.**

**Ans:-** The different methods of prevention of corrosion are –

(1) Barrier protection

(2) Sacrificial protection

(3) Cathode protection

**17. Give the chemical formula of rust.**

**Ans:-** The chemical formula of rust is $Fe_2O_3 . x H_2O$

**18. How does the salt water accelerate corrosion?**

**Ans:-** The salt water increases the electrical conduction of the electrolyte solution formed on the metal surface, hence it accelerates corrosion. ***(Contd)***

ರಕ್ಷಣಾ ಸಚಿವ ರಾಜನಾಥ ಸಿಂಗ್ ಒಪ್ಪಿಗೆ • ಯೋಜನೆ ಜಾರಿಗೊಳಿಸಲಿರುವ ಎಡಿಎ

# ಯುದ್ಧ ವಿಮಾನ ತಯಾರಿಕೆಗೆ ಚಾಲನೆ

ನವದೆಹಲಿ (ಪಿಟಿಐ): ಸ್ವದೇಶಿ ನಿರ್ಮಿತ ಐದನೇ ತಲೆಮಾರಿನ ಯುದ್ಧ ವಿಮಾನಗಳ ತಯಾರಿಕೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಂಗಳವಾರ ಒಪ್ಪಿಗೆ ನೀಡಿದರು.

'ಭಾರತೀಯ ವಾಯುಪಡೆಯ ಸಾಮರ್ಥ್ಯ ವೃದ್ಧಿಸುವ ನಿಟ್ಟಿನಲ್ಲಿ ಅತ್ಯಾಧುನಿಕ ಮಧ್ಯಮ ಯುದ್ಧ ವಿಮಾನವು (ಎಎಂಸಿಎ) ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಎಎಂಸಿಎ ಉತ್ಪಾದನಾ ಯೋಜನೆಗೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಮಂಗಳವಾರ ಒಪ್ಪಿಗೆ ಸೂಚಿಸಿದರು' ಎಂದು ರಕ್ಷಣಾ ಸಚಿವಾಲಯವು ಮಂಗಳವಾರ ತಿಳಿಸಿದೆ.

'ವಿವಿಧ ಕೈಗಾರಿಕೆಗಳ ಸಹಭಾಗಿತ್ವದಲ್ಲಿ ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ) ಈ ಯೋಜನೆಯನ್ನು ಜಾರಿಗೊಳಿಸಲಿದೆ. ಸ್ಪರ್ಧಾತ್ಮಕವಾಗಿ ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಕ್ಕೆ ಸಮಾನ ಅವಕಾಶಗಳು ಲಭ್ಯವಾಗಲಿವೆ. ವಾಯುಸೇನೆಯಲ್ಲಿ ಆತ್ಮನಿರ್ಭರತೆಯ ಮಹತ್ವದ ಹೆಜ್ಜೆಯಾಗಿದೆ' ಎಂದು ಇಲಾಖೆ ತಿಳಿಸಿದೆ.

ಬಿಡ್‌ದಾರರು ಸ್ವತಂತ್ರವಾಗಿ ಅಥವಾ ಜಂಟಿ ಸಹಭಾಗಿತ್ವದಲ್ಲಿ ತಯಾರಿಸಬಹುದು. ಬಿಡ್ ಮಾಡುವ ಸಂಸ್ಥೆಗಳು ಭಾರತದ್ದೇ ಆಗಿದ್ದು, ಇಲ್ಲಿನ ಕಾನೂನು ಹಾಗೂ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ಸಮಿತಿಯು ಕಳೆದ ವರ್ಷ ಈ ಯೋಜನೆ ಜಾರಿಗೆ ಅನುಮತಿ ನೀಡಿತ್ತು. ಭಾರತೀಯ ವಾಯುಪಡೆಯ ದೀರ್ಘಾವಧಿ ಅಗತ್ಯವನ್ನು ಗಮನದಲ್ಲಿರಿಸಿಕೊಂಡು, ಎಎಂಸಿಎ ಯೋಜನೆ ರೂಪಿಸಲಾಗಿದೆ.

ಲಘು ಯುದ್ಧ ವಿಮಾನ (ಎಲ್‌ಸಿಎ) ತೇಜಸ್ ಅಭಿವೃದ್ಧಿಪಡಿಸಿದ ಬಳಿಕ ಎಎಂಸಿಎ ಯೋಜನೆ ಕಾರ್ಯಗತಗೊಳ್ಳುತ್ತಿರುವುದು ಗಮನಾರ್ಹ ಸಾಧನೆ ಎಂದು ಹೇಳಲಾಗಿದೆ.



ಅತ್ಯಾಧುನಿಕ ಮಧ್ಯಮ ಯುದ್ಧ ವಿಮಾನ (ಎಎಂಸಿಎ)

**ವಿಮಾನದ ವಿಶೇಷತೆ**

- ವಿಮಾನವು 25 ಟನ್ ತೂಕ– ಎರಡು ಎಂಜಿನ್‌ಗಳನ್ನು ಹೊಂದಿದೆ. 1.5 ಟನ್ ತೂಕದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಬಲ್ಲದು
- ರಾಡಾರ್‌ನಿಂದ ತಪ್ಪಿಸಿಕೊಳ್ಳುವ ಸಾಮರ್ಥ್ಯ
- ಶತ್ರುಗಳ ವಿಮಾನ, ಶಸ್ತ್ರಾಸ್ತ್ರಗಳ ಮೇಲೆ ನಿಖರವಾಗಿ ದಾಳಿ ಮಾಡುವ ಸಾಮರ್ಥ್ಯ
- ಯೋಜನೆಯ ಆರಂಭಿಕ ಅಭಿವೃದ್ಧಿ ವೆಚ್ಚ ₹15 ಸಾವಿರ ಕೋಟಿ

# ಪಾಕಿಸ್ತಾನದ 76 ಗಡಿ ಹೊರಠಾಣೆ 42 ಮುಂಚೂಣಿ ನೆಲೆಗಳ ಧ್ವಂಸ

ಆಪರೇಷನ್ ಸಿಂಧೂರ– ಬಿಎಸ್‌ಎಫ್‌ನಿಂದ ಮಾಹಿತಿ

ಜಮ್ಮು (ಪಿಟಿಐ): 'ಆಪರೇಷನ್ ಸಿಂಧೂರ'ದ ವೇಳೆ ಅಂತರರಾಷ್ಟ್ರೀಯ ಗಡಿಯಲ್ಲಿ ಭಾರತದ ಮೇಲೆ ಅಪ್ರಚೋದಿತ ದಾಳಿ ನಡೆಸಿದ ಪಾಕಿಸ್ತಾನದ 76 ಗಡಿ ಹೊರಠಾಣೆಗಳು, 42 ಮುಂಚೂಣಿ ನೆಲೆಗಳು ಹಾಗೂ ಭಯೋತ್ಪಾದಕರ ಮೂರು ನೆಲೆಗಳನ್ನು ನಾಶಗೊಳಿಸಲಾಗಿತ್ತು' ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮಂಗಳವಾರ ತಿಳಿಸಿದೆ.

'40 ರಿಂದ 50 ಮಂದಿ ಭಯೋತ್ಪಾದಕರನ್ನು ಭಾರತದೊಳಗೆ ನುಗ್ಗಿಸಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಭಾರತದ 60 ಹೊರಠಾಣೆಗಳು, 49 ಮುಂಚೂಣಿ ನೆಲೆಗಳನ್ನು ಗುರಿಯಾಗಿರಿಸಿಕೊಂಡು ಪಾಕಿಸ್ತಾನ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಭಾರತವು ಅತ್ಯಂತ ಬಲವಾಗಿ ಪ್ರತ್ಯುತ್ತರ ನೀಡಿದೆ' ಎಂದು ಬಿಎಸ್‌ಎಫ್ ಡಿಐಜಿ ಚಿತ್ರಪಾಲ್ ಸಿಂಗ್ ಮಾಧ್ಯಮಗಳಿಗೆ ತಿಳಿಸಿದರು.

'ಸುಂದರ್‌ಬನಿ ವಲಯದಲ್ಲಿ ಪಾಕಿಸ್ತಾನದ ಗುಪ್ತಚರ ಸಂಸ್ಥೆ (ಐಎಸ್‌ಐ) ಯ ಮೂರು ನೆಲೆಯನ್ನು ಭಾರತ ಸಂಪೂರ್ಣವಾಗಿ ನಾಶಪಡಿಸಿತ್ತು. ಈಗ ಆ ಸ್ಥಳದಲ್ಲಿ ಯಾವುದೇ ಚಲನವಲನಗಳು ಕಂಡುಬರುತ್ತಿಲ್ಲ' ಎಂದು ಸಿಂಗ್ ತಿಳಿಸಿದರು.

'ಪಾಕಿಸ್ತಾನ ಹಲವು ನೆಲೆಗಳಿಗೆ ತೀವ್ರ ಹಾನಿಯಾಗಿದ್ದು, ಪಾಕಿಸ್ತಾನ ಸೇನೆಯು ಯೋಧರು ಹಾಗೂ ಭಯೋತ್ಪಾದಕರು ಮೃತಪಟ್ಟಿರುವುದನ್ನು ಗುಪ್ತಚರ ಸಂಸ್ಥೆಗಳು ಖಚಿತಪಡಿಸಿವೆ' ಎಂದು ಜಮ್ಮು ವಿಭಾಗದ ಬಿಎಸ್‌ಎಫ್ ಐಜಿ ಶಶಾಂಕ್ ಆನಂದ್ ತಿಳಿಸಿದ್ದಾರೆ.

'ಮೇ 9 ಹಾಗೂ 10ರಂದು 'ಚಿಕನ್ ನೆಕ್'ನ ವಿರುದ್ಧ ಜಾಗದಲ್ಲಿದ್ದ ಲಷ್ಕರ್–ಎ–ತಯಬಾದ ಕೇಂದ್ರ, ಲೋನಿ, ಮಸ್ತ್‌ಪುರ್ ಹಾಗೂ ಛಾಬ್ರಾದ ಕೇಂದ್ರವನ್ನು ವಿಶೇಷ ಶಸ್ತ್ರಾಸ್ತ್ರ ವ್ಯವಸ್ಥೆ ಬಳಸಿಕೊಂಡು ನಾಶಪಡಿಸಲಾಗಿದೆ' ಎಂದರು.

# 'ಭಯೋತ್ಪಾದನೆ ಪಾಕ್‌ನ ಯುದ್ಧ ತಂತ್ರ'

ಗಾಂಧಿನಗರ (ಪಿಟಿಐ): 'ಪಾಕಿಸ್ತಾನವು ಉತ್ತೇಜನ ನೀಡುತ್ತಿರುವ ಭಯೋತ್ಪಾದನೆಯ ಚಟುವಟಿಕೆಗಳು ಉದ್ದೇಶಪೂರ್ವಕವಾಗಿ ಯುದ್ಧ ಕಾರ್ಯತಂತ್ರವಾಗಿದ್ದು, ಇದಕ್ಕೆ ಭಾರತ ಸೂಕ್ತವಾದ ಪ್ರತ್ಯುತ್ತರವನ್ನು ನೀಡಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

'ಪಾಕಿಸ್ತಾನವು ಭಯೋತ್ಪಾದಕತೆಯ ಮೂಲಕ ಯುದ್ಧದಲ್ಲಿ ತೊಡಗಿದೆ' ಎಂದು ನೇರವಾಗಿ ಆರೋಪಿಸಿದರು. ಮಂಗಳವಾರ ಇಲ್ಲಿ ನಡೆದ ಗುಜರಾತ್ ಸರ್ಕಾರದ ನಗರಾಭಿವೃದ್ಧಿ ಕುರಿತ ಕಾರ್ಯಕ್ರಮದಲ್ಲಿ ಅವರು 'ಆಪರೇಷನ್ ಸಿಂಧೂರ' ಉಲ್ಲೇಖಿಸಿ ಈ ಮಾತು ಹೇಳಿದರು.

'ಮೇ 6ರಂದು ಭಾರತೀಯ ಸೇನೆ ನಡೆಸಿದ ದಾಳಿಯಲ್ಲಿ ಸತ್ತವರಿಗೆ ಸರ್ಕಾರಿ ಗೌರವ ನೀಡಲಾಗಿದೆ. ಶವಪೆಟ್ಟಿಗೆಗೆ ಪಾಕ್ ಧ್ವಜ ಹೊದಿಸಿದ್ದು, ಸೇನೆ ಗೌರವ ಸಲ್ಲಿಸಿದೆ. ಹೀಗಾಗಿ, 'ಆಪರೇಷನ್ ಸಿಂಧೂರ'ವನ್ನು ಭಯೋತ್ಪಾದನೆ ವಿರುದ್ಧದ ಯುದ್ಧವಷ್ಟೇ ಎನ್ನಲಾಗದು' ಎಂದು ಹೇಳಿದರು.


ನರೇಂದ್ರ ಮೋದಿ

'ಭಯೋತ್ಪಾದನೆ ಚಟುವಟಿಕೆಗಳು ಯುದ್ಧಕ್ಕೆ ಪರ್ಯಾಯವಾಗಿ ಪಾಕ್ ನಿರ್ದಿಷ್ಟವಾಗಿ ನಡೆಸುತ್ತಿರುವ ಕಾರ್ಯತಂತ್ರ ಎಂಬುದನ್ನು ಈ ಬೆಳವಣಿಗೆ ದೃಢಪಡಿಸಿದೆ. ಪಾಕ್ ಇಂತಹ ಯುದ್ಧದಲ್ಲಿ ತೊಡಗಿದರೆ ಭಾರತವೂ ಪ್ರತ್ಯುತ್ತರ ನೀಡಲಿದೆ' ಎಂದು ಘೋಷಿಸಿದರು.

ಭಾರತ–ಪಾಕಿಸ್ತಾನದ ನಡುವೆ ಯುದ್ಧ ನಡೆದಾಗಲೆಲ್ಲ ಭಾರತೀಯ ಸೇನೆಯು ಹಿಮ್ಮೆಟ್ಟಿಸಿದೆ ಎಂಬುದನ್ನು ನೆರೆಯ ರಾಷ್ಟ್ರ ಮರೆಯದು. ಇದೇ ಕಾರಣಕ್ಕೆ ಪಾಕ್ ನೇರವಾಗಿ ಯುದ್ಧ ನಡೆಸದೇ ಅಡ್ಡದಾರಿಯ ಮೂಲಕ ಯುದ್ಧದಲ್ಲಿ ತೊಡಗಿದೆ ಎಂದು ಆರೋಪಿಸಿದರು. 'ದೇಹ ಎಷ್ಟೇ ಗಟ್ಟಿ ಮುಟ್ಟಾಗಿರಲಿ. ಸಣ್ಣ ಮುಳ್ಳು ಕೂಡ ನೋವು ಉಂಟು ಮಾಡಲಿದೆ. ಹೀಗಾಗಿ, ನಾವು ಮುಳ್ಳನ್ನೇ ತೆಗೆಯಲು ತೀರ್ಮಾನಿಸಿದ್ದೇವೆ ಎಂದು ಮೋದಿ ಹೇಳಿದರು.

ದೇಶ ವಿಭಜನೆಯಾದ ಬಳಿಕ ಮೊದಲ ದಿನ ರಾತ್ರಿಯಂದೇ ಕಾಶ್ಮೀರದ ಮೇಲೆ ಮುಜಾಹಿದ್ದೀನ್ ದಾಳಿ ನಡೆಸಿತ್ತು. ಅದರ ಹಿಂದೆಯೇ ಪಾಕಿಸ್ತಾನ ಕಾಶ್ಮೀರದ ಒಂದು ಭಾಗವನ್ನು ಆಕ್ರಮಿಸಿಕೊಂಡಿತು. ಒಂದು ವೇಳೆ ಅಂದೇ ಮುಜಾಹಿದ್ದೀನ್ ಅನ್ನು ಇಲ್ಲವಾಗಿಸಿದ್ದರೆ, ಸರ್ದಾರ್ ಪಟೇಲ್ ಅವರ ಸಲಹೆಯನ್ನು ಪರಿಗಣಿಸಿದ್ದರೆ, ಕಳೆದ 75 ವರ್ಷಗಳಲ್ಲಿ ನಾವು ನೋಡಿದ ಸರಣಿ ಭಯೋತ್ಪಾದಕ ದಾಳಿಗಳು ನಡೆಯುತ್ತಲೇ ಇರಲಿಲ್ಲ ಎಂದು ಪ್ರಧಾನಿ ಹೇಳಿದರು.

# ಹಿಜ್ಬುಲ್ ಉಗ್ರನಿಗೆ 10 ವರ್ಷ ಕಠಿಣ ಜೈಲು ಶಿಕ್ಷೆ

ಮುರಾದಾಬಾದ್ (ಪಿಟಿಐ): ಭಯೋತ್ಪಾದಕ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಹಿಜ್ಬುಲ್ ಮುಜಾಹಿದ್ದೀನ್ ಭಯೋತ್ಪಾದಕ ಉಲ್ಫತ್ ಹುಸೇನ್‌ಗೆ ಇಲ್ಲಿನ ನ್ಯಾಯಾಲಯ 10 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹48 ಸಾವಿರ ದಂಡ ವಿಧಿಸಿದೆ ಎಂದು ಹೆಚ್ಚುವರಿ ಜಿಲ್ಲಾ ಸರ್ಕಾರಿ ವಕೀಲರು ತಿಳಿಸಿದ್ದಾರೆ.



ಜಮ್ಮು–ಕಾಶ್ಮೀರದ ಪೂಂಛ್ ಜಿಲ್ಲೆಯ ಉಲ್ಫತ್ ಅಲಿಯಾಸ್ ಮೊಹಮ್ಮದ್ ಸೈಫುಲ್ ಇಸ್ಲಾಮ್ 2002ರಿಂದಲೂ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ. 2008ರಲ್ಲಿ ಜಾಮೀನು ಪಡೆದು ತಲೆಮರೆಸಿಕೊಂಡಿದ್ದ ಎಂದು ಎಡಿಜಿಪಿ ಸುರೇಶ್ ಸಿಂಗ್ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಮುರಾದಾಬಾದ್ ನ್ಯಾಯಾಲಯ ಈತನ ವಿರುದ್ಧ 2015 ಮತ್ತು 2025ರಲ್ಲಿ ಶಾಶ್ವತ ವಾರೆಂಟ್ ಹೊರಡಿಸಿತ್ತು. ಈತನ ಮಾಹಿತಿ ಕೊಟ್ಟವರಿಗೆ ಪೊಲೀಸರು ₹25 ಸಾವಿರ ಬಹುಮಾನ ಘೋಷಿಸಿದ್ದರು. 2025ರ ಮಾರ್ಚ್‌ನಲ್ಲಿ ಉತ್ತರ ಪ್ರದೇಶ ಭಯೋತ್ಪಾದಕ ನಿಗ್ರಹ ಪಡೆ ಮತ್ತು ಕಾಟ್‌ಘರ್ ಪೊಲೀಸರು ಪೂಂಛ್‌ನಲ್ಲಿ ಬಂಧಿಸಿ, ಜೈಲಿಗೆ ರವಾನಿಸಿದ್ದರು.

# ನೇಪಾಳ ಗಡಿಯಲ್ಲಿ ಡ್ರೋನ್‌ನಂತಹ ಸಾಧನಗಳು ಪತ್ತೆ

ಮಧುಬನಿ(ಪಿಟಿಐ): ಬಿಹಾರದ ಮಧುಬನಿ ಜಿಲ್ಲೆಯಲ್ಲಿ, ನೇಪಾಳಕ್ಕೆ ಹೊಂದಿಕೊಂಡಿರುವ ಗಡಿಯಲ್ಲಿ ಡ್ರೋನ್ ಹೋಲುವಂತಹ ಸಾಧನಗಳು ಪತ್ತೆಯಾಗಿದ್ದು, ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ಡ್ರೋನ್ ಹೋಲುವಂತಹ, ಹೊಳೆಯುವ ಕೆಲ ನಿಗೂಢ ವಸ್ತುಗಳು ನೇಪಾಳದಿಂದ ಭಾರತದ ವಾಯುಪ್ರದೇಶವನ್ನು ಸೋಮವಾರ ರಾತ್ರಿ ಪ್ರವೇಶಿಸಿವೆ ಎಂದು ಜಿಲ್ಲೆಯ ಜಯನಗರ ಪ್ರದೇಶದ ಕಮಲಾ ಗಡಿ ಹೊರಠಾಣೆಯಲ್ಲಿ (ಬಿಒಪಿ) ನಿಯೋಜನೆಗೊಂಡಿರುವ ಸಶಸ್ತ್ರ ಸೀಮಾ ಬಲ(ಎಸ್‌ಎಸ್‌ಬಿ) ಸಿಬ್ಬಂದಿ ತಿಳಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

**ಬಾಂಗ್ಲಾದೇಶಿಗರ ಒಳನುಸುಳುವಿಕೆ ಯತ್ನ ತಡೆದ ಬಿಎಸ್‌ಎಫ್:** (ಗುವಾಹಟಿ ವರದಿ) ಬಾಂಗ್ಲಾದೇಶಿಗರ ದೊಡ್ಡ ಗುಂಪೊಂದು ಭಾರತಕ್ಕೆ ಅಸ್ಸಾಂ ಮೂಲಕ ಒಳನುಸುಳಲು ನಡೆಸಿರುವ ಯತ್ನವನ್ನು ಬಿಎಸ್‌ಎಫ್ ಮಂಗಳವಾರ ವಿಫಲಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದಕ್ಷಿಣ ಸಲ್ಮಾರಾ ಮಂಕಚಾರ್ ಜಿಲ್ಲೆಯಲ್ಲಿನ ಅಂತರರಾಷ್ಟ್ರೀಯ ಗಡಿಯಿಂದ ಬಾಂಗ್ಲಾದೇಶಿಗರ ದೊಡ್ಡ ಗುಂಪೊಂದು ಮಂಗಳವಾರ ನಸುಕಿನಲ್ಲಿ ಅಕ್ರಮವಾಗಿ ಭಾರತವನ್ನು ಪ್ರವೇಶಿಸಲು ಪ್ರಯತ್ನಿಸಿತ್ತು. ಇದನ್ನು ವಿಫಲಗೊಳಿಸುವಲ್ಲಿ ಬಿಎಸ್‌ಎಫ್ ಯೋಧರು ಯಶಸ್ವಿಯಾಗಿದ್ದಾರೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ.

# ಪರಿಶಿಷ್ಟರಿಗೆ ಜಾತಿ ಹೇಳಲಾಗದ ಇಕ್ಕಟ್ಟು

ಒಂದನೇ ಪುಟದಿಂದ...

'ನಾನು ಬ್ಯಾಂಕ್ ನೌಕರ. ಮಗುವಿನ ಶಾಲೆಗೆ ಹತ್ತಿರವೆಂದು ಬಸವನಗುಡಿಯಲ್ಲೇ ಮನೆ ಮಾಡಿದ್ದೇವೆ. ನಾವು ಮಾದಿಗರು ಎಂದು ಹೇಳಿದ ಕಾರಣಕ್ಕೆ, ಇಲ್ಲಿ ಮನೆಯೇ ಸಿಗಲಿಲ್ಲ. ಕಡೆಗೆ, ಪ್ರಭಾವಿ ಜಾತಿಯೊಂದರ ಹೆಸರು ಹೇಳಿ ಮಧ್ಯವರ್ತಿ ಮೂಲಕ ಮನೆ ಪಡೆದುಕೊಂಡಿದ್ದೇವೆ. ಈಗ ನಾವು ಮಾದಿಗರು ಎಂದು ಗೊತ್ತಾದರೆ ಮಾಲೀಕರು ಮನೆ ಖಾಲಿ ಮಾಡಿಸಬಹುದು. ಮತ್ತೆ ಮನೆ ಹುಡುಕುವುದು ಕಷ್ಟವಾಗುತ್ತದೆ. ಹೀಗಾಗಿ ನಿಮಗೆ ಸುಳ್ಳು ಹೇಳಿದೆವು' ಎಂದು ಹೇಳಿದರು.

ಸಮೀಕ್ಷೆ ನಡೆಸುತ್ತಿದ್ದ ಶಿಕ್ಷಕಿ ಆ ವ್ಯಕ್ತಿಯ ಕುಟುಂಬದ ವಿವರವನ್ನು ನಮೂದಿಸಿಕೊಂಡು ಮುಂದುವರೆದರು. ನಗರದ ಜಯನಗರ, ವಿಜಯನಗರ, ಬಸವೇಶ್ವರ ನಗರ, ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸುತ್ತಿದ್ದ ಶಿಕ್ಷಕರ ಜತೆಗೆ ಮತ್ತು ಅದರ ಪರಿಶೀಲನೆಗೆ ತೆರಳಿದ್ದ ಮೇಲ್ವಿಚಾರಕರ ಜತೆಗೆ ತೆರಳಿದ್ದಾಗಲೂ ಇಂತಹ ಹಲವು ಪ್ರಕರಣಗಳು ಎದುರಾದವು.

ಜಯನಗರ ವ್ಯಾಪ್ತಿಯಲ್ಲಿನ ಬ್ಯಾಂಕ್ ನೌಕರರ ಬಡಾವಣೆ ಒಂದರಲ್ಲಿ ಸಮೀಕ್ಷೆ ನಡೆಸುವಾಗ ಮನೆ ಮಾಲೀಕರೇ ಹೊರಬಂದು, 'ಇಲ್ಲಿ ಯಾರೂ ಎಸ್ಸಿಗಳಿಲ್ಲ' ಎಂದು ಹೇಳಿದರು. ಆ ಬಡಾವಣೆಯಲ್ಲಿದ್ದ ಕೆಲವು ಅಪಾರ್ಟ್‌ಮೆಂಟ್‌ಗಳ ಆವರಣ ಪ್ರವೇಶಿಸಲು ಭದ್ರತಾ ಸಿಬ್ಬಂದಿ ಬಿಡಲೇ ಇಲ್ಲ. 'ಇಲ್ಲಿ ಯಾರೂ ಎಸ್ಸಿಗಳಿಲ್ಲ. ಯಾರೂ ಮಾಹಿತಿ ಕೊಡುವುದಿಲ್ಲ' ಎಂದು ಹೇಳಿದರು. ಪರಿಶಿಷ್ಟ ಜಾತಿಯೇತರರ ಮಾಹಿತಿಯನ್ನೂ ಕಲೆ ಹಾಕಬೇಕು ಎಂದು ತಿಳಿಸಿದಾಗಲೂ ಪ್ರವೇಶ ನಿರಾಕರಿಸಿದರು.

ಆದರೆ, ಬಡಾವಣೆಯಿಂದ ಹೊರಬಂದು ಸಮೀಕ್ಷೆ ಮುಂದುವರೆಸುವಾಗ ಮಹಿಳೆಯೊಬ್ಬರು ಸ್ಕೂಟರ್‌ನಲ್ಲಿ ಹಿಂಬಾಲಿಸಿಕೊಂಡು ಬಂದು ಮಾಹಿತಿ ನೀಡಿದರು. 'ಬ್ಯಾಂಕಿಂಗ್ ವ್ಯವಹಾರದಲ್ಲಿ ಪ್ರಬಲವಾಗಿ ರುವ ಸಮುದಾಯ ಒಂದರ ಜನರು ಕಟ್ಟಿಕೊಂಡಿರುವ ಬಡಾವಣೆ ಇದು. ಇಲ್ಲಿ ಪರಿಶಿಷ್ಟ ಜಾತಿಯವರಿಗೆ ಮನೆ ನೀಡುವುದೇ ಇಲ್ಲ. ನಾವು ಸುಳ್ಳು ಹೇಳಿ ಮನೆ ಭೋಗ್ಯಕ್ಕೆ ಹಾಕಿಕೊಂಡಿದ್ದೇವೆ. ನಮ್ಮಂತೆಯೇ ಹಲವು ಕುಟುಂಬಗಳು ಇಲ್ಲಿವೆ. ನಾವು ಸಮೀಕ್ಷೆಗೆ ಮಾಹಿತಿ ನೀಡಬೇಕು ಅಂದರೆ ಏನು ಮಾಡಬೇಕು' ಎಂದು ಪ್ರಶ್ನಿಸಿದರು.

ಸಮೀಕ್ಷೆ ನಡೆಸುತ್ತಿದ್ದ ಶಿಕ್ಷಕರು ತಮ್ಮ ಮೇಲ್ವಿಚಾರಕರಿಗೆ ಕರೆ ಮಾಡಿ ಮಾಹಿತಿ ಪಡೆದುಕೊಂಡರು. ಆ ಮಹಿಳೆಯ ಕುಟುಂಬದ ವಿವರವನ್ನು ಅಪ್ಲಿಕೇಷನ್‌ನಲ್ಲಿ ನಮೂದಿಸಿದರು. ಜತೆಗೆ ಇನ್ನೂ ಹೆಚ್ಚಿನ ಕುಟುಂಬಗಳು ಇದ್ದರೆ, ಮೇಲ್ವಿಚಾರಕರಿಗೆ ಕರೆ ಮಾಡಿ ಎಂದು ಸಂಪರ್ಕ ಸಂಖ್ಯೆ ನೀಡಿದರು. ಮೇಲ್ವಿಚಾರಕರಿಗೆ ಕರೆ ಮಾಡಿ, ಅವರು ಮಾರ್ಗದರ್ಶನ ನೀಡುತ್ತಾರೆ ಎಂದು ಸೂಚಿಸಿದರು.

**24 ಲಕ್ಷಕ್ಕೂ ಹೆಚ್ಚು ಕುಟುಂಬಗಳ ವಿವರ ಸಂಗ್ರಹ:** 'ಸಮೀಕ್ಷೆ ಅಡಿಯಲ್ಲಿ ರಾಜ್ಯದಾದ್ಯಂತ ಈವರೆಗೆ, ಪರಿಶಿಷ್ಟ ಜಾತಿಗಳ 24,25,000ಕ್ಕೂ ಹೆಚ್ಚು ಕುಟುಂಬಗಳ ವಿವರವನ್ನು ಕಲೆ ಹಾಕಲಾಗಿದೆ. ಈವರೆಗೆ ಶೇ 90ರಷ್ಟು ಪ್ರಗತಿ ಸಾಧಿಸಲಾಗಿದೆ. ಸಮೀಕ್ಷೆ ಮುಗಿಯುವ ವೇಳೆಗೆ ಎಲ್ಲ ಕುಟುಂಬಗಳ ವಿವರ ಕಲೆ ಹಾಕುತ್ತೇವೆ ಎಂಬ ನಿರೀಕ್ಷೆ ಇದೆ' ಎಂದು ಮೂಲಗಳು ಮಾಹಿತಿ ನೀಡಿವೆ.

## 'ಆನ್‌ಲೈನ್‌ನಲ್ಲಿ ನಮೂದಿಸಿ'

ಒಂದನೇ ಪುಟದಿಂದ...

'ತಪ್ಪು ಮಾಹಿತಿ ನೀಡಿದವರೂ ಮಾನ್ಯತೆ ಇರುವ ಜಾತಿ ಪ್ರಮಾಣ ಪತ್ರ ಸಲ್ಲಿಸಿ, ಸರಿಯಾದ ಮಾಹಿತಿಯನ್ನು ನಮೂದಿಸಲು ಅನುಕೂಲವಾಗುವಂತೆ ಆನ್‌ಲೈನ್ ಪೋರ್ಟಲ್ ಅನ್ನು ರೂಪಿಸಲಾಗಿದೆ. ತಮ್ಮ ವಿವರ ಸಮೀಕ್ಷೆಯಲ್ಲಿ ಸೇರಲಿಲ್ಲ ಎಂದು ಯಾರೂ ಕೊರಗುವ ಅವಶ್ಯಕತೆ ಇಲ್ಲ. ಗೌಪ್ಯತೆಯನ್ನು ಕಾಪಾಡಿಕೊಂಡೇ ಆನ್‌ಲೈನ್‌ನಲ್ಲಿ ವಿವರ ನಮೂದಿಸಿ ಎಂದು ಜನರಿಗೆ ತಿಳಿಸಬೇಕಾಗಿದೆ' ಎಂದರು.

'ಆನ್‌ಲೈನ್‌ನಲ್ಲಿ ಈಗಾಗಲೇ 1,500ಕ್ಕೂ ಹೆಚ್ಚು ಕುಟುಂಬಗಳು ಆನ್‌ಲೈನ್‌ನಲ್ಲಿ ಮಾಹಿತಿ ನಮೂದಿಸಿವೆ. ಜೂನ್ 1ರವರೆಗೂ ಆನ್‌ಲೈನ್‌ನಲ್ಲಿ ವಿವರ ನಮೂದಿಸಬಹುದು. ಮೇ 30 ರಿಂದ ಜೂನ್ 1ರವರೆಗೆ ಮೂರು ದಿನ ನಡೆಯುವ ಶಿಬಿರಗಳಲ್ಲೂ ವಿವರ ನೀಡಬಹುದು' ಎಂದು ಮಾಹಿತಿ ನೀಡಿದರು.


ಬೆಂಗಳೂರಿನ ನಾಗರಭಾವಿ ಸಮೀಪದ ಬಡಾವಣೆ ಒಂದರಲ್ಲಿ ಮಂಗಳವಾರ ಶಿಕ್ಷಕರೊಬ್ಬರು ಒಳಮೀಸಲಾತಿ ಸಮೀಕ್ಷೆಗಾಗಿ ಮಾಹಿತಿ ಕಲೆ ಹಾಕಿದರು –ಚಿತ್ರ:ರಂಜು ಪಿ.

ಪರಿಶಿಷ್ಟರನ್ನು ಶಿಕ್ಷಣ, ನಾಯಕತ್ವದಿಂದ ದೂರ ಇಡುವ ವಿಧಾನ: ರಾಹುಲ್

# 'ಅರ್ಹರಲ್ಲ' ಎಂಬುದು ಹೊಸ ಮನುವಾದ'

ನವದೆಹಲಿ(ಪಿಟಿಐ): 'ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯದ ಅರ್ಹ ಅಭ್ಯರ್ಥಿಗಳಿಗೆ ಅರ್ಹತೆ ಇದ್ದರೂ, 'ಅರ್ಹರೆಂದು ಪರಿಗಣಿಸಲಾಗದು' ಎಂಬುದಾಗಿ ಉದ್ದೇಶಪೂರ್ವಕವಾಗಿಯೇ ಘೋಷಿಸುವ ಮೂಲಕ ಅವರನ್ನು ಶಿಕ್ಷಣ ಮತ್ತು ನಾಯಕತ್ವದಿಂದ ದೂರ ಇಡಲಾಗುತ್ತಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಅರ್ಹರೆಂದು ಪರಿಗಣಿಸಲಾಗದು' ಎಂಬುದು ಈಗ ನೂತನ ಮನುವಾದವಾಗಿದೆ' ಎಂದು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿರುವ ರಾಹುಲ್ ಗಾಂಧಿ ಟೀಕಿಸಿದ್ದಾರೆ.


ದೆಹಲಿ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಸಂಘಟನೆ (ಡಿಯುಎಸ್‌ಯು) ವಿದ್ಯಾರ್ಥಿ ಗಳೊಂದಿಗೆ ಮೇ 22ರಂದು ನಡೆಸಿದ ಸಂವಾದದಲ್ಲಿ ಅವರು ಈ ಮಾತು ಹೇಳಿದ್ದು, ಸಂವಾದದ ವಿಡಿಯೊವನ್ನು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹಂಚಿಕೊಳ್ಳಲಾಗಿದೆ.

'ಬಿಜೆಪಿ ಮತ್ತು ಆರ್‌ಎಸ್‌ಎಸ್ ಮೀಸಲಾತಿ ವಿರೋಧಿ ನಡೆ ಅನುಸರಿಸುತ್ತಿವೆ. ಸಂವಿಧಾನ ನೀಡಿರುವ ಶಕ್ತಿ ಬಳಸಿ ಹಾಗೂ ವಿದ್ಯಾರ್ಥಿಗಳೊಂದಿಗೆ ಸೇರಿ, ಇಂತಹ ಪ್ರತಿ ನಡೆಗೆ ನಾವು ಉತ್ತರ ನೀಡುತ್ತೇವೆ' ಎಂದು ರಾಹುಲ್ ಗಾಂಧಿ ಹೇಳಿರುವುದು ವಿಡಿಯೊದಲ್ಲಿದೆ.

'ಸಮಾನತೆ ಸಾಧಿಸಲು ಶಿಕ್ಷಣವೇ ದೊಡ್ಡ ಅಸ್ತ್ರ ಎಂಬುದಾಗಿ ಡಾ.ಬಿ.ಆರ್.ಅಂಬೇಡ್ಕರ್ ಹೇಳಿದ್ದರು. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹಾಗೂ ಆರ್‌ಎಸ್‌ಎಸ್ ಈ ಶಕ್ತಿಯನ್ನೇ ದಮನ ಮಾಡುತ್ತಿವೆ' ಎಂದು ಆರೋಪಿಸಿದ್ದಾರೆ.

**ರಾಹುಲ್ ಮಾಡಿದ ಆರೋಪಗಳು**

- ಮೀಸಲಾತಿ ಇರುವ ಹುದ್ದೆಗಳ ಪೈಕಿ ಶೇ 60ಕ್ಕೂ ಹೆಚ್ಚು ಪ್ರಾಧ್ಯಾಪಕ ಹುದ್ದೆಗಳು, ಶೇ 30ಕ್ಕೂ ಅಧಿಕ ಸಹ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಿಲ್ಲ. 'ಅರ್ಹರೆಂದು ಪರಿಗಣಿಸಲಾಗದು' ಎಂಬ ವಿಧಾನವನ್ನು ಬಳಸಿ ಈ ಮೀಸಲು ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ
- ಐಐಟಿಗಳು, ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಕೂಡ ಇದೇ ವಿಧಾನವನ್ನು ಅನುಸರಿಸಲಾಗುತ್ತಿದೆ. ಇದು ಸಾಮಾಜಿಕ ನ್ಯಾಯಕ್ಕೆ ಮಾಡುವ ದ್ರೋಹ
- ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿಗಳ ಇತಿಹಾಸವನ್ನು ಅಳಿಸಿಹಾಕುವುದೇ 'ಹಿಂದುತ್ವ ಪ್ರಾಜೆಕ್ಟ್'ನ ಮೂಲಮಂತ್ರ
- ದೇಶದಲ್ಲಿ ಶೇ 90ರಷ್ಟು ಇರುವವರ ಇತಿಹಾಸ ನಮ್ಮ ಪಠ್ಯಪುಸ್ತಕಗಳಲ್ಲಿ ಏಕಿಲ್ಲ? ಶೇ 10ರಷ್ಟು ಜನರ ಇತಿಹಾಸವನ್ನು ಮಾತ್ರ ಪುಸ್ತಕಗಳಲ್ಲಿ ಉಲ್ಲೇಖಿಸಲಾಗಿದೆ ಏಕೆ?



**ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸುಳ್ಳುಗಳ ರಾಯಭಾರಿ. ಆಮದು ಮಾಡಿಕೊಳ್ಳಲಾದ ಟೂಲ್‌ಕಿಟ್ ಬಳಸಿ ಸುಳ್ಳು ಪ್ರಸರಣ ಮಾಡುತ್ತಿದ್ದಾರೆ**

**ಧರ್ಮೇಂದ್ರ ಪ್ರಧಾನ್**
ಕೇಂದ್ರ ಶಿಕ್ಷಣ ಸಚಿವ

**ಆಕ್ಷೇಪಿಸಿದ್ದ ವಿ.ವಿ**

ಮುಂಚಿತವಾಗಿ ಪ್ರಕಟಣೆ ನೀಡದೆಯೇ ವಿಶ್ವವಿದ್ಯಾಲಯದ ನಾರ್ತ್ ಕ್ಯಾಂಪಸ್‌ಗೆ ರಾಹುಲ್ ಗಾಂಧಿ ಮೇ 22ರಂದು ಭೇಟಿ ನೀಡಿದ್ದಕ್ಕೆ ದೆಹಲಿ ವಿಶ್ವವಿದ್ಯಾಲಯ ಆಕ್ಷೇಪ ವ್ಯಕ್ತಪಡಿಸಿತ್ತು.

'ರಾಹುಲ್ ಗಾಂಧಿ ಅವರ ಈ ನಡೆ ಶೈಕ್ಷಣಿಕ ಸಂಸ್ಥೆಯ ಶಿಷ್ಟಾಚಾರದ ಉಲ್ಲಂಘನೆ ಹಾಗೂ ವಿಶ್ವವಿದ್ಯಾಲಯ ಕಾರ್ಯಾಚರಣೆಗೆ ಅಡ್ಡಿ ಉಂಟು ಮಾಡುವಂಥದ್ದು' ಎಂದು ಆಗ ನೀಡಿದ್ದ ಪ್ರಕಟಣೆಯಲ್ಲಿ ವಿಶ್ವವಿದ್ಯಾಲಯ ಹೇಳಿತ್ತು.

### ಭಾಷೆಗಳಿಗೆ ಅನುದಾನ ಹಂಚಿಕೆ ವಿಚಾರ • ಸಾಮಾಜಿಕ ಜಾಲತಾಣದಲ್ಲಿ ಬಿರುಸಿನ ಚರ್ಚೆ

# ಕಾಂಗ್ರೆಸ್–ಬಿಜೆಪಿ ವಾಕ್ಸಮರ...

ಬೆಂಗಳೂರು: ರಾಜ್ಯದಲ್ಲಿ ವಿವಿಧ ಭಾಷೆಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿದೆ ಎಂಬುದಾಗಿ ಸಾಮಾಜಿಕ ಜಾಲತಾಣದಲ್ಲಿ ಬಿರುಸಿನ ಚರ್ಚೆ ನಡೆದಿರುವ ಬೆನ್ನಲ್ಲೇ, ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ವಾಕ್ಸಮರ ಆರಂಭವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಪರಿಷತ್ತಿನ ಬಿಜೆಪಿ ಸದಸ್ಯ ಸಿ.ಟಿ.ರವಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## ‘ಕೋಮುವೈಷಮ್ಯ ಹುಟ್ಟಿಸುವ ದುರುದ್ದೇಶ’



‘ಕನ್ನಡ ಭಾಷೆಯನ್ನು ನಿರ್ಲಕ್ಷಿಸಿ ಉರ್ದು ಭಾಷೆಗೆ ರಾಜ್ಯ ಸರ್ಕಾರ ಹೆಚ್ಚಿನ ಅನುದಾನ ನೀಡುತ್ತಿದೆ ಎಂದು ರಾಜ್ಯ ಬಿಜೆಪಿ ಮಾಡುತ್ತಿರುವ ಅಪಪ್ರಚಾರ ಸತ್ಯಕ್ಕೆ ದೂರವಾಗಿದ್ದು, ಕೋಮುವೈಷಮ್ಯ ಹುಟ್ಟಿಸುವ ದುರುದ್ದೇಶದಿಂದ ಕೂಡಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

‘ಕನ್ನಡ ಭಾಷೆಗಾಗಿ ಕೇವಲ ₹32 ಕೋಟಿ ನೀಡಲಾಗಿದೆ ಎಂಬ ಸುಳ್ಳು ಸುದ್ದಿಯನ್ನು ಬಿಜೆಪಿ ಹಂಚಿಕೊಂಡು ಜನರನ್ನು ತಪ್ಪು ದಾರಿಗೆಳೆಯುತ್ತಿರುವುದು ಅಕ್ಷಮ್ಯ ಅಪರಾಧ. ರಾಷ್ಟ್ರೀಯ ಪಕ್ಷವೊಂದು ಇಷ್ಟೊಂದು ಬೇಜವಾಬ್ದಾರಿತನದಿಂದ ಕಿಡಿಗೇಡಿ ಟ್ರೋಲರ್‌ಗಳ ರೀತಿ ಸುಳ್ಳು ಸುದ್ದಿಯನ್ನು ಪ್ರಚಾರ ಮಾಡುತ್ತಿರುವುದು ವಿಷಾದನೀಯ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಸರ್ಕಾರ 2025-26ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ₹34,438 ಕೋಟಿ ಮತ್ತು ಸಮಾಜ ಕಲ್ಯಾಣ ಮತ್ತಿತರ ಇಲಾಖೆಗಳಿಗೆ ಸೇರಿದ ಶಾಲೆಗಳಿಗೆ ₹4,150 ಕೋಟಿ ಹೀಗೆ ಕನ್ನಡ ಭಾಷೆಯ ಶಾಲೆಗಳಿಗಾಗಿ ಒಟ್ಟು ₹38,688 ಕೋಟಿ ನೀಡಿದೆ. ಸರ್ಕಾರಿ ಶಾಲೆಗಳ ನಿರ್ವಹಣೆ ಮತ್ತು ಮೂಲಸೌಕರ್ಯಗಳ ನಿರ್ಮಾಣಕ್ಕೆ ₹999.30 ಕೋಟಿ ಒದಗಿಸಲಾಗಿದೆ. ಹೀಗಿರುವಾಗ ಕನ್ನಡ ಭಾಷೆಗೆ ಸರ್ಕಾರ ಕೇವಲ ₹32 ಕೋಟಿ ಅನುದಾನ ನೀಡುತ್ತಿದೆ ಎಂಬ ಮಾಹಿತಿಯ ಪ್ರಸಾರದ ಹಿಂದೆ ರಾಜಕೀಯ ದುರುದ್ದೇಶವಿದೆ’ ಎಂದಿದ್ದಾರೆ.

‘ಅತಿ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿ ಇರುವ ಉರ್ದು ಮಾಧ್ಯಮ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ಹಾಗೂ ಮೌಲಾನಾ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಿಸುವ ಉದ್ದೇಶದಿಂದ ಅಲ್ಪಸಂಖ್ಯಾತ ಇಲಾಖೆಯಡಿ ಪ್ರಸಕ್ತ ಸಾಲಿನಲ್ಲಿ ₹100 ಕೋಟಿ ಒದಗಿಸಲಾಗಿದೆ. ಈ ಅನುದಾನವನ್ನು ಕೇವಲ ಭಾಷಾ ಕಲಿಕೆಗೆ ಮಾತ್ರವಲ್ಲ ಶಾಲೆಗಳ ಮೂಲಸೌಕರ್ಯ, ಶಿಕ್ಷಕರ ನೇಮಕಾತಿ, ಪಠ್ಯಪುಸ್ತಕ ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಬಳಸಲಾಗುವುದು. ಕನ್ನಡ, ಉರ್ದು ಭಾಷೆಗಳು ಸೇರಿದಂತೆ ಯಾವುದೇ ಭಾಷೆಯನ್ನು ನಿರ್ದಿಷ್ಟ, ಧರ್ಮದ ಜೊತೆ ಜೋಡಿಸುವುದು ಆ ಭಾಷೆಗಳಿಗೆ ತೋರುವ ಅಗೌರವ’ ಎಂದೂ ಅಭಿಪ್ರಾಯಪಟ್ಟಿದ್ದಾರೆ.

## ‘ಕನ್ನಡವನ್ನು ಎರಡನೇ ದರ್ಜೆಗೆ ದೂಡುವ ಯತ್ನ’




‘ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ ಹೆಸರಾದ ಸಿದ್ದರಾಮಯ್ಯನವರು, ಈಗ ಮುಖ್ಯಮಂತ್ರಿಯಾಗಿ ಕನ್ನಡ ಅಭಿವೃದ್ಧಿಗೆ ₹32 ಕೋಟಿ ಮತ್ತು ಉರ್ದುಗೆ ₹100 ಕೋಟಿ ನೀಡಿದ್ದಾರೆ. ಕನ್ನಡವನ್ನು ಎರಡನೇ ದರ್ಜೆ ಭಾಷೆಯಾಗಿಸುವ ಈ ಕ್ರಮವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು’ ಎಂದು ವಿಧಾನಪರಿಷತ್ತಿನ ಬಿಜೆಪಿ ಸದಸ್ಯ ಸಿ.ಟಿ.ರವಿ ಒತ್ತಾಯಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಟಿಪ್ಪು ಸುಲ್ತಾನ್, ಮೈಸೂರು ಸಂಸ್ಥಾನವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿದ್ದಾಗ ಕನ್ನಡ ಆಡಳಿತ ಭಾಷೆಯ ಬದಲಾಗಿ ಪಾರ್ಸಿ ಭಾಷೆಯನ್ನು ಆಡಳಿತ ಭಾಷೆಯಾಗಿ ಹೇರಿದ್ದ. ಇವರ ಮೇಲೆ ಟಿಪ್ಪುವಿನ ಭೂತದ ಪರಕಾಯ ಪ್ರವೇಶ ಆಗಿದೆಯೇ’ ಎಂದು ಪ್ರಶ್ನಿಸಿದರು.

‘ಸರ್ಕಾರದ ಈ ನಡೆಯಿಂದ ಆಘಾತವಾಗಿದೆ. ಒಂದು ಕಡೆ ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಬದಲಿಗೆ ನಾವು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುತ್ತಿದ್ದೇವೆ. ಇಂಥದ್ದರಲ್ಲಿ ಕನ್ನಡಕ್ಕೆ ಕಮ್ಮಿ, ಉರ್ದುಗೆ ಹೆಚ್ಚು ಹಣ ನೀಡಿದ್ದಾರೆ. ಕೊಡವ, ಕೊಂಕಣಿ, ತುಳು ಭಾಷೆಗಳಿಗೆ ಕೇವಲ ತಲಾ ₹45 ಲಕ್ಷ ಕೊಟ್ಟಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ. ಇದರಿಂದ ಚರಿತ್ರೆಯಲ್ಲಿ ಮುಖ್ಯಮಂತ್ರಿ ಮತ್ತು ಈ ಸರ್ಕಾರಕ್ಕೆ ಕಳಂಕ ಅಂಟಲಿದೆ’ ಎಂದರು.

## ಕನ್ನಡಕ್ಕೆ ಮೊದಲ ಆದ್ಯತೆ: ಬಿಳಿಮಲೆ



‘ಭಾಷಾವಾರು ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕನ್ನಡಕ್ಕೆ ಮೊದಲ ಆದ್ಯತೆ ನೀಡಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಮಾಹಿತಿ ಸತ್ಯಕ್ಕೆ ದೂರ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

‘ರಾಜ್ಯ ಸರ್ಕಾರವು 2025–26ನೇ ಸಾಲಿನ ಬಜೆಟ್‌ನಲ್ಲಿ ಹಿಂದಿನ ವರ್ಷದ ಖರ್ಚು ಮತ್ತು ಪ್ರಸಕ್ತ ವರ್ಷದ ಬೇಡಿಕೆಯನ್ನು ಪರಿಶೀಲಿಸಿ, ಅನುದಾನ ಮೀಸಲಿಟ್ಟಿದೆ. ಕಳೆದ ಬಜೆಟ್‌ಗಿಂತ ಶೇ 11.07ರಷ್ಟು (₹ 864 ಕೋಟಿ ) ಅನುದಾನ ಹೆಚ್ಚಿಸಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಕನ್ನಡದ ಉಪ ಭಾಷೆಗಳಾದ ತುಳು, ಕೊಂಕಣಿ, ಕೊಡವ, ಬ್ಯಾರಿ, ಅರೆಭಾಷೆಗೆ ₹ 10 ಕೋಟಿ ಅನುದಾನ ಒದಗಿಸಲಾಗಿದೆ. ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಒಟ್ಟು ₹ 4,510 ಕೋಟಿ ಮೀಸಲಿಡಲಾಗಿದೆ. ಭಾಷೆಯ ಹೆಸರಿನಲ್ಲಿ ತಪ್ಪು ಮಾಹಿತಿ ಮತ್ತು ಕೋಮು ದ್ವೇಷಕ್ಕೆ ಅವಕಾಶ ನೀಡಬಾರದು’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

## ಮತ್ತೆ ಮೂವರು ನ್ಯಾಯಮೂರ್ತಿಗಳ ವರ್ಗ: ಶಿಫಾರಸು

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಮತ್ತೆ ಮೂವರು ನ್ಯಾಯಮೂರ್ತಿಗಳನ್ನು ವರ್ಗಾವಣೆ ಮಾಡಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ. ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ವಿಭು ಬಖ್ರು ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಲು ಶಿಫಾರಸು ಮಾಡಲಾಗಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಕೊಲಿಜಿಯಂ ಈ ಶಿಫಾರಸು ಮಾಡಿದೆ. ಕರ್ನಾಟಕ ಹೈಕೋರ್ಟ್‌ನಿಂದ ನ್ಯಾಯಮೂರ್ತಿಗಳಾದ ವಿ.ಕಾಮೇಶ್ವರ ರಾವ್ ಅವರನ್ನು ದೆಹಲಿ ಹೈಕೋರ್ಟ್‌ಗೆ, ಸಿ.ಸುಮಲತಾ ಅವರನ್ನು ತೆಲಂಗಾಣ ಹೈಕೋರ್ಟ್‌ಗೆ ಹಾಗೂ ಲಲಿತಾ ಕನ್ನೆಗಂಟಿ ಅವರನ್ನು ತೆಲಂಗಾಣ ಹೈಕೋರ್ಟ್‌ಗೆ ವರ್ಗಾಯಿಸಲು ಶಿಫಾರಸು ಮಾಡಲಾಗಿದೆ.

ಕೇರಳ ಹೈಕೋರ್ಟ್‌ನ ದಿನೇಶ್ ಕುಮಾರ್ ಸಿಂಗ್, ಅಲಹಾಬಾದ್ ಹೈಕೋರ್ಟ್‌ನ ಜಯಂತ್ ಬ್ಯಾನರ್ಜಿ ಅವರನ್ನು ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆ ಮಾಡಬೇಕು ಎಂದು ಕೊಲಿಜಿಯಂ ಹೇಳಿದೆ.

ಕರ್ನಾಟಕ ಹೈಕೋರ್ಟ್‌ನಿಂದ ನ್ಯಾಯಮೂರ್ತಿ ಹೇಮಂತ್ ಚಂದನ್‌ಗೌಡರ್ ಅವರನ್ನು ಮದ್ರಾಸ್ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಕೆ. ನಟರಾಜನ್ ಅವರನ್ನು ಕೇರಳಕ್ಕೆ, ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಅವರನ್ನು ಗುಜರಾತ್‌ಗೆ ಮತ್ತು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರನ್ನು ಒಡಿಶಾ ಹೈಕೋರ್ಟ್‌ಗೆ ಏಪ್ರಿಲ್‌ನಲ್ಲಿ ವರ್ಗಾಯಿಸಲಾಗಿತ್ತು.

## ಸುದ್ದಿ 2 ನಿಮಿಷ


### ಕೋವಿಡ್: ವೈದ್ಯರು, ಸಿಬ್ಬಂದಿಗೆ ಮಾಸ್ಕ್ ಧರಿಸಲು ಸೂಚನೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ಮುಖಗವಸು (ಮಾಸ್ಕ್) ಧರಿಸಬೇಕು’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಸೂಚಿಸಿದ್ದಾರೆ.

ಕೋವಿಡ್‌ಗೆ ಸಂಬಂಧಿಸಿದಂತೆ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಹಾಗೂ ಆಸ್ಪತ್ರೆಗಳ ಮುಖ್ಯಸ್ಥರ ಜತೆಗೆ ಮಂಗಳವಾರ ಅವರು ವಿಡಿಯೊ ಕಾನ್ಫರೆನ್ಸ್ ನಡೆಸಿದರು. ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಆದರೆ, ಈ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಜನದಟ್ಟಣೆ ಇರುವ ಸ್ಥಳಗಳಲ್ಲಿ ಗರ್ಭಿಣಿಯರು, ಹಿರಿಯರು ಮುಖಗವಸು ಬಳಕೆ ಮಾಡಬೇಕು. ಸರ್ಕಾರ ಎಲ್ಲ ರೀತಿಯ ಕ್ರಮ ಕೈಗೊಂಡಿದ್ದು, ಜನರು ಕೂಡ ನಮ್ಮ ಜತೆಗೆ ಕೈ ಜೋಡಿಸಬೇಕು’ ಎಂದು ಹೇಳಿದರು.

‘ಶಾಲೆಗಳು ಪುನರಾರಂಭ ಆಗುತ್ತಿವೆ. ಜ್ವರ, ಶೀತ ಮತ್ತು ಕೆಮ್ಮು ಇದ್ದರೆ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಬಾರದು. ಒಂದು ವೇಳೆ ಶೀತ, ನೆಗಡಿಯ ಸಮಸ್ಯೆ ಇರುವ ಮಕ್ಕಳು ಶಾಲೆಗೆ ಬಂದರೆ ಕೂಡಲೇ ಪೋಷಕರಿಗೆ ಕರೆ ಮಾಡಿ, ವಾಪಸ್ ಕಳುಹಿಸಬೇಕು’ ಎಂದರು.

‘ಉಸಿರಾಟದ ತೀವ್ರ ಸಮಸ್ಯೆ (ಸಾರಿ) ಪ್ರಕರಣಗಳಲ್ಲಿ ಕೋವಿಡ್ ಪರೀಕ್ಷೆ ನಡೆಸಬೇಕು. ವೈದ್ಯಕೀಯ ಆಮ್ಲಜನಕದ ಸಂಪರ್ಕ ಹೊಂದಿರುವ ಬೆಡ್‌ಗಳು, ವೆಂಟಿಲೇಟರ್‌ಗಳ ಬಗ್ಗೆ ಮಾಹಿತಿ ಒದಗಿಸುವಂತೆ ವೈದ್ಯಕೀಯ ಸಂಸ್ಥೆ ಹಾಗೂ ಆಸ್ಪತ್ರೆಗಳ ಮುಖ್ಯಸ್ಥರಿಗೆ ಸೂಚಿಸಲಾಗಿದೆ’ ಎಂದು ಸಚಿವರು ತಿಳಿಸಿದರು.



### ಕೋವಿಡ್: 100ಕ್ಕೆ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 36 ಕೋವಿಡ್ ಪ್ರಕರಣ ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 100ಕ್ಕೆ ಏರಿಕೆಯಾಗಿದೆ.

ಕೊರೊನಾ ವೈರಾಣು ಪತ್ತೆ ಸಂಬಂಧ 24 ಗಂಟೆಗಳ ಅವಧಿಯಲ್ಲಿ 381 ಮಾದರಿಗಳ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 9.44 ರಷ್ಟಿದೆ. ಸಕ್ರಿಯ ಪ್ರಕರಣಗಳಲ್ಲಿ 96 ಮಂದಿ ಮನೆ ಆರೈಕೆಗೆ ಒಳಗಾದರೆ, ನಾಲ್ಕು ಮಂದಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಈ ವರ್ಷ 171 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳಲ್ಲಿ 70 ಮಂದಿ ಈಗಾಗಲೇ ಚೇತರಿಸಿಕೊಂಡಿದ್ದಾರೆ. ಸೋಂಕಿತರಲ್ಲಿ ಈವರೆಗೆ ಒಬ್ಬರು ಮೃತಪಟ್ಟಿದ್ದಾರೆ.

## ಜನೌಷಧಿ ಕೇಂದ್ರ ಮುಚ್ಚದಿರಿ: ಸೋಮಣ್ಣ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳನ್ನು ಮುಚ್ಚಬಾರದು ಎಂದು ಒತ್ತಾಯಿಸಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಪತ್ರ ಬರೆದಿದ್ದಾರೆ.

ಈ ಕೇಂದ್ರಗಳಲ್ಲಿ ಗುಣಮಟ್ಟದ ಔಷಧಿಗಳು ಅತ್ಯಂತ ಕಡಿಮೆ ದರದಲ್ಲಿ ದೊರಕುತ್ತಿವೆ. ಖಾಸಗಿಯವರ ಒತ್ತಡಕ್ಕೆ ಮಣಿದು ಈ ಕೇಂದ್ರಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ ಎಂದು ಅವರು ದೂರಿದ್ದಾರೆ.

ಸಿದ್ದರಾಮಯ್ಯ ದೀರ್ಘಕಾಲದ ರಾಜಕೀಯ ಅನುಭವ ಹೊಂದಿದ್ದಾರೆ. ಆದರೆ, ಅವರು ಬಡವರು ಹಾಗೂ ತಳವರ್ಗದ ಜನರ ಹಿತ ಕಾಯುತ್ತಿಲ್ಲ. ಸರ್ಕಾರದ ನಿರ್ಧಾರವನ್ನು ಕೂಡಲೇ ಮರುಪರಿಶೀಲನೆ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

### ದೇಶದಲ್ಲಿ ಇಷ್ಟೊಂದು ಭ್ರಷ್ಟಾಚಾರ ಬೆಳೆಯಲು ಬಿಜೆಪಿ, ಆರೆಸ್ಸೆಸ್ ಕಾರಣ: ಸಿದ್ದರಾಮಯ್ಯ

# ಬಿಜೆಪಿಯವರು ಅತ್ಯಂತ ಭ್ರಷ್ಟರು– ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಇಷ್ಟೊಂದು ಭ್ರಷ್ಟಾಚಾರ ಬೆಳೆಯಲು ಬಿಜೆಪಿ, ಆರೆಸ್ಸೆಸ್ ಕಾರಣ. ಈ ಭೂಮಿಯಲ್ಲಿ ಬಿಜೆಪಿಯವರು ಅತ್ಯಂತ ಭ್ರಷ್ಟರು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಜವಾಹರಲಾಲ್ ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರ ಬೆಳೆದು ಬಿಟ್ಟಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಷ್ಟು ಕಾಲ ಭ್ರಷ್ಟಾಚಾರ ಅಷ್ಟು ಬೆಳೆದಿರಲಿಲ್ಲ’ ಎಂದರು.

‘ನೆಹರೂ ಅವರ ಹೆಸರು ಅಳಿಸಲು ಬಿಜೆಪಿಯವರು ಪ್ರಯತ್ನಿಸುತ್ತಿದ್ದಾರೆ. ಈ ದೇಶಕ್ಕೆ ನೆಹರೂ ಯಾವುದೇ ಕೊಡುಗೆ ಕೊಟ್ಟಿಲ್ಲವೆಂದು ಹೇಳುತ್ತಿರುವ ಬಿಜೆಪಿಯವರು, ದೇಶದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡದ ಗಿರಾಕಿಗಳು’ ಎಂದು ಟೀಕಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜವಾಹರಲಾಲ್ ನೆಹರೂ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಡಿ.ಕೆ. ಶಿವಕುಮಾರ್, ನಸೀರ್ ಅಹಮದ್, ಸೌಮ್ಯಾ ರೆಡ್ಡಿ ಮತ್ತಿತರರು ಇದ್ದರು ಪ್ರಜಾವಾಣಿ ಚಿತ್ರ

‘ಬಿಜೆಪಿಯವರಿಗೆ ಗೊತ್ತಿರುವುದು ಬರೀ ಹಿಂಸೆ ಮತ್ತು ಸುಳ್ಳು. ದಲಿತರು, ಶೂದ್ರರ ಮೇಲೆ ಕೇಸುಗಳು ಬೀಳುವಂತೆ ಮಾಡುವುದು ಇದೇ ಬಿಜೆಪಿ ಮತ್ತು ಆರೆಸ್ಸೆಸ್. ಆಮೇಲೆ ಅವರನ್ನು ಜೈಲಿನಿಂದ ಕರೆದುಕೊಂಡು ಬರುವುದೂ ಇವರೇ. ಇದೇ ನಾಟಕ ಆಡಿಕೊಂಡು ಅವರು ಕಾಲಕಳೆಯುತ್ತಿದ್ದಾರೆ’ ಎಂದೂ ದೂರಿದರು.

### ‘ಜೈ ಹಿಂದ್’ ಸಭೆ ಇಂದು

‘ಮಾಜಿ ಸೈನಿಕರಿಗೆ ನಮನ ಸಲ್ಲಿಸಲು ಬೆಂಗಳೂರಿನ ಪುರಭವನದಲ್ಲಿ ಬುಧವಾರ (ಮೇ 28) ‘ಜೈ ಹಿಂದ್’ ಸಭೆ ಆಯೋಜಿಸಲಾಗಿದೆ. ಬೆಳಿಗ್ಗೆ 9 ಗಂಟೆಗೆ ಪಕ್ಷಾತೀತವಾಗಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ, ನಾನು, ಕೆ.ಸಿ. ವೇಣುಗೋಪಾಲ್ ಸೇರಿದಂತೆ ಅನೇಕ ನಾಯಕರು ಭಾಗವಹಿಸುತ್ತೇವೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಎಂದೂ ಬಿಜೆಪಿಯವರು ಹೇಳುತ್ತಿದ್ದಾರೆ. ತಮ್ಮನ್ನು ಚುನಾವಣೆಯಲ್ಲಿ ಸೋಲಿಸಿದ್ದು ಡಾಂಗೆ ಮತ್ತು ಸಾವರ್ಕರ್ ಎಂದು ಸ್ವತಃ ಅಂಬೇಡ್ಕರ್ ಅವರು ತಮ್ಮದೇ ಹಸ್ತಾಕ್ಷರದಲ್ಲಿ ಪತ್ರ ಬರೆದಿದ್ದಾರೆ’ ಎಂದ ಮುಖ್ಯಮಂತ್ರಿ, ‘ಸತ್ಯವನ್ನು ಹೇಳಲು ಆಕ್ರಮಣಕಾರಿ ಆಗಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕ್ರಿಯಾಶೀಲರಾಗಬೇಕು’ ಎಂದರು.

‘ದೇಶದ ಸ್ವಾತಂತ್ರ್ಯ ಮತ್ತು ಆಧುನಿಕ ಭಾರತ ನಿರ್ಮಾಣದಲ್ಲಿ ನೆಹರೂ ಪಾತ್ರ ಅಳಿಸಲಾಗದಷ್ಟು ಆಳವಾಗಿ ಅಚ್ಚೊತ್ತಿದೆ. ನೆಹರೂ ಹಾಕಿದ ಅಡಿಪಾಯಗಳಿಂದ ಭಾರತ ವಿಶ್ವದ ಐದನೇ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ವಿಜ್ಞಾನ-ತಂತ್ರಜ್ಞಾನದ ಪ್ರಗತಿ ಮೂಲಕ ವೈಜ್ಞಾನಿಕ ಭಾರತದ ನಿರ್ಮಾತೃ ನೆಹರೂ’ ಎಂದರು.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, ‘ನೆಹರೂ ಅವರ ವಿದೇಶಾಂಗ ನೀತಿ, ಬೇರೆ ದೇಶಗಳ ಜತೆಗಿನ ಸಂಬಂಧ ಇಡೀ ವಿಶ್ವಕ್ಕೆ ಮಾದರಿಯಾಗಿತ್ತು. ಆದರೆ, ಇಂದಿನ ಪರಿಸ್ಥಿತಿಯಲ್ಲಿ ನೆರೆಯ ಸಣ್ಣಪುಟ್ಟ ರಾಷ್ಟ್ರಗಳು ನಮ್ಮ ಜತೆ ಉತ್ತಮ ಬಾಂಧವ್ಯವನ್ನು ಹೊಂದಿಲ್ಲ. ವಿರೋಧಿಗಳೇ ತುಂಬಿದ್ದಾರೆ’ ಎಂದರು.

## ಡಿಜಿ ಲಾಕರ್‌ಗೆ ಆಸ್ತಿ ನೋಂದಣಿ ಪತ್ರ

ಒಂದನೇ ಪುಟದಿಂದ...

‘ಭ್ರಷ್ಟಾಚಾರ ಮುಕ್ತಗೊಳಿಸಲು, ಮಧ್ಯವರ್ತಿಗಳ ಹಾವಳಿ ತಪ್ಪಿಸಲು, ಪಾರದರ್ಶಕ ಸೇವೆ ಒದಗಿಸಲು ಸಾಧ್ಯವಾಗುವಂತೆ ಕಂದಾಯ ಇಲಾಖೆ ಕಳೆದ ಎರಡು ವರ್ಷಗಳಲ್ಲಿ ತಂತ್ರಾಂಶ ಆಧಾರಿತ ಸುಧಾರಣೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಅಳವಡಿಸಿಕೊಂಡಿದೆ. ಆಸ್ತಿ ಮತ್ತು ಭೂ ದಾಖಲೆಗಳ ಸೇವೆ ಸಂಪೂರ್ಣವಾಗಿ ಆನ್‌ಲೈನ್ ಮೂಲಕವೇ ಲಭ್ಯವಾಗುತ್ತಿವೆ. ಕಾವೇರಿ-2 ತಂತ್ರಾಂಶದಲ್ಲಿ ಯಾವುದೇ ಸಮಸ್ಯೆ ಇದ್ದರೆ ಪರಿಹರಿಸಿಕೊಳ್ಳಲು, ಅರ್ಜಿಯ ಸ್ಥಿತಿಗತಿಯ ಬಗ್ಗೆ ಮಾಹಿತಿ ನೀಡಲು ಹಾಗೂ ಕುಂದುಕೊರತೆಗಳನ್ನು ದಾಖಲಿಸಲು ಸಹಾಯವಾಣಿ ಸ್ಥಾಪಿಸಲಾಗಿದೆ’ ಎನ್ನುತ್ತಾರೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್.

## ವಿಜಯೇಂದ್ರ ವಿಫಲ: ಯತ್ನಾಳ

ಪ್ರಜಾವಾಣಿ ವಾರ್ತೆ



ಯತ್ನಾಳ

ವಿಜಯಪುರ: ‘ಶಾಸಕರಾದ ಶಿವರಾಮ ಹೆಬ್ಬಾರ, ಎಸ್.ಟಿ.ಸೋಮಶೇಖರ್ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆತ್ಮೀಯರು. ನನ್ನನ್ನು ಪಕ್ಷದಿಂದ ಹೊರಹಾಕಿ, ಯಶಸ್ವಿಯಾದ ವಿಜಯೇಂದ್ರ ಅವರು ಇವರಿಬ್ಬರನ್ನೂ ಉಳಿಸಿಕೊಳ್ಳುವಲ್ಲಿ ವಿಫಲರಾದರು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

‘ಯತ್ನಾಳ ಅವರನ್ನು ಮಾತ್ರ ಹೊರಹಾಕಿ, ನಿಮ್ಮಿಬ್ಬರನ್ನು ಉಳಿಸಿಕೊಳ್ಳುವುದಾಗಿ ಇಬ್ಬರೂ ಶಾಸಕರಿಗೆ ವಿಜಯೇಂದ್ರ ಭರವಸೆ ನೀಡಿದ್ದರು. ಆದರೆ, ಬಿಜೆಪಿಯ ಹೈಕಮಾಂಡ್ ಇಬ್ಬರನ್ನೂ ಉಚ್ಚಾಟಿಸುವ ಮೂಲಕ ಸ್ಪಷ್ಟ ಸಂದೇಶ ರವಾನಿಸಿದೆ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

**ಸುಳ್ಳು ಸಮೀಕ್ಷೆ:** ‘ರಾಜ್ಯದಲ್ಲಿ ಈಗ ಚುನಾವಣೆ ನಡೆದರೆ, ಬಿಜೆಪಿಗೆ 160 ಸ್ಥಾನ ಬರುತ್ತದೆ ಎಂಬುದು ಸುಳ್ಳು. ವಿಜಯೇಂದ್ರ ಅವರ ತಂದೆ ಯಡಿಯೂರಪ್ಪ ಜನಪ್ರಿಯ ಆಗಿದ್ದಾಗಲೇ ಅಷ್ಟು ಸ್ಥಾನ ಬಂದಿಲ್ಲ. ಸುಳ್ಳು ಸಮೀಕ್ಷೆ ಮಾಡಿಸಿದ್ದಾರೆ’ ಎಂದರು.

‘ಪ್ರಬಲ ವಿರೋಧ ಪಕ್ಷವಾಗಿ ಬಿಜೆಪಿ ಕೆಲಸ ಮಾಡುತ್ತಿಲ್ಲ. ಹಿಂದೂಗಳ ಕೊಲೆಯಾದರೂ ಮಾತನಾಡುತ್ತಿಲ್ಲ, ಭ್ರಷ್ಟಾಚಾರ ಬಗ್ಗೆ ವಿಧಾನಸಭೆಯಲ್ಲಿ ಧ್ವನಿ ಎತ್ತುತ್ತಿಲ್ಲ. ಇದರ ಬಗ್ಗೆ ಬಿಜೆಪಿ ಹೈಕಮಾಂಡ್‌ಗೆ ಬೇಸರ, ಅಸಮಾಧಾನವಿದೆ’ ಎಂದರು.

# ಯುವಕನ ಹತ್ಯೆ: ದ.ಕ ಉದ್ವಿಗ್ನ

ಒಂದನೇ ಪುಟದಿಂದ...

ಪಿಕಪ್ ವಾಹನ ಚಾಲಕರಾಗಿದ್ದ ಅಬ್ದುಲ್ ರಹೀಂ ಸ್ಥಳೀಯರ ಕೋರಿಕೆ ಮೇರೆಗೆ ಇರಾ ಕೋಡಿಯ ಮನೆಯೊಂದಕ್ಕೆ ಮರಳು ಸಾಗಿಸಿದ್ದರು. ವಾಹನದಿಂದ ಮರಳು ಕೆಳಕ್ಕಿಳಿಸುತ್ತಿದ್ದಾಗ ಬೈಕಿನಲ್ಲಿ ಅಲ್ಲಿಗೆ ಬಂದಿದ್ದ ಇಬ್ಬರು ದುಷ್ಕರ್ಮಿಗಳು ಅವರ ಮೇಲೆ ಹಾಗೂ ಮಹಮ್ಮದ್ ಶಾಫಿ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಷ್ಟರಲ್ಲೇ ರಹೀಂ ಕೊನೆಯುಸಿರೆಳೆದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ರಹೀಂ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ದೇರಳಕಟ್ಟೆಯ ಯೆನೆಪೋಯ ಆಸ್ಪತ್ರೆಗೆ ಒಯ್ಯಲಾಗಿದೆ. ಆ ಆಸ್ಪತ್ರೆ ಬಳಿ ಭಾರಿ ಸಂಖ್ಯೆಯಲ್ಲಿ ಜನ ಸೇರಿ ಆರೋಪಿಗಳ ಬಂಧನಕ್ಕೆ ಆಗ್ರಹಿಸಿದರು.

**ರಸ್ತೆ ತಡೆ:** ದೇರಳಕಟ್ಟೆ ಯೆನೆಪೋಯ ಆಸ್ಪತ್ರೆ ಬಳಿ ಸೇರಿರುವ ಉದ್ರಿಕ್ತ ಜನರು ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿ ಪ್ರತಿಭಟಿಸಿದರು.

### ಜಿಲ್ಲೆಯಾದ್ಯಂತ 30ರವರೆಗೆ ನಿಷೇಧಾಜ್ಞೆ

ಒಂದನೇ ಪುಟದಿಂದ...

**ಶರಣ್ ಪಂಪ್‌ವೆಲ್ ಬಂಧನ:** ವಿಶ್ವಹಿಂದೂ ಪರಿಷತ್ತಿನ ದಕ್ಷಿಣ ಪ್ರಾಂತ ಕಾರ್ಯವಾಹ ಶರಣ್ ಪಂಪ್‌ವೆಲ್ ಅವರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ವಿಎಚ್‌ಪಿಯ ವಾಟ್ಸ್ ಆ್ಯಪ್ ಗುಂಪಿನಲ್ಲಿ ಸಂಘಟನೆಯ ಮುಖಂಡರು ಮಾಹಿತಿ ಹಂಚಿಕೊಂಡಿದ್ದಾರೆ. ಸುದ್ದಿ ತಿಳಿದು ಮಂಗಳೂರಿನ ಕದ್ರಿ ಠಾಣೆ ಬಳಿ ಸಂಘಟನೆಯ ಕಾರ್ಯಕರ್ತರು ಸೇರಿದ್ದರು.

ರೌಡಿಶೀಟರ್, ಹಿಂದುತ್ವವಾದಿ ಕಾರ್ಯಕರ್ತ ಸುಹಾಸ್ ಶೆಟ್ಟಿಯನ್ನು ಈಚೆಗೆ ಬಜಪೆ ಬಳಿ ಕೊಲೆ ಮಾಡಲಾಗಿತ್ತು. ಈ ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್ಐಎ) ವಹಿಸುವಂತೆ ಒತ್ತಾಯಿಸಿ ಭಾನುವಾರ ( ಇದೇ 25) ಬಜಪೆಯಲ್ಲಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳದವರು ಅನುಮತಿ ಪಡೆಯದೆಯೇ ಪ್ರತಿಭಟನಾ ಸಭೆ ನಡೆಸಿದ್ದರು. ಅಲ್ಲಿ ಪ್ರಚೋದನಾಕಾರಿ ಭಾಷಣ ನಡೆಸಲಾಗಿದೆ ಎಂಬ ಆರೋಪದ ಮೇಲೆ ಬಜರಂಗದಳ ಮತ್ತು ವಿಎಚ್‌ಪಿ ಮುಖಂಡರ ವಿರುದ್ಧ ಪ್ರಕರಣ ದಾಖಲಾಗಿತ್ತು.

ದೇರಳಕಟ್ಟೆಯ ಯೆನೆಪೋಯ ಆಸ್ಪತ್ರೆಗೆ ಭೇಟಿ ನೀಡಿದ ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಅವರನ್ನು ಸ್ಥಳದಲ್ಲಿ ಜಮಾಯಿಸಿದ್ದವರು ತರಾಟೆಗೆ ತೆಗೆದುಕೊಂಡರು. ‘ಬಜಪೆಯಲ್ಲಿ ಭಾನುವಾರ ಪ್ರತಿಭಟನಾ ಸಭೆ ನಡೆಸಲು ಹಾಗೂ ಪ್ರಚೋದನಾಕಾರಿ ಭಾಷಣ ಮಾಡಲು ಅವಕಾಶ ನೀಡಿದ್ದು ಏಕೆ’ ಎಂದು ಪ್ರಶ್ನಿಸಿದರು.



**ಪದ್ಮಭೂಷಣ** ಕನ್ನಡದ ಹಿರಿಯ ಚಿತ್ರನಟ ಅನಂತನಾಗ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ಮಂಗಳವಾರ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಿದರು ಪಿಟಿಐ ಚಿತ್ರ

## ಬಿಜೆಪಿಯಿಂದ ಹೆಬ್ಬಾರ, ಸೋಮಶೇಖರ್ ಉಚ್ಚಾಟನೆ

ಒಂದನೇ ಪುಟದಿಂದ...

ಷೋಕಾಸ್ ನೋಟಿಸ್‌ಗೆ ಐವರು ನಾಯಕರು ಉತ್ತರ ನೀಡಿದ್ದರು. ಎರಡು ತಿಂಗಳ ಬಳಿಕ ಇಬ್ಬರು ಶಾಸಕರ ವಿರುದ್ಧ ಪಕ್ಷದ ವರಿಷ್ಠರು ಕ್ರಮ ಕೈಗೊಂಡಿದ್ದಾರೆ.

ಷೋಕಾಸ್ ನೋಟಿಸ್‌ಗೆ ನಿಮ್ಮ ಪ್ರತಿಕ್ರಿಯೆಯನ್ನು ಕೇಂದ್ರ ಶಿಸ್ತು ಸಮಿತಿ ಪರಿಗಣಿಸಿದೆ. ಆದರೆ, ಪಕ್ಷದ ಶಿಸ್ತನ್ನು ಪದೇ ಪದೇ ಉಲ್ಲಂಘನೆ ಮಾಡಿದ್ದೀರಿ’ ಎಂದು ಪಾಠಕ್ ತಿಳಿಸಿದ್ದಾರೆ.

ಹೆಬ್ಬಾರ ಹಾಗೂ ಸೋಮಶೇಖರ್ ಅವರು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದರು. 2019ರ ಜುಲೈ ತಿಂಗಳಲ್ಲಿ ಈ ಇಬ್ಬರು ಶಾಸಕರು ಸೇರಿದಂತೆ ಕಾಂಗ್ರೆಸ್ ಹಾಗೂ ಜೆಡಿಎಸ್‌ನ 16 ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರದ ಪತನಕ್ಕೆ ಕಾರಣರಾಗಿದ್ದರು. ಬಳಿಕ ಅಸ್ತಿತ್ವಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ಸೋಮಶೇಖರ್ ಅವರು ಸಹಕಾರ ಹಾಗೂ ಹೆಬ್ಬಾರ ಅವರು ಕಾರ್ಮಿಕ ಸಚಿವರಾಗಿದ್ದರು.

ರಾಜ್ಯದಲ್ಲಿ 2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೇರಿದ ಬಳಿಕ ಇಬ್ಬರೂ ನಾಯಕರು ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದರು. ಬಿಜೆಪಿ ನಾಯಕತ್ವದ ವಿರುದ್ಧ ಮುನಿಸಿಕೊಂಡಿದ್ದರು.

2024ರ ಫೆಬ್ರುವರಿಯಲ್ಲಿ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಿಗೆ ಮತ ಚಲಾಯಿಸುವಂತೆ ಪಕ್ಷವು ಎಲ್ಲ ಶಾಸಕರಿಗೆ ವಿಪ್ ಜಾರಿ ಮಾಡಿತ್ತು. ಸೋಮಶೇಖರ್ ಅಡ್ಡ ಮತ ಚಲಾಯಿಸಿದ್ದರು. ಹೆಬ್ಬಾರ ಗೈರಾಗಿದ್ದರು. ‘ಕ್ಷೇತ್ರದ ಅಭಿವೃದ್ಧಿಗಾಗಿ ಬೆಂಬಲ ನೀಡುವವರಿಗೆ ಹಾಗೂ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸಿದ್ದೇನೆ’ ಎಂದು ಸೋಮಶೇಖರ್ ತಿಳಿಸಿದ್ದರು.

ಶಾಸಕರಿಬ್ಬರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಿಜೆಪಿ ರಾಜ್ಯ ಪ್ರಮುಖರ ಸಭೆಯು ಕೇಂದ್ರ ಶಿಸ್ತು ಸಮಿತಿಗೆ ಶಿಫಾರಸು ಮಾಡಿತ್ತು. ಆದರೆ, ಪಕ್ಷದ ವರಿಷ್ಠರು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಶಿಸ್ತುಕ್ರಮ ಕೈಗೊಳ್ಳುವಂತೆ ಸೋಮಶೇಖರ್ ಹಾಗೂ ಹೆಬ್ಬಾರ ಸವಾಲು ಹಾಕಿದ್ದರು. ಕೇಂದ್ರದ ವರಿಷ್ಠರನ್ನು ಭೇಟಿ ಮಾಡಿದ್ದ ವಿಜಯೇಂದ್ರ ಅವರು, ಭಿನ್ನಮತೀಯ ಶಾಸಕರ ವಿರುದ್ಧ ಕೂಡಲೇ ಶಿಸ್ತುಕ್ರಮ ಕೈಗೊಂಡು ಸಂದೇಶ ರವಾನಿಸಬೇಕು ಎಂದು ಆಗ್ರಹಿಸಿದ್ದರು. ಪಕ್ಷದಲ್ಲಿ ಭಿನ್ನಮತ ತಾರಕಕ್ಕೆ ಏರಿತ್ತು. ಭಿನ್ನರ ವಿರುದ್ಧ ಕ್ರಮ ಕೈಗೊಳ್ಳುವ ಪ್ರಕ್ರಿಯೆಗೆ ಪಕ್ಷವು ಮಾರ್ಚ್‌ನಲ್ಲಿ ಚಾಲನೆ ನೀಡಿತ್ತು. ಷೋಕಾಸ್ ನೋಟಿಸ್ ಕೊಟ್ಟ ಎರಡು ತಿಂಗಳ ಬಳಿಕ ಭಿನ್ನಮತೀಯ ಶಾಸಕರಿಬ್ಬರನ್ನು ಪಕ್ಷದಿಂದ ಹೊರದಬ್ಬಲಾಗಿದೆ.

> **ಇಬ್ಬರು ಶಾಸಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ರಾಜ್ಯ ಘಟಕ ಕೋರಿತ್ತು. ಅವರ ಉಚ್ಚಾಟನೆಗೆ ಡಿ.ಕೆ. ಶಿವಕುಮಾರ್ ಬೇಸರ ಪಟ್ಟುಕೊಳ್ಳುವ ಅಗತ್ಯವಿಲ್ಲ**
> **ಬಿ.ವೈ. ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> **ಮುನಿರತ್ನನನ್ನು ಏಕೆ ಉಚ್ಚಾಟನೆ ಮಾಡಿಲ್ಲ? ಸೋಮಶೇಖರ್ ಆಗಲಿ, ಹೆಬ್ಬಾರ ಅವರಾಗಲಿ, ವಿಧಾನಸೌಧದಲ್ಲಿ ಯಾರನ್ನೂ ರೇಪ್ ಮಾಡಿಲ್ಲ**
> **ಡಿ.ಕೆ.ಶಿವಕುಮಾರ್**
> ಉಪಮುಖ್ಯಮಂತ್ರಿ

> **ಅತ್ಯಾಚಾರ ಮಾಡಿದವರನ್ನು ಬಿಜೆಪಿ ಉಚ್ಚಾಟನೆ ಮಾಡಲ್ಲ. ನನ್ನ ಪರ ಮಾತನಾಡಲು ಬಿಜೆಪಿಯಲ್ಲಿ ಯಾರಿಗೂ ಧೈರ್ಯ ಇಲ್ಲ. ಈಗ ಸ್ವತಂತ್ರವಾಗಿರುವೆ**
> **ಎಸ್.ಟಿ. ಸೋಮಶೇಖರ್**
> ಯಶವಂತಪುರ ಶಾಸಕ

> **ಪಕ್ಷದ ಶಿಸ್ತು, ತತ್ವ, ಸಿದ್ಧಾಂತ ಮತ್ತು ನಾಯಕತ್ವಕ್ಕೆ ಎಲ್ಲರೂ ಬದ್ಧರಾಗಿರಬೇಕು. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ಕೇಂದ್ರ ಶಿಸ್ತು ಸಮಿತಿ ನಿರ್ಧಾರ ತೆಗೆದುಕೊಂಡಿದೆ**
> **ಬಿ.ಎಸ್. ಯಡಿಯೂರಪ್ಪ**
> ಕೇಂದ್ರ ಸಂಸದೀಯ ಮಂಡಳಿ ಸದಸ್ಯ

### ಉಚ್ಚಾಟನೆ ಸ್ವಾಗತಿಸುವೆ: ಹೆಬ್ಬಾರ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ‘ಬಿಜೆಪಿ ಶಿಸ್ತು ಸಮಿತಿ ನನ್ನನ್ನು ಪಕ್ಷದಿಂದ 6 ವರ್ಷ ಉಚ್ಚಾಟಿಸಿದ ಕುರಿತು ವಾಟ್ಸ್‌ಆ್ಯಪ್ ಮತ್ತು ಇ-ಮೇಲ್ ಮೂಲಕ ಸಂದೇಶ ತಲುಪಿದೆ. ಸಮಿತಿಯ ನಿರ್ಣಯ ಸ್ವಾಗತಿಸುತ್ತೇನೆ’ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

‘ಶಿಸ್ತು ಸಮಿತಿ ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿದ್ದರೂ ಉಚ್ಚಾಟಿಸಲಾಗಿದೆ. ಒಂದೆಡೆ ಸಂದೇಹ, ಮತ್ತೊಂದೆಡೆ ಸಂತೋಷ ಆಗಿದೆ. ಪಕ್ಷ ಯಾವುದೇ ಕ್ರಮ ತೆಗೆದುಕೊಂಡರೂ, ಅದನ್ನು ಸ್ವಾಗತಿಸುವುದಾಗಿ ಆರಂಭದಲ್ಲೇ ಹೇಳಿದ್ದೆ’ ಎಂದು ಬಿಜೆಪಿಯಿಂದ ಉಚ್ಚಾಟನೆಗೊಂಡ ಬಳಿಕ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕರೆಯದವರ ಜೊತೆಗೆ ಹೋಗುವುದರಲ್ಲಿ ಗೌರವ ಇಲ್ಲ. ಗೌರವ ಕಳೆದುಕೊಂಡ ಬಳಿಕ ಅವರ ಜೊತೆ ಹೋಗಬೇಕಾದ ಅನಿವಾರ್ಯತೆಯೂ ನನಗಿಲ್ಲ. ನನ್ನ ವಿರುದ್ಧ ಇಲ್ಲಸಲ್ಲದ ಅಪಪ್ರಚಾರ ನಡೆಸಿದರೆ, ನಾನೂ ಅವರ ಬಣ್ಣ ಬಯಲು ಮಾಡುವೆ’ ಎಂದು ಅವರು ಪರೋಕ್ಷವಾಗಿ ಬಿಜೆಪಿ ನಾಯಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

‘ಕಾಂಗ್ರೆಸ್‌ನಲ್ಲಿದ್ದ ನನ್ನನ್ನು ಸರ್ಕಾರ ರಚಿಸಲು ಬಿಜೆಪಿಗೆ ಸೇರಿಸಿಕೊಂಡರು. ಪಕ್ಷದ ವಿರುದ್ಧ ಮಾತನಾಡದಿದ್ದರೂ ನನ್ನನ್ನು ದೂರ ಇಟ್ಟರು. ಸದ್ಯಕ್ಕೆ ಏನನ್ನೂ ಹೇಳಲಾರೆ. ಕಾದು ನೋಡಿ, ಸೂಕ್ತ ನಿರ್ಧಾರಕ್ಕೆ ಬರುತ್ತೇನೆ’ ಎಂದರು.

## ವಿವಾದದ ಸ್ವರೂಪ ಪಡೆದ ಕಮಲ್ ಹಾಸನ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ತಮಿಳಿನಿಂದ ಹುಟ್ಟಿರುವುದು ಎಂದು ನಟ ಕಮಲ್ ಹಾಸನ್ ಶನಿವಾರ ನೀಡಿರುವ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

ಚೆನ್ನೈನಲ್ಲಿ ನಡೆದ 'ಥಗ್ ಲೈಫ್' ಚಿತ್ರದ ಧ್ವನಿಸುರುಳಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಕಮಲ್ ಹಾಸನ್ ತಮಿಳು ಭಾಷೆಯನ್ನು ಹಾಡಿ ಹೊಗಳಿದ್ದರು. ಚಿತ್ರರಂಗಕ್ಕೆ ರಾಜ್‌ಕುಮಾರ್ ಕುಟುಂಬ, ಶಿವರಾಜ್‌ಕುಮಾರ್ ಕೊಡುಗೆ ಶ್ಲಾಘಿಸಿದ ಅವರು, ರಾಜ್‌ಕುಮಾರ್ ಕುಟುಂಬದ ಜತೆಗಿನ ಒಡನಾಟವನ್ನು ನೆನಪಿಸಿಕೊಂಡಿದ್ದರು. ಕನ್ನಡ ಭಾಷೆ ತಮಿಳಿನಿಂದಲೇ ಹುಟ್ಟಿರುವುದು, ತಮಿಳು ಮೂಲ ಭಾಷೆ ಎಂಬ ಅರ್ಥದಲ್ಲಿ ಮಾತನಾಡಿದ್ದರು. ನಟ ಶಿವರಾಜ್ ಕುಮಾರ್ ಕೂಡ ಆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಅವರ ಎದುರೇ ಕನ್ನಡವನ್ನು ತಮಿಳಿನೊಂದಿಗೆ ಹೋಲಿಸಿರುವುದು ವಿವಾದಕ್ಕೆ ಗುರಿಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕಮಲ್ ಹಾಸನ್ ಮಾತಿನ ವಿಡಿಯೊ ಹರಿದಾಡಿದ್ದು, ಭಾರಿ ವಿರೋಧ ವ್ಯಕ್ತವಾಗಿದೆ.

ಮಣಿರತ್ನಂ ನಿರ್ದೇಶನದಲ್ಲಿ ಕಮಲ್ ಹಾಸನ್ ನಟನೆಯ 'ಥಗ್ ಲೈಫ್' ಸಿನಿಮಾ ಜೂ.5ರಂದು ತೆರೆ ಕಾಣುತ್ತಿದೆ. ಪ್ರಚಾರಕ್ಕಾಗಿ ಕಮಲ್ ಹಾಸನ್ ಮತ್ತು ಚಿತ್ರತಂಡ ಮಂಗಳವಾರ ಬೆಂಗಳೂರಿಗೆ ಬಂದಿತ್ತು.

### ಸಚಿವ ಈಶ್ವರ ಖಂಡ್ರೆ ಹೇಳಿಕೆ

## ಅರಣ್ಯ ಸಾಗುವಳಿ: 2.55 ಲಕ್ಷ ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಹಕ್ಕು ಕಾಯ್ದೆ ಅಡಿ ಭೂ ಮಂಜೂರಾತಿ ಕೋರಿ ಸಲ್ಲಿಕೆಯಾಗಿದ್ದ 2.71 ಲಕ್ಷ ಅರ್ಜಿಗಳಲ್ಲಿ 2.55 ಲಕ್ಷ ಅರ್ಜಿಗಳು ತಿರಸ್ಕೃತವಾಗಿವೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಪಾರಂಪರಿಕ ಅರಣ್ಯವಾಸಿಗಳು ಮತ್ತು ಬುಡಕಟ್ಟು ಸಮುದಾಯದ ಜನರ ಜೀವನಕ್ಕೆ ಆಧಾರವಾಗಿರುವ ಅರಣ್ಯ ಭೂಮಿಯ ಒಡೆತನ ನೀಡಲು ಕೇಂದ್ರ ಸರ್ಕಾರ ಅರಣ್ಯ ಹಕ್ಕು ಕಾಯ್ದೆ ಜಾರಿಗೊಳಿಸಿದೆ. ಆದರೆ, ನಿಯಮದಂತೆ ಅಗತ್ಯ ದಾಖಲೆಗಳನ್ನು ಅರ್ಜಿದಾರರು ನೀಡಿಲ್ಲ. 16,685 ಅರ್ಜಿಗಳಿಗೆ ಸಾಗುವಳಿ ಹಕ್ಕು ನೀಡಲಾಗಿದೆ ಎಂದರು.

ತಿರಸ್ಕೃತವಾದ ಅರ್ಜಿದಾರರು ಸಾಗುವಳಿ ಮಾಡಿರುವ 3 ಲಕ್ಷಕ್ಕೂ ಹೆಚ್ಚು ಎಕರೆ ಭೂಮಿ ಮರು ವಶಕ್ಕೆ ಪಡೆದಿಲ್ಲ. ದಾಖಲೆ ಸಲ್ಲಿಸಲು ಅವರಿಗೆ ಮತ್ತೊಮ್ಮೆ ಅವಕಾಶ ನೀಡುವ ಕುರಿತು ಚಿಂತನೆ ನಡೆದಿದೆ ಎಂದು ಹೇಳಿದರು.

ರಾಜ್ಯದಲ್ಲಿ 40 ಸಾವಿರ ಚದರ ಕಿ.ಮೀ ಅರಣ್ಯವಿದೆ. 2.15 ಲಕ್ಷ ಎಕರೆ ಒತ್ತುವರಿಯಾಗಿದೆ. ಒತ್ತುವರಿ ಜತೆಗೆ ಖಾಸಗಿ ಭೂಮಿ ಖರೀದಿಸಿ ಅರಣ್ಯ ಪ್ರದೇಶ ವಿಸ್ತರಣೆ ಮಾಡುವ ಗುರಿ ಇಟ್ಟುಕೊಂಡಿದ್ದೇವೆ. ಆ ಮೂಲಕ ಶೇ 33ರಷ್ಟು ಅರಣ್ಯ ಪ್ರದೇಶ ವಿಸ್ತರಣೆಗೆ ಯೋಜನೆ ರೂಪಿಸಲಾಗಿದೆ. ಎರಡು ವರ್ಷಗಳಲ್ಲಿ ಸುಮಾರು 8.5 ಕೋಟಿ ಸಸಿಗಳನ್ನು ನೆಟ್ಟು, ಪೋಷಿಸಲಾಗಿದೆ. 1,20,975 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು, 25 ಹೊಸ ವೃಕ್ಷೋದ್ಯಾನ ಮತ್ತು 35 ದೇವರ ಕಾಡು ನಿರ್ಮಾಣ ಮಾಡಲಾಗಿದೆ ಎಂದರು.

ಜಿಲ್ಲಾಮಟ್ಟದ ಸಮಿತಿಗಳ ಶಿಫಾರಸಿನಂತೆ 3,30,186.93 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯ ಎಂದು ಅಧಿಸೂಚಿಸಲಾಗಿದೆ. ಗುರುತಿಸಿರುವ ಭೂಮಿಯಲ್ಲಿ ಸರ್ಕಾರಿ ಕಚೇರಿ, ಆಸ್ಪತ್ರೆ, ಪಟ್ಟಾ ಜಮೀನು ಇರುವ ಕಾರಣ ಸುಪ್ರೀಂಕೋರ್ಟ್‌ಗೆ ಮನವಿ ಮಾಡಲಾಗಿದ್ದು, ಸಮಿತಿ ರಚಿಸಿ, ಪರಿಷ್ಕರಣೆ ಮಾಡಲಾಗುವುದು ಎಂದು ಹೇಳಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಜುಂ ಪರ್ವೇಜ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ ಇದ್ದರು.

### ವನ್ಯಜೀವಿ ಪಳೆಯುಳಿಕೆ, ಆನೆ ದಂತ ನಾಶ

ಅರಣ್ಯ ಇಲಾಖೆ ವಶದಲ್ಲಿರುವ 2,748 ಆನೆದಂತ, ಹುಲಿ ಉಗುರು, ವನ್ಯಜೀವಿ ಪಳೆಯುಳಿಕೆಗಳನ್ನು ನಾಶ ಮಾಡಲು ಸಿದ್ಧತೆ ನಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮತಿ ನೀಡಿದ ತಕ್ಷಣ ನಾಶಪಡಿಸುವ ಪ್ರಕ್ರಿಯೆ ಆರಂಭಿಸಲಾಗುವುದು. ಅರಣ್ಯ ಅಪರಾಧಗಳನ್ನು ತಡೆಯಲು ಮತ್ತು ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಮಾಡಲು ಗರುಡಾಕ್ಷಿ- ಆನ್‌ಲೈನ್ ಎಫ್‌ಐಆರ್ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದು ಸಚಿವ ಖಂಡ್ರೆ ಮಾಹಿತಿ ನೀಡಿದರು.

ಜಾರ್ಖಂಡ್‌ನ ಪಲಾಮು ಜಿಲ್ಲೆಯಲ್ಲಿ ನಡೆದ ಘಟನೆ • ಛತ್ತೀಸಗಢದಲ್ಲಿ 18 ನಕ್ಸಲರ ಶರಣಾಗತಿ

# ಗುಂಡಿನ ಚಕಮಕಿ: ನಕ್ಸಲ್ ಕಮಾಂಡರ್ ಬಲಿ

**ಮೇದಿನಿನಗರ, ಜಾರ್ಖಂಡ್ (ಪಿಟಿಐ):** ಇಲ್ಲಿನ ಪಲಾಮು ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಹಾಗೂ ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಸಂಘಟನೆಯ ಕಮಾಂಡರ್ ಮೃತಪಟ್ಟಿದ್ದಾರೆ.

ಎನ್‌ಕೌಂಟರ್‌ನಲ್ಲಿ ಮತ್ತೊಬ್ಬ ಸದಸ್ಯ ಗಾಯಗೊಂಡಿದ್ದು, ಆತನ ತಲೆಗೆ ₹15 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೋಧ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ ನಡೆದಿದ್ದು, ಸ್ಥಳದಿಂದ ಸ್ವಯಂಚಾಲಿತ ರೈಫಲ್ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಹೈದರ್‌ನಗರ್ ಹಾಗೂ ಮೊಹಮ್ಮದ್‌ಗಂಜ್ ಪೊಲೀಸ್ ಠಾಣಾ ವ್ಯಾಪ್ತಿಯ ಮಧ್ಯದಲ್ಲಿರುವ ಸೀತಾಚುವಾನ್ ಪ್ರದೇಶದಲ್ಲಿ ಎನ್‌ಕೌಂಟರ್ ನಡೆದಿದೆ. ನಕ್ಸಲ್ ತುಳಸಿ ಭುನಿಯಾನ್ ಅವರ ಮೃತದೇಹ ಸಿಕ್ಕಿದೆ' ಎಂದು ಪಲಾಮು ಡಿಐಜಿ ವೈ.ಎಸ್.ರಮೇಶ್ ತಿಳಿಸಿದ್ದಾರೆ.

'ಮತ್ತೊಬ್ಬ ನಕ್ಸಲ್ ನಿತೀಶ್ ಯಾದವ್ ಅವರು ಗುಂಡೇಟಿನಿಂದ ಗಾಯಗೊಂಡಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಕೆಲ ದಿನಗಳಿಂದ ದೊಡ್ಡ ಪ್ರಮಾಣದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ಆರಂಭಿಸಲಾಗಿದ್ದು, ಮೂವರು ಪ್ರಮುಖ ನಕ್ಸಲ್ ಮುಖಂಡರನ್ನು ಹತ್ಯೆ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

**ಸುಕ್ಮಾದಲ್ಲಿ 18 ನಕ್ಸಲರ ಶರಣಾಗತಿ:** ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ 18 ಮಂದಿ ನಕ್ಸಲರು ಸೋಮವಾರ ಭದ್ರತಾ ಪಡೆಗಳ ಮುಂದೆ ಶರಣಾಗಿದ್ದಾರೆ. ಈ ಪೈಕಿ 10 ಮಂದಿಯ ಮಾಹಿತಿ ನೀಡಿದವರಿಗೆ ಸರ್ಕಾರ ₹38 ಲಕ್ಷ ಬಹುಮಾನ ಘೋಷಿಸಿತ್ತು.

'ನಕ್ಸಲರು ಸ್ಥಳೀಯ ಬುಡಕಟ್ಟು ಸಮುದಾಯದ ಜನರ ಮೇಲೆ ನಡೆಸುತ್ತಿದ್ದ ಅಮಾನವೀಯ ದಾಳಿಗೆ ಬೇಸತ್ತು ಈ ನಕ್ಸಲರು ಸ್ವಯಂಪ್ರೇರಿತರಾಗಿ ಶರಣಾಗತರಾಗಲು ಮುಂದೆ ಬಂದಿದ್ದಾರೆ' ಎಂದು ಸುಕ್ಮಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವ್ಹಾಣ್ ತಿಳಿಸಿದರು.

ಒಡಿಶಾದ ರಾಯಗಢ ಪೊಲೀಸ್ ವರಿಷ್ಠಾಧಿಕಾರಿಯ ಮುಂದೆ ಛತ್ತೀಸಗಢ ಬಿಜಾಪುರ ಜಿಲ್ಲೆಯ ಸಿಪಿಐ (ಮಾವೋವಾದಿ) ನಕ್ಸಲ್ ಬಿಜಯ್ ಪುಣೇಂ ಅವರು ಶರಣಾದರು.



ಜಾರ್ಖಂಡ್‌ನಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆಯ ಸಂಗ್ರಹ ಚಿತ್ರ

## ಶಂಕಿತ ಉಗ್ರ ಸಾವು

**ಚಂಡೀಗಢ (ಪಿಟಿಐ):** ಬಯಲು ಪ್ರದೇಶದಲ್ಲಿ ಇರಿಸಲಾಗಿದ್ದ ಸ್ಫೋಟಕ ವಸ್ತುಗಳನ್ನು ಸಂಗ್ರಹಿಸುವಾಗ ಸ್ಫೋಟ ಸಂಭವಿಸಿ ಶಂಕಿತ ಖಲಿಸ್ತಾನ ಉಗ್ರನೊಬ್ಬ ಮೃತಪಟ್ಟಿದ್ದಾನೆ. ಪಂಜಾಬ್‌ನ ಅಮೃತಸರದಲ್ಲಿ ಮಜಿತಾ ರಸ್ತೆಯಲ್ಲಿ ಮಂಗಳವಾರ ಘಟನೆ ನಡೆದಿದೆ.

'ಸ್ಫೋಟದ ತೀವ್ರತೆಗೆ ಮೃತನ ಎರಡೂ ಕೈಗಳು ಛಿದ್ರವಾಗಿವೆ. ಮೃತನಿಗೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ (ಬಿಕೆಐ) ಸೇರಿದಂತೆ ಕೆಲ ಭಯೋತ್ಪಾದಕ ಸಂಘಟನೆಗಳ ಜೊತೆಗೆ ಸಂಪರ್ಕವಿರುವ ಶಂಕೆ ಇದೆ' ಎಂದು ಡಿಐಜಿ (ಗಡಿ ವಲಯ) ಸತಿಂದರ್ ಸಿಂಗ್ ತಿಳಿಸಿದರು.

ವ್ಯಕ್ತಿ ಹಿಡಿದಿದ್ದ ಸ್ಫೋಟಕವು ಸಿಡಿದಿವೆ. ಆತನ ಗುರುತು ಪತ್ತೆಯಾಗಿಲ್ಲ. ಸಾಂದರ್ಭಿಕ ಸಾಕ್ಷ್ಯಗಳ ಪ್ರಕಾರ ಆತ ಉಗ್ರ ಸಂಘಟನೆ ಒಂದರ ಸದಸ್ಯ ಎಂಬುದು ಸ್ಪಷ್ಟವಾಗಿದ್ದು, ಇದನ್ನು ದೃಢಪಡಿಸುವ ಸುಳಿವು ಆತನ ಪ್ಯಾಂಟ್‌ನ ಜೇಬಿನಲ್ಲಿ ಸಿಕ್ಕಿದೆ ಎಂದು ಹೇಳಿದರು.

'ಸ್ಫೋಟದ ಪರಿಣಾಮ ಈ ವಲಯದಲ್ಲಿ ತೀವ್ರ ಆತಂಕ ನಿರ್ಮಾಣವಾಗಿತ್ತು ಎಂದರು.

## ರಾಜ್ಯಸಭೆ ಪ್ರವೇಶಕ್ಕೆ ಕಮಲ್ ಸಜ್ಜು

ಪ್ರಜಾವಾಣಿ ವಾರ್ತೆ



**ಚೆನ್ನೈ:** ನಟ, ರಾಜಕಾರಣಿ ಕಮಲ್ ಹಾಸನ್ ಅವರು ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷದ ಬೆಂಬಲದೊಂದಿಗೆ ರಾಜ್ಯಸಭೆಗೆ ಪ್ರವೇಶಿಸಲು ಸಜ್ಜಾಗಿದ್ದಾರೆ.

ಲೋಕಸಭಾ ಚುನಾವಣೆಗೆ ಮುನ್ನ 2024ರ ಮಾರ್ಚ್‌ನಲ್ಲಿ ಕಮಲ್ ಹಾಸನ್ ನೇತೃತ್ವದ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷವು ಡಿಎಂಕೆ ನೇತೃತ್ವದ ಮೈತ್ರಿಕೂಟದೊಂದಿಗೆ ಕೈಜೋಡಿಸಿತ್ತು. ಈ ವೇಳೆ 70 ವರ್ಷದ ಕಮಲ್ ಹಾಸನ್ ಅವರನ್ನು ರಾಜ್ಯಸಭೆಗೆ ಕಳುಹಿಸುವ ಭರವಸೆಯನ್ನು ನೀಡಲಾಗಿತ್ತು.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ತೋರದೇ ಇದ್ದ ಕಮಲ್ ಹಾಸನ್ ಅವರು ರಾಜ್ಯಸಭೆಯ ಸ್ಥಾನವನ್ನು ಕೇಳಿದ್ದರು.

'ಡಿಎಂಕೆ ಗೆಲ್ಲಬಹುದಾದ ನಾಲ್ಕು ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ ಕಮಲ್ ಹಾಸನ್ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ. ಉಳಿದ ಮೂರು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಡಿಎಂಕೆಯ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

2024ರಲ್ಲಿ ನಡೆದ ಒಪ್ಪಂದದ ಭಾಗವಾಗಿ, ಕಮಲ್ ಹಾಸನ್ ಅವರು ಲೋಕಸಭಾ ಚುನಾವಣೆ ವೇಳೆ ಡಿಎಂಕೆ ಮೈತ್ರಿಕೂಟ ಅಭ್ಯರ್ಥಿಗಳ ಪರವಾಗಿ ರಾಜ್ಯಾದ್ಯಂತ ಪ್ರಚಾರ ಮಾಡಿದ್ದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸವಾಲನ್ನು ಎದುರಿಸಲು ಕಮಲ್ ಹಾಸನ್ ಅವರ ತಾರಾ ವರ್ಚಸ್ಸನ್ನು ಬಳಸಿಕೊಳ್ಳಲು ಡಿಎಂಕೆ ಯೋಜನೆ ಹಾಕಿಕೊಂಡಿದೆ.

ವಕ್ಫ್ ಕಾಯ್ದೆ–1995 ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿ ವಿಚಾರಣೆ

# ಕೇಂದ್ರ, ರಾಜ್ಯಗಳಿಗೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ವಕ್ಫ್ ಕಾಯ್ದೆ–1995ರಲ್ಲಿನ ಕೆಲ ಅವಕಾಶಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳಿಗೆ ಸಂಬಂಧಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನೋಟಿಸ್ ಜಾರಿ ಮಾಡಿದೆ.

ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ಹಾಗೂ ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇದ್ದ ನ್ಯಾಯಪೀಠವು, ವಕ್ಫ್ ಕಾಯ್ದೆ–1995 ಪ್ರಶ್ನಿಸಿ ನಿಖಿಲ್ ಉಪಾಧ್ಯಾಯ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ, ನೋಟಿಸ್ ಜಾರಿ ಮಾಡಿದೆ.



ವಕ್ಫ್ ಕಾಯ್ದೆ–1995ರಲ್ಲಿನ ಕೆಲ ಅವಕಾಶಗಳ ಸಿಂಧುತ್ವ ಪ್ರಶ್ನಿಸಿ ವಕೀಲ ವಿಷ್ಣುಶಂಕರ್ ಜೈನ್ ಅವರು ಅರ್ಜಿ ಸಲ್ಲಿಸಿದ್ದಾರೆ. ಇದೇ ವಿಚಾರವಾಗಿ ಸಲ್ಲಿಕೆಯಾಗಿರುವ ಇತರ ಅರ್ಜಿಗಳೊಂದಿಗೆ ಜೈನ್ ಅವರ ಅರ್ಜಿಯನ್ನು ಒಟ್ಟುಗೂಡಿಸಿ, ನ್ಯಾಯಪೀಠ ವಿಚಾರಣೆ ನಡೆಸಲಿದೆ.

ವಕ್ಫ್ ಕಾಯ್ದೆ–1995ಕ್ಕೆ ಪ್ರಸಕ್ತ ವರ್ಷ ತಿದ್ದುಪಡಿ ತರಲಾಗಿದೆ.

ಇದಕ್ಕೂ ಮುನ್ನ, ಕೇಂದ್ರ ಸರ್ಕಾರ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ, 'ವಕ್ಫ್ ಕಾಯ್ದೆಗೆ ಪ್ರಸಕ್ತ ವರ್ಷ ತಿದ್ದುಪಡಿ ತರುವುದಕ್ಕೂ ಮೊದಲೇ, ಈ ಕಾಯ್ದೆಯಲ್ಲಿನ ಅವಕಾಶಗಳ ಸಿಂಧುತ್ವ ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಿದ್ದಾರೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ವಕ್ಫ್ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಮಧ್ಯಂತರ ತಡೆಯಾಜ್ಞೆ ನೀಡುವುದಕ್ಕೆ ಸಂಬಂಧಿಸಿದ ತನ್ನ ಆದೇಶವನ್ನು ಮೇ 22ರಂದು ಕಾಯ್ದಿರಿಸಿದೆ.

# ಸಾವರ್ಕರ್ ಹೆಸರು ದುರ್ಬಳಕೆ ಅರ್ಜಿ ವಿಚಾರಣೆಗೆ ನಕಾರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ವಿನಾಯಕ ದಾಮೋದರ ಸಾವರ್ಕರ್ ಅವರ ಕುರಿತಾಗಿ ಕೆಲವು 'ಸಂಗತಿಗಳನ್ನು ಸಾಬೀತು ಮಾಡಲು' ನಿರ್ದೇಶನ ನೀಡಬೇಕು, ಅವರ ಹೆಸರಿನ ದುರ್ಬಳಕೆ ತಡೆಯಬೇಕು ಎಂಬ ಕೋರಿಕೆ ಇರುವ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ತಾವು ಸಲ್ಲಿಸಿದ್ದ ಅರ್ಜಿಯ ಪರವಾಗಿ ತಾವೇ ವಾದ ಮಂಡಿಸಲು ಅರ್ಜಿದಾರ ಪಂಕಜ್ ಫಡ್ನಿಸ್ ಬಂದಿದ್ದರು. ತಾವು ಹಲವು ವರ್ಷಗಳಿಂದ ಸಾವರ್ಕರ್ ಬಗ್ಗೆ ಸಂಶೋಧನೆ ನಡೆಸುತ್ತಿರುವುದಾಗಿ ಅವರು ಹೇಳಿಕೊಂಡಿದ್ದರು. ಈ ಅರ್ಜಿಯು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠದ ಮುಂದೆ ಬಂದಿತ್ತು.

ಲಾಂಛನ ಮತ್ತು ಹೆಸರುಗಳ (ಅಸಮರ್ಪಕ ಬಳಕೆ ತಡೆ) ಕಾಯ್ದೆ–1956ರ ಪರಿಚ್ಛೇದದಲ್ಲಿ ಸಾವರ್ಕರ್ ಅವರ ಹೆಸರನ್ನು ಸೇರಿಸಬೇಕು ಎಂಬ ಕೋರಿಕೆಯನ್ನೂ ಈ ಅರ್ಜಿಯ ಹೊಂದಿತ್ತು. ಅರ್ಜಿದಾರರ ಮೂಲಭೂತ ಹಕ್ಕುಗಳಿಗೆ ಧಕ್ಕೆ ಆಗಿಲ್ಲ, ಹೀಗಿರುವಾಗ ಅರ್ಜಿಯ ವಿಚಾರವಾಗಿ ಮಧ್ಯಪ್ರವೇಶ ಮಾಡಲು ನ್ಯಾಯಾಲಯಕ್ಕೆ ಸಾಧ್ಯವಿಲ್ಲ ಎಂದು ಪೀಠವು ಹೇಳಿತು.

ಸಾವರ್ಕರ್ ಅವರ ಬಗ್ಗೆ ಕೆಲವು ಹೇಳಿಕೆಗಳನ್ನು ನೀಡುವ ಮೂಲಕ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮೂಲಭೂತ ಕರ್ತವ್ಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಫಡ್ನಿಸ್ ದೂರಿದ್ದರು.

'ಇಲ್ಲಿ ನಿಮ್ಮ ಯಾವ ಮೂಲಭೂತ ಹಕ್ಕಿನ ಉಲ್ಲಂಘನೆ ಆಗಿದೆ? ಅರ್ಜಿಯನ್ನು ನಾವು ಪರಿಗಣಿಸಲು ಆಗುವುದಿಲ್ಲ' ಎಂದು ಪೀಠವು ಹೇಳಿತು.

# ಸಾಲ: ಒಂದೇ ಕುಟುಂಬದ 7 ಮಂದಿ ಆತ್ಮಹತ್ಯೆ

**ಚಂಡೀಗಢ (ಪಿಟಿಐ):** ಬ್ಯಾಂಕ್‌ಗಳಿಂದ ಪಡೆದ ಸಾಲ ತೀರಿಸಲಾಗದೆ ಮನನೊಂದು, ಒಂದೇ ಕುಟುಂಬದ ಏಳು ಮಂದಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಹರಿಯಾಣದ ಪಂಚಕುಲಾದಲ್ಲಿ ನಡೆದಿದೆ.

ಪಂಚಕುಲಾ ಸಮೀಪದ ಸಕೇತಡಿ ನಿವಾಸಿ ಪ್ರವೀಣ್ ಮಿತ್ತಲ್ (41), ಅವರ ಪತ್ನಿ, ಪೋಷಕರು ಹಾಗೂ ಮೂವರು ಮಕ್ಕಳು ಆತ್ಮಹತ್ಯೆ ಮಾಡಿಕೊಂಡವರು. ಮಕ್ಕಳ ಪೈಕಿ ಇಬ್ಬರು ಅವಳಿ ಹೆಣ್ಣುಮಕ್ಕಳು ಎಂದು ತಿಳಿದುಬಂದಿದೆ.

ಸೋಮವಾರ ತಡರಾತ್ರಿ ಪಂಚಕುಲಾ ಸೆಕ್ಟರ್ 27ರಲ್ಲಿ ರಸ್ತೆ ಬದಿ ಕಾರು ನಿಂತಿರುವುದನ್ನು ಸ್ಥಳೀಯರು ಗಮನಿಸಿದ್ದಾರೆ. ಕಾರಿನ ಒಂದು ಬಾಗಿಲು ತೆರೆದಿರುವುದನ್ನು ನೋಡಿ, ಹತ್ತಿರಕ್ಕೆ ತೆರಳಿದ್ದಾರೆ. ಕಾರಿನಲ್ಲಿ ಕುಳಿತಿದ್ದ ವ್ಯಕ್ತಿಯನ್ನು ಮಾತನಾಡಿಸಿದ್ದಾರೆ. ಆಗ, 'ಕುಟುಂಬದವರೆಲ್ಲರೂ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು, ನಾನೂ ಸಾಯಲು ಮುಂದಾಗಿದ್ದೇನೆ' ಎಂದು ಆ ವ್ಯಕ್ತಿ ತಿಳಿಸಿದ್ದಾರೆ.

'ಕಾರಿನಲ್ಲಿದ್ದ ಆ ವ್ಯಕ್ತಿಗೆ ಉಸಿರಾಡುವುದು ಕಷ್ಟವಾಗಿತ್ತು. ಏಕಾಏಕಿ ಕುಸಿದುಬಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ದೆವು. ಬ್ಯಾಂಕ್‌ಗಳಿಂದ ಅಪಾರ ಸಾಲ ಪಡೆದಿದ್ದು, ತೀರಿಸಲಿಕ್ಕಾಗದೆ ಆತ್ಮಹತ್ಯೆಗೆ ಮುಂದಾಗಿದ್ದಾಗಿ ಅವರು ತಿಳಿಸಿದ್ದರು' ಎಂದು ಸ್ಥಳೀಯರು ಹೇಳಿದ್ದಾರೆ.

ಇದೊಂದು ಆತ್ಮಹತ್ಯೆ ಪ್ರಕರಣ ಎಂಬುದಾಗಿ ಮೇಲ್ನೋಟಕ್ಕೆ ಕಂಡುಬಂದಿದೆ. ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪಂಚಕುಲಾ ಡಿಸಿಪಿ ಹಿಮಾದ್ರಿ ಕೌಶಿಕ್ ತಿಳಿಸಿದ್ದಾರೆ.

# ಹುಲಿ ದಾಳಿ ಇಬ್ಬರ ಸಾವು

**ಚಂದ್ರಾಪುರ (ಪಿಟಿಐ):** ಪ್ರತ್ಯೇಕ ಘಟನೆಗಳಲ್ಲಿ ಪುರುಷ ಮತ್ತು ಮಹಿಳೆ ಹುಲಿ ದಾಳಿಯಿಂದ ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯಲ್ಲಿ ಮಂಗಳವಾರ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಲ್ ತಾಲ್ಲೂಕಿನ ಚಿರೋಲಿ ಗ್ರಾಮದ ನಂದಾ ಸಂಜಯ್ ಮಕಲವಾರ್ (45) ಹಾಗೂ ಕಾಂತಾಪೇಟೆಯ ಸುರೇಶ್ ಸೋಪಾನಕರ್ (52) ಮೃತಪಟ್ಟವರು.



❦ ಸುಭಾಷಿತ ❦

ಉತ್ಸಾಹದಿಂದ ಕೆಲಸ ಮಾಡುವವನು ತನ್ನ ಗುರಿ ಮುಟ್ಟಿಯೇ ತೀರುತ್ತಾನೆ.

–ಮಹರ್ಷಿ ವಾಲ್ಮೀಕಿ

# ರವಿಕುಮಾರ್ ಮಾತು ಖಂಡನಾರ್ಹ ಕಠಿಣ ಕ್ರಮ ತ್ವರಿತವಾಗಿ ಆಗಲಿ

**ವಿಧಾನಪರಿಷತ್** ಸದಸ್ಯ, ಬಿಜೆಪಿಯ ಎನ್. ರವಿಕುಮಾರ್ ಅವರು ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು 'ಪಾಕಿಸ್ತಾನದವರೋ ಅಥವಾ ಭಾರತದವರೋ ಎಂಬುದು ಖಚಿತವಾಗಿಲ್ಲ' ಎಂದು ಹೇಳಿರುವುದು ಖಂಡನೆಗೆ ಅರ್ಹ. ಈ ಮಾತು ಅಪಮಾನಕಾರಿ ಮಾತ್ರವೇ ಅಲ್ಲ ಅಪಾಯಕಾರಿಯೂ ಹೌದು. ಬಿಜೆಪಿಯ ನಾಯಕರು ಮುಸ್ಲಿಮರನ್ನು ಗುರಿಯಾಗಿಸಿಕೊಂಡು, ಅವರಿಗೆ ದೇಶದ ಬಗ್ಗೆ 'ನಿಷ್ಠೆ ಇಲ್ಲ' ಎಂಬ ಅನುಮಾನ ಇತರರಲ್ಲಿ ಮೂಡಬೇಕು ಎಂಬ ಉದ್ದೇಶದಿಂದ ಇಂತಹ ಮಾತಿನ ದಾಳಿಗಳನ್ನು ಮಾಡುತ್ತಿದ್ದಾರೆ. ಅದರ ಭಾಗ ರವಿಕುಮಾರ್ ಆಡಿರುವ ಮಾತುಗಳು. ಇಂತಹ ಮಾತುಗಳು ಮುಸ್ಲಿಮರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರ ಸರಿಸುವುದಕ್ಕೆ ಇಂಬು ಕೊಡುವಂಥವು. ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ರಾಜ್ಯದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಮನೆಯಲ್ಲೇ 'ಅರ್ಧ ಪಾಕಿಸ್ತಾನ ಇದೆ' ಎಂದು ಹಿಂದೊಮ್ಮೆ ನಿಂದಿಸಿದ್ದರು. ದಿನೇಶ್ ಅವರು ಮುಸ್ಲಿಂ ಮಹಿಳೆಯನ್ನು ಮದುವೆಯಾಗಿರುವ ಕಾರಣಕ್ಕೆ ಯತ್ನಾಳ ಈ ಬಗೆಯಲ್ಲಿ ಮಾತನಾಡಿದ್ದರು. ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಮಧ್ಯಪ್ರದೇಶದ ಸಚಿವ ವಿಜಯ್ ಶಾ ಅವರು, 'ಪಾಕಿಸ್ತಾನದಲ್ಲಿ ಇರುವ ಸಮುದಾಯದವರ ಸಹೋದರಿ' ಎಂದು ಕರೆದಿದ್ದರು.



ಇಂತಹ ವಿಭಜನಕಾರಿ ವರ್ತನೆಗಳ ವಿರುದ್ಧ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ, ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಬುನಾದಿಗೆ ಪೆಟ್ಟು ಬೀಳುತ್ತದೆ

ಇಂತಹ ಮಾತುಗಳು ಮುಸ್ಲಿಮರ ತ್ಯಾಗ, ಸೇವೆ, ಸಾಂವಿಧಾನಿಕವಾಗಿ ಅವರು ಹೊಂದಿರುವ ಸ್ಥಾನ ಏನೇ ಇದ್ದರೂ ಅವರನ್ನು ಅನುಮಾನಕ್ಕೆ ಗುರಿಮಾಡುವ ಉದ್ದೇಶದ ಪ್ರಯತ್ನದ ಭಾಗ.

ಐಎಎಸ್ ಅಧಿಕಾರಿಯಾಗಿರುವ ಫೌಜಿಯಾ ಅವರ ನಿಷ್ಠೆಯನ್ನು ಅವರ ಧರ್ಮದ ಕಾರಣಕ್ಕೆ ಪ್ರಶ್ನಿಸುವುದು ವೈಯಕ್ತಿಕ ಮಟ್ಟದ ನಿಂದೆಯಷ್ಟೇ ಅಲ್ಲ, ಅದು ನಾಗರಿಕ ಸೇವೆಗಳಿಗೆ ಹಾಗೂ ದೇಶದ ಅಧಿಕಾರಿಶಾಹಿಯ ಧರ್ಮನಿರಪೇಕ್ಷ ನೆಲಗಟ್ಟಿಗೆ ಮಾಡುವ ಅವಮಾನವೂ ಹೌದು. ರವಿಕುಮಾರ್ ಆಡಿರುವ ಮಾತುಗಳನ್ನು ಐಎಎಸ್ ಅಧಿಕಾರಿಗಳ ಸಂಘವು ಖಂಡಿಸಿರುವುದು ಸರಿಯಾಗಿಯೇ ಇದೆ. ಆದರೆ ಇಂತಹ ಮಾತುಗಳಿಗೆ ಈ ಬಗೆಯ ಖಂಡನೆ ಮಾತ್ರವೇ ಸಾಕಾಗುವುದಿಲ್ಲ. ಇಂತಹ ಮಾತು ಆಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಸೇವೆಯಲ್ಲಿ ಇರುವವರನ್ನು ಅವರ ಧರ್ಮದ ಕಾರಣಕ್ಕೆ ನಿಂದಿಸಿದಾಗ, ಸರ್ಕಾರದ ಕರ್ತವ್ಯದಲ್ಲಿ ಇರುವ ಅಲ್ಪಸಂಖ್ಯಾತ ಸಮುದಾಯದವರಲ್ಲಿ ಭೀತಿ ಮೂಡಿಸುವ ಸಂದೇಶವೊಂದು ರವಾನೆಯಾಗುತ್ತದೆ. ಅಂದರೆ, ಯಾವುದೇ ಹುದ್ದೆಯಲ್ಲಿ, ಎಷ್ಟೇ ದೊಡ್ಡ ಸ್ಥಾನದಲ್ಲಿ ಇದ್ದರೂ ಪೂರ್ವಗ್ರಹಪೀಡಿತ ವಾಗ್ದಾಳಿಗಳಿಂದ ತಮಗೆ ರಕ್ಷಣೆ ಇಲ್ಲ ಎಂಬ ಸಂದೇಶವು ಅವರಿಗೆ ರವಾನೆಯಾಗುತ್ತದೆ. ರವಿಕುಮಾರ್, ವಿಜಯ್ ಶಾ ಅವರಂತಹ ಮುಖಂಡರ ವಿರುದ್ಧ ಕ್ರಮ ಜರುಗಿಸಲು ಬಿಜೆಪಿಯು ಹಿಂದೇಟು ಹಾಕುತ್ತಿರುವುದು, ಅಂತಹ ಮಾತುಗಳನ್ನು ಪಕ್ಷವು ಒಪ್ಪುತ್ತದೆ ಎಂಬ ಪರೋಕ್ಷ ಸಂದೇಶವನ್ನು ನೀಡುತ್ತಿದೆ. 'ನಾನು ಬಾಯಿತಪ್ಪಿ ಹಾಗೆ ಮಾತನಾಡಿದೆ' ಎಂಬ ಕಾರಣ ನೀಡಿ ಮುಖಂಡರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾದರೆ, ಅಂತಹ ಮಾತುಗಳನ್ನು ಮತ್ತೆ ಆಡಲು ಇತರರಿಗೆ ಧೈರ್ಯ ಬರುತ್ತದೆ. ದ್ವೇಷದ ನೆಲೆಯಲ್ಲಿ ಮಾತನಾಡುವವರ ವಿರುದ್ಧ ಬಿಜೆಪಿಯು ಕ್ರಮ ಜರುಗಿಸಬೇಕು, ಅದಾಗದಿದ್ದರೆ ಈ ಬಗೆಯಲ್ಲಿ ವಿಷ ಉಗುಳುವುದು ತನ್ನ ರಾಜಕೀಯದ ಒಂದು ಭಾಗ ಎಂಬುದನ್ನು ಒಪ್ಪಿಕೊಳ್ಳಬೇಕು.

ಇಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ್ದೂ ಒಂದಿಷ್ಟು ತಪ್ಪುಗಳಿವೆ. ಇಂತಹ ಪ್ರಕರಣಗಳನ್ನು ಎಷ್ಟು ಗಂಭೀರವಾಗಿ ನಿರ್ವಹಿಸಬೇಕೋ ಅಷ್ಟು ಗಂಭೀರವಾಗಿ ನಿರ್ವಹಿಸುವ ಕೆಲಸ ಕಾಂಗ್ರೆಸ್ಸಿನಿಂದ ಆಗುತ್ತಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುವಂತೆ ಮಾಡುವ ಉದ್ದೇಶ ಇಲ್ಲದೆ, ಎಫ್‌ಐಆರ್ ಮಾತ್ರ ದಾಖಲಿಸುವುದರಿಂದ 'ತಪ್ಪು ಮಾಡಿದರೂ ಶಿಕ್ಷೆ ಆಗದು' ಎಂಬ ಸಂದೇಶ ಹೋಗುತ್ತದೆ. ಇದರಿಂದಾಗಿ ಕಾನೂನಿನ ಮೇಲಿನ ವಿಶ್ವಾಸಕ್ಕೆ ಚ್ಯುತಿ ಬರುತ್ತದೆ, ದ್ವೇಷದ ಮಾತುಗಳು ಇನ್ನಷ್ಟು ಹೆಚ್ಚಾಗುತ್ತವೆ. ಭಾರತದ ಶಕ್ತಿ ಇರುವುದು ಬಹುತ್ವದಲ್ಲಿ, ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ಕಾಪಾಡುವಲ್ಲಿ. ಐಎಎಸ್ ಅಧಿಕಾರಿಯೊಬ್ಬರ ನಿಷ್ಠೆಯನ್ನು ಅವರ ಧರ್ಮದ ಕಾರಣಕ್ಕಾಗಿ ಪ್ರಶ್ನಿಸಿದಾಗ, ಸೇನೆಯ ಕರ್ನಲ್ ಒಬ್ಬರನ್ನು ಅವರ ಧರ್ಮದ ಕಾರಣಕ್ಕಾಗಿ ನಿಂದಿಸಿದಾಗ ಆಗುವ ಹಾನಿಯು ವ್ಯಕ್ತಿಗಳ ಹಂತದಲ್ಲಿ ಮಾತ್ರವೇ ಉಳಿದುಕೊಳ್ಳುವುದಿಲ್ಲ. ಈ ರೀತಿಯ ಪ್ರಕರಣಗಳು ಭಾರತದ ಹೃದಯಕ್ಕೆ ಗಾಯ ಉಂಟುಮಾಡುತ್ತವೆ. ರಾಜಕೀಯ ಮುಖಂಡರು, ಸಮಾಜ ಮತ್ತು ನ್ಯಾಯಾಂಗವು ಇಂತಹ ವಿಭಜನಕಾರಿ ವರ್ತನೆಗಳ ವಿರುದ್ಧ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳದೇ ಇದ್ದರೆ, ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಬುನಾದಿಗೆ ಪೆಟ್ಟು ಬೀಳುತ್ತದೆ. ಇಂತಹ ಕೋಮುವಾದಿ ಕೃತ್ಯಗಳ ಬಗ್ಗೆ ಗಂಭೀರವಾಗಿ ಗಮನ ಹರಿಸಲು, ಇಂತಹ ಕೃತ್ಯಗಳಿಗೆ ಇಂಬು ಕೊಡುವ ಮೌನವನ್ನು ಕೊನೆಗೊಳಿಸಲು ಇದು ಸಕಾಲ.

## ದಿನದ ಟ್ವೀಟ್


### ಸಂಚಾರ ನಿಯಮ: ಉರುಳಾಗದಿರಲಿ



**ಮಂಡ್ಯದಲ್ಲಿ ಟ್ರಾಫಿಕ್ ಪೊಲೀಸರ ಎಡವಟ್ಟಿನಿಂದ ಮಡಿದ ಮೂರು ವರ್ಷದ ಮಗುವಿನ ಪ್ರಕರಣ ನಮ್ಮನ್ನು ಬಡಿದೆಚ್ಚರಿಸಬೇಕು. ಉನ್ನತ ತಂತ್ರಜ್ಞಾನವಿರುವಾಗಲೂ ಇಂತಹ ಕ್ಷುಲ್ಲಕ ಕಾರಣಕ್ಕೆ ಒಂದು ಅಮಾಯಕ ಕಂದಮ್ಮನ ಜೀವ ತೆಗೆದಿದ್ದೇವೆ ಎಂದರೆ ನಾಚಿಕೆಯಾಗಬೇಕು. ಮೊದಲು, ಪೊಲೀಸರು ಸವಾರರನ್ನು ತಡೆಗಟ್ಟದಂತಹ ಕಾನೂನು ಜಾರಿಯಾಗಬೇಕು.**

**ರಾಮಚಂದ್ರ ಎಮ್.,** ಬರಹಗಾರ

## ಕಿಡಿನುಡಿ



**ಮುಂಗಾರು ಮಳೆ ಮುನ್ನೆಚ್ಚರಿಕೆಯಾಗಿ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಅಧಿಕಾರಸ್ಥರು ಜನರ ಸಮಸ್ಯೆಗೆ ಸ್ಪಂದಿಸದೇ ಕ್ರಿಕೆಟ್ ಮ್ಯಾಚ್ ನೋಡಿಕೊಂಡು, ಕಡ್ಲೆಪುರಿ, ಮಸಾಲಪುರಿ ತಿಂದುಕೊಂಡು ಆರಾಮಾಗಿದ್ದಾರೆ.**

**ಆರ್.ಅಶೋಕ,** ವಿರೋಧ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಭಾನುವಾರ, 28-5-2000

- **ಆಲಮಟ್ಟಿ: ಈ ವರ್ಷ ಬಾಗಲಕೋಟೆಯ 4,000 ಮನೆಗಳ ಮುಳುಗಡೆ**

**ವಿಜಾಪುರ, ಮೇ 27–** ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಬರುವ ಆಲಮಟ್ಟಿ ಅಣೆಕಟ್ಟೆಯಲ್ಲಿ 519.6 ಮೀಟರ್‌ವರೆಗೆ ನೀರು ಸಂಗ್ರಹಿಸಲು ರಾಜ್ಯಕ್ಕೆ ಸುಪ್ರೀಂ ಕೋರ್ಟ್ ಈಚೆಗೆ ಅವಕಾಶ ಕಲ್ಪಿಸಿದ ಬಳಿಕ, ಇದಕ್ಕೆ ಸಂಬಂಧಿಸಿದ ಪುನರ್‌ವಸತಿ ಕಾರ್ಯಗಳು ಭರದಿಂದ ಮುಂದುವರಿದಿವೆ.

ವಿಶ್ವದಲ್ಲೇ ಅತಿ ದೊಡ್ಡದು ಎನಿಸಿರುವ, ಸುಮಾರು 20 ಲಕ್ಷ ಜನರಿಗೆ ಪುನರ್‌ವಸತಿ ಕಲ್ಪಿಸುವ ಚೀನಾದ ಯೋಜನೆಯೊಂದರ ಬಳಿಕ, ಕರ್ನಾಟಕದ ಈ ಕೃಷ್ಣಾ ಮೇಲ್ದಂಡೆ ಯೋಜನೆ ಎರಡನೇ ಅತಿದೊಡ್ಡ ಪುನರ್‌ವಸತಿ ಯೋಜನೆ ಎನಿಸಿದೆ. ಈ ಯೋಜನೆ ಪೂರ್ಣಗೊಂಡಾಗ ಒಟ್ಟಾರೆ ಸುಮಾರು 4 ಲಕ್ಷ ಮಂದಿ ಪುನರ್‌ವಸತಿ ಹೊಂದಬೇಕಿದೆ.

- **ನೀರಿನ ಸಮಸ್ಯೆ: ಮೈಸೂರು ಬಂದ್ ಬಹುತೇಕ ಪೂರ್ಣ**

**ಮೈಸೂರು, ಮೇ 27–** ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಿಗಡಾಯಿಸಿದ್ದರೂ ಮಂಡ್ಯದ ರೈತರ ಹಿತ ಕಾಪಾಡಲು ಕೆಆರ್‌ಎಸ್ ಅಣೆಕಟ್ಟಿನಿಂದ ನಾಲೆಗಳಿಗೆ ಬಿಟ್ಟಿರುವ ಕಾವೇರಿ ನೀರನ್ನು ತಕ್ಷಣ ನಿಲ್ಲಿಸಬೇಕೆಂದು ಒತ್ತಾಯಿಸಿ ಬಿಜೆಪಿ ಕರೆ ನೀಡಿದ್ದ 'ಮೈಸೂರು ಬಂದ್' ಬಹುತೇಕ ಯಶಸ್ವಿಯಾಯಿತು.

ಕುಡಿಯುವ ನೀರಿನ ಅಭಾವದ ಬಿಸಿ ತಟ್ಟಿರುವ ಸಾರ್ವಜನಿಕರು ಸ್ವಪ್ರೇರಣೆಯಿಂದ ಈ ಬಂದ್ ಯಶಸ್ವಿಯಾಗಲು ಸಹಕರಿಸಿದರು. ಒಂದೆರಡು ಸಣ್ಣಪುಟ್ಟ ಘಟನೆಗಳನ್ನು ಬಿಟ್ಟರೆ ಬಂದ್ ಶಾಂತಿಯುತವಾಗಿತ್ತು.

## 50 ವರ್ಷಗಳ ಹಿಂದೆ

ಬುಧವಾರ, 28-5-1975

- **ಔಷಧಗಳಲ್ಲಿ ಅಮಿತ ಲಾಭ: ವಿದೇಶಿ ಕಂಪನಿಗಳಿಗೆ ಕೇಂದ್ರದ ಎಚ್ಚರಿಕೆ**

**ನವದೆಹಲಿ, ಮೇ 27–** ಅಗ್ಗದಲ್ಲಿ ಮಾರಬಹುದಾದ ಔಷಧಿಗಳಿಂದ ವಿಪರೀತ ಲಾಭ ಗಳಿಸಲು ಬಹುರಾಷ್ಟ್ರೀಯ ಔಷಧಿ ಕಂಪನಿಗಳು ಯತ್ನಿಸಿದರೆ ಅವನ್ನು ಕೇಂದ್ರ ಸರ್ಕಾರ 'ಉಗ್ರವಾಗಿ ಪರಿಗಣಿಸುವುದು'.

ಕೇಂದ್ರದ ಪೆಟ್ರೋಲಿಯಂ ಮತ್ತು ರಾಸಾಯನಿಕ ವಸ್ತುಗಳ ಸಚಿವ ಕೆ.ಡಿ. ಮಾಳವೀಯ ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಈ ಎಚ್ಚರಿಕೆ ನೀಡಿದರು.

- **ದಕ್ಷತೆಗೆ ಪ್ರಾಶಸ್ತ್ಯ: ಸಂಪುಟದ ಚರ್ಚೆ**

**ಬೆಂಗಳೂರು, ಮೇ 27–** ಬಡ್ತಿಗೆ ಸೀನಿಯಾರಿಟಿ ಒಂದನ್ನೇ ಪರಿಗಣಿಸುವ ಪದ್ಧತಿ ಆಡಳಿತದ ಕತ್ತಿಗೆ ಬಿಗಿದ ಬೀಸುವ ಕಲ್ಲಾಗಿದೆ. ಅದರಿಂದ ಪಾರಾಗುವ ಬಗೆಯನ್ನು ಸರ್ಕಾರ ಆಲೋಚಿಸುತ್ತಿದೆ. ರಾಜ್ಯ ಸರ್ಕಾರಗಳಲ್ಲಿ ದಕ್ಷತೆಯನ್ನು ಹೆಚ್ಚಿಸಲು ಪ್ರಧಾನಿ ಇಂದಿರಾ ಗಾಂಧಿಯವರು ಕಳುಹಿಸಿರುವ ವ್ಯಾಪಕವಾದ ಟಿಪ್ಪಣಿಯನ್ನು ಕರ್ನಾಟಕದ ಮಂತ್ರಿಮಂಡಲ ಇಂದು ದೀರ್ಘವಾಗಿ ಚರ್ಚಿಸಿತು.

ರಾಜ್ಯ ಸಚಿವರುಗಳು ಕೂಡ ಭಾಗವಹಿಸಿದ ಸಂಪುಟದ ಸಭೆಯ ನಂತರ ವರದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ದೇವರಾಜ ಅರಸು ಅವರು, ಸೀನಿಯಾರಿಟಿ ಮತ್ತು ಮೇಲಧಿಕಾರಿಗಳು ಕಳುಹಿಸುವ ರಹಸ್ಯ ವರದಿ ಬಗ್ಗೆ ಇಂದು ಚರ್ಚೆಯನ್ನು ಕೇಂದ್ರೀಕರಿಸಲಾಗಿತ್ತೆಂದೂ ದಕ್ಷತೆ ಹೆಚ್ಚಿಸುವ ಬಗ್ಗೆ ಚರ್ಚೆ ಇನ್ನೂ ಅಪೂರ್ಣವೆಂದೂ ತಿಳಿಸಿದರು.

ಬಡ್ತಿಗೆ ಸೀನಿಯಾರಿಟಿ ಜತೆಗೆ ಅಧಿಕಾರಿಯ ಕೆಲಸ ನಿರ್ವಹಣೆಯೂ ಆಧಾರವಾಗಬೇಕು ಎಂಬುದು ಹೊಸ ಆಲೋಚನೆ.

ಹೆಣ್ಣಿನ ಕುರಿತು ಮತ್ತದೇ ಮಡಿ–ಕಿಡಿ! ಧ್ವನಿಶಕ್ತಿ ಕಳೆದುಕೊಳ್ಳುತ್ತಿದೆಯೇ ನಮ್ಮ ನುಡಿ?

# 'ಕನ್ನಡ ವಿವೇಕ' ಚಕ್ರದ ಹಿಮ್ಮುಖ ಚಲನೆ



ಪಡಸಾಲೆ

ರಘುನಾಥ ಚ.ಹ.

**ಕವಯಿತ್ರಿ** ಮಮತಾ ಸಾಗರ ಅವರ ಪುಟ್ಟ ಕವಿತೆಗೆ ಎದುರಾದ ಪ್ರತಿರೋಧ ಹಾಗೂ ಕಥೆಗಾರ್ತಿ ಬಾನು ಮುಷ್ತಾಕ್ ಅವರಿಗೆ ಸಂದ ದೊಡ್ಡ ಪ್ರಶಸ್ತಿಗೆ ವ್ಯಕ್ತವಾದ ಕೆಲವು ಪ್ರತಿಕ್ರಿಯೆಗಳಲ್ಲಿ ಒಂದು ಸಾಮ್ಯತೆಯಿದೆ. ಈ ಎರಡು ವಿದ್ಯಮಾನಗಳು, ಮೇಲ್ನೋಟಕ್ಕೆ ಬದಲಾದಂತೆ ಕಾಣಿಸುವ ಸಮಾಜದ ಆಳದಲ್ಲಿ ಹೆಪ್ಪುಗಟ್ಟಿರುವ ಲಿಂಗಾಧಾರಿತ ಮನೋಧರ್ಮ ಹಾಗೂ ನಮ್ಮ ಮಾತು (ನುಡಿ) ಧ್ವನಿಶಕ್ತಿ ಕಳೆದುಕೊಳ್ಳುತ್ತಿರುವುದನ್ನು ಸಂಕೇತಿಸುವಂತಿವೆ.

ಮಮತಾ ಸಾಗರ ಅವರ ಕವಿತೆಗೆ ಉಂಟಾದ ಪ್ರತಿಕ್ರಿಯೆಗಳು ಮುಖ್ಯವಾಗಿ ಎರಡು ಬಗೆಯವು. ಹೆಣ್ಣಿನ ಅಭಿವ್ಯಕ್ತಿಯನ್ನು ಆಕೆಯ ದೇಹದೊಂದಿಗೆ ನೋಡುವ ಗಂಡಿನ ಪೂರ್ವಗ್ರಹ ಮೊದಲನೆಯದು. ಕಾವ್ಯವನ್ನು ಅರ್ಥ ಮಾಡಿಕೊಳ್ಳಲಾಗದ ಸ್ಥಿತಿ ಎರಡನೆಯದು. ಸಾಮಾನ್ಯರ ಮಾತಿರಲಿ, ಕೆಲವು ಕವಿಗಳು– ಕವಯಿತ್ರಿಯರು– ಕೂಡ ಮಮತಾರ 'ನಾನು' ಕವಿತೆಯನ್ನು ಗೇಲಿ ಮಾಡಿದರು; ಇದು ಕನ್ನಡ ಕಾವ್ಯ ತಲುಪಿರುವ ದುಃಸ್ಥಿತಿ ಎಂದು ಷರಾ ಬರೆದರು. ಹೀಗೆ ಮರುಗಿದ ಕೆಲವರು ಕನ್ನಡ ಕಾವ್ಯದ ದುಃಸ್ಥಿತಿಗೆ ತಾವೂ ಕೊಡುಗೆ ಸಲ್ಲಿಸಿದವರೇ.

ಮಮತಾ ಅವರ ರಚನೆ ಕವಿತೆಯೋ ಅಲ್ಲವೋ ಎನ್ನುವುದು ಬೇರೆಯದೇ ಚರ್ಚೆ. ಆದರೆ, ಅವರ ರಚನೆಗೆ ಓದುಗನಲ್ಲಿ ಗಾಢ ವಿಷಾದ ಹಾಗೂ ತಲ್ಲಣ ಉಂಟುಮಾಡುವ ಶಕ್ತಿಯಿದೆ. 'ನಾನು ಎಂದರೆ, ಒಂದು ಜೊತೆ ಮೆತ್ತಗಿನ ಮೊಲೆ/ ತೊಡೆ ಸಂದಲ್ಲಿ ಅಡಗಿದ ಕತ್ತಲಕೋಶ' ಎನ್ನುವ ಮಾತು ದುಗುಡದ ಬದಲು ಕೊಳಕು ವಿಚಾರಗಳಿಗೆ, ಕಿಡಿಗೇಡಿತನಕ್ಕೆ ಕಾರಣವಾಗಿದ್ದನ್ನು ನೋಡಿದರೆ, ಸಮುದಾಯದ ವಿವೇಕದಲ್ಲೇನೋ ಐಬಿದೆ ಎನ್ನಿಸುತ್ತದೆ. ವ್ಯಕ್ತಿತ್ವವನ್ನು ಗುರುತಿಸಿ ಗೌರವಿಸದೆ, ಮೊಲೆ ಹಾಗೂ ಯೋನಿಯ ರೂಪದಲ್ಲಷ್ಟೇ ಹೆಣ್ಣನ್ನು ನೋಡುವ ಪುರುಷ ಪೂರ್ವಗ್ರಹದ ಬಗ್ಗೆ ಮಮತಾ ಅವರ ಕವನ ಮಾತನಾಡುತ್ತದೆ. ಯಾವ ಆತಂಕವನ್ನು ಮಮತಾ ಅವರ ಪುಟ್ಟ ರಚನೆ ನಮ್ಮ ಮುಂದಿಡುತ್ತದೆಯೋ, ಆ ದಿಗಿಲನ್ನು ನಿಜಗೊಳಿಸುವಂತೆ ಹಾಗೂ ಅದು ಸಹಜ ಎನ್ನುವಂತೆ ಪ್ರತಿಕ್ರಿಯೆಗಳು ವ್ಯಕ್ತವಾದವು. ಮಾಂಸದ ಮುದ್ದೆಯಾಗಿಯಷ್ಟೇ ಹೆಣ್ಣನ್ನು ನೋಡಬಯಸುವ ಮನೋಧರ್ಮ ಕೊಂಚವೂ ಲಜ್ಜೆಯಿಲ್ಲದೆ ಪ್ರಕಟಗೊಂಡಿತು.

'ನಾನು' ಕವಿತೆಯೊಂದಿಗೆ ಗಂಗಾಧರ ಚಿತ್ತಾಲರ 'ಕಾಮಸೂತ್ರ' ಕವಿತೆಯನ್ನು ನೆನಪಿಸಿಕೊಂಡವರಿದ್ದಾರೆ. ಕಾಮಸೂತ್ರಕ್ಕೂ ತನ್ನನ್ನು ದೇಹದ ಮೂಲಕವಷ್ಟೇ ನೋಡುವುದನ್ನು ವಿರೋಧಿಸುವುದಕ್ಕೂ ವ್ಯತ್ಯಾಸ ತಿಳಿಯದೇ ಹೋದರೆ, 'ನಾನು ಎಂದರೆ, ಒಂದು ಜೊತೆ ಮೆತ್ತಗಿನ ಮೊಲೆ/ ತೊಡೆ ಸಂದಲ್ಲಿ ಅಡಗಿದ ಕತ್ತಲಕೋಶ' ಎನ್ನುವ ಸಾಲುಗಳು, ನಾನೆಂದರೆ ಇದಷ್ಟೇ ಅಲ್ಲ ಎಂದು ಧ್ವನಿಸುತ್ತಿರುವುದನ್ನು ಗ್ರಹಿಸಲಾಗದು. ಅತಿ ಓದು ಹಾಗೂ ಅಪಾರ್ಥ ಎರಡೂ ಅಪಾಯಕಾರಿಯೇ. ಸಾಮುದಾಯಿಕ ನೆಲೆಯಲ್ಲಿ ಕನ್ನಡನುಡಿ ತನ್ನ ವಿವೇಕ ಹಾಗೂ ಧ್ವನಿಶಕ್ತಿಯನ್ನು ಕಳೆದುಕೊಳ್ಳುತ್ತಿರುವ ಆತಂಕ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಲೇ ಇದೆ. ಆ ಆತಂಕವನ್ನು ಮಮತಾ ಅವರ ಕವಿತೆಗೆ ಎದುರಾದ ಪ್ರತಿಕ್ರಿಯೆಗಳು ಮತ್ತಷ್ಟು ಗಾಢವಾಗಿಸಿವೆ.

ಮಮತಾ ಅವರ ಕಾವ್ಯಕ್ಕೆ ವ್ಯಕ್ತವಾದ ಪೂರ್ವಗ್ರಹ ಪೀಡಿತ ಪ್ರತಿಕ್ರಿಯೆಗಳ ಜೊತೆಯಲ್ಲೇ ಬಾನು ಮುಷ್ತಾಕ್ ಅವರಿಗೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಸಂದ ಸಂದರ್ಭದ ಪ್ರತಿಕ್ರಿಯೆಗಳನ್ನು ಗಮನಿಸಬೇಕು. ಬೂಕರ್ ಪ್ರಭೆಯಲ್ಲಿ ಕಂಗೊಳಿಸುತ್ತಿರುವ ಬಾನು ಅವರ ಸಾಧನೆಯನ್ನು ಹೆಣ್ಣಿನ ರೂಪದಲ್ಲಿ, ಅದರಲ್ಲೂ ಮುಸ್ಲಿಂ ಮಹಿಳೆಯ ರೂಪದಲ್ಲಿ ವಿಶ್ಲೇಷಿಸುತ್ತಿರುವ ಬಗ್ಗೆ ಕೆಲವರಿಗೆ ತಕರಾರು. ಮತ್ತೆ ಕೆಲವರಿಗೆ ಬಾನು ಅವರ ಯಶಸ್ಸನ್ನು ಲಂಕೇಶರಿಗೆ ಅರ್ಪಿಸುವ ಉತ್ಸಾಹ. ಈ ಎರಡೂ ಬಗೆಯ ಪ್ರತಿಕ್ರಿಯೆಗಳ ಹಿಂದಿರುವುದು, ಹೆಣ್ಣು ತನ್ನ ಅಂಕೆಯಲ್ಲಿರಬೇಕೆಂದು ಬಯಸುವ ಸಾಂಪ್ರದಾಯಿಕ ಮನಸ್ಸು.

ಬಾನು ಅವರ ಸಾಧನೆ ಆಧುನಿಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಅಪೂರ್ವವಾದುದು ಎನ್ನುವುದು ನಿಸ್ಸಂಶಯ. ಈ ಸಾಧನೆ ಓರ್ವ ಪುರುಷನದ್ದಾಗಿದ್ದರೂ ಅಷ್ಟೇ ಮುಖ್ಯವಾಗಿರುತ್ತಿತ್ತು ಎನ್ನುವುದೂ ನಿಜ. ಆದರೆ, ಹೆಣ್ಣು ಮತ್ತು ಗಂಡಿಗೆ ಸಮಾನ ಅವಕಾಶಗಳಿಲ್ಲದ ಹಾಗೂ ಸಮಾನ ಗೌರವವಿಲ್ಲದ ಸಮಾಜದಲ್ಲಿ ಮಹಿಳೆಯ ಸಾಧನೆಗೆ ಗುಲಗಂಜಿಯಷ್ಟು ಹೆಚ್ಚೇ ತೂಕ. ಧಾರ್ಮಿಕ ಕಟ್ಟುಪಾಡುಗಳು ಹೆಚ್ಚಾಗಿರುವ ಮುಸ್ಲಿಂ ಸಮುದಾಯದ ಮಹಿಳೆಯ ಜಿಗಿತಕ್ಕೆ ಮತ್ತಷ್ಟು ಮೌಲ್ಯವಿದೆ. ಧರ್ಮಾಧಾರಿತ ವಿಭಜಕ ರಾಜಕಾರಣದ ವರ್ತಮಾನದಲ್ಲಿ ಮುಸ್ಲಿಂ ಸಮುದಾಯದ ವ್ಯಕ್ತಿಗಳ ಸಾಧನೆ–ಯಶಸ್ಸಿಗೆ ರಾಜಕೀಯ ಮಹತ್ವವೂ ಇದೆ. ಆ ಕಾರಣದಿಂದಲೇ 'ಹೆಣ್ಣು' ಹಾಗೂ 'ಮುಸ್ಲಿಂ' ಎನ್ನುವ ಗುರುತು, ಬಾನು ಅವರ ಸಾಧನೆಗೆ ಎಳೆಯುವ ಅಡಿಗೆರೆಯೇ ಹೊರತು, ಚೌಕಟ್ಟಿನ ಮಿತಿಯಲ್ಲ.

ಬಾನು ಅವರ ಸಾಧನೆಯಲ್ಲಿ ಲಂಕೇಶರಿಗೆ ಅಥವಾ ಬಾನು ಅವರ ಪತಿ ಮುಷ್ತಾಕ್ ಅವರಿಗೆ ಪಾಲು ಸಲ್ಲಬೇಕು ಎನ್ನುವ ಮಾತುಗಳು ಭಾವುಕವಾದವು.



ಸ್ವತಃ ಬಾನು ಅವರು ತಮ್ಮ ಯಶಸ್ಸನ್ನು ಯಾರಿಗಾದರೂ ಅರ್ಪಿಸಿದಲ್ಲಿ ಅದರಲ್ಲಿ ಸಮಸ್ಯೆಯೇನೂ ಇಲ್ಲ. ಸಮಸ್ಯೆ ಇರುವುದು, ಮಹಿಳೆಯ ಯಶಸ್ಸಿಗೆ ಪಾಲುದಾರರನ್ನು ಹುಡುಕುವ ಸಾರ್ವಜನಿಕರ ಧೋರಣೆಯಲ್ಲಿ. ಈ ಹುಡುಕಾಟ ಮಹಿಳೆಯ ಯಶಸ್ಸನ್ನು ಹೇಗಾದರೂ ಮಾಡಿ ಗಂಡಿನ ತಲೆಗೆ ಕಟ್ಟುವ ಸುಪ್ತಪ್ರಜ್ಞೆಯ ಅಭಿವ್ಯಕ್ತಿಯಂತೆ ಕಾಣಿಸುತ್ತದೆ.

ಗಂಡಿನ ಯಶಸ್ಸಿನ ಹಿಂದೆ ಮಹಿಳೆಯನ್ನು ಕಾಣುವ ರೂಢಿಗತ ಮಾತೊಂದಿದೆ. ಗಂಡಿನ ಹಿಂಬಾಲಕಳಾಗಿಯಷ್ಟೇ ಹೆಣ್ಣನ್ನು ಉಳಿಸುವ ಅನುನಯದ ಮಾತದು. ಆ ಮಾತಿನ ಜಾಡಿನಲ್ಲಿಯೇ, ಬಾನು ಮುಷ್ತಾಕರ ಯಶಸ್ಸಿನ ಹಿಂದೆ ಗಂಡನ್ನು ಗುರುತಿಸುವ ಪ್ರಯತ್ನವನ್ನು ಕಾಣಬಹುದು. ಗಂಡಿನ ಸಾಧನೆಯ ಹಿನ್ನೆಲೆಯಲ್ಲಿ ಹೆಣ್ಣನ್ನು ಗುರುತಿಸುವ ಸಂದರ್ಭದಲ್ಲಿ, ತನ್ನ ಯಶಸ್ಸಿನಲ್ಲಿ ಹೆಣ್ಣಿಗೂ ಪಾಲು ಕೊಡುವ ಎತ್ತರದಲ್ಲಿ ಗಂಡನ್ನು ನಿಲ್ಲಿಸಲಾಗುತ್ತದೆ. ಆದರೆ, ಯಶಸ್ವೀ ಹೆಣ್ಣಿನ ಹಿಂದೆ ಗಂಡನ್ನು ಗುರುತಿಸುವ ಸಂದರ್ಭದಲ್ಲಿ ಮಹಿಳೆಯ ಗೆಲುವನ್ನು ಕುಗ್ಗಿಸುವ ಪ್ರಯತ್ನವೇ ಹೆಚ್ಚಾಗಿರುತ್ತದೆ. ಈ ಗಂಡು ಮನಃಸ್ಥಿತಿಯನ್ನು 'ಆಪರೇಷನ್ ಸಿಂಧೂರ' ಪರಿಕಲ್ಪನೆಯೂ ಪೋಷಿಸುವಂತಿದೆ. ಸಚಿವರೊಬ್ಬರ ಕಣ್ಣಿಗೆ, ಧರ್ಮದ ಕಾರಣದಿಂದಾಗಿ ನಮ್ಮ ಸೈನ್ಯದ ಅಧಿಕಾರಿಣಿ ಉಗ್ರರಿಗೆ ಸಹೋದರಿ. ನಮ್ಮ ಸಹೋದರಿಯರ ಸಿಂಧೂರವನ್ನು ಅಳಿಸುವವರ ಅಂತ್ಯ ಖಚಿತ ಎನ್ನುವುದು ಪ್ರಧಾನಿಯ ಮಾತು. ಇಂಥ ಮಾತುಗಳಲ್ಲಿ ಪ್ರಾಮಾಣಿಕತೆಗಿಂತಲೂ ರಾಜಕೀಯವೇ ಢಾಳಾಗಿ ಕಾಣಿಸುತ್ತದೆ. ಹಾಥರಸ್‌ನ ಅಮಾನುಷ ಘಟನೆಯೂ ಸೇರಿದಂತೆ ಹೆಣ್ಣುಮಕ್ಕಳ ಮೇಲೆ ಲೈಂಗಿಕ ಕ್ರೌರ್ಯವೆಸಗಿದ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ನಿರಂತರವಾಗಿ ವರದಿಯಾಗುತ್ತಿವೆ. ಲೈಂಗಿಕ ದೌರ್ಜನ್ಯಗಳಿಗೆ ಮಿಕವಾಗುವ ನತದೃಷ್ಟ ಸಹೋದರಿಯರಿಗೆ ದೊರೆತಿರುವ ನ್ಯಾಯವೇನು? ಲೈಂಗಿಕ ಅಪರಾಧ ಪ್ರಕರಣಗಳಲ್ಲಿ ಸಚಿವರು, ಜನಪ್ರತಿನಿಧಿಗಳು ಭಾಗಿಯಾದ ಆರೋಪಗಳ ಸಂದರ್ಭದಲ್ಲಿ ಸರ್ಕಾರ ನಡೆಸುವವರು ತೆಗೆದುಕೊಂಡ ಕ್ರಮಗಳೇನು? ಕಾನೂನು ಸುವ್ಯವಸ್ಥೆಯ ವೈಫಲ್ಯದ ಜೊತೆಗೆ ಹೆಣ್ಣನ್ನು ಸರಕಿನಂತೆ ನೋಡುವ ಗಂಡಿನ ಮನಃಸ್ಥಿತಿಯ ಸಂಕೇತವೂ ಆಗಿರುವ ಲೈಂಗಿಕ ದೌರ್ಜನ್ಯಗಳು ನಡೆದ ಸಂದರ್ಭದಲ್ಲಿ ಸರ್ಕಾರ ಈವರೆಗೆ ಹೇಗೆ ಸ್ಪಂದಿಸಿದೆ? ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದನಿಯಿಲ್ಲದ ಜಾತಿಗಳ ಹೆಣ್ಣುಮಕ್ಕಳು ಮಿಕಗಳಾದ ಸಂದರ್ಭದಲ್ಲಿ ಸರ್ಕಾರಗಳು ದುರ್ಬಲವಾಗಿ ಕಾಣಿಸುವುದು ಹಾಗೂ ಸಮಾಜ ಮೌನವಾಗಿರುವುದು ಯಾಕೆ? ಮಮತಾ ಅವರು ಕಟ್ಟಿಕೊಡುವ 'ನಾನು' ಚಿತ್ರಣವೂ ಜಾತಿಯ ಆಧಾರದಲ್ಲಿ ಮೇಲು–ಕೀಳು ಎಂದಾಗುತ್ತದೆಯೆ?

ಕೂದಲರಾಶಿಯಿಂದ ಮೈಯನ್ನು ಮುಚ್ಚಿಕೊಂಡ ಅಕ್ಕಮಹಾದೇವಿಯನ್ನು, 'ದೇಹದ ಮೇಲಿನ ಮೋಹ ಮರೆಯದ ನಿನ್ನದು ಎಂಥ ವಿರಕ್ತಿ' ಎಂದು ಅಲ್ಲಮಪ್ರಭು ಪ್ರಶ್ನಿಸಿದಾಗ, 'ಕಾಮನ ಮುದ್ರೆಯ ಕಂಡು ನಿಮಗೆ/ ನೋವಾದೀತೆಂದು/ ಆ ಭಾವದಿಂದ ಮುಚ್ಚಿದೆ/ ಇದಕೆ ನೋವೇಕೆ?' ಎನ್ನುತ್ತಾಳೆ ಅಕ್ಕ. ಆ ಸಂದರ್ಭ ಈಗ ಮರುಕಳಿಸಿದರೆ, ಅಕ್ಕ ಏನೆಲ್ಲ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತಿತ್ತು?

ಮಮತಾ, ಬಾನು ಅವರ ನೆಪದಲ್ಲಿ ವ್ಯಕ್ತವಾಗಿರುವ ಪ್ರತಿಕ್ರಿಯೆಗಳು 'ಕನ್ನಡ ವಿವೇಕ'ದ ಚಕ್ರ ಹಿಮ್ಮುಖವಾಗಿ ಚಲಿಸುತ್ತಿರುವುದರ ಸಂಕೇತ.

## ಚುರುಮುರಿ



### ಗಂಧದ ಘಮಲು

• ಮಣ್ಣೆ ರಾಜು

'ಮೈಸೂರು ಸ್ಯಾಂಡಲ್ ಸೋಪು ಕೊಂಡುಕೊಳ್ಳಿ ಮೇಡಂ, ಸ್ನಾನ ಮಾಡಿದರೆ ಕೊಳೆ ಹೋಗುತ್ತೆ, ಕಳೆ ಮೂಡುತ್ತೆ...' ಸೋಪು ಕೊಟ್ಟ ಅಂಗಡಿಯವನು, 'ತಮನ್ನಾ ರಾಯಭಾರಿ ಆದಮೇಲೆ ನಮ್ಮ ಸ್ಯಾಂಡಲ್ ಸೋಪಿನ ಸ್ಕೋಪ್ ಹೆಚ್ಚಾಗಿದೆ' ಅಂದ.

'ತಮನ್ನಾ ನಿತ್ಯ ಮೈಸೂರ್ ಸ್ಯಾಂಡಲ್‌ನಲ್ಲೇ ಸ್ನಾನ ಮಾಡ್ತಾರಾ?' ಶಂಕ್ರಿ ಕೇಳಿದ.

'ಮಿಲ್ಕಿ ಬ್ಯೂಟಿ ಸೋಪಿನಲ್ಲಿ ಸ್ನಾನ ಮಾಡ್ತಾರೊ ಹಾಲಿನಲ್ಲಿ ಮಾಡ್ತಾರೊ ನನಗೆ ಗೊತ್ತಿಲ್ಲ, ಬೇರೆಯವರ ಬಾತ್‌ರೂಂ ಇಣುಕಿ ನೋಡಬಾರದು ಸಾರ್'.

'ಸೋಪಿನ ಸುಂದರಿಯರು ಬಾತ್‌ರೂಮಿಗಿಂತ ಟಿ.ವಿಯಲ್ಲೇ ಹೆಚ್ಚು ಸ್ನಾನ ಮಾಡ್ತಾರೆ. ಪ್ರತಿದಿನ ಹತ್ತಾರು ಸೋಪು ಸುಂದರಿಯರು ನಮ್ಮ ಮನೆಯ ಟಿ.ವಿ.ಯಲ್ಲಿ ಸ್ನಾನ ಮಾಡ್ತಾರೆ' ಎಂದು ಶಂಕ್ರಿ ಕಿಸಕ್ಕನೆ ನಕ್ಕಾಗ ಸುಮಿ ರೇಗಿದಳು.

'ದುಬಾರಿ ದುಡ್ಡು ಕೊಟ್ಟು ತಮನ್ನಾರನ್ನು ಕೆಎಸ್‌ಡಿಎಲ್ ರಾಯಭಾರಿ ಮಾಡುವ ಅಗತ್ಯವಿರಲಿಲ್ಲ, ನಮ್ಮಲ್ಲೇ ಬಹಳಷ್ಟು ಸುಂದರಿಯರಿದ್ದರು ಎಂದು ಹಲವರು ಆಕ್ಷೇಪ ಮಾಡಿದ್ದಾರೆ ಕಣ್ರೀ' ಅಂದಳು ಸುಮಿ.

'ಇಂತಹ ವಿವಾದಗಳ ನಂತರ ನಮ್ಮ ಮೈಸೂರು ಸೋಪಿನ ಶ್ರೀಗಂಧದ ಘಮಲು ಇಂಡಿಯಾ ದಾಟಿ ಜಾಗತಿಕ ಮಾರುಕಟ್ಟೆವರೆಗೂ ಹರಡಿದೆಯಂತೆ, ವಿದೇಶಿಯರೂ ಗಂಧದ ಪರಿಮಳಕ್ಕೆ ಫಿದಾ ಆಗಿದ್ದಾರಂತೆ' ಅಂಗಡಿಯವ ಕೊಚ್ಚಿಕೊಂಡ.

'ವಿವಾದಗಳು ಲಾಭದಾಯಕವೇ ಆಗುತ್ತವೆ. ಆಪರೇಷನ್ ಸಿಂಧೂರ ಸಂಘರ್ಷದ ನಂತರ ನಮ್ಮ ಮೈಸೂರುಪಾಕ್‌ಗೂ ದೊಡ್ಡ ಮಟ್ಟದ ಪ್ರಚಾರ ಸಿಕ್ಕಿದೆಯಂತೆ' ಎಂದಳು ಸುಮಿ.

'ಹೌದು, ಕೆಲವು ಕಡೆ ಮೈಸೂರುಪಾಕ್ ಅನ್ನು 'ಮೈಸೂರುಶ್ರೀ' ಅಂತ ಹೆಸರು ಬದಲಾಯಿಸಿಕೊಂಡು ಚಪ್ಪರಿಸುತ್ತಿದ್ದಾರಂತೆ. ಹೇಗೋ ಮೈಸೂರು ಸೋಪು, ಮೈಸೂರುಪಾಕು ಪ್ರಸಿದ್ಧಿಯಾಗುತ್ತಿವೆಯಲ್ಲ' ಎಂದು ಅಂಗಡಿಯವನು ಆನಂದಪಟ್ಟ.

ಮೈಸೂರು ಸ್ಯಾಂಡಲ್ ಸೋಪು ಖರೀದಿಸಿದ ಶಂಕ್ರಿ, ಸುಮಿ ಮೈಸೂರುಪಾಕ್ ಕೊಳ್ಳಲು ಹೊರಟರು.

## ಸಂಗತ

# ವಿ.ವಿ: ಪ್ರವೇಶಾತಿ ಇಳಿಮುಖವೇಕೆ?

**ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಕೆಲವು ಕೋರ್ಸ್‌ಗಳತ್ತ ವಿದ್ಯಾರ್ಥಿಗಳು ಆಕರ್ಷಿತರಾಗದೇ ಇರುವುದಕ್ಕೆ ಕಾರಣ ಏನೆಂಬುದನ್ನು ಕಂಡುಕೊಳ್ಳಬೇಕಿದೆ**

• ಶಿವಲಿಂಗಸ್ವಾಮಿ ಎಚ್.ಕೆ.

**ರಾಜ್ಯದ** ಸರ್ಕಾರಿ ವಿಶ್ವವಿದ್ಯಾಲಯವೊಂದರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾದ ಕಾರಣಕ್ಕೆ ಸ್ನಾತಕೋತ್ತರ ಅಧ್ಯಯನದ ಕೆಲವು ವಿಭಾಗಗಳನ್ನು ಸ್ಥಗಿತಗೊಳಿಸಲಾಗಿದೆ. ಹಲವು ದಶಕಗಳಿಗೂ ಮೀರಿ ಉನ್ನತ ಶಿಕ್ಷಣ ಪ್ರಸರಣದ ಮೂಲಕ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದ ವಿಶ್ವವಿದ್ಯಾಲಯವೊಂದು ಇದ್ದಕ್ಕಿದ್ದಂತೆ ಕೆಲವು ವಿಭಾಗಗಳನ್ನು ಸ್ಥಗಿತಗೊಳಿಸುವ ನಿರ್ಧಾರಕ್ಕೆ ಬಂದದ್ದು ಆತಂಕಕಾರಿ ಬೆಳವಣಿಗೆ.

ಐದು ವರ್ಷಕ್ಕೊಮ್ಮೆ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯಿಂದ (ನ್ಯಾಕ್) ಪಡೆಯಬೇಕಾದ ಮಾನ್ಯತೆಯ ದೃಷ್ಟಿಯಿಂದ ನೋಡಿದರೆ, ಕೆಲವು ವಿಭಾಗಗಳನ್ನು ಮುಚ್ಚುವ ಪರಿಸ್ಥಿತಿ ಬಂದದ್ದಕ್ಕೆ ಸಮರ್ಥನೆ ನೀಡಬೇಕಿರುವುದು ಬರೀ ವಿಶ್ವವಿದ್ಯಾಲಯದ ಹೊಣೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಈ ವಿಶ್ವವಿದ್ಯಾಲಯದ ಪ್ರಸ್ತುತ ಪರಿಸ್ಥಿತಿಯು ದೇಶದ ಅನೇಕ ಸರ್ಕಾರಿ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಸಂಕಷ್ಟದ ಸಂಕೇತದಂತಿದೆ.

ಈ ವಿಶ್ವವಿದ್ಯಾಲಯದಲ್ಲಿ ಸ್ಥಗಿತಗೊಂಡ ಕೋರ್ಸ್‌ಗಳನ್ನು ಗಮನಿಸಿದರೆ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಎಲ್ಲರ ಹುಬ್ಬುಗಳೂ ಮೇಲೇರಬಹುದು. ಸ್ಥಗಿತಗೊಂಡಿರುವ ವಿಭಾಗಗಳಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಪರಿಸರ ವಿಜ್ಞಾನ, ಅಂಕಿಅಂಶ ಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್) ಮತ್ತು ಮೆಟೀರಿಯಲ್ ಸೈನ್ಸ್... ಸೇರಿವೆ. 2024–25ನೇ ಶೈಕ್ಷಣಿಕ ವರ್ಷಕ್ಕೆ ಈ ಪ್ರತಿ ಕೋರ್ಸ್‌ಗೆ ಹತ್ತಕ್ಕಿಂತ ಕಡಿಮೆ ಮಂದಿ ಪ್ರವೇಶ ಪಡೆದ ಕಾರಣದಿಂದ ಈ ವಿಭಾಗಗಳನ್ನು ಮುಚ್ಚುವ ನಿರ್ಧಾರಕ್ಕೆ ಬರಲಾಯಿತು. ಪ್ರವೇಶಾತಿಯಲ್ಲಿ ಸುಧಾರಣೆ ಕಂಡುಬಂದರೆ ಮಾತ್ರ ಇವು ಪುನರಾರಂಭವಾಗಲಿವೆ ಎಂದು ಸ್ಪಷ್ಟೀಕರಣ ನೀಡಲಾಗಿದೆ.

ಕೆಲವು ಕೋರ್ಸ್‌ಗಳ ಪ್ರವೇಶಾತಿಯ ಅಂತಿಮ ದಿನಾಂಕವನ್ನು ಎರಡು ಬಾರಿ ವಿಸ್ತರಿಸಿದ್ದರೂ ವಿದ್ಯಾರ್ಥಿಗಳನ್ನು ಸೆಳೆಯಲು ಸಾಧ್ಯವಾಗಿಲ್ಲ. ಹೀಗಾಗಿ, ಆರಂಭದಲ್ಲಿ ವಿಶ್ವವಿದ್ಯಾಲಯವು ಕೋರ್ಸ್ ಸ್ಥಗಿತಕ್ಕೆ ನಿಗದಿಪಡಿಸಿದ್ದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯ ಮಿತಿಯನ್ನು 15ರಿಂದ 10ಕ್ಕೆ ಇಳಿಸಿದೆ.

ಉದ್ಯೋಗ ಸೃಷ್ಟಿಗೆ ಪೂರಕವಾಗಿದ್ದ ಇಂತಹ ಕೋರ್ಸ್‌ಗಳಿಗೇ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖ ಆಗಿರುವುದು ಸರ್ಕಾರ ಮತ್ತು ಶಿಕ್ಷಣ ತಜ್ಞರ ಚಿಂತನಾತ್ಮಕ ಹಸ್ತಕ್ಷೇಪವನ್ನು ಅನಿವಾರ್ಯಗೊಳಿಸಿದೆ. ಕೆಲವು ಉನ್ನತ ಶಿಕ್ಷಣ ಆಕಾಂಕ್ಷಿಗಳಿಗೆ ಸಂಶೋಧನೆಯ ಗುರಿ ಇರುತ್ತದೆ. ಅಂತಹವರಿಗೆ ವಿಶ್ವವಿದ್ಯಾಲಯಗಳು ಅಗತ್ಯ ಮೂಲಸೌಕರ್ಯ, ಮಾರ್ಗದರ್ಶನ ಮತ್ತು ಬೌದ್ಧಿಕ ವಾತಾವರಣವನ್ನು ಒದಗಿಸಬೇಕಾದುದು ಬಹಳ ಮುಖ್ಯ. ಒಂದು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿ ಪಿಎಚ್.ಡಿಗಾಗಿ ಬೇರೊಂದು ವಿಶ್ವವಿದ್ಯಾಲಯದತ್ತ ಮುಖ ಮಾಡಿದರೆ, ಸ್ನಾತಕೋತ್ತರ ಪದವಿ ನೀಡಿದ ವಿಶ್ವವಿದ್ಯಾಲಯದ ಗುಣಮಟ್ಟದ ಪ್ರಶ್ನೆ ಎದುರಾಗುತ್ತದೆ.

ಮುಂದಿನ ಅಧ್ಯಯನದ ತಯಾರಿ ಮಾಡಿಕೊಳ್ಳ ಬಯಸುವ ವಿದ್ಯಾರ್ಥಿಗಳಿಗೆ ನುರಿತ ಪ್ರಾಧ್ಯಾಪಕರ ಮಾರ್ಗದರ್ಶನ ಬಹಳ ಮುಖ್ಯವಾಗಿರುತ್ತದೆ. ಆದರೆ ರಾಜ್ಯದ ಹಲವಾರು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಕಾಯಂ ಅಧ್ಯಾಪಕರ ನೇಮಕಾತಿಗೆ ಸರ್ಕಾರ ಗಮನಹರಿಸದೇ ಇರುವುದು ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗಲು ಕಾರಣವಾಗಿದೆ.

ಭಾರತವನ್ನು ಅಭಿವೃದ್ಧಿಯ ಪಥದಲ್ಲಿ ಸಾಗಿಸುವ ಪ್ರಯತ್ನ ಫಲಕಾರಿ ಆಗಬೇಕಿದ್ದರೆ ಉನ್ನತ ಶಿಕ್ಷಣದ ಆಕಾಂಕ್ಷಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಎಂದಿಗೂ ಸ್ಥಿರ ಮಾರ್ಗದರ್ಶನದ ಕೊರತೆ ಇರಬಾರದು. ಅಲ್ಲಿ ಅಧ್ಯಾಪಕರ ಕೊರತೆಯಿದ್ದರೆ ಸಂಶೋಧನೆಯ ಬಾಗಿಲು ಸಂಪೂರ್ಣ ಮುಚ್ಚಿದಂತೆಯೇ ಸರಿ. ಆಗ, ಅತಿಥಿ ಅಧ್ಯಾಪಕರ ಸಹಾಯದಿಂದ ಬರೀ ಪಠ್ಯಕ್ರಮ ಮುಗಿಸಿ, ಪರೀಕ್ಷೆ ನಡೆಸಿ ಸರ್ಟಿಫಿಕೇಟ್ ಕೊಡುವ ಕಾಲೇಜುಗಳಾಗಿ ಅವು ರೂಪಾಂತರಗೊಳ್ಳಬೇಕಾಗುತ್ತದೆ.



ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯವನ್ನು ಪ್ರವೇಶಿಸುವವರ ನಿರೀಕ್ಷೆಗಳಲ್ಲಿ ನುರಿತ ಪ್ರಾಧ್ಯಾಪಕರ ಉಪಸ್ಥಿತಿ, ಕಾಲಕಾಲಕ್ಕೆ ನವೀಕರಿಸಿದ ಪಠ್ಯಕ್ರಮ, ನಿರಂತರವಾಗಿ ನಡೆಯುವ ವಿಚಾರ ಸಂಕಿರಣಗಳು, ವಿಭಾಗಗಳು ಕೈಗೊಂಡಿರುವ ಪ್ರಾಜೆಕ್ಟುಗಳು, ಪ್ರಕಟಣೆಯಂತಹವು ಇದ್ದೇ ಇರುತ್ತವೆ. ಹಾಗಾಗಿ, ಪ್ರತಿ ವಿಭಾಗದ ಸಂಶೋಧನಾ ಸಂಸ್ಕೃತಿಯನ್ನು ಬೆಳೆಸುವಲ್ಲಿ ಅಲ್ಲಿನ ಪ್ರಾಧ್ಯಾಪಕರು ಪ್ರಮುಖ ಪಾತ್ರ ವಹಿಸುತ್ತಾರೆ. ಪಾಠದ ಜೊತೆಗೆ ಉತ್ತಮ ಬೌದ್ಧಿಕ ಚಟುವಟಿಕೆಯಿಂದ ಕೂಡಿದ ಪರಿಸರವನ್ನು ರೂಪಿಸುವುದು ಸರ್ಕಾರದ ಮೂಲ ಜವಾಬ್ದಾರಿಯಾಗಿರುತ್ತದೆ.

ಗುಣಮಟ್ಟದ ಸಂಶೋಧನೆಗೆ ಸಮರ್ಪಿತರಾದ ಪ್ರಾಧ್ಯಾಪಕರು ನಿವೃತ್ತರಾದ ನಂತರ ಅವರ ಜಾಗಗಳು ಶಾಶ್ವತವಾಗಿ ಖಾಲಿ ಉಳಿದುಬಿಟ್ಟರೆ, ಸಂಶೋಧನೆಗಾಗಿ ಅನುದಾನ ನೀಡುವ ಸಂಸ್ಥೆಗಳು ಅಂತಹ ವಿಭಾಗಗಳಿಂದ ವಿಮುಖವಾಗುತ್ತವೆ. ಆಗ ಸಂಶೋಧನೆ ನಡೆಸಲು ಇಚ್ಛಿಸುವ ವಿದ್ಯಾರ್ಥಿಗಳು ಖಾಸಗಿ ವಿಶ್ವ-ವಿದ್ಯಾಲಯಗಳತ್ತ ಆಕರ್ಷಿತರಾಗುತ್ತಾರೆ. ಇಂತಹ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದರೆ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏಕೆ ಇಳಿಮುಖವಾಗುತ್ತಿದೆ ಎಂಬುದು ಅರ್ಥವಾಗುತ್ತದೆ.

ಖಾಸಗಿ ವಿಶ್ವವಿದ್ಯಾಲಯಗಳಂತೆ ಸರ್ಕಾರಿ ವಿಶ್ವ-ವಿದ್ಯಾಲಯಗಳೂ ತಮ್ಮನ್ನು ತಾವು ಕಾಲಕ್ಕೆ ತಕ್ಕಂತೆ ಎಲ್ಲ ದೃಷ್ಟಿಯಿಂದಲೂ ಆಧುನೀಕರಿಸಿಕೊಳ್ಳುತ್ತಿಲ್ಲವೇ? ಸರ್ಕಾರಿ ವಿಶ್ವವಿದ್ಯಾಲಯಗಳು ಬಡವರಿಗೆ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಶ್ರೀಮಂತ ವರ್ಗಗಳಿಗೆ ಮಾತ್ರ ಮೀಸಲು ಎಂಬಂತೆ ಆಗಿರುವುದಕ್ಕೆ ಕಾರಣವೇನು ಎಂದು ಚಿಂತಿಸಬೇಕಿದೆ.

## ವಾಚಕರ ವಾಣಿ

### ಸಂಚಾರ ನಿಯಮ ಕಟ್ಟುನಿಟ್ಟಾಗಿ ಪಾಲನೆಯಾಗಲಿ

ಸಾರ್ವಜನಿಕರಿಗೆ ತೊಂದರೆಯಾಗುವುದಾದರೆ ವಾಹನಗಳ ಟೋಯಿಂಗ್ ಕ್ರಮ ನಿಲ್ಲಿಸುವುದಾಗಿ ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ. ಆದರೆ ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ನಿರೀಕ್ಷೆಗೂ ಮೀರಿ ಹೆಚ್ಚುತ್ತಿದೆ. ರಸ್ತೆ ಅಪಘಾತಗಳು, ವಾಹನ ಸವಾರರ ನಡುವಿನ ಘರ್ಷಣೆ ಪ್ರಕರಣಗಳು ಮಿತಿಮೀರಿವೆ. ಇದಕ್ಕೆ ಪರಿಹಾರವೆಂದರೆ, ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದು. ಮೊಬೈಲ್ ಫೋನ್‌ನಲ್ಲಿ ಮಾತನಾಡುವುದರಲ್ಲಿ ಮಗ್ನರಾಗಿ ಬೇಜವಾಬ್ದಾರಿಯಿಂದ ವಾಹನ ಚಲಾಯಿಸುವವರ ಸಂಖ್ಯೆ ಹೆಚ್ಚುತ್ತಿದೆ. ಹೀಗಾಗಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ.

**ಅಶೋಕ ಎನ್.ಎಚ್.,** ಕೋಲಾರ

### ಸಿಬಿಎಸ್‌ಇ ನಿರ್ದೇಶನ ಸರಿಯಾಗಿದೆ

ಶಿಕ್ಷಣದ ಆರಂಭಿಕ ಐದು ವರ್ಷಗಳ ಅಡಿಪಾಯದ ಕಲಿಕೆಯು ಕಡ್ಡಾಯವಾಗಿ ಮಗುವಿನ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಆಗಬೇಕು ಮತ್ತು ಅದು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರಬೇಕು ಎಂದು ಸಿಬಿಎಸ್‌ಇ ಪಠ್ಯಕ್ರಮ ಅನುಸರಿಸುವ, ದೇಶದ ಸುಮಾರು ಮೂವತ್ತು ಸಾವಿರ ಶಾಲೆಗಳಿಗೆ ಸಿಬಿಎಸ್‌ಇ ನಿರ್ದೇಶನ ನೀಡಿರುವುದು ಸರಿಯಾಗಿದೆ. ಮಾತೃಭಾಷೆ ಅಥವಾ ಪರಿಸರದ ಭಾಷೆಯಲ್ಲಿನ ಆರಂಭಿಕ ಕಲಿಕೆಯ ಮಹತ್ವವನ್ನು ಸಿಬಿಎಸ್‌ಇ ತಡವಾಗಿಯಾದರೂ ಮನಗಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿ– 2020ರ ಅಡಿ ಮಗುವಿನ ಆರಂಭಿಕ ಕಲಿಕಾ ಮಾಧ್ಯಮದ ಕುರಿತು ಇದ್ದ ಅಸ್ಪಷ್ಟತೆಯನ್ನು ಇದು ಹೋಗಲಾಡಿಸಿದೆ. ವಾಮಮಾರ್ಗದ ಮೂಲಕ ಆರಂಭದಲ್ಲಿ ಮತ್ತೆ ಇಂಗ್ಲಿಷ್ ಮಾಧ್ಯಮ ನುಸುಳಲು ಅವಕಾಶವಾಗದಂತೆ, ಮಕ್ಕಳ ಕಲಿಕೆಯನ್ನು ಮಾತೃಭಾಷೆಯ ಮೂಲಕ ಸರಳವಾಗಿಸಲು ಶಾಲೆಗಳು ಈಗ ಮುಂದಾಗಬೇಕು. ಇದರಿಂದ ಶಾಲೆಗಳಿಗೂ ಮಕ್ಕಳಿಗೂ ಅನುಕೂಲವಾಗುತ್ತದೆ. ನಂತರದ ಹಂತದಲ್ಲಿ ಇಂಗ್ಲಿಷ್ ಕೂಡ ಇದ್ದೇ ಇರುತ್ತದೆ.

ರಾಜ್ಯ ಸರ್ಕಾರ ಸಹ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಕಡ್ಡಾಯವಾಗಿ ಕನ್ನಡ ಮಾಧ್ಯಮದಲ್ಲಿ ಕಲಿಕೆಗೆ ಮುಂದಾಗಬೇಕು. ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿನ ಕಲಿಕೆ ಕುರಿತು ರಾಜ್ಯ ನಡೆಸಿದ ದೀರ್ಘಕಾಲಿಕ ನ್ಯಾಯಾಂಗ ಹೋರಾಟಕ್ಕೆ ಈಗ ತಾತ್ವಿಕ ಬೆಂಬಲ ಸಿಕ್ಕಂತೆ ಆಗಿದೆ. ಆದ್ದರಿಂದ ಸರ್ಕಾರವು ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭಿಸುವುದನ್ನು ನಿಲ್ಲಿಸಬೇಕು ಮತ್ತು ಕನ್ನಡದಲ್ಲಿ ಗುಣಮಟ್ಟದ ಆರಂಭಿಕ ಶಿಕ್ಷಣ ನೀಡುವ ಮೂಲಕ ಮಕ್ಕಳು ಮತ್ತು ಶಿಕ್ಷಕರು ಅನುಭವಿಸುತ್ತಿರುವ ಎಡರುತೊಡರುಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಬೇಕು.

**ವೆಂಕಟೇಶ ಮಾಚಕನೂರ,** ಧಾರವಾಡ

### ಬಾಯ್ತೆರೆದು ನಿಂತ ಹೊಂಡ: ಮುಕ್ತಿ ಸಿಗುವುದೆಂದು?

ರಾಜ್ಯದ ಬಹುತೇಕ ಕಡೆಗಳಲ್ಲಿ ಹೆದ್ದಾರಿಯ ರಸ್ತೆ ವಿಸ್ತರಣೆ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳ ನಿಮಿತ್ತ ರಸ್ತೆ ಮಧ್ಯದಲ್ಲಿ ಹಲವಾರು ಹೊಂಡಗಳಾಗಿವೆ. ಒಂದು ಹೊಂಡ ತಪ್ಪಿಸಲು ಹೋದರೆ ಮತ್ತೊಂದು ಗುಂಡಿ ಸಿದ್ಧವಿರುತ್ತದೆ. ಮಳೆಗಾಲದಲ್ಲಿ ರಸ್ತೆಯಲ್ಲೆಲ್ಲಾ ನೀರು ತುಂಬಿರುವಾಗ ಬಾಯ್ತೆರೆದು ನಿಂತ ಹೊಂಡಗಳಿಗೆ ವಾಹನ ಸವಾರರು ಬಿದ್ದು ಅಪಘಾತಗಳಿಗೆ ಈಡಾಗುತ್ತಿದ್ದಾರೆ. ಇನ್ನಾದರೂ ಸರ್ಕಾರ ತಕ್ಷಣವೇ ಗುಂಡಿ ಮುಚ್ಚುವ ಕೆಲಸಕ್ಕೆ ಮುಂದಾಗಬೇಕಿದೆ.

**ಸುರೇಂದ್ರ ಪೈ,** ಭಟ್ಕಳ

### ತ್ವರಿತ ನ್ಯಾಯದ ಆಶಯ ಸಾಕಾರವಾಗಲಿ

ಸಿವಿಲ್ ಪ್ರಕರಣಗಳ ತ್ವರಿತ ವಿಲೇವಾರಿ ಉದ್ದೇಶದಿಂದ ಕೇಂದ್ರದ 'ಸಿವಿಲ್ ಪ್ರಕ್ರಿಯಾ ಸಂಹಿತೆ (ಸಿಪಿಸಿ) ಕಾಯ್ದೆ'ಗೆ ರಾಜ್ಯ ಸರ್ಕಾರ ತಂದಿರುವ ತಿದ್ದುಪಡಿಗಳು ರಾಷ್ಟ್ರಪತಿಯವರ ಅಂಕಿತ ಪಡೆದು ತಕ್ಷಣದಿಂದಲೇ ಜಾರಿಗೆ ಬಂದಿರುವುದು (ಪ್ರ.ವಾ., ಮೇ 27) ಸ್ವಾಗತಾರ್ಹ. ಕೋರ್ಟ್ ವ್ಯಾಜ್ಯದಲ್ಲಿ ಗೆದ್ದವನು ಸೋತ, ಸೋತವನು ಸತ್ತ ಎನ್ನುವ ನಾಣ್ಣುಡಿ ಇದೆ. ಇದನ್ನು ತೊಡೆದುಹಾಕುವ ದಿಸೆಯಲ್ಲಿ ಈ ಕಾಯ್ದೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ ಎನ್ನುವುದನ್ನು ನೋಡಬೇಕಾಗಿದೆ. ಪ್ರಕರಣಗಳ ವಿಲೇವಾರಿಗೆ ಎರಡು ವರ್ಷದ ಕಾಲಮಿತಿ ನಿಗದಿಪಡಿಸಿರುವುದರಿಂದ ಶೀಘ್ರ ವಿಲೇವಾರಿಗೆ ಅನುಕೂಲ ಆಗಬಹುದು. ದೇಶದ ಎಲ್ಲಾ ರಾಜ್ಯಗಳು ಇದನ್ನು ಅನುಸರಿಸಬೇಕು ಹಾಗೂ ಕ್ರಿಮಿನಲ್ ಪ್ರಕರಣಗಳಿಗೂ ಇದೇ ರೀತಿಯ ತಿದ್ದುಪಡಿಯ ಅವಶ್ಯಕತೆ ಇದೆ. ಕಾನೂನು ಸಚಿವಾಲಯ ಈ ಬಗ್ಗೆ ಗಮನ ಹರಿಸಬೇಕು. ಪ್ರಕರಣಗಳ ವಿಲೇವಾರಿ ಎರಡು– ಮೂರು ತಲೆಮಾರುಗಳವರೆಗೂ ಮುಂದುವರಿಯುವಂತಹ ವಿಪರ್ಯಾಸವನ್ನು ಇಂತಹ ತಿದ್ದುಪಡಿ ಕೊನೆಗಾಣಿಸುತ್ತದೆ.

**ಮುಳ್ಳೂರು ಪ್ರಕಾಶ್,** ಮೈಸೂರು

### ವರ್ಗಾವಣೆ ಮಾರ್ಗಸೂಚಿ: ಪ್ರಹಸನವಾದೀತು!

ಪ್ರತಿ ವರ್ಷದಂತೆ ಈ ಬಾರಿಯೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ವರ್ಗಾವಣೆ ಮಾರ್ಗಸೂಚಿಗಳನ್ನು ಹೊರಡಿಸಿ, ಅವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಪ್ರತಿವರ್ಷವೂ ಮುಖ್ಯ ಕಾರ್ಯದರ್ಶಿಯಿಂದ ಇಂತಹ ಸೂಚನೆಗಳು ಯಥಾಪ್ರಕಾರ ಹೊರಡುವುದು, ಮಾರ್ಗಸೂಚಿಗಳು ಉಲ್ಲಂಘನೆ ಆಗುವುದು, ಬಾಧಿತರು ಕೆಎಟಿ ಮತ್ತು ಹೈಕೋರ್ಟ್ ಮೊರೆ ಹೋಗುವುದು ಮಾಮೂಲಾಗಿದೆ. ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಉನ್ನತ ಸ್ಥಾನದಲ್ಲಿದ್ದು, ನೌಕರರ ಸೇವಾ ವಿಷಯಗಳನ್ನು ನಿರ್ವಹಿಸಿ ನಿವೃತ್ತರಾಗಿರುವ ನನ್ನ ಹಿರಿಯ ಮಿತ್ರರೊಬ್ಬರ ಪ್ರಕಾರ, 1980ರ ದಶಕದ ಆದಿಭಾಗದಿಂದ ವರ್ಗಾವಣೆ ಎಂಬುದೊಂದು ದಂಧೆಯಾಗಿ ಮಾರ್ಪಟ್ಟಿದೆ. ಅದಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳ ಉಲ್ಲಂಘನೆ ಮಾಮೂಲಿಯಾಗಿದೆ. ಸಕಾರಣವಿಲ್ಲದ ಅವಧಿಪೂರ್ವ ವರ್ಗಾವಣೆಯೇ ಅದರಲ್ಲಿ ಪ್ರಮುಖವಾದದ್ದು.

ಪ್ರಭಾವಿ ನೌಕರರು ತಮಗೆ ಬೇಕಾದ ಶಾಸಕರನ್ನೋ ಸಚಿವರನ್ನೋ ಹಿಡಿದು, ಜೊತೆಗೆ ಹಣವನ್ನೂ ಖರ್ಚು ಮಾಡಿ ತಮಗೆ ಬೇಕಾದ ಹುದ್ದೆಗಳಿಗೆ ವರ್ಷದಲ್ಲಿ ಯಾವಾಗ ಬೇಕಾದರೂ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ, ಪ್ರಭಾವಿಗಳಲ್ಲದವರು ಯಾರಿಗೂ ಬೇಡದ ಹುದ್ದೆಗಳಿಗೆ ವರ್ಗಾವಣೆಗೊಳ್ಳುತ್ತಾರೆ. ಹುದ್ದೆಯನ್ನೇ ತೋರಿಸದಿರುವ ಕೆಲವರಂತೂ ಸಂಬಳವೂ ಇಲ್ಲದೆ ಹುದ್ದೆಗಾಗಿ ದೀರ್ಘಕಾಲ ಕಾಯಬೇಕಾಗುತ್ತದೆ. ಪ್ರತಿವರ್ಷದ ವರ್ಗಾವಣೆಯ ಮಾರ್ಗಸೂಚಿಯಂತೆ ಈ ವರ್ಷದ್ದೂ ಒಂದು ಪ್ರಹಸನವಾಗಿಯೇ ಅಂತ್ಯಗೊಳ್ಳದಿರಲಿ ಎಂಬುದು ಆಶಯ!

**ತಿಪ್ಪೂರು ಪುಟ್ಟೇಗೌಡ,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

ಈ ಬಾರಿ ರಾಜ್ಯಕ್ಕೆ ನೈರುತ್ಯ ಮುಂಗಾರು ಅವಧಿಗೂ ಮುನ್ನ ಕಾಲಿಟ್ಟಿದೆ. ಮುಂಗಾರು ಆಗಮನಕ್ಕೂ ಮೊದಲೇ ರಾಜ್ಯದ ಹಲವೆಡೆ ಭಾರಿ ಮಳೆಯಾಗಿದೆ. ಕರಾವಳಿ, ಮಲೆನಾಡು ಪ್ರದೇಶ ಸೇರಿದಂತೆ ಪಶ್ಚಿಮ ಘಟ್ಟ ವ್ಯಾಪ್ತಿಯ ಜಿಲ್ಲೆಗಳಲ್ಲಿ ನಾಲ್ಕೈದು ದಿನಗಳಿಂದ ವರುಣನ ಅಬ್ಬರ ಮುಂದುವರಿದಿದೆ. ರಾಜಧಾನಿ ಬೆಂಗಳೂರು ಹಾಗೂ ರಾಜ್ಯದ ಇತರ ಭಾಗಗಳನ್ನು ಕರಾವಳಿ, ಮಲೆನಾಡು ಪ್ರದೇಶದೊಂದಿಗೆ ಬೆಸೆಯುವ ಹಲವು ಘಾಟಿ ಪ್ರದೇಶಗಳು ಪಶ್ಚಿಮ ಘಟ್ಟ ಪ್ರದೇಶದಲ್ಲಿವೆ. ಹಾಸನ–ದಕ್ಷಿಣ ಕನ್ನಡ ಜಿಲ್ಲೆಗಳ ನಡುವಿನ ಕೊಂಡಿಯಾಗಿರುವ ಶಿರಾಡಿ ಘಾಟಿ, ಕೊಡಗು–ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪರ್ಕಿಸುವ ಸಂಪಾಜೆ ಘಾಟಿ ಸೇರಿದಂತೆ ಹಲವು ಘಾಟಿಗಳು ಇತ್ತೀಚಿನ ವರ್ಷಗಳಲ್ಲಿ ಪ್ರತಿ ಮಳೆಗಾಲದಲ್ಲೂ ಭೂಕುಸಿತಕ್ಕೆ ತುತ್ತಾಗುತ್ತಿವೆ. ಜೀವ ಹಾನಿ, ಆಸ್ತಿ ಹಾನಿಗೂ ಕಾರಣವಾಗುತ್ತಿವೆ. ನಾಲ್ಕೈದು ದಿನಗಳಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಗೆ ಕೆಲವು ಘಾಟಿಗಳಲ್ಲಿ ಭೂಕುಸಿತ ಸಂಭವಿಸಿ, ಗಿಡಮರಗಳು ಧರೆಗುರುಳಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿದೆ. ಮಳೆಗಾಲ ಆರಂಭವಾಗಿರುವ ಈ ಹೊತ್ತಿನಲ್ಲಿ ರಾಜ್ಯದ ಪ್ರಮುಖ ಘಾಟಿಗಳ ಸದ್ಯದ ಸ್ಥಿತಿಗತಿ ಹೇಗಿದೆ ಎಂಬುದನ್ನು ಇಲ್ಲಿ ಕಟ್ಟಿಕೊಡಲಾಗಿದೆ.

# ಹೀಗಿವೆ ರಾಜ್ಯದ ಘಾಟಿ ರಸ್ತೆಗಳು



ಸಕಲೇಶಪುರ–ಮಾರನಹಳ್ಳಿ ನಡುವಿನ ದೊಡ್ಡತಪ್ಪಲೆ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ವ್ಯವಸ್ಥಿತ ಚರಂಡಿ ಮಾಡದೆ ಇರುವುದರಿಂದ ಮಳೆ ನೀರು ಹಳ್ಳದಂತೆ ಹರಿಯುತ್ತಿದೆ.

ಪ್ರಜಾವಾಣಿ ಚಿತ್ರ: ಜಾನೇಕೆರೆ ಆರ್. ಪರಮೇಶ್

## ‘ರಾಡಿ’ಮಯ ಶಿರಾಡಿ

• ಚಿದಂಬರ ಪ್ರಸಾದ

ಹಾಸನ: ರಾಜಧಾನಿ ಬೆಂಗಳೂರು ಮತ್ತು ಬಂದರು ನಗರಿ ಮಂಗಳೂರು ಸೇರಿದಂತೆ ಕರಾವಳಿ ಭಾಗವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ–75ರಲ್ಲಿನ ಶಿರಾಡಿ ಘಾಟ ಈ ಬಾರಿಯೂ ಕುಸಿತದ ಭೀತಿ ಎದುರಿಸುತ್ತಿದೆ.

ನಾಲ್ಕು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಘಾಟಿಯ ಅಲ್ಲಲ್ಲಿ ಸಣ್ಣ ಪ್ರಮಾಣದ ಭೂಕುಸಿತ ಸಂಭವಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಗುಂಡ್ಯ ಸಮೀಪದ ಅಡ್ಡಹೊಳೆಯಿಂದ ಮಾರನಹಳ್ಳಿಯವರೆಗೂ ಘಾಟಿಯ ರಸ್ತೆ ಬಹುತೇಕ ಉತ್ತಮವಾಗಿದೆ. ಆದರೆ ಅಲ್ಲಿಂದ ಸಕಲೇಶಪುರದವರೆಗಿನ ಹೆದ್ದಾರಿಯ ಸ್ಥಿತಿ ಕಚ್ಚಾರಸ್ತೆಗಿಂತಲೂ ಕಡೆಯಾಗಿದೆ. ಸಕಲೇಶಪುರ ಮತ್ತು ಮಾರನಹಳ್ಳಿ ನಡುವಿನ 10 ಕಿ.ಮೀ. ಉದ್ದದ ಚತುಷ್ಪಥ ಹೆದ್ದಾರಿ ಕಾಮಗಾರಿ ಕುಂಟುತ್ತಾ ಸಾಗುತ್ತಿರುವುದರಿಂದ ರಸ್ತೆ ರಾಡಿಮಯವಾಗಿದ್ದು, ವಾಹನ ಸವಾರರು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಸಂಚರಿಸುವಂತಾಗಿದೆ.

2018ರಲ್ಲಿ ಆರಂಭವಾಗಿರುವ ಹಾಸನ–ಮಾರನಹಳ್ಳಿ ನಡುವಿನ ಹೆದ್ದಾರಿ ಕಾಮಗಾರಿ ಸಕಲೇಶಪುರದವರೆಗೆ ಮಾತ್ರ ಪೂರ್ಣವಾಗಿದೆ. ನಂತರದ ಕೆಲಸ ವಿಳಂಬವಾಗಿದೆ. ಅವೈಜ್ಞಾನಿಕ ಕಾಮಗಾರಿಯಿಂದ ಹಲವೆಡೆ ಮಣ್ಣು ಕುಸಿಯುತ್ತಲೇ ಇದೆ. ಪ್ರತಿ ವರ್ಷವೂ ಮಳೆಗಾಲದಲ್ಲಿ ಘಾಟ ಸಂಚಾರ ದುಸ್ತರವಾಗುತ್ತದೆ. ವಾಹನಗಳ ಸಂಚಾರ ಸ್ಥಗಿತಗೊಳ್ಳುವುದು ಸಾಮಾನ್ಯವಾಗಿದೆ.

ಹೆದ್ದಾರಿ ವಿಸ್ತರಣೆಗಾಗಿ ಪಕ್ಕದ ಗುಡ್ಡಗಳನ್ನು 90 ಡಿಗ್ರಿಯಲ್ಲಿ ನೇರವಾಗಿ ಕತ್ತರಿಸಲಾಗಿದ್ದು, ಕೆಲವು 6 ರಿಂದ 8 ಅಡಿ ಎತ್ತರಕ್ಕೆ ತಡೆಗೋಡೆ ನಿರ್ಮಿಸಲಾಗಿದೆ. ಇಲ್ಲಿನ ಮಣ್ಣು ಸಡಿಲವಾಗಿದೆ. ನಿಗದಿಗಿಂತ ಮೊದಲೇ ವಿಪರೀತ ಎನ್ನುವ ರೀತಿಯಲ್ಲಿ ಮಳೆ ಸುರಿಯುತ್ತಿರುವುದರಿಂದ ಬೆಟ್ಟದ ಮೇಲಿಂದ ನೀರಿನೊಂದಿಗೆ ಮಣ್ಣು ಕೊಚ್ಚಿಕೊಂಡು ಬರುತ್ತಿದೆ. ಕಡಿಮೆ ಎತ್ತರದ ತಡೆಗೋಡೆ ಕತ್ತರಿಸಿಕೊಂಡು ರಸ್ತೆಯ ಮೇಲೆ ಮಣ್ಣು ಕುಸಿಯುತ್ತಿದೆ.

ಕಳೆದ ವರ್ಷ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದ್ದ ದೊಡ್ಡತಪ್ಪಲೆ ಬಳಿ ಈ ಬಾರಿಯೂ ಭೂಕುಸಿತ ಮುಂದುವರಿದಿದೆ. ಆಗಾಗ್ಗೆ ಮಣ್ಣು ತೆರವು ಮಾಡಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ. ಈ ಪ್ರದೇಶದಲ್ಲಿ ಏಕಮುಖ ಸಂಚಾರಕ್ಕೆ ವ್ಯವಸ್ಥೆ ಮಾಡಿದ್ದು, ಎರಡೂ ಬದಿಯಲ್ಲಿ ವಾಹನಗಳು ಸರದಿಯಲ್ಲಿ ನಿಲ್ಲುತ್ತಿವೆ.

‘ಮಳೆಗಾಲದಲ್ಲಿ ಗುಡ್ಡ, ತಡೆಗೋಡೆ ಕುಸಿದು ಬೀಳುವುದು, ವಾಹನಗಳ ಸಂಚಾರ ಬಂದ್ ಆಗುವುದು, ಪ್ರಯಾಣಿಕರು ಪರದಾಡುವಂತಾಗಿದ್ದು, ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಂಡಿಲ್ಲ’ ಎಂದು ಜನರು ದೂರುತ್ತಿದ್ದಾರೆ.

### ಬಿಸಿಲೆ ಕೂಡ ಸುರಕ್ಷಿತವಲ್ಲ

ದಟ್ಟ ಕಾಡಿನ ಮಧ್ಯೆ ಬರುವ ಬಿಸಿಲೆ ಘಾಟಿಯಲ್ಲೂ ವಾಹನ ಸಂಚಾರ ಸುರಕ್ಷಿತವಾಗಿಲ್ಲ. ಇಲ್ಲೂ ಕೂಡ ಇತ್ತೀಚಿನ ವರ್ಷಗಳಲ್ಲಿ ಭೂ ಕುಸಿತ ಸಂಭವಿಸುತ್ತಿದೆ. ಕಳೆದ ವರ್ಷವೂ ಧರೆ ಕುಸಿದಿತ್ತು. ಈ ವರ್ಷ ಇನ್ನೂ ಅಂತಹ ಪ್ರಕರಣ ವರದಿಯಾಗಿಲ್ಲ. ಗಾಳಿ ಮಳೆಗೆ ಅಲ್ಲಲ್ಲಿ ಗಿಡಗಳು ರಸ್ತೆಗೆ ಬಿದ್ದಿದ್ದರಿಂದ ವಾಹನ ಸಂಚಾರ ಕೆಲಕಾಲ ಸ್ಥಗಿತವಾಗಿತ್ತು.


ಶಿರಾಡಿ ಘಾಟ, ಸಂಪಾಜೆ ಘಾಟಿಗೆ ಹೋಲಿಸಿದರೆ ಬಿಸಿಲೆ ಘಾಟ ರಸ್ತೆ ಕಿರಿದು. ದಟ್ಟ ಕಾಡಿನ ಮಧ್ಯೆ ಇರುವುದರಿಂದ ವಾಹನಗಳ ಸಂಚಾರವೂ ಕಡಿಮೆ. ಮಳೆ ಶುರುವಾದರೆ, ಬಿಸಿಲೆ ಘಾಟಿಯ ಮೂಲಕ ಸಂಚರಿಸುವುದಕ್ಕೆ ಬಹುತೇಕ ಜನರು ಹಿಂಜರಿಯುತ್ತಾರೆ.




ಸಕಲೇಶಪುರದ ಕಪ್ಪಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ ಮೇಲೆ ಮಣ್ಣು ಕುಸಿದಿದೆ




ದೇವಿಮನೆ ಘಾಟಿಗೆ ಸಮೀಪದಬೆಣ್ಣೆಹೊಳೆಗೆ ನಿರ್ಮಿಸಿದ್ದ ತಾತ್ಕಾಲಿಕ ರಸ್ತೆಯು ಭಾರಿ ಮಳೆಗೆ ಕೊಚ್ಚಿಹೋಗಿದೆ.







ಕಾರ್ಕಳದ ಮಾಳ ಘಾಟಿ ರಸ್ತೆಗೆ ಈಚೆಗೆ ಮಣ್ಣು ಕುಸಿದಿರುವುದು




ಕೊಡಗು ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆ ಕಾಮಗಾರಿ ಇನ್ನೂ ಮುಕ್ತಾಯಗೊಂಡಿಲ್ಲ

## ಚಾರ್ಮಾಡಿ: ಶುರುವಾಗದ ರಸ್ತೆ ವಿಸ್ತರಣೆ ಕಾಮಗಾರಿ

• ಪಿ.ವಿ.ಪ್ರವೀಣ್ ಕುಮಾರ್/ ನವೀನ್ ಕುಮಾರ್ ಜಿ.

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಬೆಸೆಯುವ ಚಾರ್ಮಾಡಿ ಘಾಟಿಯಲ್ಲಿ ಐದಾರು ವರ್ಷಗಳಿಂದ ಈಚೆಗೆ ಮಳೆಗಾಲದಲ್ಲಿ ಎರಡು ಸಲ ಭೂಕುಸಿತ ಉಂಟಾಗಿದೆ. ಮಳೆಗಾಲ ಶುರುವಾಗುತ್ತಿದ್ದಂತೆಯೇ ಭೂಕುಸಿತದ ಭೀತಿ ಮತ್ತೆ ಕಾಡಲಾರಂಭಿಸಿದೆ.

2019-20ನೇ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದ ಈ ಘಾಟಿಯ ಕೆಲ ಭಾಗ ಕುಸಿದು, ಇಲ್ಲಿನ ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. 2021-22ರ ಮಳೆಗಾಲದಲ್ಲಿ ಘಾಟಿಯ ಅನೇಕ ಕಡೆ ಮತ್ತೆ ಭೂ ಕುಸಿತ ಉಂಟಾಗಿತ್ತು. ಈ ಘಾಟಿಯಲ್ಲಿ ಭೂಕುಸಿತ ಮರುಕಳಿಸುವುದನ್ನು ತಡೆಯುವ ಸಲುವಾಗಿ ಶಾಶ್ವತ ದುರಸ್ತಿ ಕಾರ್ಯಕ್ಕೆ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಿಂದ ಅನುದಾನ ಮಂಜೂರಾಗಿದ್ದು, ಆ ಕಾಮಗಾರಿಗಳು ಮುಕ್ತಾಯವಾಗಿವೆ. ಭೂಕುಸಿತ ಉಂಟಾದ ಪ್ರದೇಶಗಳಲ್ಲಿ ತಡೆಗೋಡೆ ನಿರ್ಮಿಸಲಾಗಿದೆ.

25 ಕಿ.ಮೀ ಉದ್ದದ ಈ ಘಾಟಿಯಲ್ಲಿ ಹಾದುಹೋಗಿರುವ ಹೆದ್ದಾರಿಯು ಕೆಲವೆಡೆ 5.5 ಮೀಟರ್‌ನಷ್ಟು ಕಿರಿದಾಗಿದೆ. ಇದನ್ನು 10 ಮೀಟರ್‌ಗೆ ವಿಸ್ತರಿಸುವ ಯೋಜನೆಗೆ ₹343 ಕೋಟಿ ಮಂಜೂರಾಗಿತ್ತು. ಈ ಘಾಟಿಯ ಆರಂಭಿಕ ಸ್ಥಳದಿಂದ 12ನೇ ತಿರುವಿನವರೆಗೆ ಹೆದ್ದಾರಿಯನ್ನು ವಿಸ್ತರಿಸಬೇಕಿದೆ. ಈ ಕಾಮಗಾರಿಯನ್ನು ಗುತ್ತಿಗೆ ಪಡೆದ ಸಂಸ್ಥೆಯು 2025ರ ಜನವರಿಯಲ್ಲಿ ಕೆಲಸ ಆರಂಭಿಸಬೇಕಿತ್ತು. ಆದರೆ, ಇನ್ನೂ ಶುರುವಾಗಿಲ್ಲ. ಕಾಮಗಾರಿ ನಡೆಸಲು ನೂರಾರು ಮರಗಳನ್ನು ತೆರವುಗೊಳಿಸಬೇಕಾಗುತ್ತದೆ. ಅದಕ್ಕೆ ಅರಣ್ಯ ಇಲಾಖೆಯ ಅನುಮತಿ ಸಿಕ್ಕಿಲ್ಲ. ಇದು ಕೂಡ ಕಾಮಗಾರಿ ವಿಳಂಬಕ್ಕೆ ಕಾರಣ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮಳೆಗಾಲ ಹಾಗೂ ಚಳಿಗಾಲದಲ್ಲಿ ಇಲ್ಲಿ, ಮಂಜು ಆವರಿಸುವ ಸಂದರ್ಭಗಳಲ್ಲಿ ಇಕ್ಕಟ್ಟಾದ ರಸ್ತೆಗಳಲ್ಲಿ ವಾಹನ ಚಲಾಯಿಸಲು ಚಾಲಕರು ಹರಸಾಹಸಪಡಬೇಕು. ರಸ್ತೆ ಪಕ್ಕದಲ್ಲಿ ಕಡಿದಾದ ಕಣಿವೆಗಳನ್ನು ಹೊಂದಿರುವ ಈ ಘಾಟಿಯಲ್ಲಿ ಆಯ ತಪ್ಪಿದರೆ ಅಪಾಯ ಕಟ್ಟಿಟ್ಟ ಬುತ್ತಿ.

‘ಸದ್ಯಕ್ಕೆ ಚಾರ್ಮಾಡಿ ಘಾಟಿಯಲ್ಲಿ ಗುಡ್ಡ ಕುಸಿತದ ಲಕ್ಷಣ ಎಲ್ಲೂ ಕಂಡುಬಂದಿಲ್ಲ. ಈ ಬಗ್ಗೆ ನಿಗಾ ಇಟ್ಟಿದ್ದೇವೆ. ಮರ ಬಿದ್ದರೆ ಅಥವಾ ಸಣ್ಣ ಪುಟ್ಟ ಕುಸಿತ ಉಂಟಾದರೆ ತಕ್ಷಣವೇ ದುರಸ್ತಿ ಕಾರ್ಯ ಕೈಗೊಳ್ಳಲು ಅಗತ್ಯ ವ್ಯವಸ್ಥೆ ಮಾಡಿಕೊಂಡಿದ್ದೇವೆ’ ಎಂದು ರಾಷ್ಟ್ರೀಯ ಹೆದ್ದಾರಿ ವಿಭಾಗದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

### ಮಣ್ಣು ಜರಿದರಷ್ಟೇ ಸಮಸ್ಯೆ

ಉಡುಪಿ: ಜಿಲ್ಲೆಯಿಂದ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗೆ ತೆರಳುವ ಘಾಟಿ ರಸ್ತೆಗಳಲ್ಲಿ ಮಳೆಗಾಲದಲ್ಲಿ ಮಣ್ಣು ಕುಸಿದು, ಮರ ಬಿದ್ದು ಸಂಚಾರ ಸ್ಥಗಿತವಾಗುವುದು ಸಾಮಾನ್ಯವಾಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಭಾರಿ ಪ್ರಮಾಣದ ಭೂಕುಸಿತ ಸಂಭವಿಸಿದ ಉದಾಹರಣೆಗಳಿಲ್ಲ.

ಉಡುಪಿಯಿಂದ ಶೃಂಗೇರಿ, ಶಿವಮೊಗ್ಗದ ಕಡೆಗೆ ತೆರಳಲು ಆಗುಂಬೆ ಘಾಟಿಯಲ್ಲಿ ತೆರಳಬೇಕಾಗಿದೆ. ಈ ಘಾಟಿಯಲ್ಲಿ ದೊಡ್ಡ ಬಸ್‌ಗಳ ಸಂಚಾರಕ್ಕೆ ಅನುಮತಿ ಇಲ್ಲದ ಕಾರಣ ಮಿನಿ ಬಸ್‌ಗಳಷ್ಟೇ ಸಂಚರಿಸುತ್ತವೆ.

ಮೊಳಕಾಲ್ಮುರು– ಉಡುಪಿ– ಮಲ್ಪೆ ರಾಷ್ಟ್ರೀಯ ಹೆದ್ದಾರಿ 169ಎ ನಡುವೆ ಇರುವ ಆಗುಂಬೆ ಘಾಟಿಯಲ್ಲಿ ರಸ್ತೆಗಳು ಸುಸ್ಥಿತಿಯಲ್ಲಿರುವುದರಿಂದ ಸಂಚಾರ ನಿರಾತಂಕವಾಗಿದೆ.

ಚಿಕ್ಕಮಗಳೂರಿನ ಹೊರನಾಡು, ಕುದುರೆಮುಖ ಮೊದಲಾದೆಡೆಗೆ ತೆರಳಬೇಕಾದರೆ ಕಾರ್ಕಳ ತಾಲ್ಲೂಕಿನ ಮಾಳ ಘಾಟಿಯ ಮೂಲಕ ಸಂಚರಿಸಬೇಕಾಗಿದೆ. ಮಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಸ್‌. ಕೆ.ಬಾರ್ಡರ್‌ನಿಂದ ಸಾಗುವ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ಮಳೆಗೆ ಐದು ಕಡೆ ಗುಡ್ಡ ಜರಿದ ಪರಿಣಾಮವಾಗಿ ಸಂಚಾರ ವ್ಯತ್ಯಯ ಉಂಟಾಗಿತ್ತು.

ಕುಂದಾಪುರದಿಂದ ಬಸ್ರೂರು, ಸಿದ್ದಾಪುರ, ಮಾಸ್ತಿಕಟ್ಟೆ, ಹೊಸನಗರ ಕಡೆಗೆ ಹೋಗುವ ರಸ್ತೆಯಲ್ಲಿ ಬಳೇಬರೆ ಘಾಟಿ ಸಿಗುತ್ತದೆ. ಕುಂದಾಪುರದಿಂದ ಹೆಮ್ಮಾಡಿ, ಕೊಲ್ಲೂರು ದಾರಿಯಾಗಿ ನಾಗೋಡಿ ಘಾಟಿ ಸಿಗುತ್ತದೆ. ಈ ಎರಡು ಘಾಟಿಯಲ್ಲೂ ರಸ್ತೆ ಸುಸ್ಥಿತಿಯಲ್ಲಿರುವುದರಿಂದ ಯಾವುದೇ ಸಮಸ್ಯೆ ಉಂಟಾಗಿಲ್ಲ.

## ದೇವಿಮನೆ: ಅಪಾಯ ತಪ್ಪಿದ್ದಲ್ಲ

• ಗಣಪತಿ ಹೆಗಡೆ

ಕಾರವಾರ: ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆಗೆ ಬಂಡೆಗಲ್ಲುಗಳನ್ನು ಸ್ಫೋಟಿಸುವುದರ ಜೊತೆಗೆ, ಅರಣ್ಯ ನಾಶದ ಕಾರಣದಿಂದ ಭೂಕುಸಿತದ ಭೀತಿ ಎದುರಿಸುತ್ತಿರುವ ಉತ್ತರ ಕನ್ನಡ ಜಿಲ್ಲೆಯ ನಾಲ್ಕು ಘಾಟಿಗಳು ಅಪಾಯದ ಸ್ಥಿತಿಯಲ್ಲಿವೆ.

ಹೆದ್ದಾರಿಗಳು ಹಾದುಹೋಗಿರುವ ಘಾಟಿಗಳಲ್ಲಿ ಭೂಕುಸಿತ ಸಂಭವಿಸಿ ಕಳೆದ ಮಳೆಗಾಲದಲ್ಲಿ ಹಲವು ದಿನ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿ 766ಇ ನಲ್ಲಿರುವ ದೇವಿಮನೆ ಘಟ್ಟವು ಇಂತಹ ಸ್ಥಿತಿಯನ್ನು ಎದುರಿಸಿತ್ತು. ಇಲ್ಲಿ ಹೆದ್ದಾರಿ ನಿರ್ಮಾಣ ಕೆಲಸ ಪ್ರಗತಿಯಲ್ಲಿದೆ. ಘಟ್ಟದ ಪ್ರದೇಶದಲ್ಲಿ ಕಾಮಗಾರಿ ಇನ್ನೂ ಪೂರ್ಣ ವಾಗಿಲ್ಲ. ಬೃಹತ್ ಗಾತ್ರದ ಯಂತ್ರಗಳ ಮೊರೆತದ ಪರಿಣಾಮ ಮಣ್ಣು, ಕಲ್ಲು ಸಡಿಲಗೊಂಡು ಕುಸಿತ ಸಂಭವಿಸುವ ಸಾಧ್ಯತೆ ಇದೆ ಎಂಬ ಆತಂಕ ಪರಿಸರ ತಜ್ಞರದ್ದು. ಈಚೆಗೆ ಸುರಿದ ಮಳೆಗೆ ಕೆಲವೆಡೆ ಬಂಡೆಕಲ್ಲು, ಮಣ್ಣು ಕುಸಿದಿದೆ.

ಹುಬ್ಬಳ್ಳಿ-ಅಂಕೋಲಾ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-63ರಲ್ಲಿ ಯಲ್ಲಾಪುರ ತಾಲ್ಲೂಕಿನ ಅರಬೈಲ್ ಘಟ್ಟದಲ್ಲಿ ಮೂರು ವರ್ಷದ ಹಿಂದೆ ಭಾರಿ ಪ್ರಮಾಣದಲ್ಲಿ ಭೂಕುಸಿತ ಸಂಭವಿಸಿ, ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಕಡಿತಗೊಳ್ಳುವ ಆತಂಕ ಎದುರಾಗಿತ್ತು. ಭೂಕುಸಿತ ತಡೆಗೆ ಅರಣ್ಯ ಇಲಾಖೆ ಗಿಡಗಳನ್ನು ಬೆಳೆಸಿದ್ದರೂ ಆಗಾಗ ಹೆದ್ದಾರಿ ಅಂಚು ಕುಸಿಯುತ್ತಲೇ ಇದೆ. ಹೊನ್ನಾವರ-ಬೆಂಗಳೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-69ರಲ್ಲಿ ಮಲೆಮನೆ ಘಟ್ಟವಿದೆ. ಇಲ್ಲಿಯೂ ಕಳೆದ ವರ್ಷ ಭೂಕುಸಿತದ ಸಮಸ್ಯೆ ಎದುರಾಗಿತ್ತು. ಸದ್ಯ ಅಲ್ಲಿ ಗಂಭೀರ ಸಮಸ್ಯೆ ಇರದಿದ್ದರೂ, ಸಮೀಪದಲ್ಲಿರುವ ಭಾಸ್ಕೇರಿ, ಅಪ್ಸರಕೊಂಡದ ಬಳಿ ಭೂಕುಸಿತದ ಸಮಸ್ಯೆ ತೀವ್ರವಾಗಿದೆ.

## ಸಂಪಾಜೆ: ಭೂ ಕುಸಿತದ ಭೀತಿಗಿಲ್ಲ ಮುಕ್ತಿ

• ಕೆ.ಎಸ್.ಗಿರೀಶ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ 2018ರ ಮಳೆಗಾಲದಲ್ಲಿ ಭೂಕುಸಿತ ಸಂಭವಿಸಿದ್ದ ವೇಳೆ ಸಂಪಾಜೆ ಘಾಟಿಯಲ್ಲೂ ಭಾರಿ ಪ್ರಮಾಣದಲ್ಲಿ ಭೂಕುಸಿತ ಉಂಟಾಗಿತ್ತು. ಆ ಬಳಿಕ, ಪ್ರತಿ ಮಳೆಗಾಲದಲ್ಲೂ ರಸ್ತೆಗೆ ಮಣ್ಣು ಕುಸಿದು ಸಂಚಾರ ಸ್ಥಗಿತಗೊಳ್ಳುತ್ತಿದೆ. ಬಳಸು ಮಾರ್ಗ ಅನಿವಾರ್ಯವಾಗುತ್ತಿದೆ.

30 ಕಿ.ಮೀ ಉದ್ದದ ಈ ಘಾಟಿ ರಸ್ತೆಯಲ್ಲಿ ಬರುವ ಮದೆನಾಡು ಸಮೀಪದ ಕತ್ರೋಜಿ ಎಂಬಲ್ಲಿ ಮಳೆ ಹೆಚ್ಚಾದಾಗ ಗುಡ್ಡದ ಮಣ್ಣು ನಿರಂತರವಾಗಿ ರಸ್ತೆಗೆ ಜಾರುತ್ತದೆ. ಮಣ್ಣನ್ನು ತೆಗೆದು, ಲಾರಿಗಳಲ್ಲಿ ಸಾಗಿಸುವ ಕೆಲಸ ಮಳೆಗಾಲ ಮುಗಿಯುವವರೆಗೂ ನಡೆಯುತ್ತಿರುತ್ತದೆ. ರಸ್ತೆಯ ಒಂದೇ ಬದಿಯಲ್ಲಿ ವಾಹನಗಳು ಸಂಚರಿಸುವುದರಿಂದ ದಟ್ಟಣೆ ಉಂಟಾಗಿ, ಸಂಚಾರ ಯಾತನಾಮಯವಾಗುತ್ತದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ ವಾಗಿಲ್ಲ. 2019–20ರಲ್ಲಿ 18 ಕಡೆ ತಡೆಗೋಡೆ ಕಟ್ಟಿದ್ದರೂ, ಸಮಸ್ಯೆ ಹಾಗೆಯೇ ಇದೆ.

ಕೆಲವು ದಿನಗಳಿಂದ ಮಳೆ ಸುರಿಯುತ್ತಿದ್ದರೂ, ಸದ್ಯಕ್ಕೆ ಕುಸಿಯುವ ಭೀತಿ ಕಾಣುತ್ತಿಲ್ಲ. ಘಾಟಿ ರಸ್ತೆಯಲ್ಲಿ ₹ 94 ಕೋಟಿ ವೆಚ್ಚದಲ್ಲಿ 21 ಕಡೆ ತಡೆಗೋಡೆ ಕಟ್ಟುವ ಕಾಮಗಾರಿಗೆ ಟೆಂಡರ್ ಆಗಿದ್ದು, ಸಮಸ್ಯೆ ನಿವಾರಣೆಯಾಗುವ ನಿರೀಕ್ಷೆ ಮೂಡಿಸಿದೆ.

‘ಆಂಧ್ರದ ಕೃಷಿ ಇನ್‌ಫ್ರಾಟೆಕ್ ಕಂಪನಿ ಟೆಂಡರ್ ಪಡೆದು ಕೊಂಡಿದ್ದು, ಕುಶಾಲನಗರದಿಂದ ಸಂಪಾಜೆಯವರೆಗೆ ತಡೆಗೋಡೆಗಳನ್ನು ಕಟ್ಟಲಾಗುತ್ತದೆ. ಪ್ರತಿ ವರ್ಷ ಕುಸಿಯುವ ಕತ್ರೋಜಿಯೂ ಇದರಲ್ಲಿ ಸೇರಿದೆ’ ಎಂದು ರಾಷ್ಟ್ರೀಯ ಹೆದ್ದಾರಿ ಮಡಿಕೇರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜಿ.ಎಚ್.ಗಿರೀಶ್ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಇದೇ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಇರುವ ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆಯ ಸ್ಲ್ಯಾಬ್‌ಗಳೂ ಆಗಾಗ್ಗೆ ಹೊರಚಾಚಿ ಕುಸಿತದ ಭೀತಿ ಮೂಡಿಸುತ್ತಿವೆ. ಲೋಕೋಪಯೋಗಿ ಇಲಾಖೆ ತಡೆಗೋಡೆ ಕಾಮಗಾರಿ ನಡೆಸುತ್ತಿದೆ. ಹಲವು ವರ್ಷಗಳಾದರೂ ಕಾಮಗಾರಿ ಮುಗಿದಿಲ್ಲ. ಅದು ಪೂರ್ಣಗೊಳ್ಳದ ಹೊರತು ಹೆದ್ದಾರಿಯಲ್ಲಿ ನಿರಾತಂಕವಾಗಿ ಸಂಚರಿಸುವುದು ಅಸಾಧ್ಯ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
**9606038256**

**ಹರಿಯಾಣ** ಮೂಲದ ಯುಟ್ಯೂಬರ್ ಜ್ಯೋತಿ ಮಲ್ಹೋತ್ರಾ ಅವರನ್ನು ಪಾಕಿಸ್ತಾನದ ಪರವಾಗಿ ಬೇಹುಗಾರಿಕೆ ನಡೆಸಿದ ಆರೋಪದಲ್ಲಿ ಪೊಲೀಸರು ಬಂಧಿಸಿದ ನಂತರ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಇರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಜ್ಯೋತಿ ಹಾಗೂ ರಾಹುಲ್ ಅವರ ನಡುವೆ ಪರಿಚಯ ಇದೆ ಎಂದೂ ಆಪರೇಷನ್ ಸಿಂಧೂರದ ವಿಚಾರದಲ್ಲಿ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್‌ನ ವರ್ತನೆಯನ್ನು ಈ ಚಿತ್ರಗಳ ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು ಎಂದೂ ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.




**ಪೋಸ್ಟ್‌ನಲ್ಲಿರುವ** ಚಿತ್ರಗಳ ಪೈಕಿ ಒಂದು ಚಿತ್ರದಲ್ಲಿ ರಾಹುಲ್ ಅವರ ಜತೆಗಿರುವ ಮಹಿಳೆ ನೀಲಿ ಉಡುಪು ಧರಿಸಿರುವುದು ಕಾಣುತ್ತದೆ. ಅದನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, 2018ರ ಮೇ 7ರಂದು ‘ಇಂಡಿಯಾ ಟುಡೆ’ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯೊಂದು ಕಂಡಿತು. ಅದರಲ್ಲಿ ರಾಹುಲ್ ಗಾಂಧಿ ಅವರೊಂದಿಗೆ ನೀಲಿ ಉಡುಪು ಧರಿಸಿದ ಮಹಿಳೆ ಇದ್ದು, ಅವರು ಕಾಂಗ್ರೆಸ್ ಮುಖಂಡರಾಗಿದ್ದ ಅದಿತಿ ಸಿಂಗ್ ಎನ್ನುವುದು ವರದಿಯಲ್ಲಿತ್ತು. ಅದಿತಿ ಸಿಂಗ್ ಅವರ ಮುಖದ ಜಾಗದಲ್ಲಿ ಜ್ಯೋತಿ ಮಲ್ಹೋತ್ರಾ ಮುಖವನ್ನು ಅಳವಡಿಸಿ, ತಪ್ಪು ತಿಳಿವಳಿಕೆ ಮೂಡಿಸುವ ಸಲುವಾಗಿ ಅದನ್ನು ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

## ಗುಂಡಣ್ಣ




## ನಿಸರ್ಗದ ನಿತ್ಯೋತ್ಸವ




**ಒಬ್ಬ ಭಕ್ತನಿಗೆ** ಅವನ ಆಸೆ ಈಡೇರಿತ್ತು. ಅದಕ್ಕೆ ಅವನು ತನ್ನ ಕುಲದೇವರ ಪ್ರತಿಮೆಯನ್ನು ಮಾಡಿಸಿದ್ದ. ಒಂದು ಕೆ.ಜಿ. ಬಂಗಾರ ಖರ್ಚು ಮಾಡಿ ಪ್ರತಿಮೆ ಮಾಡಿದ್ದ. ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದ. ಆದರೂ ಅವನಿಗೆ ಅದು ಸುಂದರ ಕಾಣುತ್ತಿಲ್ಲ. ಏನೋ ಕೊರತೆ ಇದೆ ಅನ್ನಿಸಿತು. ಅದಕ್ಕೆ ಏನು ಮಾಡಬೇಕು ಎಂದು ಯೋಚಿಸಿದ. ಒಂದು ಕೋಟಿ ರೂಪಾಯಿ ಖರ್ಚು ಮಾಡಿ ಸಿದ್ಧಪಡಿಸಿದ ಮೂರ್ತಿ ಚೆನ್ನಾಗಿ ಕಾಣಲು ಒಂದು ರೂಪಾಯಿ ಕೊಟ್ಟು ತಂದ ಗುಲಾಬಿ ಹೂವನ್ನು ದೇವರ ತಲೆಯ ಮೇಲೆ ಇಟ್ಟ. ಆಗ ಅದು ಸುಂದರವಾಗಿ ಕಾಣಿಸಿತು. ಬಂಗಾರಕ್ಕೆ ಒಂದು ಕೋಟಿ, ಹೂವಿಗೆ ಒಂದು ರೂಪಾಯಿ. ದೇವರೇ ತನ್ನ ತಲೆಯ ಮೇಲೆ ಇಟ್ಟುಕೊಂಡು ಸಂತೋಷಪಡಬೇಕಾದರೆ ಹೂವು ಅಂತಹದ್ದು ಏನು ಮಾಡಿದೆ.

ದಾರಿಯಲ್ಲಿ ಒಬ್ಬ ಯಾತ್ರಿಕ ಬಂದ. ಅಲ್ಲೊಂದು ಹೂವು ನೋಡಿದ. ಹೂವು ನೋಡಿದ್ದಕ್ಕೇ ಅವನಿಗೆ ಸಂತೋಷವಾಯಿತು. ಸಂಜೆ ಒಬ್ಬ ಕವಿ ಬಂದ. ಆ ಹೂವಿನ ಸೌಂದರ್ಯ ನೋಡಿ ಕವನಗಳನ್ನೇ ಬರೆದ. ನಂತರ ಒಂದು ದುಂಬಿ ಬಂತು. ಅದು ಹೂವಿನಲ್ಲಿರುವ ಮಕರಂದ ಹೀರಿತು. ಯಾತ್ರಿಕನಿಂದಾಗಲೀ, ಕವಿಯಿಂದಾಗಲಿ, ದುಂಬಿಯಿಂದಾಗಲಿ ಹೂವು ಯಾವುದೇ ಶುಲ್ಕ ಪಡೆಯಲಿಲ್ಲ. ಹೂವು ತನ್ನ ಬಳಿಗೆ ಯಾರು ಬಂದರೂ ಅವರಿಂದ ಏನನ್ನೂ ತೆಗೆದುಕೊಳ್ಳದೇ ಸಂತೋಷ ಹಂಚುತ್ತಿತ್ತು. ಅದಕ್ಕೇ ಅದು ದೇವರ ತಲೆ ಏರಿತು. ದೇವರಿಗೇ ದೇವರಾಗಿತ್ತು ಹೂವು.

ಯಾರು ಕೊಡುತ್ತಾರೋ ಅವರು ದೇವರಾಗುತ್ತಾರೆ. ಮನುಷ್ಯ ದೇವರ ಮನೆ ಒಳಗೆ ಹೋಗಬೇಕು ಎಂದರೆ ಸ್ನಾನ ಮಾಡಿಕೊಂಡು ಬಾ ಎನ್ನುತ್ತಾನೆ ದೇವರು. ಈಗ ಸಹ್ಯಾದ್ರಿ ಇದೆ. ನಿತ್ಯೋತ್ಸವ ತಾಯಿ ನಿತ್ಯೋತ್ಸವ ಎಂದು ಕವಿ ಹಾಡುತ್ತಾನೆ. ಅಲ್ಲೇನು ಯಾರಾದರೂ ಡೆಕೋರೇಷನ್ ಮಾಡಿದ್ದಾರೇನು? ಯಾರಾದರೂ ಲೈಟಿಂಗ್ ಹಾಕಿದ್ದಾರೇನು? ಆದರೂ ಅಲ್ಲಿ ನಿತ್ಯೋತ್ಸವ ಯಾಕಿದೆ? ಯಾಕಿದೆ ಎಂದರೆ ಗಿಡ ಯಾರೇ ಬರಲಿ, ಆ ಜಾತಿ ಈ ಜಾತಿ ಎಂದು ನೋಡಲಿಲ್ಲ. ಯಾರು ಬಂದರೂ ನೆರಳು ಕೊಟ್ಟಿತು. ಪಕ್ಷಿಗಳು ಬಂದರೆ ಹಣ್ಣು ಕೊಟ್ಟಿತು. ಎಷ್ಟೋ ಪಕ್ಷಗಳು ಗೂಡು ಕಟ್ಟಿದವು. ಅವುಗಳಿಗೆ ಆಶ್ರಯ ನೀಡಿತು. ಬಂದವರಿಗೆಲ್ಲ ತನ್ನ ಬಳಿ ಇರುವುದನ್ನು ಕೊಟ್ಟು ಸಂತೋಷಪಟ್ಟಿತು. ಅದಕ್ಕೆ ಅದರ ಬದುಕು ನಿತ್ಯೋತ್ಸವ ಆಗಿದೆ. ಅದು ಕೊಟ್ಟಿದೆ ಅದಕ್ಕೆ ನಿತ್ಯೋತ್ಸವ. ನಾವು ಕೊಟ್ಟಿಲ್ಲ ಅದಕ್ಕೆ ನಿತ್ಯೋತ್ಸವ ಇಲ್ಲ. ನಿಸರ್ಗದ್ದು ನಿತ್ಯೋತ್ಸವ ನಮ್ಮದು ಒತ್ತೋತ್ಸವ.

ನಿಸರ್ಗದಲ್ಲಿ ಒಂದು ಕಾಗೆ ಇರುತ್ತದೆ. ಆಹಾರ ಕಂಡರೆ ಅದು ತನ್ನ ಬಳಗವನ್ನೆಲ್ಲಾ ಕರೆಯುತ್ತದೆ. ಹಂಚಿಕೊಂಡು ಉಣ್ಣುತ್ತದೆ. ಕೋಳಿಯೂ ಎಲ್ಲರನ್ನು ಕರೆದು ಹಂಚಿಕೊಂಡು ತಿನ್ನುತ್ತದೆ. ಮನುಷ್ಯನೇ ನೋಡು; ಒಂದು ಹೂವು ಯಾರಿಂದಲೂ ಏನನ್ನೂ ಪಡೆದಿಲ್ಲ. ತನ್ನಲ್ಲಿ ಇರುವುದನ್ನು ಹಂಚಿಕೊಂಡಿದೆ. ಗಿಡವೂ ಹಾಗೇ ಮಾಡಿದೆ. ಕಾಗೆ, ಕೋಳಿ ತನ್ನ ಬಳಗಕ್ಕೆಲ್ಲಾ ಹಂಚಿಕೊಂಡು ತಿಂದಿವೆ. ಹಾಗೆಯೇ ಮನುಷ್ಯನೇ ನೀನು ಕೂಡ ದೇವರು ನಿನಗೆ ಕೊಟ್ಟ ಧನ ಕನಕ ವಿದ್ಯೆ ಬುದ್ಧಿ ಎಲ್ಲವನ್ನೂ ಇನ್ನೊಬ್ಬರ ಜೊತೆ ಹಂಚಿಕೊಳ್ಳುವ ಗುಣವನ್ನು ಬೆಳೆಸಿಕೊಳ್ಳಬೇಕು. ಅದಕ್ಕೆ ದಾನ ಎಂದು ಕರೆಯುತ್ತಾರೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮೇ 28, 2025

**ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ:** ಜ್ಯೇಷ್ಠ ಶುಕ್ಲ ದ್ವಿತೀಯ ಗಂ. 25-55 ನಕ್ಷತ್ರ: ಮೃಗಶಿರ ಗಂ. 24-29 ಯೋಗ: ಧೃತಿ ಗಂ. 19-09 ಕರಣ: ಬಾಲವ ಗಂ. 15-26, ವೃಷಭ ಮಾಸದ 14 ನೇ ದಿನ.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-06 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 29 ಜುಲ್ಕಾಯದ್
ಅದೃಷ್ಟ ಸಂಖ್ಯೆ : 1, 5

**ಮೇಷ:** ಕುಟುಂಬದ ಸದಸ್ಯರಲ್ಲಿ ಬಾಲ್ಯದ ಕ್ಷಣಗಳನ್ನು ನೆನಪಿಸಿಕೊಳ್ಳುವ ಸಿಹಿ ಘಟನೆಗಳು ನಡೆಯಲಿವೆ. ಜೀವನ ಕ್ರಮವನ್ನು ಬದಲಿಸದೆ ಮುಂದುವರಿಯುವಿರಿ. ಆತ್ಮಸಾಕ್ಷಿಗೆ ವಂಚನೆ ಮಾಡದಂತೆ ನಡೆದುಕೊಳ್ಳಿ.

**ವೃಷಭ:** ವ್ಯವಹಾರದಲ್ಲಿನ ಹೊಸ ವಿಷಯಗಳನ್ನು ತಿಳಿದುಕೊಂಡು ಅದರಂತೆಯೇ ನಡೆದು ಆದಾಯವನ್ನು ಸಂಪಾದಿಸುವಿರಿ. ಸೃಜನಶೀಲತೆಗೆ ಉತ್ತಮ ವೇದಿಕೆ ಪ್ರಾಪ್ತಿ. ಮಕ್ಕಳ ಜೊತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ.

**ಮಿಥುನ:** ಏಕಾಂಗಿಯಾಗಿರುವವರಿಗೆ ಸಂಗಾತಿ ಸಿಗುವ ಲಕ್ಷಣಗಳಿವೆ. ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸಿದ್ದಕ್ಕೆ ಮೇಲಧಿಕಾರಿಗಳಿಂದ ಪ್ರಶಂಸೆ ಪಡೆಯುವಿರಿ. ಕೆಲಸದ ಒತ್ತಡ ಹಾಗೂ ಜವಾಬ್ದಾರಿಗಳು ಹೆಚ್ಚಲಿವೆ.

**ಕರ್ಕಾಟಕ:** ಹಾಲು ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭ ಸಿಗಲಿದೆ. ಕಾರ್ಯಗಳು ಲಾಭಯುಕ್ತವಾಗಿ ಪೂರೈಸುವುದು. ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಸುಧೀರ್ಘ ಮಾತುಕತೆ ನಡೆಸಿ ತೀರ್ಮಾನ ಕೈಗೊಳ್ಳಿ.

**ಸಿಂಹ:** ಗುತ್ತಿಗೆದಾರರು ಮತ್ತು ಕಟ್ಟಡ ನಿರ್ಮಾಣದಾರರಿಗೆ ಅನುಕೂಲಕರ ದಿನ. ಕುಟುಂಬದಲ್ಲಿ ಹಿರಿಯರ ಆರೋಗ್ಯ ಸುಧಾರಣೆ ಇರುವುದು. ಶ್ರೀವೀರಾಂಜನೇಯ ಸ್ತೋತ್ರ ಪಠಿಸಿದರೆ ಮಾನಸಿಕ ಧೈರ್ಯ ವೃದ್ಧಿ.

**ಕನ್ಯಾ:** ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲಕರವಾಗಿದೆ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ಕುಟುಂಬದಲ್ಲಿ ಶುಭಕಾರ್ಯಗಳ ಸಂಭ್ರಮದಿಂದ ನೆಮ್ಮದಿ.

**ತುಲಾ:** ಕಾರ್ಯರಂಗದಲ್ಲಿ ಮುನ್ನಡೆಗೆ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಸೂಕ್ಷ್ಮವಾಗಿ ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ಕಣ್ಣಿಗೆ ಸಂಬಂಧಿಸಿದಂತೆ ಅನಾರೋಗ್ಯಗಳು ಎದುರಾಗಬಹುದು.

**ವೃಶ್ಚಿಕ:** ಜೀವನದಲ್ಲಿ ಅನುಭವದ ಕೊರತೆ ಕಾಡಲಿದೆ. ಜೀವನದ ಪಾಠವನ್ನು ಕಲಿಯುವುದು ಅಗತ್ಯವೆನಿಸುವುದು. ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂಥ ಕಾಲವನ್ನು ನಿರೀಕ್ಷಿಸಬಹುದು.

**ಧನು:** ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಬಂಧುಗಳಿಂದ ಸಹಕಾರ ದೊರೆತು ವ್ಯಾಪಾರದಲ್ಲಿ ಅಧಿಕ ಲಾಭವಾಗಿ ಸಂತೋಷವಿರುವುದು. ಹೊರಗುತ್ತಿಗೆ ಪಡೆಯುವಲ್ಲಿ ಯಶಸ್ವಿಯಾಗುವಿರಿ.

**ಮಕರ:** ಗೆಳೆಯನೊಬ್ಬನ ಭೇಟಿಯಿಂದಾಗಿ ಜೀವನ ಮಹತ್ವದ ತಿರುವೊಂದನ್ನು ಪಡೆದುಕೊಳ್ಳಲಿದೆ. ಪ್ರೇಮಿಗಳ ಮನೋಕಾಮನೆಗಳು ಪೂರ್ಣಗೊಂಡಾವು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಮೂಡಲಿದೆ.

**ಕುಂಭ:** ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ ಸೂಕ್ತಕ್ರಮ ಕೈಗೊಳ್ಳುವುದು ಉತ್ತಮ. ಆತುರದ ನಿರ್ಧಾರಗಳು ಪಶ್ಚಾತಾಪಕ್ಕೆ ಕಾರಣವಾಗುತ್ತವೆ. ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಗಮನವಹಿಸಿ.


**ಮೀನ:** ರಾಜಕೀಯ ವಲಯದ ಕಾರ್ಯಕರ್ತರಿಗೆ ಮುನ್ನಡೆಯುವ ಅವಕಾಶಗಳು ಕೈತಪ್ಪುವ ಸಾಧ್ಯತೆ ಇದೆ. ಹಲವು ದಿನಗಳಿಂದ ಕಾಯುತ್ತಿದ್ದ ಸುದ್ದಿ ಕೇಳಿ ಮನಸ್ಸಿಗೆ ಹರ್ಷ ಉಂಟಾಗುವುದು. ನಿಲುವನ್ನು ಬದಲಾಯಿಸಬೇಡಿ.

## ಪದಬಂಧ 6056

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ರಾಜ ಕಾಲಾಳು ಮುಂತಾದ ಕಾಯಿಗಳಿಂದ ಆಡುವ ಒಳಾಂಗಣ ಆಟ (4)
3.ಈತ ಬುದ್ಧಿ ಇಲ್ಲದವನು (4)
5.ಬೇಡುವವನು ಇಲ್ಲಿದ್ದಾನೆ (3)
6.ನೇಸರನ ಇನ್ನೊಂದು ಹೆಸರು (4)
8.ಇದು ದ್ರವದಿಂದ ತುಂಬಿರುವುದು (4)
10.ಸುಳಿಯುತ್ತಾ ಬಳಿಗೆ ಬಂದು ಹೀಗೆ ನುಂಗು! (4)
12.ಅನಂತರ ಬಂದವನು ಮಾಡಿರುವ ಗದ್ದಲ! (4)
14.ಬಡಿಗೆಯನ್ನು ಹಿಡಿದು ಬಂದವನು ದಪ್ಪನೆಯ ಮನುಷ್ಯ (3)
15.ಜೈನ ತೀರ್ಥಂಕರರಲ್ಲಿ ಕೊನೆಯವರು (4)
16.ತರತರದ ಕಾಯಿಪಲ್ಲೆ (4)

**ಮೇಲಿಂದ ಕೆಳಕ್ಕೆ**
1.ನಾಲ್ಕು ಕಾಲುಗಳನ್ನುಳ್ಳದ್ದು (4)
2.ಎಲ್ಲೆಯ ಬಳಿಯಿರುವ ಕಾಲ ಸೂಚಕ ಯಂತ್ರ (4)
3.ಮರದ ಹತ್ತಿರವಿರುವ ತುಂಬಿ (4)
4.ಮಧ್ಯವಯಸ್ಸಿದು (4)
7.ಭವನದ ಹತ್ತಿರ ಮುಸಲ್ಮಾನ ದೊರೆಬಂದಿದ್ದಾನಲ್ಲಾ! (3)
9.ಮಹಡಿಯನ್ನು ಹಂತ ಹಂತವಾಗಿ ಏರಿರುವ ಧರ್ಮಾಧಿಕಾರಿ (3)
10.ವರನಿಗೆ ಕೇಳಿಸುತ್ತಿರುವುದು ಮಧುರವಾದ ಧ್ವನಿ (4)
11.ವಿಷ್ಣುವಿನ ಕೈಯಲ್ಲಿರುವ ಚಕ್ರಾಯುಧ (4)
12.ಆಯಾಳು ತಂದಿರುವ ಸೂಜಿಗಲ್ಲು (4)
13.ದಾರಿಯಲ್ಲಿ ಪಡೆದುಕೊಂಡಿರುವ ಪರವಾನಗಿ (4)



### 6055ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ವಾತಾವರಣ 3.ಪಾನಕ
5.ವಿಧಾನಸಭೆ 7.ಸಲಗ
8.ಹೊಸಬದುಕು
11.ಕನಸು 12.ಜನನಾಯಕ
14.ಮೆದುಳು 15.ನಾಮಕರಣ

**ಮೇಲಿಂದ ಕೆಳಕ್ಕೆ:**
1.ವಾಸ್ತವಿಕ 2.ವದನ
4.ಕರಗ 6.ಸಮಾಸ
7.ಸರಕು 8.ಹೊಲಸು
9.ದುರ್ದಾನ 10.ಪ್ರಕರಣ
11.ಕಡಿಮೆ 13.ನಾಸಿಕ

## ಸುಡೊಕು 6440

| | | | | | | | | |
|---|---|---|---|---|---|---|---|---|
| | 6 | | | 9 | | | | 8 |
| 1 | | | 8 | | | 5 | | |
| | | 2 | | 6 | | | 9 | 7 |
| | | 7 | | | 9 | 6 | | |
| 4 | 2 | | | | | | 5 | 9 |
| 6 | | | 7 | | 8 | | | |
| 2 | | 5 | 4 | | 7 | 9 | | 6 |
| | 4 | | | | | | 7 | |
| 9 | | 6 | 3 | | 5 | | 4 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6439 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 3 | 2 | 1 | 9 | 4 | 6 | 5 |
| 6 | 2 | 9 | 4 | 5 | 8 | 7 | 1 | 3 |
| 4 | 1 | 5 | 6 | 7 | 3 | 9 | 2 | 8 |
| 5 | 4 | 2 | 7 | 9 | 6 | 8 | 3 | 1 |
| 3 | 6 | 7 | 8 | 4 | 1 | 5 | 9 | 2 |
| 1 | 9 | 8 | 3 | 2 | 5 | 6 | 4 | 7 |
| 9 | 8 | 1 | 5 | 6 | 2 | 3 | 7 | 4 |
| 2 | 3 | 4 | 9 | 8 | 7 | 1 | 5 | 6 |
| 7 | 5 | 6 | 1 | 3 | 4 | 2 | 8 | 9 |

# ಚಿನ್ನದ ದರ ₹800, ಬೆಳ್ಳಿ ₹1,370 ಇಳಿಕೆ

**ನವದೆಹಲಿ (ಪಿಟಿಐ):** ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.


10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹800 ಕಡಿಮೆಯಾಗಿ, ₹98,500 ಆಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹98 ಸಾವಿರ ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,370 ಕಡಿಮೆಯಾಗಿದ್ದು, ₹99 ಸಾವಿರಕ್ಕೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ಕಡಿಮೆಯಾಗಿದೆ. ಹೀಗಾಗಿ, ದೇಶೀಯ ಮಾರುಕಟ್ಟೆಯಲ್ಲೂ ಬೆಲೆ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

## ಅಡಿಕೆ ಧಾರಣೆ (₹ಗಳಲ್ಲಿ)

| | | | | | |
|---|---|---|---|---|---|
| **ಪುತ್ತೂರು** | | ಗೊರಬಲು | 19211-33669 | ಬಿಳಿಗೋಟು | 17999-33299 |
| ಕೋಕ | 20000-31500 | ರಾಶಿ | 48099-58559 | ಚಾಲಿ | 35699-44011 |
| ಹೊಸತು | 26000-49500 | ಸರಕು | 51100-99696 | ಕೆಂಪುಗೋಟು | 13999-24709 |
| **ಸಾಗರ** | | **ಸಿದ್ದಾಪುರ** | | ರಾಶಿ | 42218-48099 |
| ಬಿಳಿಗೋಟು | 16210-24899 | ಬಿಳಿಗೋಟು | 24599-30319 | **ಯಲ್ಲಾಪುರ** | |
| ಚಾಲಿ | 33599-38411 | ಚಾಲಿ | 35899-42809 | ಬಿಳಿಗೋಟು | 16519-36599 |
| ಕೋಕ | 10009-20899 | ಕೋಕ | 16319-27719 | ಚಾಲಿ | 36600-44169 |
| ಕೆಂಪುಗೋಟು | 18510-28919 | ಕೆಂಪುಗೋಟು | 21019-22909 | ಕೋಕ | 8699-16899 |
| ರಾಶಿ | 38899-56559 | ರಾಶಿ | 42099-46299 | ಕೆಂಪುಗೋಟು | 16601-26799 |
| ಸಿಪ್ಪೆಗೋಟು | 16109-17770 | ತಟ್ಟಿಬೆಟ್ಟೆ | 28909-41319 | ರಾಶಿ | 39509-58009 |
| **ಶಿವಮೊಗ್ಗ** | | **ಶಿರಸಿ** | | ತಟ್ಟಿಬೆಟ್ಟೆ | 27891-37869 |
| ಬೆಟ್ಟೆ | 50577-58889 | ಬೆಟ್ಟೆ | 25110-38199 | | |


### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 25,001 |
| ಇಂದಿನ ಅಂತ್ಯ | 24,826 |
| ▼ | 174 |
| ದಿನದ ಕನಿಷ್ಠ | 24,704 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



| | |
|---|---|
| **ಬೆಂಗಳೂರು** | |
| 100ಕ್ಕೆ | ₹600 |
| 12 ಕ್ಕೆ | ₹80 |
| **ಮೈಸೂರು** | |
| 100ಕ್ಕೆ | ₹605 |

### ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಕೆ.ಜಿ) ₹222-558
ದ್ವಿತಳಿ (ಕೆ.ಜಿ) ₹315-736

### ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹195
ಆರ್‌ಎಸ್‌ಎಸ್-5 ₹190.50
ಗುಡ್ ಲಾಟ್ ₹180.50
(ಪ್ರತಿ ಕೆ.ಜಿಗೆ)

ಸೆಪ್ಟೆಂಬರ್ 15ರವರೆಗೆ ರಿಟರ್ನ್ಸ್‌ಗೆ ಅವಕಾಶ • ತೆರಿಗೆದಾರರಿಗೆ ಅನುಕೂಲ

# ಐಟಿಆರ್ ಸಲ್ಲಿಕೆ: ಗಡುವು ವಿಸ್ತರಣೆ



**ನವದೆಹಲಿ (ಪಿಟಿಐ):** 2025–26ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ ಅವಧಿಯನ್ನು ಸೆಪ್ಟೆಂಬರ್ 15ರ ವರೆಗೆ ವಿಸ್ತರಿಸಲಾಗಿದೆ.

ರಿಟರ್ನ್ಸ್ ಸಲ್ಲಿಕೆ ಪ್ರಕ್ರಿಯೆಯು ಏಪ್ರಿಲ್ 1ರಿಂದ ಆರಂಭವಾಗಲಿದ್ದು, ಜುಲೈ 31ರ ವರೆಗೆ ಗಡುವು ಇರುತ್ತಿತ್ತು. ಈ ಬಾರಿ ರಿಟರ್ನ್ಸ್ ಸಲ್ಲಿಸುವ ಅರ್ಜಿ ನಮೂನೆಗಳಲ್ಲಿ ಸಾಕಷ್ಟು ಬದಲಾವಣೆ ಮಾಡಲಾಗಿದೆ. ತೆರಿಗೆದಾರರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ಅವಧಿ ವಿಸ್ತರಿಸಲಾಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ತಿಳಿಸಿದೆ.

ತಮ್ಮ ಖಾತೆಗಳನ್ನು ಲೆಕ್ಕ ಪರಿಶೋಧಿಸುವ ಅಗತ್ಯವಿಲ್ಲದ ವೈಯಕ್ತಿಕ ತೆರಿಗೆದಾರರು, ಹಿಂದೂ ಅವಿಭಕ್ತ ಕುಟುಂಬದವರು (ಎಚ್‌ಯುಎಫ್) ಮತ್ತು ಸಂಸ್ಥೆಗಳಿಗೆ ಈ ವಿಸ್ತರಣೆ ಅನ್ವಯಿಸಲಿದೆ.

2024–25ನೇ ಆರ್ಥಿಕ ವರ್ಷದಲ್ಲಿ (ಏಪ್ರಿಲ್‌ನಿಂದ ಮಾರ್ಚ್) ಗಳಿಸಿದ ಆದಾಯಕ್ಕೆ ಸೆಪ್ಟೆಂಬರ್ 15ರ ವರೆಗೆ ರಿಟರ್ನ್ಸ್ ಸಲ್ಲಿಸಬಹುದಾಗಿದೆ.

ಈ ಬಾರಿ ತೆರಿಗೆ ಹೊಂದಾಣಿಕೆಯ ಹಲವು ನಿಯಮಗಳನ್ನು ಸರಳೀಕರಿಸಲಾಗಿದೆ. ಪಾರದರ್ಶಕತೆಗೆ ಒತ್ತು ನೀಡಲಾಗಿದೆ. ತೆರಿಗೆದಾರರಿಗೆ ನಿಖರ ಮಾಹಿತಿ ಲಭ್ಯವಾಗುವಂತೆ ಕ್ರಮವಹಿಸುವುದು ಸೇರಿ ಹಲವು ರಚನಾತ್ಮಕ ಬದಲಾವಣೆ ಮಾಡಲಾಗಿದೆ. ಈ ಬದಲಾವಣೆಗಳಿಗೆ ಪೂರಕವಾಗಿ ತೆರಿಗೆ ವ್ಯವಸ್ಥೆಯ ಅಭಿವೃದ್ಧಿಗೆ ಸಮಯಾವಕಾಶ ಬೇಕಿದೆ ಎಂದು ತಿಳಿಸಿದೆ. ಮೇ 31ರೊಳಗೆ ಸಲ್ಲಿಸಬೇಕಾದ ಟಿಡಿಎಸ್ ಹೇಳಿಕೆಗಳು ತೆರಿಗೆದಾರರಿಗೆ ಜೂನ್‌ನಿಂದ ಲಭಿಸುತ್ತವೆ. ಹಾಗಾಗಿ, ಸಮಯಾವಕಾಶ ವಿಸ್ತರಿಸಲಾಗಿದೆ ಎಂದು ತಿಳಿಸಿದೆ.

**ವಿಳಂಬ ಏಕೆ:** ಸಾಮಾನ್ಯವಾಗಿ ಆರ್ಥಿಕ ವರ್ಷ ಮುಕ್ತಾಯವಾಗುವುದಕ್ಕೂ ಮೊದಲು ಐಟಿಆರ್ ಅರ್ಜಿ ನಮೂನೆಗಳ ಬಗ್ಗೆ ಅಧಿಸೂಚನೆ ಪ್ರಕಟಿಸಲಾಗುತ್ತದೆ. ಜನವರಿ, ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಲಾಗುತ್ತದೆ. ಈ ಬಾರಿ ಅಧಿಸೂಚನೆ ಹೊರಡಿಸುವುದರಲ್ಲಿ ವಿಳಂಬವಾಗಿದೆ. ಆದಾಯ ತೆರಿಗೆ ಇಲಾಖೆಯು ಫೆಬ್ರುವರಿಯಲ್ಲಿ ಸಂಸತ್‌ನಲ್ಲಿ ಹೊಸ ಆದಾಯ ತೆರಿಗೆ ಮಸೂದೆ ಮಂಡಿಸಿತ್ತು. ಇದರ ಸಿದ್ಧತೆಯಲ್ಲಿ ತೊಡಗಿದ್ದರಿಂದ ವಿಳಂಬವಾಗಿದೆ.

### ಏನೆಲ್ಲಾ ಬದಲಾವಣೆ?

2025–26ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದ ಐಟಿಆರ್–1 (ಸಹಜ್) ಮತ್ತು ಐಟಿಆರ್–4 (ಸುಗಮ್) ಅರ್ಜಿ ನಮೂನೆಗಳನ್ನು ಏಪ್ರಿಲ್ 29ರಂದು ಪ್ರಕಟಿಸಲಾಗಿದೆ. ವಾರ್ಷಿಕ ₹50 ಲಕ್ಷದವರೆಗೆ ಒಟ್ಟು ಆದಾಯ ಹೊಂದಿದ ತೆರಿಗೆದಾರರು, ಅವಿಭಕ್ತ ಕುಟುಂಬಗಳು ಮತ್ತು ಸಂಸ್ಥೆಗಳು ಈ ನಮೂನೆಗಳ ಅಡಿ ರಿಟರ್ನ್ಸ್ ಸಲ್ಲಿಸಬೇಕಿದೆ.

ಷೇರುಗಳು ಮತ್ತು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮಾರಾಟ ಮಾಡಿದ ಬಳಿಕ ಬರುವ ಲಾಭಕ್ಕೆ ವಿಧಿಸುವ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆಗೆ (ಎಲ್‌ಟಿಸಿಜಿ) ₹1.25 ಲಕ್ಷದವರೆಗೆ ವಿನಾಯಿತಿ ಇದೆ.

ಸಂಸ್ಥೆಗಳಿಗೆ ಎಲ್‌ಟಿಸಿಜಿಗೆ ಸಂಬಂಧಿಸಿದ ರಿಟರ್ನ್ಸ್ ಸಲ್ಲಿಸಲು ಈ ಮೊದಲು ಐಟಿಆರ್–2 ಅನ್ನು ನಿಗದಿಪಡಿಸಲಾಗಿತ್ತು. ಈಗ ಐಟಿಆರ್ 1 ಮತ್ತು ಐಟಿಆರ್ 4ರಲ್ಲಿಯೇ ಎಲ್‌ಟಿಸಿಜಿಯನ್ನು ನಮೂದಿಸಲು ಅವಕಾಶ ಕಲ್ಪಿಸಲಾಗಿದೆ.

ಅಲ್ಲದೆ ಸರ್ಕಾರವು 80ಸಿ, 80ಜಿಜಿ ಹಾಗೂ ಇತರೆ ಸೆಕ್ಷನ್‌ನಡಿ ತೆರಿಗೆ ವಿನಾಯಿತಿ ಪಡೆಯುವುದಕ್ಕೆ ಸಂಬಂಧಿಸಿದಂತೆ ಆಯ್ದ ನಮೂನೆಗಳನ್ನು ನಿಗದಿಪಡಿಸಿದೆ. ಹಾಗಾಗಿ, ತೆರಿಗೆ ವಿನಾಯಿತಿಯ ಲಾಭ ಪಡೆಯುವ ತೆರಿಗೆದಾರರು, ಸೆಕ್ಷನ್‌ವಾರು ವಿವರ ನಮೂದಿಸಬೇಕಿದೆ.

# ಕರ್ನಾಟಕದಲ್ಲಿ ₹56,415 ಕೋಟಿ ಎಫ್‌ಡಿಐ ಹೂಡಿಕೆ




**ನವದೆಹಲಿ (ಪಿಟಿಐ):** 2024-25ನೇ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ₹4.26 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ ಹೂಡಿಕೆಯಾಗಿದೆ (ಎಫ್‌ಡಿಐ). 2023–24ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 13ರಷ್ಟು ಹೆಚ್ಚಳವಾಗಿದೆ.

ಕರ್ನಾಟಕದಲ್ಲಿ ₹56,415 ಕೋಟಿ ಹೂಡಿಕೆಯಾಗಿದ್ದು, ದೇಶದಲ್ಲಿಯೇ ಮಹಾರಾಷ್ಟ್ರದ ಬಳಿಕ ಅತಿಹೆಚ್ಚು ಎಫ್‌ಡಿಐ ಸ್ವೀಕರಿಸಿದ ಎರಡನೇ ರಾಜ್ಯವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಮಹಾರಾಷ್ಟ್ರ ₹1.67 ಲಕ್ಷ ಕೋಟಿ, ದೆಹಲಿ ₹51,209 ಕೋಟಿ, ಗುಜರಾತ್ ₹48,648 ಕೋಟಿ, ತಮಿಳುನಾಡು ₹31,407 ಕೋಟಿ, ಹರಿಯಾಣ ₹26,799 ಕೋಟಿ ಮತ್ತು ತೆಲಂಗಾಣದಲ್ಲಿ ₹25,519 ಕೋಟಿ ಹೂಡಿಕೆಯಾಗಿದೆ.

ಸೇವೆ, ವ್ಯಾಪಾರ, ದೂರ ಸಂಪರ್ಕ, ಆಟೊಮೊಬೈಲ್, ರಾಸಾಯನಿಕ, ನಿರ್ಮಾಣ ವಲಯದಲ್ಲಿ ಬಂಡವಾಳ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದೆ ಎಂದು ತಿಳಿಸಿದೆ.

**ತ್ರೈಮಾಸಿಕದಲ್ಲಿ ಇಳಿಕೆ:** 2024-25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಹೂಡಿಕೆ ಪ್ರಮಾಣದಲ್ಲಿ ಶೇ 24.5ರಷ್ಟು ಇಳಿಕೆಯಾಗಿದೆ.





ಜಾಗತಿಕ ತಂತ್ರಜ್ಞಾನದ ಕೇಂದ್ರ ಸ್ಥಾನದ ಮಾನ್ಯತೆ

# ಬೆಂಗಳೂರಿಗೆ ನಾಲ್ಕನೇ ಸ್ಥಾನ

**ನವದೆಹಲಿ (ಪಿಟಿಐ):** ಬೆಂಗಳೂರಿನಲ್ಲಿರುವ ತಂತ್ರಜ್ಞಾನ ಕಂಪನಿಗಳಲ್ಲಿ ದುಡಿಯುತ್ತಿರುವ ಉದ್ಯೋಗಿಗಳ ಸಂಖ್ಯೆಯು 10 ಲಕ್ಷ ದಾಟಿದೆ. ಹಾಗಾಗಿ, ಜಾಗತಿಕ ಮಟ್ಟದ ಪ್ರಮುಖ 12 ತಂತ್ರಜ್ಞಾನ ಕೇಂದ್ರ ಸ್ಥಾನಗಳ (ಟೆಕ್ನಾಲಜಿ ಹಬ್) ಪಟ್ಟಿಯಲ್ಲಿ ಬೆಂಗಳೂರು ನಾಲ್ಕನೇ ಸ್ಥಾನ ಪಡೆದಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆಯಾದ ಸಿಬಿಆರ್‌ಇ ಮಂಗಳವಾರ ತಿಳಿಸಿದೆ.


ಜಾಗತಿಕಮಟ್ಟದಲ್ಲಿ 115 ಪ್ರಮುಖ ತಂತ್ರಜ್ಞಾನ ಕೇಂದ್ರಗಳನ್ನು ಅಧ್ಯಯನ ನಡೆಸಿದ 'ಗ್ಲೋಬಲ್ ಟೆಕ್ ಟ್ಯಾಲೆಂಟ್ ಗೈಡ್‌ಬುಕ್ 2025' ಅನ್ನು ಸಿದ್ಧಪಡಿಸಲಾಗಿದೆ.

ತಂತ್ರಜ್ಞಾನದ ಲಭ್ಯತೆ, ಗುಣಮಟ್ಟ ಮತ್ತು ಕೌಶಲ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಆಧಾರದ ಮೇಲೆ ಈ ವರದಿ ರಚಿಸಲಾಗಿದೆ. ಬೀಜಿಂಗ್, ಬಾಸ್ಟನ್, ಲಂಡನ್, ನ್ಯೂಯಾರ್ಕ್, ಪ್ಯಾರಿಸ್, ಸ್ಯಾನ್‌ಫ್ರಾನ್ಸಿಸ್ಕೊ ಬೇ ಏರಿಯಾ, ಸಿಯಾಟಲ್, ಶಾಂಘೈ, ಸಿಂಗಪುರ, ಟೊಕಿಯೊ ಮತ್ತು ಟೊರೊಂಟೊ ಜಾಗತಿಕ ಪಟ್ಟಿಯಲ್ಲಿರುವ ಇತರೆ ನಗರಗಳಾಗಿವೆ.

ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಬೆಂಗಳೂರು ಅತಿಹೆಚ್ಚು ತಂತ್ರಜ್ಞಾನ ಪ್ರತಿಭೆಗಳನ್ನು ಹೊಂದಿರುವ ಕೇಂದ್ರವಾಗಿ ಹೊರಹೊಮ್ಮಿದೆ. ಇದು ಬೆಂಗಳೂರನ್ನು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಮತ್ತು ನಾವೀನ್ಯದ ಮುಂಚೂಣಿ ಸ್ಥಾನಕ್ಕೇರಲು ನೆರವಾಗಿದೆ ಎಂದು ತಿಳಿಸಿದೆ. ದೆಹಲಿ, ಮುಂಬೈ, ಅಹಮದಾಬಾದ್, ಜೈಪುರ ಸಹ ಇದಕ್ಕೆ ಸಮಾನಾಂತರವಾಗಿ ಬೆಳೆಯುತ್ತಿದ್ದು, ದೇಶದ ತಂತ್ರಜ್ಞಾನ ವಲಯದ ಬೆಳವಣಿಗೆಗೆ ಕೊಡುಗೆ ನೀಡುತ್ತಿವೆ ಎಂದು ಹೇಳಿದ್ದಾರೆ.

# ಬಿಎಸ್‌ಎನ್‌ಎಲ್‌ಗೆ ₹280 ಕೋಟಿ ಲಾಭ

## 18 ವರ್ಷದ ಬಳಿಕ ಸತತ ಎರಡು ತ್ರೈಮಾಸಿಕದಲ್ಲಿ ಲಾಭ



**ನವದೆಹಲಿ (ಪಿಟಿಐ):** 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಭಾರತ ಸಂಚಾರ ನಿಗಮ ಲಿಮಿಟೆಡ್ (ಬಿಎಸ್‌ಎನ್‌ಎಲ್), ₹280 ಕೋಟಿ ನಿವ್ವಳ ಲಾಭ ಗಳಿಸಿದೆ. 2007ರ ಬಳಿಕ ಸತತ ಎರಡು ತ್ರೈಮಾಸಿಕಗಳಲ್ಲಿ ಲಾಭ ದಾಖಲಿಸಿದೆ.

2023–24ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹849 ಕೋಟಿ ನಷ್ಟ ದಾಖಲಿಸಿತ್ತು.

ಡಿಸೆಂಬರ್ ತ್ರೈಮಾಸಿಕದಲ್ಲಿ ₹262 ಕೋಟಿ ಲಾಭ ಗಳಿಸಿತ್ತು. ಮಾರ್ಚ್ ತ್ರೈಮಾಸಿಕದಲ್ಲಿ ಲಾಭ ದಾಖಲಿಸಿದರೂ ಪೂರ್ಣ ಆರ್ಥಿಕ ವರ್ಷದಲ್ಲಿ ನಷ್ಟ ದಾಖಲಿಸಿದೆ. 2023–24ರಲ್ಲಿ ₹5,370 ಕೋಟಿ ನಷ್ಟ ದಾಖಲಿಸಿದ್ದರೆ, 2024–25ನೇ ಪೂರ್ಣ ಆರ್ಥಿಕ ವರ್ಷದಲ್ಲಿ ₹2,247 ಕೋಟಿ ನಷ್ಟ ಅನುಭವಿಸಿದೆ.

2023–24ರಲ್ಲಿ ₹19,330 ಕೋಟಿ ವರಮಾನ ಗಳಿಸಿತ್ತು. 2024–25ರಲ್ಲಿ ₹20,841 ಕೋಟಿ ವರಮಾನ ಗಳಿಸಿದೆ. ಒಟ್ಟಾರೆ ಶೇ 7.8ರಷ್ಟು ಹೆಚ್ಚಳವಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, 'ಕಳೆದ 18 ವರ್ಷಗಳ ಅವಧಿಯಲ್ಲಿ ಸತತ ಎರಡು ತ್ರೈಮಾಸಿಕಗಳಲ್ಲಿ ನಿವ್ವಳ ಲಾಭ ದಾಖಲಿಸಿದೆ' ಎಂದು ಹೇಳಿದ್ದಾರೆ.

'ವೃತ್ತಿಪರ ನಿರ್ವಹಣೆಯ ಜೊತೆಗೆ ಸರ್ಕಾರ ಮತ್ತು ನೌಕರರ ಬೆಂಬಲದಿಂದ ಈ ಸುಧಾರಣೆ ಸಾಧ್ಯವಾಗಿದೆ. ಇದು ಬಿಎಸ್‌ಎಲ್‌ಎನ್ ಅನ್ನು ಪುನರುಜ್ಜೀವನಗೊಳಿಸುವುದಷ್ಟೇ ಅಲ್ಲದೆ ಅದನ್ನು ಮರು ವ್ಯಾಖ್ಯಾನಿಸುತ್ತದೆ' ಎಂದು ಬಿಎಸ್‌ಎಲ್‌ಎನ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಾಬರ್ಟ್ ಜೆ. ರವಿ ಹೇಳಿದ್ದಾರೆ.

ವೆಚ್ಚ ನಿಯಂತ್ರಣ ಹಾಗೂ 4ಜಿ, 5ಜಿ ಸೇವೆ ಒದಗಿಸುವ ಮೂಲಕ ಸುಸ್ಥಿರ ಬೆಳವಣಿಗೆ ದಾಖಲಿಸುವ ವಿಶ್ವಾಸವಿದೆ. ಪ್ರತಿಯೊಬ್ಬ ಭಾರತೀಯನಿಗೂ ಕೈಗೆಟಕುವ ದರದಲ್ಲಿ ಗುಣಮಟ್ಟದ ಸಂಪರ್ಕ ಒದಗಿಸುವುದು ನಮ್ಮ ಗುರಿಯಾಗಿದೆ ಎಂದು ಹೇಳಿದ್ದಾರೆ.

ನಾವು ಲಾಭದ ಹಿಂದೆ ಬೀಳುವುದಿಲ್ಲ. ಅದು ನಮ್ಮ ಅಂತಿಮ ಗುರಿಯೂ ಅಲ್ಲ. ಸಾರ್ವಜನಿಕರಿಗೆ ಗುಣಮಟ್ಟದ ದೂರಸಂಪರ್ಕ ಸೇವೆ ಒದಗಿಸುವುದಷ್ಟೇ ನಮ್ಮ ಆದ್ಯತೆ. ಉತ್ತಮ ಸೇವೆ ನೀಡಿದರೆ ಲಾಭ ತಾನಾಗಿಯೇ ಲಭಿಸುತ್ತದೆ ಎಂದು ತಿಳಿಸಿದ್ದಾರೆ.



## ಸಂಕ್ಷಿಪ್ತ ಸುದ್ದಿ

### ಉಂಡೆ ಕೊಬ್ಬರಿ ಕ್ವಿಂಟಲ್‌ಗೆ ₹21 ಸಾವಿರ



**ಅರಸೀಕೆರೆ (ಹಾಸನ ಜಿಲ್ಲೆ):** ಇಲ್ಲಿನ ಎಪಿಎಂಸಿಯಲ್ಲಿ ಮಂಗಳವಾರ ಕ್ವಿಂಟಲ್ ಉಂಡೆ ಕೊಬ್ಬರಿ ಧಾರಣೆಯು ₹21ಸಾವಿರ ಗಡಿ ದಾಟುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದೆ.

ಬೇಡಿಕೆಯಷ್ಟು ಕೊಬ್ಬರಿ ಆವಕ ಇಲ್ಲದಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣ. ಮುಂದಿನ ದಿನಗಳಲ್ಲಿ ಮತ್ತಷ್ಟು ಬೆಲೆ ಏರುವ ಸಾಧ್ಯತೆ ಇದೆ ಎಂದು ವರ್ತಕರು ತಿಳಿಸಿದ್ದಾರೆ.

ಎಣ್ಣೆ ತಯಾರಿಕೆಗೆ ಕೊಬ್ಬರಿ ಹೆಚ್ಚು ಬಳಕೆಯಾಗುತ್ತಿದೆ. ಆದರೆ, ರೈತರು ಎಳನೀರು ಹಾಗೂ ತೆಂಗಿನಕಾಯಿಗಳನ್ನು ಹೆಚ್ಚಾಗಿ ಮಾರಾಟ ಮಾಡುತ್ತಿರುವುದರಿಂದ ಉಂಡೆ ಕೊಬ್ಬರಿ ಆವಕ ಕಡಿಮೆಯಾಗಿದೆ. ತಾಲ್ಲೂಕಿನ ತೆಂಗಿನ ಮರಗಳಲ್ಲಿ ರೋಗ ಬಾಧೆಯಿಂದ ಇಳುವರಿ ಕುಸಿತವಾಗಿದ್ದು, ಮರಗಳಲ್ಲಿ ಫಸಲು ಕಡಿಮೆಯಾಗಿದೆ. ಹಾಗಾಗಿ, ಕೊಬ್ಬರಿ ಬೆಲೆ ಹೆಚ್ಚಿದರೂ, ಬಹುಪಾಲು ಬೆಳೆಗಾರರಿಗೆ ಪ್ರಯೋಜನ ಸಿಗದಂತಾಗಿದೆ.

### ಜೈಪುರ: ಸೆಪ್ಟಿಕ್ ಟ್ಯಾಂಕ್‌ಗೆ ಇಳಿದ ನಾಲ್ವರು ಪೌರಕಾರ್ಮಿಕರ ಸಾವು; ಇಬ್ಬರ ಸ್ಥಿತಿ ಗಂಭೀರ

**ಜೈಪುರ (ಪಿಟಿಐ):** ಇಲ್ಲಿನ ಸೀತಾಪುರ ಕೈಗಾರಿಕಾ ಪ್ರದೇಶದಲ್ಲಿ ಚಿನ್ನ ಮತ್ತು ಬೆಳ್ಳಿಯ ಕಣಗಳನ್ನು ಹೆಕ್ಕಲು ಬಲವಂತವಾಗಿ ಸೆಪ್ಟಿಕ್ ಟ್ಯಾಂಕ್‌ಗೆ ಇಳಿಸಿದ್ದ ಕಾರ್ಮಿಕರಲ್ಲಿ ನಾಲ್ವರು ವಿಷಾನಿಲ ಸೇವಿಸಿ ಮೃತಪಟ್ಟಿದ್ದಾರೆ. ಮತ್ತಿಬ್ಬರು ಕಾರ್ಮಿಕರು ತೀವ್ರ ಅಸ್ವಸ್ಥಗೊಂಡಿದ್ದಾರೆ.

ಆಭರಣ ವಲಯದ 'ಜಿ' ಬ್ಲಾಕ್‌ನಲ್ಲಿರುವ ಆಭರಣ ತಯಾರಿಕೆ ಕಾರ್ಖಾನೆಯಲ್ಲಿ ಸೋಮವಾರ ರಾತ್ರಿ ಈ ಘಟನೆ ನಡೆದಿದೆ. ಮೃತರನ್ನು ಸಂಜೀವ್ ಪಾಲ್, ಹಿಮಾಂಶು ಸಿಂಗ್, ರೋಹಿತ್ ಪಾಲ್ ಮತ್ತು ಅರ್ಪಿತ್ ಯಾದವ್ ಎಂದು ಗುರುತಿಸಲಾಗಿದೆ. ಅಜಯ್ ಚೌಹಾಣ್ ಮತ್ತು ರಾಜ್‌ಪಾಲ್ ಅವರನ್ನು ಮಹಾತ್ಮ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಮಿತ್ ಪಾಲ್ ಮತ್ತು ಸೂರಜ್ ಪಾಲ್ ಅವರು ಪ್ರಾಥಮಿಕ ಚಿಕಿತ್ಸೆ ಪಡೆದು, ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಹತ್ತು ಅಡಿಯ ಟ್ಯಾಂಕ್‌ನಲ್ಲಿ ತೀವ್ರ ಶಾಖ ಮತ್ತು ವಿಷಕಾರಿ ಅನಿಲಗಳು ಇದ್ದ ಕಾರಣಕ್ಕೆ ಕಾರ್ಮಿಕರು ಟ್ಯಾಂಕ್‌ಗೆ ಇಳಿಯಲು ನಿರಾಕರಿಸಿದ್ದರು. ಆದರೆ, ಕಂಪನಿಯ ಆಡಳಿತವು ಹೆಚ್ಚುವರಿ ಹಣ ನೀಡುವ ಭರವಸೆಯೊಂದಿಗೆ ಅವರನ್ನು ಟ್ಯಾಂಕ್‌ಗೆ ಇಳಿಸಿದ್ದರು. ಟ್ಯಾಂಕ್‌ಗೆ ಇಳಿದಿದ್ದ ಕಾರ್ಮಿಕರು ಉಸಿರಾಟ ಸಮಸ್ಯೆ ಕಾಣಿಸಿ ಪ್ರಜ್ಞೆ ಕಳೆದುಕೊಂಡಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಸೆನ್ಸೆಕ್ಸ್, ನಿಫ್ಟಿ ಇಳಿಕೆ

**ಮುಂಬೈ (ಪಿಟಿಐ):** ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಶೇ 1ರಷ್ಟು ಇಳಿಕೆಯಾಗಿವೆ.

ಲಾಭ ಗಳಿಕೆಯ ಉದ್ದೇಶದಿಂದ ಹೂಡಿಕೆದಾರರು ಬ್ಯಾಂಕಿಂಗ್, ಐ.ಟಿ ಮತ್ತು ಆಟೊ ಷೇರುಗಳ ಮಾರಾಟಕ್ಕೆ ಮುಂದಾದರು. ಇದು ಸೂಚ್ಯಂಕಗಳ ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 624 ಅಂಶ ಇಳಿಕೆಯಾಗಿ, 81,551ಕ್ಕೆ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ವೇಳೆ 1,054 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 174 ಅಂಶ ಕಡಿಮೆಯಾಗಿ, 24,826 ಆಗಿದೆ.

### ಎಲ್‌ಐಸಿಗೆ ₹19,013 ಕೋಟಿ ಲಾಭ

**ನವದೆಹಲಿ (ಪಿಟಿಐ):** 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನಿವ್ವಳ ಲಾಭದಲ್ಲಿ ಶೇ 38ರಷ್ಟು ಏರಿಕೆ ಆಗಿದೆ.

2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹13,763 ಕೋಟಿ ಲಾಭ ಗಳಿಸಿತ್ತು. ಈ ಬಾರಿಯ ಮಾರ್ಚ್ ತ್ರೈಮಾಸಿಕದಲ್ಲಿ ₹19,013 ಕೋಟಿ ಗಳಿಸಿದೆ. ₹2.41 ಲಕ್ಷ ಕೋಟಿ ವರಮಾನಗಳಿಸಿದೆ ಎಂದು ನಿಗಮವು, ಷೇರುಪೇಟೆಗೆ ಮಂಗಳವಾರ ತಿಳಿಸಿದೆ.

2024–25ನೇ ಪೂರ್ಣ ಆರ್ಥಿಕ ವರ್ಷದಲ್ಲಿ ₹48,151 ಕೋಟಿ ಲಾಭ ಗಳಿಸಿದೆ. ವರಮಾನವು ₹8.84 ಲಕ್ಷ ಕೋಟಿ ಆಗಿದೆ. ಪ್ರತಿ ಈಕ್ವಿಟಿ ಷೇರಿಗೆ ₹12 ಲಾಭಾಂಶ ನೀಡಲು ಮಂಡಳಿಯು ಶಿಫಾರಸು ಮಾಡಿದೆ.

### 'ತರಗತಿಗೆ ಗೈರಾದರೆ, ವಿದ್ಯಾರ್ಥಿ ವೀಸಾ ರದ್ದು'

**ನವದೆಹಲಿ (ಪಿಟಿಐ):** 'ತರಗತಿಗಳಿಗೆ ಗೈರುಹಾಜರಾದರೆ, ಕೋರ್ಸ್ ಅನ್ನು ಅರ್ಧದಲ್ಲಿಯೇ ನಿಲ್ಲಿಸಿದರೆ ಅಥವಾ ಕೋರ್ಸ್‌ನಿಂದ ಹೊರಗುಳಿದರೆ ವಿದ್ಯಾರ್ಥಿ ವೀಸಾ ಹಿಂಪಡೆಯಲಾಗುತ್ತದೆ' ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಕಚೇರಿಯು ಮಂಗಳವಾರ ವಿದೇಶಿ ವಿದ್ಯಾರ್ಥಿಗಳಿಗೆ ಎಚ್ಚರಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ರಾಯಭಾರ ಕಚೇರಿಯು ಯಾವುದೇ ಸಮಸ್ಯೆ ಆಗದಂತೆ ಕೋರ್ಸ್ ಪೂರ್ಣಗೊಳಿಸಬೇಕು ಎಂದು ಸಲಹೆ ಮಾಡಿದೆ.

ಪಿಂಚಣಿ ನಿಯಮಗಳಿಗೆ ಕೇಂದ್ರ ತಿದ್ದುಪಡಿ

# ವಜಾಗೊಂಡ ಉದ್ಯೋಗಿಗೆ ನಿವೃತ್ತಿ ನಂತರದ ಸೌಲಭ್ಯ ಇಲ್ಲ

**ನವದೆಹಲಿ (ಪಿಟಿಐ):** ಪಿಂಚಣಿ ನಿಯಮಗಳಿಗೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರವು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ (ಪಿಎಸ್‌ಯು) ವಜಾಗೊಂಡ ಅಥವಾ ತೆಗೆದುಹಾಕಲಾದ ಉದ್ಯೋಗಿಗಳಿಗೆ ಇನ್ನು ಮುಂದೆ ನಿವೃತ್ತಿ ನಂತರದ ಸೌಲಭ್ಯಗಳು ಸಿಗುವುದಿಲ್ಲ. ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ತಿಳಿಸಿದೆ.

ಸಿಬ್ಬಂದಿ ಸುಧಾರಣಾ ಇಲಾಖೆಯು ಕೇಂದ್ರ ನಾಗರಿಕ ಸೇವಾ (ಪಿಂಚಣಿ) ಅಧಿನಿಯಮ–2021ರಲ್ಲಿ ಹಲವು ಬದಲಾವಣೆಗಳನ್ನು ಚಾಲ್ತಿಗೆ ತಂದಿದೆ.

ದುರ್ನಡತೆ ಆಧಾರದಲ್ಲಿ ಸರ್ಕಾರಿ ಉದ್ಯೋಗಿಯ ವಜಾ ಅಥವಾ ಹೊರಹಾಕುವ ನಿರ್ಧಾರ ಪರಿಶೀಲಿಸುವ ಅಧಿಕಾರವು ಆಡಳಿತ ಸುಧಾರಣಾ ಇಲಾಖೆಗೆ ಇದೆ ಎಂದೂ ಸರ್ಕಾರ ತಿಳಿಸಿದೆ.

ಇತ್ತೀಚೆಗೆ ಅಧಿಸೂಚನೆಗೊಂಡ ಕೇಂದ್ರ ನಾಗರಿಕ ಸೇವಾ (ಪಿಂಚಣಿ) ತಿದ್ದುಪಡಿ ನಿಯಮ–2025ರ ಪ್ರಕಾರ, 'ದುರ್ನಡತೆ ಆಧಾರದ ಮೇಲೆ ಸಾರ್ವಜನಿಕ ವಲಯದ ಉದ್ಯೋಗಿ ವಿರುದ್ಧ ವಜಾ ಕ್ರಮ ಕೈಗೊಂಡಲ್ಲಿ ಆತನ ನಿವೃತ್ತಿ ನಂತರದ ಸೌಲಭ್ಯಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ಸರ್ಕಾರದ ಅಡಿಯಲ್ಲಿ ಸಲ್ಲಿಸಿದ ಸೇವೆಗೂ ಇದು ಅನ್ವಯ ಆಗಲಿದೆ' ಎಂದು ಹೇಳಿದೆ.

ಈ ಹಿಂದಿನ ನಿಯಮಗಳಲ್ಲಿ ಸಾರ್ವಜನಿಕ ವಲಯದ ಉದ್ಯೋಗಿಯ ನಿವೃತ್ತಿ ನಂತರದ ಸೌಲಭ್ಯಗಳ ಮುಟ್ಟುಗೋಲು ಅವಕಾಶ ಇರಲಿಲ್ಲ.

ಅಲ್ಲದೇ ಉದ್ಯೋಗಿಯ ಪಿಂಚಣಿ ಮತ್ತು ಕುಟುಂಬ ಪಿಂಚಣಿಯ ಮುಂದುವರಿಕೆ ಅಥವಾ ಮಂಜೂರಾತಿ ಅವಕಾಶಗಳು ಭವಿಷ್ಯದ ಆತನ ಉತ್ತಮ ನಡವಳಿಕೆಯನ್ನು ಅವಲಂಬಿಸಿರುತ್ತದೆ ಮತ್ತು ಸಹಾನುಭೂತಿ ಭತ್ಯೆಗೂ ಇದು ಅನ್ವಯ ಆಗಲಿದೆ ಎಂದು ಹೊಸ ನಿಯಮ ಹೇಳುತ್ತದೆ.

2003ರ ಡಿಸೆಂಬರ್ 31ರಂದು ಮತ್ತು ಅದಕ್ಕೂ ಮುನ್ನ ನೇಮಕವಾದ ಸರ್ಕಾರಿ ಉದ್ಯೋಗಿಗಳಿಗೆ ಕೇಂದ್ರ ಸಾರ್ವಜನಿಕ ಸೇವಾ(ಪಿಂಚಣಿ) ನಿಯಮ–2021 ಅನ್ವಯಿಸುತ್ತದೆ. ರೈಲ್ವೆ ಉದ್ಯೋಗಿಗಳು, ತಾತ್ಕಾಲಿಕ ಮತ್ತು ದಿನ ಗುತ್ತಿಗೆ ಆಧಾರದ ಉದ್ಯೋಗಿಗಳು, ಐಎಎಸ್, ಐಪಿಎಸ್ ಮತ್ತು ಭಾರತೀಯ ಅರಣ್ಯ ಸೇವೆ ಸೇರಿ ಇತರರಿಗೆ ಇದು ಅನ್ವಯಿಸುವುದಿಲ್ಲ.

### ಹಾರ್ವರ್ಡ್ ವಿ.ವಿ ಒಪ್ಪಂದ ರದ್ದತಿಗೆ ಟ್ರಂಪ್ ನಿರ್ಧಾರ

**ವಾಷಿಂಗ್ಟನ್/ ನ್ಯೂಯಾರ್ಕ್ (ರಾಯಿಟರ್ಸ್):** ಹಾರ್ವರ್ಡ್ ವಿಶ್ವವಿದ್ಯಾಲಯದೊಂದಿಗಿನ ಬಾಕಿ ಇರುವ ಒಪ್ಪಂದಗಳನ್ನು ಕೂಡ ರದ್ದುಪಡಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಮುಂದಾಗಿದೆ.

ಎಲ್ಲ ಫೆಡರಲ್ ಏಜೆನ್ಸಿಗಳಿಗೆ ಅಮೆರಿಕ ಜನರಲ್ ಸರ್ವೀಸಸ್ ಅಡ್ಮಿನಿಸ್ಟ್ರೇಷನ್ ಮಂಗಳವಾರ ಬರೆದಿರುವ ಪತ್ರದಲ್ಲಿ ಈ ಕುರಿತು ಉಲ್ಲೇಖಿಸಲಾಗಿದೆ.

'ಹಾರ್ವರ್ಡ್ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ವೇಳೆ, ಜನಾಂಗೀಯ ತಾರತಮ್ಯ ಮಾಡುತ್ತಿದೆ. ಯೆಹೂದಿ ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯ ತಡೆಯುವಲ್ಲಿ ಕೂಡ ವಿ.ವಿ ವಿಫಲವಾಗಿದೆ' ಎಂದು ಪತ್ರದಲ್ಲಿ ಆರೋಪಿಸಲಾಗಿದೆ.

'ಈ ಎಲ್ಲ ಕಾರಣಗಳಿಂದಾಗಿ, ವಿಶ್ವವಿದ್ಯಾಲಯದೊಂದಿಗಿನ ಒಪ್ಪಂದಗಳನ್ನು ಬಾಕಿ ಒಪ್ಪಂದಗಳನ್ನು ರದ್ದುಗೊಳಿಸಬೇಕು' ಎಂದು ಏಜೆನ್ಸಿಗಳಿಗೆ ನಿರ್ದೇಶನ ನೀಡಲಾಗಿದೆ.

ಟ್ರಂಪ್ ಆಡಳಿತ ಕೈಗೊಂಡಿರುವ ಈ ಕ್ರಮದ ಕುರಿತು ವಿಶ್ವವಿದ್ಯಾಲಯವು ತಕ್ಷಣದ ಪ್ರತಿಕ್ರಿಯೆ ನೀಡಿಲ್ಲ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

## ಪ್ರಶ್ನೋತ್ತರ



**ಪ್ರಮೋದ ಶ್ರೀಕಾಂತ ದೈತೋಟ**
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ಅರುಣ್,** ಕೆಂಗೇರಿ.

• **ಪ್ರಶ್ನೆ:** ನಾನು ಮತ್ತು ನನ್ನ ಪತ್ನಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದೇವೆ. ಸುಮಾರು ₹90 ಲಕ್ಷ ಮೌಲ್ಯದ ಫ್ಲ್ಯಾಟ್ ಖರೀದಿಸುವ ಉದ್ದೇಶ ಹೊಂದಿದ್ದೇವೆ. ಈ ಖರೀದಿಗೆ ನಮ್ಮ ಉಳಿತಾಯದ ಭಾಗವೊಂದರ ಜೊತೆಗೆ ಬ್ಯಾಂಕ್ ಸಾಲ ತೆಗೆದುಕೊಳ್ಳುವ ಯೋಜನೆ ಹೊಂದಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ನೋಂದಣಿ ಶುಲ್ಕ, ಸ್ಟ್ಯಾಂಪ್ ಡ್ಯೂಟಿ ಮತ್ತು ಇತರೆ ಖರ್ಚು ಪ್ರತ್ಯೇಕವಾಗಿರಲಿದ್ದು, ಅವುಗಳನ್ನು ಹೊರತಾಗಿ ಪಾವತಿಸಬೇಕಾಗುತ್ತದೆ.

ನಾವು ಇತ್ತೀಚಿನ ವರ್ಷಗಳಲ್ಲಿ ಹೊಸ ತೆರಿಗೆ ಪದ್ಧತಿಯಡಿ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿದ್ದೇವೆ. ಆದರೆ, ನಾವು ಮನೆ ನಿರ್ಮಾಣ ಮತ್ತು ಅದಕ್ಕೆ ಸಂಬಂಧಿಸಿದ ಗೃಹ ಸಾಲದ ಮೇಲಿನ ಬಡ್ಡಿ ಪಾವತಿ ಪರಿಗಣಿಸಿದಾಗ ಹಳೆಯ ತೆರಿಗೆ ಪದ್ಧತಿಗೆ ಮರಳುವುದು ಅನಿವಾರ್ಯವಾಗಿದೆ ಎಂದು ನಾವು ಊಹಿಸುತ್ತಿದ್ದೇವೆ. ಹಳೆಯ ಪದ್ಧತಿಗೆ ಮರಳದಿದ್ದರೆ ಈ ಬಡ್ಡಿ ಮತ್ತು ಇತರೆ ಪಾವತಿಗಳ ಮೇಲೆ ಲಭಿಸಬಹುದಾದ ತೆರಿಗೆ ವಿನಾಯಿತಿ ಕಳೆದುಕೊಳ್ಳುವ ಸಾಧ್ಯತೆ ಇದೆ ಎಂಬುದು ಇದಕ್ಕೆ ಮೂಲ ಕಾರಣವಾಗಿದೆ.

ನಮ್ಮ ಪ್ರಶ್ನೆ ಇಂತಿದೆ; ನಾನು ಒಬ್ಬನೇ ಸಾಲ ಪಡೆಯಬೇಕೆ ಅಥವಾ ನನ್ನ ಪತ್ನಿ ಹೆಸರನ್ನೂ ಸಾಲದ ಪಾಲುದಾರಳನ್ನಾಗಿ ಸೇರಿಸಬೇಕೆ? ಈ ಸಾಲದ ಪಾವತಿಯನ್ನು ನಾವಿಬ್ಬರೂ ಮಾಡಬೇಕೆ? ಈ ಸಾಲದ ಬಡ್ಡಿಗೆ ಆದಾಯ ತೆರಿಗೆ ಕಾಯ್ದೆ ಸೆಕ್ಷನ್ 80ಸಿ ಅಡಿ ನಮಗೆ ಎಷ್ಟು ಮೊತ್ತದ ತೆರಿಗೆ ವಿನಾಯಿತಿ ಲಭ್ಯವಾಗಬಹುದು?

ಮನೆಗೆ ಸಂಬಂಧಿಸಿದ ದಾಖಲೆಗಳನ್ನು ಕೇವಲ ನನ್ನ ಹೆಸರಿನಲ್ಲಿ ಇಟ್ಟುಕೊಂಡು ಸಾಲ ಪಾವತಿ ಉದ್ದೇಶಕ್ಕಾಗಿ ನನ್ನ ಪತ್ನಿಯ ಹೆಸರನ್ನೂ ಸೇರಿಸಿ ನಾವು ಇಬ್ಬರೂ ತೆರಿಗೆ ವಿನಾಯಿತಿ ಪಡೆದುಕೊಳ್ಳಬಹುದೇ ಎಂಬ ಬಗ್ಗೆ ತಿಳಿಸಿ.

**ಉತ್ತರ:** ನೀವು ಮತ್ತು ನಿಮ್ಮ ಪತ್ನಿ ಇಬ್ಬರೂ ಉದ್ಯೋಗದಲ್ಲಿ ಇರುವುದರಿಂದ ಗೃಹ ಸಾಲವನ್ನು ಜಂಟಿಯಾಗಿ ತೆಗೆದುಕೊಳ್ಳುವುದು ಬಹುಪಾಲು ಸಂದರ್ಭಗಳಲ್ಲಿ ತೆರಿಗೆ ಉಳಿತಾಯದ ದೃಷ್ಟಿಯಿಂದ ಲಾಭದಾಯಕವಾಗಬಹುದು. ಆದರೆ, ನಿಮ್ಮ ಈ ತೆರಿಗೆ ಪದ್ಧತಿ ಆಯ್ಕೆಯ ಹಿಂದೆ ಸರಿಯಾಗಿ ಹೋಲಿಕೆ ಮಾಡಿ ನಿರ್ಧಾರ ಕೈಗೊಳ್ಳಿ.

ನೀವು ಖರೀದಿಸಲು ಉದ್ದೇಶಿಸಿರುವ ಫ್ಲ್ಯಾಟ್‌ಗಾಗಿ ಜಂಟಿ ಸಾಲದ ಮೂಲಕ ನೀವು ಇಬ್ಬರೂ ಬಡ್ಡಿ ಹಾಗೂ ಅಸಲು ಪಾವತಿ ಮೇಲೆ ಪ್ರತ್ಯೇಕವಾಗಿ ತೆರಿಗೆ ವಿನಾಯಿತಿ ಪಡೆಯಬಹುದು. ಹಳೆಯ ತೆರಿಗೆ ಪದ್ಧತಿಗೆ ಮರಳಿದಲ್ಲಿ ಪ್ರತಿ ಸಾಲಗಾರನೂ ವಾರ್ಷಿಕವಾಗಿ ಗೃಹಸಾಲದ ಬಡ್ಡಿಗೆ ₹2 ಲಕ್ಷ (ಸೆಕ್ಷನ್ 24ಬಿ ಅಡಿ) ಮತ್ತು ಅಸಲು ಪಾವತಿಗೆ ₹1.5 ಲಕ್ಷದವರೆಗೆ (ಸೆಕ್ಷನ್ 80ಸಿ ಅಡಿ) ವಿನಾಯಿತಿ ಪಡೆಯಬಹುದು. ಅಂದರೆ ಒಟ್ಟು ₹3.5 ಲಕ್ಷ ಪ್ರತಿಯೊಬ್ಬರಿಗೆ ವಿನಾಯಿತಿ ಸಿಗುತ್ತದೆ.

ಸಾಲದಲ್ಲಿ ನಿಮ್ಮಿಬ್ಬರ ಪಾಲು ಸಮಾನವಾಗಿದೆ ಎಂದು ಊಹಿಸೋಣ. ಖರೀದಿಸುವ ಮನೆ ಒಂದೇ ಆದರೂ ನಿಮ್ಮಿಬ್ಬರ ಒಡೆತನ ಅದರ ದಾಖಲೆಗಳಲ್ಲಿ ಇರುವುದು ಮುಖ್ಯ. ಆದಾಯ ತೆರಿಗೆ ಸೆಕ್ಷನ್ 26ರ ಪ್ರಕಾರ ಮನೆ ಜಂಟಿ ಹೆಸರಿನಲ್ಲಿ ಹೊಂದಿರಬೇಕು ಹಾಗೂ ಸಾಲ ಪಾವತಿಗಳು ಇಬ್ಬರಿಂದಲೂ ಆಗಿರಬೇಕು.

ಜೊತೆಗೆ, ನೀವು ಇಬ್ಬರೂ ಸಾಲದ ಸಹ ಪಾಲುದಾರರಾಗಿರಬೇಕು. ಮನೆ ನೋಂದಣಿ ದಾಖಲೆಯಲ್ಲಿ ನಿಮ್ಮ ಪತ್ನಿ ಹೆಸರನ್ನು ಸೇರಿಸಿದರೆ ಮಾತ್ರ ಅವರಿಗೂ ತೆರಿಗೆ ವಿನಾಯಿತಿ ಲಭಿಸುತ್ತದೆ. ಹೀಗಾಗಿ, ನೀವು ಮನೆ ನಿಮ್ಮ ಹೆಸರಲ್ಲಿ ದಾಖಲಿಸಿಕೊಳ್ಳುವ ಮೊದಲು ಈ ಬಗ್ಗೆ ಸರಿಯಾದ ನಿರ್ಧಾರ ಕೈಗೊಳ್ಳಿ. ನಂತರ ಸಾಲಪತ್ರಗಳಲ್ಲೂ ನೀವಿಬ್ಬರೂ ಜಂಟಿ ಸಾಲಗಾರರಾಗಿ ಅರ್ಜಿ ಸಲ್ಲಿಸಿ.

**ನಾಗೇಶ್ ಎನ್.ಆರ್.,** ಕೆ.ಆರ್. ಪುರಂ, ಬೆಂಗಳೂರು.

• **ಪ್ರಶ್ನೆ:** ನಾನು ಇತ್ತೀಚೆಗೆ ನನ್ನ ಬ್ಯಾಂಕ್ ಖಾತೆ ಇರುವ ಶಾಖೆಗೆ ಎಫ್‌ಡಿ ಬಗ್ಗೆ ಮಾಹಿತಿ ಪಡೆಯಲು ತೆರಳಿದ್ದೆ. ಅದು ಖಾಸಗಿ ಬ್ಯಾಂಕ್ ಆಗಿದ್ದರಿಂದ ಸಹಜವಾಗಿ ಅಲ್ಲಿನ ಉದ್ಯೋಗಿಗಳು ನನ್ನನ್ನು ಎಫ್‌ಡಿ ಜೊತೆಗೆ ಇನ್ಶೂರೆನ್ಸ್ ಸಹಿತ ಇರುವ ಎಫ್‌ಡಿ ತೆರೆಯಲು ಅವಕಾಶ ಇರುವ ಬಗ್ಗೆ ತಿಳಿಸಿದರು. ಅದರ ಕೆಲವು ಅಂಶಗಳು ಈ ರೀತಿ ಇವೆ.

ಟರ್ಮ್ ಇನ್ಶೂರೆನ್ಸ್ ಹೊಣೆಗಾರಿಕೆಯು ಒಂದು ವರ್ಷದ ಮಾನ್ಯತೆ ಹೊಂದಿದೆ. ನಂತರ ಅನ್ವಯವಾಗುವ ಪ್ರೀಮಿಯಂ ಮೊತ್ತ ಪಾವತಿಸುವುದರ ಮೂಲಕ ಅದನ್ನು ನವೀಕರಿಸಬೇಕು. ಅಂದರೆ ಎರಡನೇ ವರ್ಷದ ಪ್ರಾರಂಭದಿಂದ ನಿಯಮಿತವಾಗಿ ಪ್ರೀಮಿಯಂ ಪಾವತಿಸಬೇಕಾಗುತ್ತದೆ. ಜೀವ ವಿಮಾ ಹೊಣೆಗಾರಿಕೆ ಮುಂದುವರಿಯಲು ಠೇವಣಿ ಕನಿಷ್ಠ 12 ತಿಂಗಳವರೆಗೆ ನಿರಂತರವಾಗಿ ಇಡಬೇಕು. ಮಧ್ಯಂತರವಾಗಿ ಠೇವಣಿ ಹಿಂತೆಗೆದುಕೊಳ್ಳುವ ಸಂದರ್ಭದಲ್ಲಿ ಜೀವ ವಿಮಾ ಲಾಭವು ಸ್ಥಗಿತಗೊಳ್ಳುತ್ತದೆ. ವಿಮೆಯ ಮೊತ್ತವು ಠೇವಣಿಯ ಮೊತ್ತಕ್ಕೆ ಸಮನಾಗಿರುತ್ತದೆ.

ಇಲ್ಲಿ ನನಗಿರುವ ಸಂದೇಹವೆಂದರೆ ನಾನು ಇಂತಹ ಉಚಿತ ಯೋಜನೆಗಳನ್ನು ಪಡೆದುಕೊಳ್ಳಬೇಕೇ? ನಿಜಕ್ಕೂ ಯಾವುದಾದರೂ ಸಮಸ್ಯೆ ಬಂದಾಗ ಇಂತಹ ವಿಮೆಯ ಪ್ರಯೋಜನ ಸಿಗಬಹುದೇ?

**ಉತ್ತರ:** ಇತ್ತೀಚೆಗೆ ಹಲವು ಬ್ಯಾಂಕ್‌ಗಳು ಎಫ್‌ಡಿ ಸಹಿತ ಇನ್ಶೂರೆನ್ಸ್ ಎಂಬ ಸಂಯೋಜಿತ ಉತ್ಪನ್ನಗಳನ್ನು ಗ್ರಾಹಕರಿಗೆ ನೀಡುತ್ತಿವೆ. ಠೇವಣಿದಾರರಿಗೆ ಉಚಿತ ಜೀವ ವಿಮೆ ಮೂಲಕ ಹೆಚ್ಚಿನ ಠೇವಣಿಗಳನ್ನು ಆಕರ್ಷಿಸುವುದು ಇದರ ಉದ್ದೇಶ. ಆದರೆ, ಗ್ರಾಹಕರಾಗಿ ನಾವು ಇದನ್ನು ಸಮಗ್ರವಾಗಿ ಪರಿಶೀಲಿಸುವ ಜವಾಬ್ದಾರಿ, ಮಾಹಿತಿ ಹೊಂದಿರಬೇಕು.

ಮೊದಲನೆಯದಾಗಿ ಈ ರೀತಿ ನೀಡಲಾಗುವ ವಿಮಾ ಪ್ಲಾನ್ ಸಾಮಾನ್ಯವಾಗಿ ಟರ್ಮ್ ಇನ್ಶೂರೆನ್ಸ್ ಆಗಿದ್ದು, ಅದು ಒಂದು ವರ್ಷದ ಮಾನ್ಯತೆ ಹೊಂದಿರುತ್ತದೆ. ನಂತರದ ವರ್ಷಗಳಲ್ಲಿ ವಿಮೆ ಮುಂದುವರಿಸಲು ಪ್ರೀಮಿಯಂ ಪಾವತಿ ಗ್ರಾಹಕನ ಕಡೆಯಿಂದ ಅಗತ್ಯವಾಗಿರುತ್ತದೆ. ಕೆಲವೊಮ್ಮೆ ಮೊದಲ ವರ್ಷದ ನಂತರ ವಿಮೆ ನವೀಕರಿಸುವ ನಿಯಮಗಳು ಸ್ಪಷ್ಟವಾಗಿಲ್ಲದೆಯೂ ಇರಬಹುದು. ಇಂತಹ ಸಂದರ್ಭದಲ್ಲಿ ಹೆಚ್ಚಿನ ಮಾಹಿತಿಗಾಗಿ ಸ್ಪಷ್ಟತೆ ಕೋರಿ.

ಅಲ್ಲದೆ, ಮಧ್ಯಂತರದಲ್ಲಿ ಎಫ್‌ಡಿ ಹಿಂಪಡೆದರೆ ಜೀವ ವಿಮಾ ಲಾಭ ರದ್ದಾಗುತ್ತದೆ. ಹೆಚ್ಚಿನ ಗ್ರಾಹಕರು ಈ ನಿಯಮವನ್ನು ಓದದೇ ಇಂತಹ ಠೇವಣಿಗಳನ್ನು ತೆಗೆದುಕೊಳ್ಳುತ್ತಾರೆ. 'ಠೇವಣಿ ಮೊತ್ತಕ್ಕೆ ಸಮಾನ ಜೀವ ವಿಮೆ' ಎಂಬ ವಿಚಾರ ಹೊರನೋಟಕ್ಕೆ ಆಕರ್ಷಕವಾಗಿದ್ದರೂ ಅದರ ಹಿಂದೆ ಇರುವ ಷರತ್ತುಗಳನ್ನು ಇಂತಹ ಸೌಲಭ್ಯ ಪಡೆಯುವ ಮೊದಲೇ ಓದಿ ತಿಳಿಯುವುದು ಅಗತ್ಯವಾಗಿದೆ.

ಈ ಉತ್ಪನ್ನಗಳು ಮಾರ್ಕೆಟಿಂಗ್ ತಂತ್ರದ ಭಾಗವಾಗಿವೆ. ಇದರಿಂದ ಗ್ರಾಹಕರಾಗಿ ನಾವು ವ್ಯಾಜ್ಯ ಸಮಯದಲ್ಲಿ ನಿಜವಾಗಿಯೂ ಲಾಭ ಸಿಗುತ್ತದೆಯೇ ಎಂಬುದನ್ನು ತಿಳಿಯಲು ಅವರ ಎಲ್ಲಾ ಸೂಕ್ಷ್ಮ ಷರತ್ತುಗಳು ಮತ್ತು ಇನ್ಶೂರೆನ್ಸ್ ಮಿತಿಯೊಳಗೆ ಬರದ ವಿಚಾರಗಳ ಬಗ್ಗೆ ಮೊದಲೇ ವಿಚಾರಿಸಬೇಕು. ಯಾವತ್ತೂ ಉಚಿತವಾಗಿ ಸಿಗುವ ಯಾವುದೇ ಯೋಜನೆಗೂ ಅದರದ್ದೇ ಆದ ಸೀಮಿತ ವ್ಯಾಪ್ತಿ ಇರುತ್ತದೆ. ಅದು ನಮ್ಮ ಪ್ರಯೋಜನಕ್ಕಿಂತ ಅಂತಹ ಉತ್ಪನ್ನ ಗ್ರಾಹಕರಿಗೆ ಒದಗಿಸುವ ಸಂಸ್ಥೆಗಳ ಅಗತ್ಯಕ್ಕಾಗಿ ಅಥವಾ ಲಾಭಕ್ಕಾಗಿ ಸಂಯೋಜಿಸಲಾಗಿರುತ್ತದೆ ಎಂಬುದು ನೆನಪಿರಲಿ.

ಇಂತಹ ಸಂಯೋಜಿತ ಯೋಜನೆಗಳು ಮೂಲ ವಿಮಾ ಯೋಜನೆಗಳಿಗೆ ಪರ್ಯಾಯವಲ್ಲ. ನೀವು ನಿಮ್ಮ ನಿಜವಾದ ಅಗತ್ಯ ತಿಳಿದು ಪ್ರತ್ಯೇಕ ವಿಮಾ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಯಾವತ್ತಿಗೂ ಒಳ್ಳೆಯದು.

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಪ್ರಜಾ ಪ್ಲಸ್+
| ಮನರಂಜನೆ
| ಜಾಹೀರಾತು ಪ್ರೋತ್ಸಾಹ
| ಉದ್ಯಮ ಅಭಿವೃದ್ಧಿ



### ದೀಪಾವಳಿಗೆ ‘ಥಾಮಾ’ ಚಿತ್ರ ತೆರೆಗೆ

ಆಯುಷ್ಮಾನ್ ಖುರಾನಾ ಮತ್ತು ರಶ್ಮಿಕಾ ಮಂದಣ್ಣ ಜೋಡಿಯಾಗಿ ನಟಿಸಿರುವ ‘ಥಾಮಾ’ ಚಿತ್ರ ಈ ವರ್ಷ ದೀಪಾವಳಿಗೆ ತೆರೆಗೆ ಬರಲಿದೆ. ಆದಿತ್ಯ ಸರಪೋತದಾರ್ ನಿರ್ದೇಶನವಿದೆ. ದಿನೇಶ್ ವಿಜ್ಞಾನ್ ಚಿತ್ರವನ್ನು ನಿರ್ಮಿಸಿದ್ದಾರೆ.



# ಸೋನಲ್‌ಗೆ ಸಿಕ್ಕ ಹೊಸ ಗೈಡ್

‘ರಾಬರ್ಟ್’ ಸಿನಿಮಾ ಬಳಿಕ ವಿನೋದ್ ಪ್ರಭಾಕರ್ ಹಾಗೂ ಸೋನಲ್ ಮೊಂತೆರೋ ಜೋಡಿಯಾಗಿ ನಟಿಸುತ್ತಿರುವ ‘ಮಾದೇವ’ ಸಿನಿಮಾ ಜೂನ್ 6ಕ್ಕೆ ತೆರೆಕಾಣಲಿದೆ. ಇದೇ ತಿಂಗಳಾಂತ್ಯಕ್ಕೆ ಚಿತ್ರದ ಟ್ರೇಲರ್ ಬಿಡುಗಡೆಯಾಗಲಿದ್ದು, ಚಿತ್ರದಲ್ಲಿನ ತಮ್ಮ ಪಾತ್ರ ಹಾಗೂ ಮುಂದಿನ ಸಿನಿಪಯಣದ ಬಗ್ಗೆ ನಟಿ ಸೋನಲ್ ಮಾತನಾಡಿದ್ದಾರೆ.



ಸೋನಲ್, ತರುಣ್ ಸುಧೀರ್



**ಸೋನಲ್ ಸಿನಿಬ್ಯಾಂಕ್‌ನಲ್ಲಿ ಒಟ್ಟು ಆರು ಸಿನಿಮಾಗಳು**

[ ಮಾದೇವ
ಸೋನಲ್ ]

**ಅಭಿಲಾಷ್ ಪಿ.ಎಸ್.**

**‘ಮದುವೆಯಾದ** ಬಳಿಕ ನಾನು ನಾಯಕಿಯಾಗಿ ನಟಿಸಿದ ಸಿನಿಮಾವೊಂದು ಬಿಡುಗಡೆಯಾಗುತ್ತಿದೆ’ ಎಂದು ಮಾತು ಆರಂಭಿಸಿದ ಸೋನಲ್, ‘ರಾಬರ್ಟ್’ ಸಿನಿಮಾದಲ್ಲಿ ನಾನು ಹಾಗೂ ವಿನೋದ್ ಪ್ರಭಾಕರ್ ಅವರು ‘ತನು–ರಾಘವ’ ಪಾತ್ರದಲ್ಲಿ ಕಾಣಿಸಿಕೊಂಡಿದ್ದೆವು. ಈ ಜೋಡಿ ಪ್ರೇಕ್ಷಕರಿಗೆ ಇಷ್ಟವಾಗಿತ್ತು. ‘ರಾಬರ್ಟ್’ ಬಳಿಕ ನಮ್ಮಿಬ್ಬರ ಜೋಡಿಯ ಸಿನಿಮಾ ಯಾವಾಗ ಎಂದು ಹಲವರು ಕೇಳುತ್ತಿದ್ದರು. ಒಳ್ಳೆಯ ಕಥೆ ಬಂದರೆ ಮತ್ತೊಮ್ಮೆ ಜೋಡಿಯಾಗಿ ನಟಿಸೋಣ ಎಂದು ಇಬ್ಬರೂ ಸಮಯ ತೆಗೆದುಕೊಂಡೆವು’ ಎಂದರು.

‘ಮಾದೇವ’ ಸಿನಿಮಾದ ಕಥೆಯನ್ನು ವಿನೋದ್ ಅವರೇ ನನ್ನ ಬಳಿ ಕಳುಹಿಸಿದರು. ಕಥೆ ಹಾಗೂ ಚಿತ್ರದೊಳಗಿನ ನಾಯಕಿಯ ಪಾತ್ರ ಬಹಳ ಇಷ್ಟವಾಯಿತು. ಇಲ್ಲಿಯವರೆಗೂ ಗ್ಲಾಮರಸ್ ಪಾತ್ರಗಳನ್ನು ಮಾಡಿದ್ದೇನೆ. ಇದು ಡಿ–ಗ್ಲಾಮರ್ ಪಾತ್ರ. ಹೀಗಾಗಿ ತಕ್ಷಣದಲ್ಲೇ ಒಪ್ಪಿಕೊಂಡೆ. ಇದೊಂದು ಹಳ್ಳಿ ಹುಡುಗಿಯ ಪಾತ್ರ. ಮೃಗದ ವ್ಯಕ್ತಿತ್ವ ಹೊಂದಿರುವ ನಾಯಕನನ್ನು ಮನುಷ್ಯನನ್ನಾಗಿ ಪರಿವರ್ತಿಸುವ ನಾಯಕಿಯಾಗಿ ಇಲ್ಲಿ ಕಾಣಿಸಿಕೊಂಡಿದ್ದೇನೆ. ಇಲ್ಲಿ ನಾಯಕಿಗೆ ಹೆಚ್ಚಿನ ಸಂಭಾಷಣೆ ಹಾಗೂ ತೆರೆ ಅವಧಿಯಿದೆ. ಇದೀಗ ‘ತನು–ರಾಘವ’ ಜೋಡಿ ‘ಪಾರ್ವತಿ–ಮಾದೇವ’ನಾಗಿ ತೆರೆ ಮೇಲೆ ಬರಲಿದೆ’ ಎನ್ನುತ್ತಾರೆ ಅವರು.

## ಚಿತ್ರೀಕರಣ ಹಂತದಲ್ಲಿ ನಾಲ್ಕು ಸಿನಿಮಾ

‘ನಾನು ಯಾವುದೇ ಯೋಜನೆಗಳನ್ನು ಹಾಕಿ ಹೆಜ್ಜೆ ಇಟ್ಟವಳಲ್ಲ. ಬಂದಂತಹ ಅವಕಾಶಗಳಲ್ಲಿ ನನಗಿಷ್ಟವಾಗಿರುವುದನ್ನು ಆಯ್ದುಕೊಳ್ಳುತ್ತಿದ್ದೆ. ಹೀಗಾಗಿ ಸಿನಿ ಬ್ಯಾಂಕ್ ಹಿಗ್ಗುತ್ತಲೇ ಇತ್ತು. ತುಳು ಚಿತ್ರರಂಗದ ಮೂಲಕ ಸಿನಿ ಪಯಣ ಆರಂಭಿಸಿದ ದಿನದಿಂದಲೂ ಒಂದು ದಿನವೂ ಸುಮ್ಮನೆ ಕುಳಿತಿಲ್ಲ. ಮದುವೆಯಾದ ಬಳಿಕವೂ ಸಿನಿಮಾ ಕಥೆ ಕೇಳುತ್ತಿದ್ದೇನೆ. ಯಾವುದನ್ನೂ ಒಪ್ಪಿಕೊಂಡಿಲ್ಲ. ಸದ್ಯಕ್ಕೆ ಒಪ್ಪಿಕೊಂಡ ನಾಲ್ಕು ಸಿನಿಮಾಗಳ ಚಿತ್ರೀಕರಣವೇ ಬಾಕಿ ಇದೆ. ಕೋಮಲ್ ಅವರ ‘ರೋಲೆಕ್ಸ್’, ಅಜಯ್ ರಾವ್ ಅವರ ಜೊತೆಗಿನ ‘ರಾಧೇಯ’, ವಸಿಷ್ಠ ಸಿಂಹ ಅವರ ಜೊತೆಗಿನ ‘ತಲ್ವಾರ್ ಪೇಟೆ’, ‘ಸರೋಜಿನಿ’ ಚಿತ್ರೀಕರಣ ಹಂತದಲ್ಲಿದೆ. ಇದನ್ನು ಮೊದಲು ಪೂರ್ಣಗೊಳಿಸಬೇಕಾಗಿದೆ. ಆನಂತರವಷ್ಟೇ ಮುಂದಿನ ಸಿನಿಮಾಗಳ ಕುರಿತು ನಿರ್ಧಾರ. ಚಿತ್ರೀಕರಣ ಪೂರ್ಣಗೊಂಡಿರುವ ‘ಬುದ್ಧಿವಂತ–2’ ತೆರೆಕಾಣಬೇಕಿದೆ’ ಎಂದರು ಸೋನಲ್.

**ತರುಣ್ ನನ್ನ ಹೊಸ ಗೈಡ್**

## ಜೊತೆ ಜೊತೆಗೆ ಹೆಜ್ಜೆ

‘ಇದೀಗ ನನ್ನ ಜೀವನಕ್ಕೊಬ್ಬರು ಅತ್ಯುತ್ತಮ ಮಾರ್ಗದರ್ಶಕರು ದೊರಕಿದ್ದಾರೆ. ಮದುವೆಯ ಮುಂಚೆ ಅಮ್ಮನೇ ನನ್ನ ಮಾರ್ಗದರ್ಶಿಯಾಗಿದ್ದರು. ಇದೀಗ ಸಿನಿಮಾ ಕುಟುಂಬಕ್ಕೇ ಸೇರಿದ್ದೇನೆ. ತರುಣ್ ಸುಧೀರ್ ಅವರ ಸಲಹೆ, ಮಾರ್ಗದರ್ಶನಗಳನ್ನು ಪಡೆದುಕೊಂಡು ಹೆಜ್ಜೆ ಇಡುತ್ತಿದ್ದೇನೆ. ಕಥೆ ವಿಚಾರದಲ್ಲಿ ಅವರು ಯಾವುದಕ್ಕೂ ಒತ್ತಡ ಹಾಕುವುದಿಲ್ಲ. ತರುಣ್ ಬಹಳ ಪಕ್ವವಾದ ಯೋಚನೆಯುಳ್ಳವರು. ನನ್ನ ನಿರ್ಧಾರಗಳು ತಪ್ಪಾಗಿದ್ದಲ್ಲಿ ಸಲಹೆ ನೀಡುತ್ತಾರೆ. ಈ ಸಿನಿಪಯಣದಲ್ಲಿ ಜೊತೆಜೊತೆಯಾಗಿ ಹೆಜ್ಜೆ ಹಾಕುವ ಇಚ್ಛೆ ನಮ್ಮದು’ ಎಂದು ಸೋನಲ್ ಮಾತಿಗೆ ವಿರಾಮವಿತ್ತರು.

## ನೈಜ ಘಟನೆ ಸ್ಫೂರ್ತಿ

ನೈಜ ಘಟನೆಗಳಿಂದ ಸ್ಫೂರ್ತಿ ಪಡೆದ ‘ಮಾದೇವ’ ಸಿನಿಮಾದ ಕಥೆಯು 1980 ಮತ್ತು 1999ರ ಕಾಲಘಟ್ಟದಲ್ಲಿ ನಡೆಯಲಿದೆ. ಚಿತ್ರದ ನಾಯಕ ಜೈಲುಗಳಲ್ಲಿ ನೇಣು ಹಾಕುವ ಕೆಲಸ ಮಾಡುತ್ತಿರುತ್ತಾನೆ. ಕನಕಪುರ, ಚನ್ನಪಟ್ಟಣ, ಶಿವಮೊಗ್ಗ, ರಾಮೋಜಿ ಫಿಲಂ ಸಿಟಿ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ. ನವೀನ್ ರೆಡ್ಡಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದಲ್ಲಿ ಖಳನಾಯಕನಾಗಿ ಶ್ರೀನಗರ ಕಿಟ್ಟಿ ನಟಿಸಿದ್ದು, ಶ್ರುತಿ ಮತ್ತು ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ಪ್ರಮುಖ ಪಾತ್ರಗಳಲ್ಲಿದ್ದಾರೆ.

# ಸೆ.25ರಂದು ಪವನ್ ಕಲ್ಯಾಣ್ ‘ಓಜಿ’ ತೆರೆಗೆ



ಪವನ್ ಕಲ್ಯಾಣ್

ಪವನ್ ಕಲ್ಯಾಣ್ ಸದ್ಯ ಆಂಧ್ರಪ್ರದೇಶದ ಡಿಸಿಎಂ ಆಗಿ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗಂತ ಸಿನಿಮಾದೊಂದಿಗಿನ ಅವರ ನಂಟು ಮುಗಿದಿಲ್ಲ. ನಟನಾಗಿ ಅವರಿಗಿರುವ ಅಭಿಮಾನಿಗಳ ಕ್ರೇಜ್ ಕಡಿಮೆಯಾಗಿಲ್ಲ. ಅವರ ನಟನೆಯ ‘ಓಜಿ’ ಚಿತ್ರ ಸೆಪ್ಟೆಂಬರ್ 25ರಂದು ತೆರೆ ಕಾಣಲಿದೆ.

ಗ್ಯಾಂಗ್‌ಸ್ಟರ್ ಕಥೆ ಹೊಂದಿರುವ ಈ ಸಿನಿಮಾಗೆ ಸುಜಿತ್ ನಿರ್ದೇಶನವಿದೆ. ಇವರು ಈ ಹಿಂದೆ ‘ಸಾಹೋ’ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದರು. ಡಿವಿವಿ ನಿರ್ಮಾಣ ಸಂಸ್ಥೆ ಚಿತ್ರವನ್ನು ನಿರ್ಮಿಸಿದೆ. ‘ಆರ್‌ಆರ್‌ಆರ್’ ಸೇರಿದಂತೆ ಹಲವು ಬಿಗ್ ಬಜೆಟ್ ಸಿನಿಮಾಗಳನ್ನು ನಿರ್ಮಿಸಿದ ಸಂಸ್ಥೆಯಿದು. ಈ ನಿರ್ಮಾಣ ಸಂಸ್ಥೆ ತನ್ನ ಎಕ್ಸ್‌ನಲ್ಲಿ ಚಿತ್ರದ ಬಿಡುಗಡೆ ದಿನಾಂಕ ಘೋಷಿಸುವ ಪೋಸ್ಟರ್ ಬಿಡುಗಡೆ ಮಾಡಿದೆ. ‘ದಿನಾಂಕ ನಿಗದಿಯಾಗಿದೆ ಮತ್ತು ಕಿರಾತಕ ಪಡೆ ಕ್ರೇಜಿಯಾಗಿ ವರ್ತಿಸಲು ಅಣಿಯಾಗಿದೆ’ ಎಂಬ ಅಡಿಬರಹವಿದೆ.

ಬಾಲಿವುಡ್ ನಟ ಇಮ್ರಾನ್ ಹಶ್ಮಿ ಅವರು ಪವನ್ ಕಲ್ಯಾಣ್ ಎದುರು ಖಳನಾಯಕನಾಗಿ ನಟಿಸಿದ್ದಾರೆ. ನಾಯಕಿಯಾಗಿ ಕನ್ನಡತಿ ಪ್ರಿಯಾಂಕಾ ಮೋಹನ್ ನಟಿಸಿದ್ದಾರೆ. 2022ರ ಡಿಸೆಂಬರ್‌ನಲ್ಲಿ ಈ ಚಿತ್ರ ಘೋಷಣೆಯಾಗಿ 2023ರಲ್ಲಿ ಸೆಟ್ಟೇರಿತ್ತು. ತಮನ್ ಎಸ್. ಸಂಗೀತ ನಿರ್ದೇಶನ, ರವಿ ಕೆ.ಚಂದ್ರನ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ. ಓಜಸ್ ಗಂಭೀರ್ ಎಂಬ ಕರುಣೆ ಇಲ್ಲದ ಡಾನ್ ಕುರಿತಾದ ಕಥೆಯನ್ನು ಈ ಚಿತ್ರ ಹೊಂದಿದೆ.

ಮುಂಬೈನಲ್ಲಿ ಕಥೆ ನಡೆಯಲಿದೆ. ಅರ್ಜುನ್ ದಾಸ್, ಪ್ರಕಾಶ್ ರಾಜ್, ಸೌರವ್ ಲೋಕೇಶ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ.

ಪವನ್ ಕಲ್ಯಾಣ್ ಅಭಿನಯದ ಮತ್ತೊಂದು ಚಿತ್ರ ‘ಹರಿ ಹರ ವೀರಮಲ್ಲು’ ಈ ವರ್ಷ ಜೂನ್‌ನಲ್ಲಿ ತೆರೆಗೆ ಬರುತ್ತಿದೆ. ‘ಉಸ್ತಾದ್ ಭಗತ್ ಸಿಂಗ್’ ಚಿತ್ರ ಕೂಡ ಘೋಷಣೆಯಾಗಿದೆ. ರಾಜಕೀಯ ಬದುಕಿನ ಜತೆಗೆ ಪವನ್ ಕಲ್ಯಾಣ್ ಸಿನಿಮಾ ವೃತ್ತಿಯಲ್ಲಿಯೂ ಮಗ್ನರಾಗಿದ್ದಾರೆ.

# ಸೀಸ್ ಕಡ್ಡಿ ಟ್ರೇಲರ್ ಬಿಡುಗಡೆ



**ಪೆನ್ಸಿಲ್** ಕುರಿತಾದ ಕಥೆಯನ್ನು ಹೊಂದಿರುವ ‘ಸೀಸ್ ಕಡ್ಡಿ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರತನ್ ಗಂಗಾಧರ್ ನಿರ್ದೇಶನದ ಚಿತ್ರವಿದು. ಹೊಸ ನಿರ್ದೇಶಕರುಗಳಾದ ಸಾಗರ್ ಪುರಾಣಿಕ್, ಆಯುಷ್ ಮಲ್ಲಿ, ಚೆಲುವರಾಜ್, ಅನುಭವಿ ನಿರ್ದೇಶಕ ಶ್ರೀನಿ ಮುಂತಾದವರು ಈ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದ್ದು ವಿಶೇಷವಾಗಿತ್ತು.

‘ಪುಸ್ತಕವೊಂದನ್ನು ಓದಿದಾಗ ಅದರಲ್ಲಿ ಪೆನ್ಸಿಲ್‌ನ ನಾನಾ ಸೂಕ್ಷ್ಮಗಳ ವಿವರಗಳಿತ್ತು. ಅದನ್ನು ಐದು ಪಾತ್ರಗಳನ್ನಾಗಿಸಿ, ಅದಕ್ಕೆ ಹೊಂದಿಕೊಂಡಂತೆ ಐದು ಕಥೆಗಳನ್ನು ಸೃಷ್ಟಿಸಿ, ಆ ಕಥೆಗಳೆಲ್ಲ ಒಂದು ಬಿಂದುವಿನಲ್ಲಿ ಸಂಧಿಸುವಂತೆ ಕಥೆ ಹೆಣೆಯಲಾಗಿದೆ. ಈ ಚಿತ್ರದಲ್ಲಿ ಬೆಂಗಳೂರು ಕನ್ನಡ, ಹವಿಗನ್ನಡ, ತುಮಕೂರು ಭಾಗದ ಹಳ್ಳಿಗಾಡಿನ ಕನ್ನಡ ಹಾಗೂ ಮೈಸೂರು ಸೀಮೆಯ ಕನ್ನಡ ಬಳಸಲಾಗಿದೆ. ಒಟ್ಟಾರೆ ಚಿತ್ರ ಪ್ರೇಕ್ಷಕರಿಗೆ ಹೊಸ ಅನುಭೂತಿ ನೀಡಲಿದೆ ಎಂಬ ನಂಬಿಕೆಯಿದೆ’ ಎಂದರು ನಿರ್ದೇಶಕರು.

ಗ್ರಹಣ ಪ್ರೊಡಕ್ಷನ್ ಮೂಲಕ ರತನ್ ಗಂಗಾಧರ್, ಸಂಪತ್ ಶಿವಶಂಕರ್, ಕೃತಿ ನಾಣಯ್ಯ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

‘ಮಕ್ಕಳ ಮುಗ್ಧತೆಯನ್ನು ನೈಜವಾಗಿ ಸೆರೆಹಿಡಿಯಲಾಗಿದೆ. ಟ್ರೇಲರ್ ನೋಡಿದರೆ ಸಿನಿಮಾ ಭರವಸೆ ಮೂಡಿಸುತ್ತಿದೆ. ಈ ಸಿನಿಮಾ ಗೆಲ್ಲಬೇಕು. ಚಿತ್ರಮಂದಿರಗಳಲ್ಲಿಯೇ ಇಂಥ ಸಿನಿಮಾಗಳು ಗೆಲ್ಲಬೇಕು. ಆಗ ಹೊಸತಂಡಗಳಿಗೆ ಇನ್ನಷ್ಟು ಚಿತ್ರ ಮಾಡಲು ಸ್ಫೂರ್ತಿ ಬರುತ್ತದೆ’ ಎಂದರು ‘ಘೋಸ್ಟ್’ ಖ್ಯಾತಿಯ ನಿರ್ದೇಶಕ ಶ್ರೀನಿ.

ಈ ಚಿತ್ರಕ್ಕೆ ಸುನಿಲ್ ನರಸಿಂಹಮೂರ್ತಿ ಛಾಯಾಚಿತ್ರಗ್ರಹಣ, ಕೆ.ಸಿ ಬಾಲಸಾರಂಗನ್ ಸಂಗೀತ ನಿರ್ದೇಶನ, ಅನಿರುದ್ಧ್ ಹರ್ಷವರ್ಧನ್ ಸಂಕಲನವಿದೆ. ಸಿತಿನ್ ಅಪ್ಪಯ್ಯ ಮುಂತಾದವರ ತಾರಾಗಣವಿರುವ ಈ ಚಿತ್ರ ಜೂನ್ 6ರಂದು ತೆರೆ ಕಾಣಲಿದೆ.

---

ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: ಸೆರ್ವಿನ್‌ಗೆ ರೇಸ್‌ವಾಕ್ ಕಂಚು

# 10,000 ಮೀ ಓಟ: ಗುಲ್ವೀರ್‌ಗೆ ಚಿನ್ನ

**ಗುಮಿ (ದಕ್ಷಿಣ ಕೊರಿಯಾ), (ಪಿಟಿಐ):** ರಾಷ್ಟ್ರೀಯ ದಾಖಲೆ ಹೊಂದಿರುವ ಗುಲ್ವೀರ್ ಸಿಂಗ್ ಅವರು ಪುರುಷರ 10,000 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದು ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೊದಲ ದಿನವೇ ಚಿನ್ನ ಗೆದ್ದುಕೊಟ್ಟರು. ಮಂಗಳವಾರ ಪುರುಷರ 20 ಕಿ.ಮೀ. ರೇಸ್ ವಾಕ್ ಸ್ಪರ್ಧೆಯಲ್ಲಿ ಸೆರ್ವಿನ್ ಸೆಬಾಸ್ಟಿಯನ್ ಕಂಚಿನ ಪದಕ ಗೆದ್ದುಕೊಂಡರು.

2023ರ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ 26 ವರ್ಷ ವಯಸ್ಸಿನ ಗುಲ್ವೀರ್ ಇಲ್ಲಿ ಸ್ಪರ್ಧೆ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದು 28 ನಿಮಿಷ 38.63 ಸೆಕೆಂಡುಗಳಲ್ಲಿ ನಿಗದಿತ ದೂರವನ್ನು ಕ್ರಮಿಸಿದರು. ಇದು ಏಷ್ಯನ್ ಚಾಂಪಿಯನ್‌ಷಿಪ್ಸ್‌ನಲ್ಲಿ ಅವರಿಗೆ ಮೊದಲ ಚಿನ್ನ.

ಜಪಾನ್‌ನ ಮೆಬುಕಿ ಸುಝುಕಿ (ಕಾಲ: 28:43.84) ಬೆಳ್ಳಿ ಪದಕ ಗೆದ್ದುಕೊಂಡರೆ, ಬಹರೇನ್‌ನ ಆಲ್ಬರ್ಟ್ ಕಿಬಿಚಿ ರೊಪ್ (ಕಾಲ: 28:467.82) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಉತ್ತರ ಪ್ರದೇಶದ ಅಲಿಗಢ ಜಿಲ್ಲೆಯ ಸಿರ್ಸಾ ಗ್ರಾಮದ ರೈತನ ಪುತ್ರನಾದ ಗುಲ್ವೀರ್, ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸುತ್ತ ಬಂದಿದ್ದಾರೆ. ಈ ವರ್ಷದ ಆರಂಭದಲ್ಲಿ 27ನಿ.00.22 ಸೆ.ಗಳೊಡನೆ ಕೊನೆಯ ಬಾರಿ ದಾಖಲೆ ಸುಧಾರಿಸಿದ್ದರು.

ಈ ಋತುವಿನಲ್ಲಿ ಏಷ್ಯದ ಉತ್ತಮ ಅವಧಿ ದಾಖಲಿಸಿರುವ ಗುಲ್ವೀರ್ ಇಲ್ಲಿ ಲೆಕ್ಕಾಚಾರದೊಡನೆ ಓಡಿದಂತೆ ಕಂಡಿತು. ರೇಸ್‌ನ ಬಹುಭಾಗ ಅವರು ಮುನ್ನಡೆಯಲ್ಲಿದ್ದರು. ಕೊನೆಯ ಹಂತದಲ್ಲಿ ಮೊದಲ ಮೂವರ ನಡುವೆ ತುರುಸಿನ ಪೈಪೋಟಿ ಕಂಡುಬಂತು. ಕೊನೆಯ ಲ್ಯಾಪ್‌ಗೆ ಸ್ವಲ್ಪ ಮೊದಲು ಕಿಬಿಚಿ ಚೂರು ಮುನ್ನಡೆ ಸಾಧಿಸಿದ್ದರು. ಆದರೆ ಅಂತಿಮ ಲ್ಯಾಪ್ ಅರ್ಧದಷ್ಟು ಮುಗಿದಾಗ ಗುಲ್ವೀರ್ ಮತ್ತೆ ಅಗ್ರಸ್ಥಾನಕ್ಕೇರಿದರು. ಕೊನೆಯ 100 ಮೀ. ಓಟವನ್ನಂತೂ ಸ್ಪ್ರಿಂಟರ್ ರೀತಿ ಓಡಿದರು.

ಗುಲ್ವೀರ್, ಈ ಓಟ ಗೆದ್ದ ಭಾರತದ ಮೂರನೇ ಓಟಗಾರ. ಈ ಕೂಟದಲ್ಲಿ ಈ ಹಿಂದೆ ಹರಿ ಚಾಂದ್ (1975) ಮತ್ತು ಜಿ.ಲಕ್ಷ್ಮಣನ್ ಚಿನ್ನ ಗೆದ್ದಿದ್ದರು.

5,000 ಮೀ. ಓಟದಲ್ಲೂ ರಾಷ್ಟ್ರೀಯ ದಾಖಲೆ ಹೊಂದಿರುವ ಅವರು ಇಲ್ಲಿ ಈ ಸ್ಪರ್ಧೆಯಲ್ಲೂ ಕಣಕ್ಕಿಳಿಯಲಿದ್ದಾರೆ. ಕಳೆದ ಸಲ ಅವರು ಕಂಚಿನ ಪದಕ ಗೆದ್ದಿದ್ದು, ಅದಕ್ಕಿಂತ ಮೇಲಿನ ಸ್ಥಾನ ಪಡೆಯುವ ಯತ್ನದಲ್ಲಿದ್ದಾರೆ.

ಇದಕ್ಕೆ ಮೊದಲು, ಕೂಟದ ಮೊದಲ ಸ್ಪರ್ಧೆಯಾದ ಪುರುಷರ 20 ಕಿ.ಮೀ. ರೇಸ್ ವಾಕ್‌ನಲ್ಲಿ ಸೆರ್ವಿನ್ ಸೆಬಾಸ್ಟಿಯನ್ ಕಂಚಿನ ಪದಕ ಗೆದ್ದು, ಭಾರತದ ಪದಕ ಖಾತೆ ತೆರೆದಿದ್ದರು. ಅವರು ಈ ದೂರವನ್ನು 1ಗಂಟೆ 21ನಿಮಿಷ 13.60 ಸೆಕೆಂಡುಗಳಲ್ಲಿ ಪೂರೈಸಿದರು. ಆದರೆ ತಮ್ಮ ವೈಯಕ್ತಿಕ ಶ್ರೇಷ್ಠ ಸಾಧನೆ (1:21:23) ಮೀರುವ ಅವಕಾಶ ಸ್ವಲ್ಪದರಲ್ಲೇ ಕಳೆದುಕೊಂಡರು. ಉತ್ತರಾಖಂಡದಲ್ಲಿ ಅವರು ಈ ವರ್ಷದ ಫೆಬ್ರುವರಿಯಲ್ಲಿ ಅವರು ತಮ್ಮ ಶ್ರೇಷ್ಠ ಸಾಧನೆ ದಾಖಲಿಸಿದ್ದರು.

ಚೀನಾದ ವಾಂಗ್ ಝಾವೊಝುವೊ ಅಗ್ರಸ್ಥಾನ (1:20:36.90 ಸೆ.) ಪಡೆದರೆ, ಜಪಾನ್‌ನ ಕೆಂಟೊ ಯೊಶಿಕಾವಾ (1:20:44.90) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಭಾರತದ ಇನ್ನೊಬ್ಬ ಸ್ಪರ್ಧಿ ಅಮಿತ್ 1ಗಂಟೆ 22ನಿಮಿಷ 14.30 ಸೆ. ತೆಗೆದುಕೊಂಡು ಐದನೇ ಸ್ಥಾನಕ್ಕೆ ತೃಪ್ತರಾಗಬೇಕಾಯಿತು.



ಗುಲ್ವೀರ್ ಸಿಂಗ್



ಸೆರ್ವಿನ್ ಸೆಬಾಸ್ಟಿಯನ್

### ಅನ್ನುರಾಣಿಗೆ ನಿರಾಸೆ

ಮಹಿಳೆಯರ ವಿಭಾಗದ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ, ಏಷ್ಯನ್ ಕ್ರೀಡೆಗಳ ಚಿನ್ನ ವಿಜೇತೆ ಅನ್ನುರಾಣಿ ನಿರಾಸೆ ಮೂಡಿಸಿದರು. ಅವರು 58.30 ಮೀ.ಗಳ ಸಾಧಾರಣ ಎಸೆತದೊಡನೆ ನಾಲ್ಕನೇ ಸ್ಥಾನಕ್ಕೆ ಸರಿದರು.

ಪುರುಷರ ಹೈಜಂಪ್‌ನಲ್ಲಿ ಸರ್ವೇಶ್ ಅನಿಲ್ ಕುಶಾರೆ ಅವರು ಕ್ವಾಲಿಫಿಕೇಷನ್ ಬಿ ಗುಂಪಿನಲ್ಲಿ 2.10 ಮೀ. ಜಿಗಿತದೊಡನೆ ಅಂತಿಮ ಸುತ್ತಿಗೆ ಅರ್ಹತೆ ಪಡೆದರು. ಭಾರತದ 58 ಮಂದಿಯ ತಂಡ ಈ ಕೂಟದಲ್ಲಿ ಭಾಗವಹಿಸುತ್ತಿದೆ. ಬ್ಯಾಂಕಾಕ್‌ನಲ್ಲಿ ನಡೆದ ಈ ಹಿಂದಿನ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ 27 ಪದಕಗಳನ್ನು ಗೆದ್ದುಕೊಂಡಿತ್ತು.

# ಎರಡನೇ ಸುತ್ತಿಗೆ ಸಿನ್ನರ್, ಜೊಕೊವಿಚ್

ಜೆಸಿಕಾ ಪೆಗುಲಾ, ಮಿರಾ ಆ್ಯಂಡ್ರೀವಾ ಮುನ್ನಡೆ • ಮೆಡ್ವೆಡೇವ್‌ಗೆ ಆಘಾತ

**ಪ್ಯಾರಿಸ್ (ಎಪಿ):** ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಫ್ರಾನ್ಸ್‌ನ ಆರ್ಥರ್ ರಿಂಡರ್‌ಕ್ನೆಚ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿ ಶುಭಾರಂಭ ಮಾಡಿದರು. ಈ ಮೂಲಕ ಇಟಲಿಯ ಆಟಗಾರ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಗೆಲುವಿನ ಓಟವನ್ನು 15 ಪಂದ್ಯಗಳಿಗೆ ವಿಸ್ತರಿಸಿಕೊಂಡರು.

ಜನವರಿಯಲ್ಲಿ ಆಸ್ಟ್ರೇಲಿಯಾ ಓಪನ್ ಕಿರೀಟ ಗೆದ್ದ ಬಳಿಕ ಉದ್ದೀಪನ ಮದ್ದು ಸೇವನೆಗಾಗಿ 23 ವರ್ಷದ ಸಿನ್ನರ್ ಮೂರು ತಿಂಗಳ ನಿಷೇಧಕ್ಕೆ ಒಳಗಾಗಿದ್ದರು. ಶಿಕ್ಷೆಯನ್ನು ಪೂರ್ಣಗೊಳಿಸಿದ ಬಳಿಕ ಸಿನ್ನರ್‌ಗೆ ಎರಡನೇ ಟೂರ್ನಿ ಇದಾಗಿದೆ. ಕಳೆದ ವರ್ಷ ಅಮೆರಿಕ ಓಪನ್ ಟೂರ್ನಿಗೆ ಮುನ್ನ ಡೋಪಿಂಗ್ ಪ್ರಕರಣ ಬೆಳಕಿಗೆ ಬಂದಿತ್ತು. ಅದಾಗ್ಯೂ ಅಮೆರಿಕ ಓಪನ್ ಪ್ರಶಸ್ತಿಯನ್ನು ಅವರು ಮುಡಿಗೇರಿಸಿಕೊಂಡಿದ್ದರು.

ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಿಗೆ ಒಡೆಯನಾಗಿರುವ ಸಿನ್ನರ್ ಕಳೆದ ವರ್ಷ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಸೆಮಿಫೈನಲ್ ತಲುಪಿದ್ದು ಈವರೆಗಿನ ಉತ್ತಮ ಸಾಧನೆಯಾಗಿದೆ. ಕಳೆದ ವಾರ ಇಟಾಲಿಯನ್ ಓಪನ್ ಫೈನಲ್‌ನಲ್ಲಿ ರನ್ನರ್ ಅಪ್ ಆಗಿದ್ದ ಸಿನ್ನರ್ ಇಲ್ಲಿ ಮೊದಲ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ಸ್ಪೇನ್‌ನ ತಾರೆ ಕಾರ್ಲೋಸ್ ಅಲ್ಕರಾಜ್ ಇಟಾಲಿಯನ್ ಓಪನ್ ಕಿರೀಟ ಗೆದ್ದಿದ್ದರು.

ಫಿಲಿಪ್ ಶಾಟಿಯೆ ಕೋರ್ಟ್‌ನಲ್ಲಿ ಸೋಮವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ಹಣಾಹಣಿಯಲ್ಲಿ ಸಿನ್ನರ್ 6-4, 6-3, 7-5ರಿಂದ 75ನೇ ಕ್ರಮಾಂಕದ ಆಟಗಾರನನ್ನು ಮಣಿಸಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಎರಡನೇ ಸುತ್ತಿನಲ್ಲಿ ಅವರು ಫ್ರಾನ್ಸ್‌ನ ಮತ್ತೊಬ್ಬ ಆಟಗಾರ ರಿಚರ್ಡ್ ಗ್ಯಾಸ್ಕ್ವೆಟ್ ಅವರನ್ನು ಎದುರಿಸಲಿದ್ದಾರೆ. 38 ವರ್ಷ ವಯಸ್ಸಿನ ರಿಚರ್ಡ್ ಅವರಿಗೆ ವೃತ್ತಿಜೀವನದ ಕೊನೆಯ ಟೂರ್ನಿ ಇದಾಗಿದೆ.

**ಜೊಕೊವಿಚ್ ಮುನ್ನಡೆ:** ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಹುಡುಕಾಟದಲ್ಲಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಎರಡನೇ ಸುತ್ತು ಪ್ರವೇಶಿಸಿದರು. ಆರನೇ ಶ್ರೇಯಾಂಕದ ಜೊಕೊವಿಚ್ 6-3, 6-3, 6-3ರ ನೇರ ಸೆಟ್‌ಗಳಿಂದ ಅಮೆರಿಕದ ಮೆಕೆಂಜಿ ಮೆಕ್‌ಡೊನಾಲ್ಡ್ ಅವರನ್ನು ಸೋಲಿಸಿದರು.

ಕಳೆದ ವಾರಾಂತ್ಯದಲ್ಲಿ ಜಿನೀವಾದಲ್ಲಿ ದಾಖಲೆಯ 100ನೇ ಎಟಿಪಿ ಪ್ರಶಸ್ತಿಗೆ ಮುತ್ತಿಕ್ಕಿರುವ 38 ವರ್ಷ ವಯಸ್ಸಿನ ಜೊಕೊವಿಕ್ ಇಲ್ಲಿ ನಾಲ್ಕನೇ ಕಿರೀಟದ ನಿರೀಕ್ಷೆಯಲ್ಲಿದ್ದಾರೆ. 98ನೇ ರ‍್ಯಾಂಕ್‌ನ ಆಟಗಾರನನ್ನು ಹೆಚ್ಚು ಪ್ರಯಾಸವಿಲ್ಲದೆ ಎರಡು ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಸೋಲಿಸಿದ ಅವರು 64ರ ಸುತ್ತಿಗೆ ಮುನ್ನಡೆದರು.

ಹಾಲಿ ರನ್ನರ್ ಅಪ್ ಅಲೆಕ್ಸಾಂಡರ್ ಜ್ವರೇವ್ ಎರಡನೇ ಸುತ್ತು ಪ್ರವೇಶಿಸಿದರು. ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಪ್ರಯತ್ನದಲ್ಲಿರುವ ಜರ್ಮನಿಯ ಆಟಗಾರ 6-3, 6-3, 6-4ರಿಂದ ಅಮೆರಿಕದ ಲರ್ನರ್ ಟಿಯೆನ್ ಅವರನ್ನು ಮಣಿಸಿ ಅಭಿಯಾನ ಆರಂಭಿಸಿದರು. ಕಳೆದ ವರ್ಷ ಫೈನಲ್‌ನಲ್ಲಿ ಅಲ್ಕರಾಜ್ ವಿರುದ್ಧ ಐದು ಸೆಟ್‌ಗಳ ಹೋರಾಟದಲ್ಲಿ ಜ್ವರೇವ್ ಸೋಲು ಕಂಡಿದ್ದರು.

9ನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ (ಆಸ್ಟ್ರೇಲಿಯಾ) 6-3, 6-4, 7-6 (8/6)ರಿಂದ ಸರ್ಬಿಯಾದ ಲಾಸ್ಲೊ ಡಿಜೆರೆ ವಿರುದ್ಧ ಜಯ ಸಾಧಿಸಿದರು.

ಆದರೆ, 11ನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೇವ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಬ್ರಿಟನ್‌ನ ಕ್ಯಾಮೆರಾನ್ ನಾರ್ರಿ 7-5, 6-3, 4-6, 1-6, 7-5ರ ಐದು ಸೆಟ್‌ಗಳ ಹೋರಾಟದಲ್ಲಿ ರಷ್ಯಾದ ಆಟಗಾರನಿಗೆ ಆಘಾತ ನೀಡಿದರು.



ಗೆಲುವಿನ ಸಂಭ್ರಮದಲ್ಲಿ ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರ

### ಗಾಫ್ ಶುಭಾರಂಭ

2022ರ ರನ್ನರ್ ಅಪ್, ಅಮೆರಿಕದ ಕೊಕೊ ಗಾಫ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಭಾರಂಭ ಮಾಡಿದರು. ಎರಡನೇ ಶ್ರೇಯಾಂಕದ ಗಾಫ್ 6-2, 6-2ರಿಂದ ಆಸ್ಟ್ರೇಲಿಯಾದ ಒಲಿವಿಯಾ ಗಾಡೆಕ್ಕಿ ಅವರನ್ನು ಸೋಲಿಸಿದರು. 21 ವರ್ಷ ವಯಸ್ಸಿನ ಗಾಫ್ ಎರಡನೇ ಸುತ್ತಿನಲ್ಲಿ ಝೆಕ್ ರಿಪಬ್ಲಿಕ್‌ನ ತೆರೆಸಾ ವ್ಯಾಲೆಂಟೋವಾ ಅವರನ್ನು ಎದುರಿಸಲಿದ್ದಾರೆ.

ಆರನೇ ಶ್ರೇಯಾಂಕದ ಮಿರಾ ಆ್ಯಂಡ್ರೀವಾ 6-4, 6-3ರಿಂದ ಸ್ಪೇನ್‌ನ ಕ್ರಿಸ್ಟಿನಾ ಬುಕ್ಸಾ ಅವರನ್ನು ಮಣಿಸಿ ಮುಂದಿನ ಸುತ್ತಿಗೆ ಲಗ್ಗೆಯಿಟ್ಟರು. ರಷ್ಯಾದ ಆಟಗಾರ್ತಿಗೆ ಅಮೆರಿಕದ ಆಶ್ಲಿನ್ ಕ್ರೂಗರ್ ಮುಂದಿನ ಎದುರಾಳಿಯಾಗಿದ್ದಾರೆ.

**ಪೆಗುಲಾಗೆ ಜಯ:** ಮೂರನೇ ಶ್ರೇಯಾಂಕದ ಜೆಸಿಕಾ ಪೆಗುಲಾ (ಅಮೆರಿಕ) ಅವರೂ ಮೊದಲ ಸುತ್ತಿನಲ್ಲಿ 6–2, 6–4 ನೇರ ಸೆಟ್‌ಗಳಿಂದ ರುಮೇನಿಯಾದ ಅನ್ನಾ ತಡೋನಿ ಅವರನ್ನು ಸೋಲಿಸಿದರು.

---

ನಾರ್ವೆ ಚೆಸ್: ಆತಿಥೇಯ ಆಟಗಾರನಿಗೆ ರೋಚಕ ಜಯ

# ಕಾರ್ಲ್‌ಸನ್‌ಗೆ ಮಣಿದ ಗುಕೇಶ್

**ಸ್ಟಾವೆಂಜರ್ (ನಾರ್ವೆ), (ಪಿಟಿಐ):** ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ನಾರ್ವೆ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಆಘಾತ ನೀಡಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಗುಕೇಶ್ ಹೆಚ್ಚಿನ ಅವಧಿಯಲ್ಲಿ ಐದು ಬಾರಿಯ ವಿಶ್ವ ಚಾಂಪಿಯನ್ ಕಾರ್ಲ್‌ಸನ್ ಅವರ ಮೇಲೆ ಒತ್ತಡ ಹೇರಿದರೂ, ಕೊನೆಯಲ್ಲಿ ತಪ್ಪು ಮಾಡಿದರು. ನಂತರ ನಾರ್ವೆಯ ಆಟಗಾರ ‘ಎಂಡ್ ಗೇಮ್’ನಲ್ಲಿ ತಮಗಿದ್ದ ಕೌಶಲ ಪ್ರದರ್ಶಿಸಿ ಪೂರ್ಣ ಮೂರು ಪಾಯಿಂಟ್ ಪಡೆದರು. ಪಂದ್ಯ 55 ನಡೆಗಳನ್ನು ಕಂಡಿತು.

ಹಾಲಿ– ಮಾಜಿ ವಿಶ್ವ ಚಾಂಪಿಯನ್ನರ ನಡುವಣ ಈ ಪಂದ್ಯ ‘ಟೂರ್ನಿಯ ಹಣಾಹಣಿ’ ಎನಿಸಿ ಕುತೂಹಲಕ್ಕೆ ಕಾರಣವಾಗಿತ್ತು.

ಹಾಲಿ ಚಾಂಪಿಯನ್ ಕಾರ್ಲ್‌ಸನ್ ಮತ್ತು ಎರಡನೇ ಕ್ರಮಾಂಕದ ಆಟಗಾರ ಹಿಕಾರು ನಕಾಮುರ ಅವರು ಮೂರು ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಅಮೆರಿಕದ ನಕಾಮುರ ಮೊದಲ ಸುತ್ತಿನಲ್ಲಿ ಸ್ವದೇಶದ ಗ್ರ್ಯಾಂಡ್‌ಮಾಸ್ಟರ್ ಫ್ಯಾಬಿಯಾನೊ ಕರುವಾನ ಅವರನ್ನು ಸೋಲಿಸಿದರು.

ಕಣದಲ್ಲಿರುವ ಭಾರತದ ಇನ್ನೋರ್ವ ಆಟಗಾರ ಅರ್ಜುನ್ ಇರಿಗೇಶಿ (1.5), ಚೀನಾದ ಅಗ್ರ ಆಟಗಾರ ವೀ ಯಿ (1) ಅವರನ್ನು ರೋಚಕ ‘ಆರ್ಮ್‌ಗೆಡನ್’ ಆಟದಲ್ಲಿ ಸೋಲಿಸಿದರು. ಇವರಿಬ್ಬರ ನಡುವಣ ಕ್ಲಾಸಿಕಲ್ ಪಂದ್ಯ ಡ್ರಾ ಆಗಿತ್ತು.

ಟೂರ್ನಿಯ ನಿಯಮಗಳ ಪ್ರಕಾರ ಕ್ಲಾಸಿಕಲ್ ಪಂದ್ಯ ಗೆದ್ದವರು ಮಾತ್ರ ಪೂರ್ಣ 3 ಪಾಯಿಂಟ್ ಪಡೆಯುತ್ತಾರೆ. ಡ್ರಾ ಆದಲ್ಲಿ ಒಂದು ಪಾಯಿಂಟ್ ಮತ್ತು 20 ನಿಮಿಷಗಳ ನಂತರ ನಡೆಯುವ ಆರ್ಮ್‌ಗೆಡನ್ ಪಂದ್ಯ ಗೆದ್ದಲ್ಲಿ ಅರ್ಧ ಪಾಯಿಂಟ್ ನೀಡಲಾಗುತ್ತದೆ.

ಓಪನ್ ವಿಭಾಗದಲ್ಲಿ ಆರು ಮಂದಿ ಮತ್ತು ಮಹಿಳಾ ವಿಭಾಗದಲ್ಲಿ ಆರು ಮಂದಿ ಕಣದಲ್ಲಿದ್ದಾರೆ. ಡಬಲ್ ರೌಂಡ್ ರಾಬಿನ್ ಮಾದರಿಯಲ್ಲಿ ಪಂದ್ಯಗಳು ನಡೆಯುತ್ತವೆ.

ಭಾರತದ ಆಟಗಾರ್ತಿಯರೇ ಇದ್ದ ಮಹಿಳಾ ವಿಭಾಗದ ಪಂದ್ಯದಲ್ಲಿ ಎರಡು ಬಾರಿಯ ವಿಶ್ವ ರ‍್ಯಾಪಿಡ್ ಚಾಂಪಿಯನ್ ಕೋನೇರು ಹಂಪಿ, ಆರ್.ವೈಶಾಲಿ ಅವರ ವಿರುದ್ಧ ನಿರ್ಣಾಯಕ ಗೆಲುವನ್ನು ಪಡೆದರು.





ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಗುಕೇಶ್ ಎಪಿ/ಪಿಟಿಐ ಚಿತ್ರ

# ಬ್ರಿಜ್‌ಭೂಷಣ್ ವಿರುದ್ಧ ಪೋಕ್ಸೊ ಕೇಸ್ ರದ್ದು: ಕೋರ್ಟ್ ಅನುಮತಿ

**ನವದೆಹಲಿ (ಪಿಟಿಐ):** ಭಾರತ ಕುಸ್ತಿ ಫೆಡರೇಷನ್‌ನ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ದಾಖಲಾಗಿದ್ದ ಪೋಕ್ಸೊ ಪ್ರಕರಣವನ್ನು ಇಲ್ಲಿನ ನ್ಯಾಯಾಲಯವೊಂದು ಸೋಮವಾರ ಮುಕ್ತಾಯಗೊಳಿಸಿದೆ.

ಆದರೆ ಅವರ ವಿರುದ್ಧ ಇತರ ಆರು ಮಂದಿ ಮಹಿಳಾ ಕುಸ್ತಿಪಟುಗಳು ಸಲ್ಲಿಸಿರುವ ಲೈಂಗಿಕ ಕಿರುಕುಳದ ಪ್ರತ್ಯೇಕ ಪ್ರಕರಣದಲ್ಲಿ ಅವರು ದೋಷಮುಕ್ತರಾಗಿಲ್ಲ.

ದೆಹಲಿ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಗೋಮತಿ ಮನೋಚಾ ಅವರು ಪ್ರಕರಣವನ್ನು ಮುಕ್ತಾಯಗೊಳಿಸಲು ಒಪ್ಪಿಗೆ ನೀಡಿದ್ದಾರೆ.

ತಾವು ಅಪ್ರಾಪ್ತೆಯಾಗಿದ್ದ ವೇಳೆ ಬ್ರಿಜ್ ಭೂಷಣ್ ಶರಣ್ ಸಿಂಗ್ ಲೈಂಗಿಕ ಕಿರುಕುಳ ನೀಡಿದ್ದರು ಎಂದು ಯುವತಿ ದೂರು ಸಲ್ಲಿಸಿದ್ದರು. ಆದರೆ 2023ರ ಮೇ ತಿಂಗಳಲ್ಲಿ ಯುವತಿ ದೂರನ್ನು ಹಿಂಪಡೆದಿದ್ದರು. ಅಚ್ಚರಿಯೆಂಬಂತೆ ಯುವತಿಯ ತಂದೆಯೂ ತಾವು ಬ್ರಿಜ್ ಭೂಷಣ್ ವಿರುದ್ಧ ಸುಳ್ಳು ದೂರು ನೀಡಿದ್ದಾಗಿ ಹೇಳಿಕೆ ನೀಡಿದ್ದ ಕಾರಣ ಪ್ರಕರಣ ಕೊನೆಗೊಳಿಸುವಂತೆ ಪೊಲೀಸರು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು.

ದೂರು ಸಲ್ಲಿಸಿದ ಬೆನ್ನಿಗೇ ಬ್ರಿಜ್‌ಭೂಷಣ್ ವಿರುದ್ಧ ದೆಹಲಿಯ ಜಂತರ್‌ಮಂತರ್‌ನಲ್ಲಿ ಆಗ ಬಜರಂಗ್ ಪೂನಿಯಾ, ವಿನೇಶ್ ಫೋಗಟ್ ಮತ್ತು ಸಾಕ್ಷಿ ಮಲಿಕ್ ನೇತೃತ್ವದಲ್ಲಿ ಕುಸ್ತಿಪಟುಗಳು ತಿಂಗಳುಗಳ ಕಾಲ ಪ್ರತಿಭಟನೆ ನಡೆಸಿದ್ದರು.

## ಫೀಲ್ಡಿಂಗ್ ಕೋಚ್: ದಿಲೀಪ್ ಮರುನೇಮಕ

**ನವದೆಹಲಿ:** ಮುಂಬರುವ ಇಂಗ್ಲೆಂಡ್ ಪ್ರವಾಸಕ್ಕೆ ಟಿ.ದಿಲೀಪ್ ಅವರನ್ನು ಭಾರತ ತಂಡದ ಫೀಲ್ಡಿಂಗ್ ಕೋಚ್ ಆಗಿ ಮರು ನೇಮಕ ಮಾಡಲು ಬಿಸಿಸಿಐ ನಿರ್ಧರಿಸಿದೆ.

2024-25ರ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್- ಗಾವಸ್ಕರ್ ಟ್ರೋಫಿ ಸರಣಿಯಲ್ಲಿ ಭಾರತದ ಕಳಪೆ ಪ್ರದರ್ಶನದ ನಂತರ ನೆರವು ಸಿಬ್ಬಂದಿಯ ಬದಲಾವಣೆ ಸಂದರ್ಭದಲ್ಲಿ ದಿಲೀಪ್ ಮತ್ತು ಸಹಾಯಕ ಕೋಚ್ ಅಭಿಷೇಕ್ ನಾಯರ್ ಅವರನ್ನು ಕೈಬಿಡಲಾಗಿತ್ತು.

ಹೊಸ ಫೀಲ್ಡಿಂಗ್ ಕೋಚ್ ಆಗಿ ವಿದೇಶಿ ಮಾಜಿ ಆಟಗಾರರೊಬ್ಬರನ್ನು ನೇಮಿಸಲು ಬಿಸಿಸಿಐ ಉತ್ಸುಕವಾಗಿತ್ತು. ಆದರೆ, ಆಡಳಿತ ಮಂಡಳಿಗೆ ಸೂಕ್ತ ಸಮಯದಲ್ಲಿ ಅದು ಸಾಧ್ಯವಾಗಲಿಲ್ಲ.

# ಸಿಂಧು, ಪ್ರಣಯ್‌ಗೆ ಸುಲಭ ಜಯ

**ಸಿಂಗಪುರ (ಪಿಟಿಐ):** ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರು ಸಿಂಗಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಮಂಗಳವಾರ ವಿಭಿನ್ನ ರೀತಿಯ ಗೆಲುವಿನೊಡನೆ ಎರಡನೇ ಸುತ್ತು ಪ್ರವೇಶಿಸಿದರು.

ಸಿಂಧು 21–14, 21–9 ರಿಂದ ಕೆನಡಾದ ವೆನ್ ಯು ಝಾಂಗ್ ಅವರನ್ನು ನೇರ ಗೇಮ್‌ಗಳಿಂದ ಸೋಲಿಸಲು ತೆಗೆದುಕೊಂಡಿದ್ದು 31 ನಿಮಿಷಗಳನ್ನಷ್ಟೇ. ಅದರೆ ಅವರು ಮುಂದಿನ ಸುತ್ತಿನಲ್ಲಿ ಬಲಿಷ್ಠ ಎದುರಾಳಿ, ಟೋಕಿಯೊ ಒಲಿಂಪಿಕ್ ಸ್ವರ್ಣ ವಿಜೇತೆ ಹಾಗೂ ಐದನೇ ಕ್ರಮಾಂಕದ ಆಟಗಾರ್ತಿ ಚೆನ್ ಯು ಫಿ ಅವರನ್ನು ಎದುರಿಸಬೇಕಾಗಿದೆ.

ಆದರೆ ಪುರುಷರ ಸಿಂಗಲ್ಸ್‌ನಲ್ಲಿ, ವಿಶ್ವ ಕ್ರಮಾಂಕದಲ್ಲಿ 34ನೇ ಸ್ಥಾನದಲ್ಲಿರುವ ಪ್ರಣಯ್ ಅವರು ಎರಡನೇ ಸುತ್ತಿಗೇರಲು ಹೆಚ್ಚಿನ ಶ್ರಮ ಹಾಕಬೇಕಾಯಿತು. 32 ವರ್ಷ ವಯಸ್ಸಿನ ಈ ಆಟಗಾರ 19–21, 21–16, 21–14 ರಿಂದ ತಮಗಿಂತ ಹೆಚ್ಚಿನ ಕ್ರಮಾಂಕದ ಡೆನ್ಮಾರ್ಕ್ ಆಟಗಾರ ರಾಸ್ಮಸ್ ಗೆಮ್ಕೆ ಅವರನ್ನು ಹಿಮ್ಮೆಟ್ಟಿಸಿದರು.

ಪ್ರಣಯ್ 16ರ ಸುತ್ತಿನಲ್ಲಿ ಫ್ರಾನ್ಸ್‌ನ ಕ್ರಿಸ್ಟೋವ್ ಪೊಪೊವ್ ಅವರನ್ನು ಎದುರಿಸಲಿದ್ದಾರೆ.

**ಇತರರಿಗೆ ನಿರಾಶೆ:** ಆದರೆ ಭಾರತದ ಇತರ ಸ್ಪರ್ಧಿಗಳಿಗೆ ಮೊದಲ ಸುತ್ತಿನಲ್ಲಿ ನಿರಾಶೆ ಕಾದಿತ್ತು. ಮಾಳವಿಕಾ ಬನ್ಸೋಡ್, ಅನ್ಮೋಲ್ ಖಾರ್ಬ್, ಪ್ರಿಯಾಂಶು ರಾಜಾವತ್ ಮತ್ತು ಕಿರಣ್ ಜಾರ್ಜ್ ಸಿಂಗಲ್ಸ್‌ನಲ್ಲಿ ಹೊರಬಿದ್ದರು. ಮಾಳವಿಕಾ ಮತ್ತು ಪ್ರಿಯಾಂಶು ಮೊದಲ ಗೇಮ್ ಗೆದ್ದರೂ ನಂತರ ಹಿನ್ನಡೆ ಕಂಡರು.

ಮಾಳವಿಕಾ 21–14, 18–21, 11–21ರಲ್ಲಿ ಎಂಟನೇ ಶ್ರೇಯಾಂಕದ ಸುಪನಿದಾ ಕಟೆಥಾಂಗ್ (ಥಾಯ್ಲೆಂಡ್) ಅವರಿಗೆ ಸೋತರು. ಪುರುಷರ ಸಿಂಗಲ್ಸ್‌ನಲ್ಲಿ ಪ್ರಿಯಾಂಶು ಸುಮಾರು ಒಂದು ಗಂಟೆ ನಡೆದ ಪಂದ್ಯದಲ್ಲಿ 21–14, 10–21, 14–21ರಲ್ಲಿ ಏಳನೇ ಶ್ರೇಯಾಂಕದ ಜಪಾನ್ ಆಟಗಾರ ಕೊಡೈ ನರವೋಕಾ ಅವರಿಗೆ ಮಣಿದರು.

ಅನ್ಮೋಲ್ ಖಾರ್ಬ್ 11–21, 22–24 ರಲ್ಲಿ ನೇರ ಗೇಮ್‌ಗಳಿಂದ ಚೀನಾದ ಚೆನ್ ಯುಫಿ ಅವರೆದುರು ಹಿಮ್ಮೆಟ್ಟಿದರು.

ಈ ವರ್ಷ ಇಂಡಿಯಾ ಓಪನ್ ಕ್ವಾರ್ಟರ್‌ಫೈನಲ್ ತಲುಪಿದ್ದ ಜಾರ್ಜ್ 19–21, 17–21 ರಲ್ಲಿ ಚೀನಾದ ವೆಂಗ್ ಹಾಂಗ್ ಎದುರು ಸೋಲನುಭವಿಸಿದರು. ದಕ್ಷಿಣ ಕೊರಿಯಾದ ಕಿಮ್ ಗಾ ಯುನ್ 21–14, 21–8 ರಿಂದ ಸಂತೋಷ್ ರಾಮರಾಜ್ ಅವರನ್ನು ಸೋಲಿಸಲು ಪ್ರಯಾಸಪಡಲಿಲ್ಲ.





ಭಾರತದ ಪಿ.ವಿ. ಸಿಂಧು

### ಜಿತೇಶ್ ಶರ್ಮಾ ಅಬ್ಬರದ ಆಟದ ಮುಂದೆ ಮಸುಕಾದ ರಿಷಭ್ ಪಂತ್ ಅಜೇಯ ಶತಕ

# ಮೊದಲ ಕ್ವಾಲಿಫೈಯರ್‌ಗೆ ಆರ್‌ಸಿಬಿ

ಲಖನೌ (ಪಿಟಿಐ): ನಾಯಕ ರಿಷಭ್ ಪಂತ್ (ಔಟಾಗದೇ 118, 61ಎಸೆತ) ಅವರು ಲೀಗ್‌ನ ಕೊನೆಯಲ್ಲಿ ಅಬ್ಬರಿಸಿ ಶತಕ ಹೊಡೆದರೂ ಅದು ಫಲ ನೀಡಲಿಲ್ಲ. ರಾಯಲ್ ಚಾಲೆಂಜರ್ಸ್ ಹಂಗಾಮಿ ನಾಯಕ ಜಿತೇಶ್ ಶರ್ಮಾ ಅವರ ಅಜೇಯ 85 ರನ್‌ಗಳ (33 ಎಸೆತ) ಆಟ ಆ ಶತಕಕ್ಕಿಂತ ಹೆಚ್ಚಿನ ತೂಕ ಪಡೆಯಿತು.

ಜಿತೇಶ್ ಅವರ ಅಮೋಘ ಆಟದಿಂದ ಮಂಗಳವಾರ ನಡೆದ ಐಪಿಎಲ್‌ನ ಕೊನೆಯ ಲೀಗ್ ಪಂದ್ಯದಲ್ಲಿ ಬೆಂಗಳೂರು ತಂಡ ಆರು ವಿಕೆಟ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಸೋಲಿಸಿ ಮೊದಲ ಕ್ವಾಲಿಫೈಯರ್ ಆಡುವ ಅವಕಾಶ ಪಡೆಯಿತು. ಅಂಕ ಪಟ್ಟಿಯಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನ ಪಡೆದ ಪಂಜಾಬ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಇದೇ 29ರಂದು ನಡೆಯುವ ಮೊದಲ ಕ್ವಾಲಿಫೈ-ಯರ್‌ನಲ್ಲಿ ಎದುರಾಗಲಿವೆ. ಶುಕ್ರವಾರ ನಡೆಯುವ ಎಲಿಮಿನೇಟರ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟನ್ಸ್ ಮುಖಾಮುಖಿಯಾಗಲಿವೆ.

ಏಕನಾ ಕ್ರೀಡಾಂಗಣದಲ್ಲಿ 228 ರನ್‌ಗಳ ದೊಡ್ಡ ಗುರಿಯನ್ನು ಎದುರಿಸಿದ್ದ ಆರ್‌ಸಿಬಿ ಒಂದು ಹಂತದಲ್ಲಿ, ವಿರಾಟ್ ಕೊಹ್ಲಿ ಅವರ ವಿಕೆಟ್ ಕಳೆದು ಕೊಂಡಾಗ 12ನೇ ಓವರಿನಲ್ಲಿ 4 ವಿಕೆಟ್‌ಗೆ 123 ರನ್ ಗಳಿಸಿತ್ತು. ಪಂದ್ಯ ಕುತೂಹಲಕರ ಘಟ್ಟಕ್ಕೆ ತಲುಪಿತ್ತು. ಆದರೆ ಮಯಂಕ್ ಅಗರವಾಲ್ (ಔಟಾಗದೇ 41) ಜೊತೆಗೂಡಿದ ಜಿತೇಶ್ ಆರಂಭ ದಿಂದಲೇ ಆಕ್ರಮಣಕ್ಕಿಳಿದು ಶತಕದ ಜೊತೆಯಾಟವಾಡಿದರು. ಇವರಿಬ್ಬರು ಕೇವಲ 46 ಎಸೆತಗಳಲ್ಲಿ 107 ರನ್ ಸಿಡಿಸಿದರು.

19ನೇ ಓವರಿನಲ್ಲಿ ಬದೋನಿ ಬೌಲಿಂಗ್‌ನಲ್ಲಿ ಚೆಂಡನ್ನು ಭರ್ಜರಿ ಸಿಕ್ಸರ್ ಗೆತ್ತಿದ ಜಿತೇಶ್ ಇನ್ನೂ ಎಂಟು ಎಸೆತ ಗಳಿರುವಂತೆ ತಂಡವನ್ನು (4 ವಿಕೆಟ್‌ಗೆ 230) ಗುರಿತಲುಪಿಸಿ ಸಂಭ್ರಮಿಸಿದರು.

ಇದಕ್ಕೆ ಮೊದಲು ಕೊಹ್ಲಿ (54, 30 ಎಸೆತ) ಎಂಟನೇ ಅರ್ಧ ಶತಕ ಹೊಡೆದರು; ಮಾತ್ರವಲ್ಲ ಐದನೇ ಬಾರಿ ಋತುವಿನಲ್ಲಿ 600ಕ್ಕೂ ಹೆಚ್ಚು ರನ್ ಕಲೆಹಾಕಿದರು. ಫಿಲ್ ಸಾಲ್ಟ್ ಮತ್ತು ಕೊಹ್ಲಿ ಪವರ್ ಪ್ಲೇ ಅವಧಿಯೊಳಗೆ 61 ರನ್ ಸೇರಿಸಿ ಉತ್ತಮ ಬುನಾದಿ ಒದಗಿಸಿದರು. ವಿಲ್ ಓ ರೂರ್ಕಿ ಅವರು ಸತತ ಎಸೆತಗಳಲ್ಲಿ ರಜತ್ ಪಾಟೀದಾರ್ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ವಿಕೆಟ್‌ಗಳನ್ನು ಪಡೆದರು. ಆದರೆ ಅಂತಿಮವಾಗಿ ನ್ಯೂಜಿಲೆಂಡ್‌ನ ಬೌಲರ್ 74 ರನ್ ತೆತ್ತು ದುಬಾರಿಯೂ ಆದರು.

ಇನ್ನೊಂದು ಕಡೆ ತಂಡದ ರಕ್ಷಣೆಗೆ ನಿಂತಿದ್ದ ಕೊಹ್ಲಿ ಅವರು ನಿರ್ಗಮಿಸಿದಾಗ ಲಖನೌ ತಿರುಗಿಬೀಳುವಂತೆ ಕಂಡಿತ್ತು. ಆದರೆ ಜಿತೇಶ್ ಮತ್ತು ಮಯಂಕ್ ಈ ಎಲ್ಲ ಲೆಕ್ಕಾಚಾರ ಬುಡಮೇಲು ಮಾಡಿದರು. ಲಖನೌ ತಂಡದ ಫೀಲ್ಡಿಂಗ್ ಕೂಡ ಕಳಪೆಯಾಗಿತ್ತು. ಜಿತೇಶ್ 22 ರನ್ ಗಳಿಸಿದ್ದಾಗ ರನ್‌ಔಟ್‌ನಿಂದ ಪಾರಾಗಿದ್ದರು. ಲಖನೌ ಬೌಲಿಂಗ್ ಕೂಡ ಕಳಾಹೀನವಾಯಿತು.

**ಅಬ್ಬರಿಸಿದ ಪಂತ್:** ಇದಕ್ಕೆ ಮೊದಲು ಬ್ಯಾಟಿಂಗ್‌ಗೆ ಕಳಿಸಲ್ಪಟ್ಟ ಲಖನೌ ತಂಡ 3 ವಿಕೆಟ್‌ಗೆ 227 ರನ್‌ಗಳ ಒಳ್ಳೆಯ ಮೊತ್ತವನ್ನೇ ಗಳಿಸಿತ್ತು. ನಾಯಕ ರಿಷಭ್ ಪಂತ್ ಕೊನೆಗೂ ಲಯ ಕಂಡುಕೊಂಡು ಬಿರುಸಿನ ಶತಕ ಬಾರಿದರು. ಈ ಋತುವಿನುದ್ದಕ್ಕೂ ಆಕರ್ಷಕ ಆಟವಾಡಿರುವ ಮಿಚೆಲ್ ಮಾರ್ಷ್ ಮಿಂಚಿನ ಅರ್ಧ ಶತಕ ಸಿಡಿಸಿದರು.

ಮಾರ್ಷ್ (67, 37 ಎಸೆತ) ಮತ್ತು ಪಂತ್ ನಡುವೆ ಎರಡನೇ ವಿಕೆಟ್‌ಗೆ ಕೇವಲ 78 ಎಸೆತಗಳಲ್ಲಿ 152 ರನ್‌ಗಳು ಹರಿದುಬಂದವು. ಈ ಮೊದಲಿನ ಪಂದ್ಯಗಳಲ್ಲಿ ಪಂತ್ ಒಟ್ಟು 107 ರನ್ ಗಳಿಸಿದ್ದರು. ಆದರೆ ಇಲ್ಲಿ ಲಯ ಕಂಡುಕೊಂಡು ವಿಶ್ವಾಸದಿಂದ ಆಡಿದರು. ಭುವನೇಶ್ವರ ಕುಮಾರ್ ಮಾಡಿದ ಇನಿಂಗ್ಸ್‌ನ 18ನೇ ಓವರಿನ ಐದನೇ ಎಸೆತವನ್ನು ಎಂದಿನ ಶೈಲಿಯಲ್ಲಿ ಎಕ್ಸ್‌ಟ್ರಾ ಕವರ್‌ಮೇಲೆ ಬೌಂಡರಿ ಬಾರಿಸಿ ಶತಕ ಪೂರೈಸಿದರು; ಹೆಲ್ಮೆಟ್, ಗ್ಲೌಸ್ ಕಳಚಿ ಅರೆಕ್ಷಣ ಮುಗಿಲಿನತ್ತ ನೋಡಿದರು. ಸಂಭ್ರಮ ತಡೆಯಲಾಗದೇ ಒಂದು ಲಾಗ ಹಾಕಿದರು.

ಕೆಲಕಾಲ ಮಾರ್ಷ್ ನಿಧಾನಗತಿಯಲ್ಲಿದ್ದಂತೆ ಕಂಡರು. ಮೊದಲ 16 ಎಸೆತಗಳಲ್ಲಿ 19 ರನ್ ಗಳಿಸಿದ್ದ ಅವರು ನಂತರ ರನ್‌ವೇಗ ಹೆಚ್ಚಿಸಿದರು. ಸುಯಶ್ ಶರ್ಮಾ ಬೌಲಿಂಗ್‌ನಲ್ಲಿ ಸಿಕ್ಸರ್ ಮೂಲಕ 31 ಎಸೆತಗಳಲ್ಲಿ ಅರ್ಧ ಶತಕ ದಾಟಿದರು. ಆದರೆ ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ (16ನೇ ಓವರ್) ಮತ್ತೊಂದು ದೊಡ್ಡ ಹೊಡೆತದ ಯತ್ನದಲ್ಲಿ ಅವರು ವಿಕೆಟ್ ಕೀಪರ್ ಜಿತೇಶ್ ಶರ್ಮಾ ಅವರಿಗೆ ಕ್ಯಾಚಿತ್ತರು. 18ನೇ ಓವರಿನಲ್ಲಿ ಪಂತ್ತ ಶತಕ ಪೂರೈಸಿದರು. ಇನಿಂಗ್ಸ್ ಕೊನೆಯ ವರೆಗೂ ಆಟ ಉಳಿಸಿಕೊಂಡರು.



ಲಖನೌ ತಂಡದ ನಾಯಕ ರಿಷಭ್ ಪಂತ್

**63**

ಆರ್‌ಸಿಬಿ ಬ್ಯಾಟರ್ ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಬಾರಿಸಿದ ಒಟ್ಟು ಅರ್ಧಶತಕ. ಈ ಹಾದಿಯಲ್ಲಿ ಡೇವಿಡ್ ವಾರ್ನರ್ (62) ಅವರ ದಾಖಲೆ ಮುರಿದರು



ಆರ್‌ಸಿಬಿ ಹಂಗಾಮಿ ನಾಯಕ ಜಿತೇಶ್ ಶರ್ಮಾ ಮತ್ತು ಮಯಂಕ್ ಅಗರವಾಲ್

### ಗರಿಷ್ಠ ರನ್ ಯಶಸ್ವಿ ಚೇಸಿಂಗ್ (ಐಪಿಎಲ್)

| ರನ್ | ತಂಡ | ಎದುರಾಳಿ | ಸ್ಥಳ | ವರ್ಷ |
|---|---|---|---|---|
| 262 | ಪಿಬಿಕೆಎಸ್ | ಕೆಕೆಆರ್ | ಕೋಲ್ಕತ್ತ | 2024 |
| 246 | ಎಸ್‌ಆರ್‌ಎಚ್ | ಪಿಬಿಕೆಎಸ್ | ಹೈದರಾಬಾದ್ | 2025 |
| 228 | ಆರ್‌ಸಿಬಿ | ಎಲ್‌ಎಸ್‌ಜಿ | ಲಖನೌ | 2025 |

### ಐಪಿಎಲ್: ಪಾಯಿಂಟ್ಸ್ ಪಟ್ಟಿ

| ತಂಡ | ಪಂದ್ಯ | ಜಯ | ಸೋಲು | ರದ್ದು | ಅಂಕ | ಎನ್‌ಆರ್‌ಆರ್ |
|---|---|---|---|---|---|---|
| ಪಿಬಿಕೆಎಸ್ | 14 | 9 | 4 | 1 | 19 | 0.372 |
| ಆರ್‌ಸಿಬಿ | 14 | 9 | 4 | 1 | 19 | 0.301 |
| ಜಿಟಿ | 14 | 9 | 5 | 0 | 18 | 0.254 |
| ಎಂಐ | 14 | 8 | 6 | 0 | 16 | 1.142 |
| ಡಿಸಿ | 14 | 7 | 6 | 1 | 15 | 0.011 |
| ಎಸ್‌ಆರ್‌ಎಚ್ | 14 | 6 | 7 | 1 | 13 | -0.241 |
| ಎಲ್‌ಎಸ್‌ಜಿ | 14 | 6 | 8 | 0 | 12 | -0.376 |
| ಕೆಕೆಆರ್ | 14 | 5 | 7 | 2 | 12 | -0.305 |
| ಆರ್‌ಆರ್ | 14 | 4 | 10 | 0 | 8 | -0.549 |
| ಸಿಎಸ್‌ಕೆ | 14 | 4 | 10 | 0 | 8 | -0.647 |

**ಆರೆಂಜ್ ಕ್ಯಾಪ್**
ಸಾಯಿ ಸುದರ್ಶನ್ (ಜಿಟಿ) 679 ರನ್

**ಪರ್ಪಲ್ ಕ್ಯಾಪ್**
ನೂರ್ ಅಹಮ್ಮದ್ (ಸಿಎಸ್‌ಕೆ) 24 ವಿಕೆಟ್

### ಸ್ಕೋರ್ ಕಾರ್ಡ್

**ಲಖನೌ ಸೂಪರ್ ಜೈಂಟ್ಸ್ 3ಕ್ಕೆ 227 (20 ಓವರ್‌ಗಳಲ್ಲಿ)**
ಮಾರ್ಷ್ ಸಿ ಜಿತೇಶ್ ಬಿ ಭುವನೇಶ್ವರ್ 67 (37ಎ, 4x4, 6x5)
ಮ್ಯಾಥ್ಯೂ ಬಿ ತುಷಾರಾ 14 (12ಎ, 4x1, 6x1)
ರಿಷಭ್ ಪಂತ್ ಔಟಾಗದೇ 118 (61ಎ, 4x11, 6x8)
ಪೂರನ್ ಸಿ ದಯಾಳ್ ಬಿ ಶೆಫರ್ಡ್ 13 (10ಎ, 4x1)
ಅಬ್ದುಲ್ ಸಮದ್ ಔಟಾಗದೇ 1 (1ಎ)
**ಇತರೆ:** 14 (ಲೆಗ್‌ಬೈ 7, ನೋಬಾಲ್ 1, ವೈಡ್ 6)
**ವಿಕೆಟ್ ಪತನ:** 1-25 (ಮ್ಯಾಥ್ಯೂ ಬ್ರಿಟ್ಜ್‌ಕೆ, 2.4), 2-177 (ಮಿಚೆಲ್ ಮಾರ್ಷ್, 15.3), 3-226 (ನಿಕೋಲಸ್ ಪೂರನ್, 19.5)
**ಬೌಲಿಂಗ್:** ನುವಾನ್ ತುಷಾರ 4–0–26–1, ಕೃಣಾಲ್ ಪಾಂಡ್ಯ 2–0–14–0, ಯಶ್ ದಯಾಳ್ 3–0–44–0, ಭುವನೇಶ್ವರ್ 4–0–46–1, ಸುಯಶ್ ಶರ್ಮಾ 3–0–39–0, ರೊಮಾರಿಯೊ ಶೆಫರ್ಡ್ 4–0–51–1

**ರಾಯಲ್ ಚಾಲೆಂಜರ್ಸ್ ಬೆಂಗಳೂರು: 4ಕ್ಕೆ 230 (18.4 ಓವರ್‌ಗಳಲ್ಲಿ)**
ಸಾಲ್ಟ್ ಸಿ ರಾಠಿ ಬಿ ಆಕಾಶ್ 30 (19ಎ, 4x6)
ಕೊಹ್ಲಿ ಸಿ ಬದೋನಿ ಬಿ ಆವೇಶ್ 54 (30ಎ, 4x10)
ಪಾಟೀದಾರ್ ಸಿ ಸಮದ್ ಬಿ ರೂರ್ಕಿ 14 (7ಎ, 4x1, 6x1)
ಲಿವಿಂಗ್‌ಸ್ಟೋನ್ ಎಲ್‌ಬಿಡಬ್ಲ್ಯು ರೂರ್ಕಿ 0 (1ಎ)
ಮಯಂಕ್ ಔಟಾಗದೇ 41 (23ಎ, 4x5)
ಜಿತೇಶ್ ಶರ್ಮಾ ಔಟಾಗದೇ 85 (33ಎ, 4x8, 6x6)
**ಇತರೆ:** 6 (ನೋಬಾಲ್ 1, ವೈಡ್ 5)
**ವಿಕೆಟ್ ಪತನ:** 1-61 (ಫಿಲ್ ಸಾಲ್ಟ್, 5.4), 2-90 (ರಜತ್ ಪಾಟಿದಾರ್, 7.5), 3-90 (ಲಿಯಾಮ್ ಲಿವಿಂಗ್‌ಸ್ಟೋನ್, 7.6), 4-123 (ವಿರಾಟ್ ಕೊಹ್ಲಿ, 11.2)
**ಬೌಲಿಂಗ್:** ಆಕಾಶ್ ಸಿಂಗ್ 4–0–40–1, ವಿಲ್ ಓ ರೂರ್ಕಿ 4–0–74–2, ದಿಗ್ವೇಶ್ ರಾಠಿ 4–0–36–0, ಶಹಬಾಜ್ ಅಹ್ಮದ್ 3–0–39–0, ಆವೇಶ್ ಖಾನ್ 3–0–32–1, ಆಯುಷ್ ಬದೋನಿ 0.4–0–9–0
**ಪಂದ್ಯದ ಆಟಗಾರ:** ಜಿತೇಶ್ ಶರ್ಮಾ

**ಫಲಿತಾಂಶ: ಆರ್‌ಸಿಬಿ ತಂಡಕ್ಕೆ 6 ವಿಕೆಟ್‌ಗಳ ಜಯ**

## ಐಪಿಎಲ್ ಫೈನಲ್: ಸೇನಾಪಡೆಗಳ ಮುಖ್ಯಸ್ಥರಿಗೆ ಆಹ್ವಾನ

ನವದೆಹಲಿ (ಪಿಟಿಐ): ಅಹಮದಾಬಾದಿನಲ್ಲಿ ಜೂನ್ 3ರಂದು ನಡೆಯುವ ಐಪಿಎಲ್ ಫೈನಲ್ ಪಂದ್ಯಕ್ಕೆ ಭಾರತದ ಸೇನಾಪಡೆಗಳ ಮೂರೂ ಮುಖ್ಯಸ್ಥರನ್ನು ಆಹ್ವಾನಿಸಿರುವುದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಂಗಳವಾರ ತಿಳಿಸಿದೆ. ಇತ್ತೀಚಿನ ಆಪರೇಷನ್ ಸಿಂಧೂರ ಕಾರ್ಯಾಚರಣೆ ವೇಳೆ ಸೇನಾಪಡೆಯ ವೀರೋಚಿತ ಹೋರಾಟಕ್ಕೆ ಗೌರವ ಸಲ್ಲಿಸುವ ಕಾರ್ಯಕ್ರಮವೂ ಸಮಾರೋಪ ಸಮಾರಂಭದಲ್ಲಿ ಇರಲಿದೆ.

ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಮಾಧ್ಯಮ ಹೇಳಿಕೆಯಲ್ಲಿ ಈ ಘೋಷಣೆ ಮಾಡಿದ್ದಾರೆ. ‘ಆಪರೇಷನ್ ಸಿಂಧೂರ’ ಯಶಸ್ಸಿನ ಸಂಭ್ರಮ ಆಚರಣೆಗೆ ಸೇನಾಪಡೆಗಳ ಮುಖ್ಯಸ್ಥರಿಗೆ ಮತ್ತು ಸೈನಿಕರಿಗೆ ಆಹ್ವಾನ ನೀಡಿದ್ದೇವೆ’ ಎಂದು ಸೈಕಿಯಾ ಮಂಗಳವಾರ ಪಿಟಿಐಗೆ ತಿಳಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ಪ್ರವಾಸಿಗರ ಮೇಲೆ ಭಯೋತ್ಪಾದನೆ ದಾಳಿ ನಡೆದಿದ್ದು, ಇದಕ್ಕೆ ಪ್ರತಿಯಾಗಿ ಭಾರತ ‘ಆಪರೇಷನ್ ಸಿಂಧೂರ’ ಹೆಸರಿನಲ್ಲಿ ಉಗ್ರರ ಅಡಗುದಾಣಗಳ ಮೇಲೆ ದಾಳಿ ನಡೆಸಿತ್ತು.

ಜನರಲ್ ಉಪೇಂದ್ರ ದ್ವಿವೇದಿ ಅವರು ಭೂಸೇನೆಯ, ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಅವರು ನೌಕಾಪಡೆ ಮತ್ತು ಏರ್ ಚೀಫ್ ಮಾರ್ಷಲ್ ಅಮರ್‌ಪ್ರೀತ್ ಸಿಂಗ್ ಅವರು ವಾಯುಪಡೆಯ ಮುಖ್ಯಸ್ಥರಾಗಿದ್ದಾರೆ.